ಬೆಂಗಳೂರು
ಬುಧವಾರ, 10 ಜೂನ್ 2026
ಸಂಪುಟ 33, ಸಂಚಿಕೆ 220, ಪುಟಗಳು 14+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ನಕಲಿ ಸಹಿ: ಮಮತಾ ನಿವಾಸದಲ್ಲಿ ಸಿಬಿಡಿ ಶೋಧ | ೧೦
ಕುವೈತ್ ದೊರೆಗೆ ಬೆಂಬಲ ಸೂಚಿಸಿದ ಮೋದಿ | ೧೦
ಇನ್ನು ಫುಟ್‌ಬಾಲ್ ಕಿಕ್ | ೧೩

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ದಶಮಿ, ನಕ್ಷತ್ರ: ಉತ್ತರಭಾದ್ರ

ದಿನದ ಮಾತು

ಕೆಲವೊಮ್ಮೆ ಬುದ್ಧಿ ಗೆಲುವು ಸಾಧಿಸುತ್ತದೆ. ಕೆಲವು ಬಾರಿ ಗೆಲುವೇ ಬುದ್ಧಿಯಾಗಿ ಬಿಡುತ್ತದೆ.
▲ ಕಣ್ಣದಾಸನ್

ಶ್ರಾದ್ಧದ ಪ್ರಕಾರಗಳು ಮತ್ತು ಅವುಗಳ ಮಹತ್ತ್ವ
ಪದ ಸಂಚಲನ
• ಡಾ. ವಿಶ್ವನಾಥ ಸುಂಕಸಾಳ
• ಪುಟ ೬

ಕಿರುಸುದ್ದಿ

ಇಂದು ಎನ್‌ಡಿಎ ಮಹಾಸಭೆ

• **ಹೊಸದಿಲ್ಲಿ:** ಕೇಂದ್ರದಲ್ಲಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ 12 ವರ್ಷಗಳನ್ನು ಪೂರ್ಣಗೊಳಿಸಿರುವ ಹಿನ್ನೆಲೆ ಹಾಗೂ ದೇಶದ ಅತಿ ದೀರ್ಘಾವಧಿ ನಿರಂತರವಾಗಿ ಸೇವೆ ಸಲ್ಲಿಸಿದ ಚುನಾಯಿತ ಪ್ರಧಾನಿಯಾಗಿ ಮೋದಿ ಹೊಸ ದಾಖಲೆ ನಿರ್ಮಿಸುತ್ತಿರುವ ಸಂದರ್ಭದಲ್ಲಿ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟ (ಎನ್‌ಡಿಎ) ಬುಧವಾರ ರಾಜಧಾನಿಯಲ್ಲಿ ಮಹತ್ವದ ಸಭೆ ನಡೆಸಲಿದೆ.

ಗ್ರಾಮೀಣಾಭಿವೃದ್ಧಿಗೆ 1.25 ಲಕ್ಷ ಕೋಟಿ ರೂ.
• ಪುಟ ೧೦

ಪಂಜಾಬ್: ಉಗ್ರ ಜಾಲದ ಸಹಚರರಿಬ್ಬರ ಬಂಧನ
• ಪುಟ ೧೦

ವಾಯುಪಡೆ, ಸಿಆರ್‌ಪಿಎಫ್ ನಿಯೋಜನೆ
• ಪುಟ ೧೦

13ರಿಂದ ಮೋದಿ ಫ್ರಾನ್ಸ್, ಸ್ಲೋವಾಕಿಯಾ ಪ್ರವಾಸ
• ಪುಟ ೧೦

ಹಾರಂಗಿ ಜಲಾಶಯ ಖಾಲಿ
• ಪುಟ ೨

ಬಿಟ್ ಕಾಯಿನ್: ನಲಪಾಡ್ ವಿರುದ್ಧ ಚಾರ್ಜ್‌ಶೀಟ್
• ಪುಟ ೨

ಜಿ ರಾಮ್ ಜಿ ವೇತನ ಹೆಚ್ಚಿಸಿ: ಈಶ್ವರ್ ಖಂಡ್ರೆ
• ಪುಟ ೨



ಸುವೇಂದು ಸರ್ಕಾರಕ್ಕೆ ಬಹುಪರಾಕ್
• ಪುಟ ೧೦
ಸುದ್ದಿ ಸಮಗ್ರ

12 ವರ್ಷದ ಸಾಧನೆ ಬಿಚ್ಚಿಟ್ಟ ಪ್ರಧಾನಿ ನರೇಂದ್ರ ಮೋದಿ

ಪರಿವರ್ತನೆಯ ದಶಕ

ಹೊಸದಿಲ್ಲಿ: ಕೇಂದ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರಕ್ಕೆ 12 ವರ್ಷ ಪೂರ್ಣಗೊಳ್ಳುತ್ತಿರುವ ಹಿನ್ನೆಲೆಯಲ್ಲಿ, ಕಳೆದ ಒಂದು ದಶಕಕ್ಕೂ ಹೆಚ್ಚು ಅವಧಿಯಲ್ಲಿ ದೇಶದಲ್ಲಿ ಸಂಭವಿಸಿದ ಪರಿವರ್ತನೆಗಳ ಕುರಿತು ಪ್ರಧಾನಿ ಮೋದಿ ಅವರು ಪಟ್ಟಿ ಮಾಡಿದ್ದಾರೆ. ಬಡವರ ಕಲ್ಯಾಣ, ಮೂಲಸೌಕರ್ಯ ಅಭಿವೃದ್ಧಿ, ಡಿಜಿಟಲ್ ಕ್ರಾಂತಿ, ಆರೋಗ್ಯ ಸೇವೆಗಳ ವಿಸ್ತರಣೆ, ಮಹಿಳಾ ಸಬಲೀಕರಣ ಹಾಗೂ ಮಧ್ಯಮ ವರ್ಗಕ್ಕೆ ತೆರಿಗೆ ಸಡಿಲಿಕೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸರ್ಕಾರ ಐತಿಹಾಸಿಕ ಸಾಧನೆಗಳನ್ನು ದಾಖಲಿಸಿದೆ ಎಂದು ಅವರು ಹೇಳಿದರು. ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಸರಣಿ ಸಂದೇಶಗಳನ್ನು ಪ್ರಧಾನಿ ಪ್ರಕಟಿಸಿದ್ದಾರೆ.
➡ಪುಟ ೭



ಅಭಿವೃದ್ಧಿ ವೇಗ ಮುಂದುವರಿಕೆ

ದೇಶವನ್ನು 2047ರ ವೇಳೆಗೆ ವಿಕಸಿತ ಭಾರತವನ್ನಾಗಿ ರೂಪಿಸುವ ಗುರಿಯೊಂದಿಗೆ ಸರ್ಕಾರ ಮುಂದಿನ ದಿನಗಳಲ್ಲಿಯೂ ಅಭಿವೃದ್ಧಿಯ ವೇಗ ಮುಂದುವರಿಸಲಿದೆ ಎಂದು ಪ್ರಧಾನಿ ಹೇಳಿದರು. ಜನರ ಆಶೋತ್ತರಗಳಿಗೆ ತಕ್ಕಂತೆ ಸುಧಾರಣೆಗಳು ಮತ್ತು ಅಭಿವೃದ್ಧಿ ಕಾರ್ಯಕ್ರಮಗಳು ಮುಂದುವರಿಯಲಿದ್ದು, ಭಾರತವನ್ನು ವಿಶ್ವದ ಮುಂಚೂಣಿ ರಾಷ್ಟ್ರಗಳ ಸಾಲಿನಲ್ಲಿ ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯುವ ಸಂಕಲ್ಪವಿದೆ ಎಂದು ಅವರು ತಿಳಿಸಿದ್ದಾರೆ.

ರಕ್ಷಣೆಯಲ್ಲಿ ಆತ್ಮನಿರ್ಭರ

ರಕ್ಷಣಾ ಕ್ಷೇತ್ರದಲ್ಲಿಯೂ ಭಾರತ ಆತ್ಮನಿರ್ಭರದತ್ತ ವೇಗವಾಗಿ ಸಾಗುತ್ತಿದೆ ಎಂದು ಪ್ರಧಾನಿ ಹೇಳಿದರು. ಮೇಕ್ ಇನ್ ಇಂಡಿಯಾ ಮತ್ತು ಆತ್ಮನಿರ್ಭರ ಭಾರತ ಅಭಿಯಾನಗಳ ಮೂಲಕ ದೇಶೀಯ ಉತ್ಪಾದನೆಗೆ ಉತ್ತೇಜನ ನೀಡಲಾಗಿದ್ದು, ರಕ್ಷಣಾ ಉತ್ಪನ್ನಗಳ ರಫ್ತು ದಾಖಲೆ ಮಟ್ಟಕ್ಕೆ ಏರಿಕೆಯಾಗಿದೆ ಎಂದರು.
• ವಿಶೇಷ ಪುಟ ೫

ಮೋದಿ ಸರ್ಕಾರದ ಪ್ರಮುಖ ದಾಖಲೆ

ಬಡವರ ಕಲ್ಯಾಣದಿಂದ 12.75 ಲಕ್ಷ ತೆರಿಗೆ ವಿನಾಯಿತಿವರೆಗೆ

- **81** ಕೋಟಿಗೂ ಅಧಿಕ ಜನರಿಗೆ ಉಚಿತ ಆಹಾರ ಧಾನ್ಯ ವಿತರಣೆ
- ಜನಧನ್ ಯೋಜನೆಯಲ್ಲಿ ಕೋಟ್ಯಂತರ ಬ್ಯಾಂಕ್ ಖಾತೆಗಳ ತೆರೆಯುವಿಕೆ
- ಆಯುಷ್ಮಾನ್ ಭಾರತ್ ಆರೋಗ್ಯ ಭದ್ರತೆ
- ರಕ್ಷಣಾ ಉತ್ಪನ್ನಗಳ ರಫ್ತು ಹೆಚ್ಚಳ
- ಪ್ರಧಾನಮಂತ್ರಿ ಆವಾಸ್ ಯೋಜನೆಯಲ್ಲಿ ಲಕ್ಷಾಂತರ ಮನೆಗಳ ನಿರ್ಮಾಣ
- ಜಲ್ ಜೀವನ್ ಮಿಷನ್ ಮೂಲಕ ಮನೆಮನೆಗೆ ಕುಡಿಯುವ ನೀರಿನ ಸಂಪರ್ಕ
- UPI ಯುಪಿಐ ಮೂಲಕ ಡಿಜಿಟಲ್ ಪಾವತಿ ಕ್ರಾಂತಿ
- ರಾಷ್ಟ್ರೀಯ ಹೆದ್ದಾರಿಗಳು, ರೈಲು, ವಿಮಾನ ನಿಲ್ದಾಣಗಳ ವಿಸ್ತರಣೆ
- ಆತ್ಮನಿರ್ಭರ ಭಾರತ ಮತ್ತು ಮೇಕ್ ಇನ್ ಇಂಡಿಯಾ ಅಭಿಯಾನ
- 12.75 ಲಕ್ಷ ರೂ. ವರೆಗೆ ಆದಾಯಕ್ಕೆ ಪರಿಣಾಮಕಾರಿ ತೆರಿಗೆ ವಿನಾಯಿತಿ

ಕಳೆದ 12 ವರ್ಷಗಳಲ್ಲಿ ದೇಶದ ಜನರ ಜೀವನಮಟ್ಟ ಸುಧಾರಿಸುವ, ಬಡವರನ್ನು ಸಬಲಗೊಳಿಸುವ ಮತ್ತು ಅಭಿವೃದ್ಧಿಯನ್ನು ವೇಗಗೊಳಿಸುವ ಅನೇಕ ಕ್ರಮಗಳನ್ನು ಕೈಗೊಂಡಿದ್ದೇವೆ. ವಿಕಸಿತ ಭಾರತದ ಕನಸನ್ನು ನನಸಾಗಿಸಲು ಇದೇ ಉತ್ಸಾಹದೊಂದಿಗೆ ಮುಂದುವರಿಯುತ್ತೇವೆ.
■ ನರೇಂದ್ರ ಮೋದಿ, ಪ್ರಧಾನಿ

ಭರಪೂರ ಮೂಲಸೌಕರ್ಯ

ಮೂಲಸೌಕರ್ಯ ಕ್ಷೇತ್ರದಲ್ಲಿ ಕಳೆದ 12 ವರ್ಷಗಳಲ್ಲಿ ಅಭೂತಪೂರ್ವ ಅಭಿವೃದ್ಧಿ ಕಂಡುಬಂದಿದೆ ಎಂದು ಪ್ರಧಾನಿ ಉಲ್ಲೇಖಿಸಿದರು.
➡ಪುಟ ೭

ಬಾಂಬ್ ಸ್ಕ್ವಾಡ್ ಪರಿಶೀಲನೆ | ತೀವ್ರ ತನಿಖೆ

ಬೆಂಗಳೂರಿನಲ್ಲಿ ಭಾರೀ ಸ್ಫೋಟಕ ಸಾಮಗ್ರಿ ಪತ್ತೆ

• **ಬೆಂಗಳೂರು:** ಪ್ರಧಾನಿ ಮೋದಿ ಭೇಟಿ ವೇಳೆ ಪತ್ತೆಯಾದ ಜಿಲೆಟಿನ್ ಕಡ್ಡಿಗಳ ಪ್ರಕರಣ ತನಿಖೆಯಲ್ಲಿ ರುವಾಗಲೇ, ಬೆಂಗಳೂರು ನಗರ ಹೊರವಲಯದ ಅವಲಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ದೊಡ್ಡ ಪ್ರಮಾಣದ ಜಿಲೆಟಿನ್ ಸ್ಫೋಟಕ ಕಡ್ಡಿಗಳು, ಡಿಟೋನೇಟರ್‌ಗಳು ಪತ್ತೆಯಾಗಿರುವುದು ಆತಂಕಕ್ಕೆ ಕಾರಣವಾಗಿದೆ. ಇಷ್ಟು ದೊಡ್ಡ ಪ್ರಮಾಣದ ಸ್ಫೋಟಕಗಳು ಪತ್ತೆ ಆಗಿರುವುದರಿಂದ ಹಲವು ಅನುಮಾನಗಳು ಮೂಡಿವೆ.

ಈ ಹಿಂದೆ ಪ್ರಧಾನಿ ನರೇಂದ್ರ ಮೋದಿ ಹೋಗುವ ದಾರಿಯಲ್ಲೂ ಇದೇ ರೀತಿ ಜಿಲೆಟಿನ್ ಪತ್ತೆಯಾಗಿತ್ತು. ಇದೀಗ ಮತ್ತೆ ರಾಶಿ ರಾಶಿ ಜಿಲೆಟಿನ್ ಕಡ್ಡಿಗಳು ಹಾಗೂ ವೈರ್‌ಗಳು ಪತ್ತೆಯಾಗಿದೆ. ಸದ್ಯ ಜಿಲೆಟಿನ್ ಕಡ್ಡಿಗಳು ಮತ್ತು ವೈರ್‌ಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಅವಲಹಳ್ಳಿಯ ಕಾಡಅಗ್ರಹಾರ ಬಳಿ ಪತ್ತೆ

ಪ್ರಕರಣದಾಖಲು: ಅಪಾರ ಪ್ರಮಾಣದಲ್ಲಿ ಸ್ಫೋಟಕಗಳು ಪತ್ತೆಯಾದ ಹಿನ್ನೆಲೆಯಲ್ಲಿ ಬಾಂಬ್ ಸ್ಕ್ವಾಡ್ ಸ್ಥಳ ಪರಿಶೀಲನೆ ನಡೆಸಿದೆ. ಸ್ಫೋಟಕ ವಸ್ತುಗಳ ಕಾಯ್ದೆಯ ಅಡಿಯಲ್ಲಿ ಪ್ರಕರಣ ದಾಖಲಿಸಿ, ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಇವು ಕೇವಲ ಕ್ವಾರಿ ಕೆಲಸಕ್ಕಾಗಿ ತರಲಾಗಿದೆ ಎಂಬ ಆರೋಪಿಗಳ ಹೇಳಿಕೆಯಲ್ಲಿ ಪೊಲೀಸರು ಇನ್ನೂ ಸಂಪೂರ್ಣವಾಗಿ ವಿಶ್ವಾಸ ಹೊಂದಿಲ್ಲ, ವಿಧ್ವಂಸಕ ಚಟುವಟಿಕೆ ನಡೆಸಲು ಇದನ್ನು ಸಂಗ್ರಹಿಸಿದ್ದಾರೆಯೇ ಎಂಬ ಅನುಮಾನವೂ ತನಿಖೆಯ ಮಹತ್ವದ ಭಾಗವಾಗಿದೆ. ಈ ಹಿಂದೆ (ಮೇ 10)ಕೂಡ ಪ್ರಧಾನಿ ನರೇಂದ್ರ ಮೋದಿ ಅವರು ಆರ್ಟ್ ಆಫ್ ಲಿವಿಂಗ್‌ನಲ್ಲಿ ನಡೆದ ಕಾರ್ಯಕ್ರಮಕ್ಕೆ ಆಗಮಿಸಿದ್ದಾಗ, ಅವರು ಸಂಚರಿಸಿದ ಮಾರ್ಗದಲ್ಲಿ ಇಂತಹ ಜಿಲೆಟಿನ್ ಕಡ್ಡಿಗಳು ಪತ್ತೆಯಾಗಿದ್ದವು. ಆದ್ದರಿಂದ, ಈಗ ಪತ್ತೆಯಾದ ಜಿಲೆಟಿನ್‌ಗಳ ಹಿಂದೆ ಯಾರಿದ್ದಾರೆ? ಯಾವ ಉದ್ದೇಶಕ್ಕಾಗಿ ಇವುಗಳನ್ನು ಸಂಗ್ರಹಿಸಲಾಗಿದೆ? ನಿಜವಾಗಿಯೂ ಕ್ವಾರಿ ಕೆಲಸಕ್ಕಷ್ಟೇ ಇದನ್ನು ತರಲಾಗಿದೆಯೇ ಅಥವಾ ಬೇರೆ ದೊಡ್ಡ ಸಂಚು ಇದೆಯೇ ಎಂಬುದನ್ನು ಪೊಲೀಸರು ಆಳವಾಗಿ ಪರಿಶೀಲಿಸುತ್ತಿದ್ದಾರೆ. ಆ ಪ್ರಕರಣದ ತನಿಖೆ ಮುಗಿಯುವ ಮುನ್ನವೇ ಈಗ ಮತ್ತೆ ಅದೇ ಮಾದರಿಯ ಸ್ಫೋಟಕಗಳು ಸಿಕ್ಕಿರುವುದು ಆತಂಕಕ್ಕೆ ಕಾರಣವಾಗಿದೆ.



50 ಡಿಟೊನೇಟರ್, 225 ಜಿಲೆಟಿನ್ ಕಡ್ಡಿ

ಅವಲಹಳ್ಳಿಯ ಕಾಡಅಗ್ರಹಾರ ಬಳಿ ಅನುಮಾನಾಸ್ಪದ ಬಾಕ್ಸ್‌ಗಳು ಇವೆ ಎಂಬ ಸುದ್ದಿ ತಿಳಿಯುತ್ತಿದ್ದಂತೆ ಅವಲಹಳ್ಳಿ ಠಾಣೆ ಪೊಲೀಸರು ಸ್ಥಳಕ್ಕೆ ದೌಡಾಯಿಸಿ ಬಾಕ್ಸ್‌ಗಳನ್ನು ತೆರೆದು ನೋಡಿದಾಗ ಅದರಲ್ಲಿ ಸ್ಫೋಟಕ ವಸ್ತುಗಳಾದ ಜಿಲೆಟಿನ್ ಕಡ್ಡಿಗಳು ಹಾಗೂ ಡಿಟೊನೇಟರ್ ಕಡ್ಡಿಗಳು ಪತ್ತೆಯಾಗಿವೆ. ಸುಮಾರು 225 ಜಿಲೆಟಿನ್ ಕಡ್ಡಿಗಳು ಮತ್ತು 50 ಡಿಟೊನೇಟರ್‌ಗಳನ್ನು ವಶಕ್ಕೆ ಪಡೆದಿದ್ದಾರೆ. ಈ ಸ್ಫೋಟಕ ವಸ್ತುಗಳನ್ನು ವೆಂಕಟರಾಮ ರೆಡ್ಡಿ ಎಂಬಾತ ಹಾಗೂ ಆತನ ಕೆಲಸಗಾರರ ಬಳಿ ಪತ್ತೆಹಚ್ಚಲಾಗಿದೆ. ಪ್ರಾಥಮಿಕ ವಿಚಾರಣೆಯಲ್ಲಿ ಆರೋಪಿಗಳು, ಇವುಗಳನ್ನು ಕಲ್ಲು ಕ್ವಾರಿ ಪ್ರದೇಶದಲ್ಲಿ ಬಂಡೆ ಒಡೆಯಲು ತರಿಸಿದ್ದೇವೆ ಎಂದು ಹೇಳುತ್ತಿದ್ದಾರೆ. ಆದರೆ ಇದಕ್ಕೆ ಸಂಬಂಧಿಸಿದ ಯಾವುದೇ ಅಧಿಕೃತ ಪರವಾನಗಿ ಅಥವಾ ದಾಖಲೆಗಳು ಪೊಲೀಸರಿಗೆ ಸಿಕ್ಕಿಲ್ಲ ಎಂದು ತಿಳಿದುಬಂದಿದೆ.

30 ಸ್ಥಳೀಯ ಅಮಾಯಕರ ನರಮೇಧ ಖಂಡಿಸಿದ ಭಾರತ

ಹತಾಶ ಪಾಕ್‌ನಿಂದ ಪಿಒಕೆನಲ್ಲಿ ಕ್ರೌರ್ಯ

• **ಹೊಸದಿಲ್ಲಿ:** ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ (ಪಿಒಕೆ) ಅಮಾಯಕ ನಾಗರಿಕರು ಮತ್ತು ಪ್ರತಿಭಟನಾಕಾರರ ಮೇಲೆ ಬಹಿರಂಗವಾಗಿ ಗುಂಡಿನ ದಾಳಿ ನಡೆಸಿದ ಪಾಕ್ ಸೇನೆಯ ಕ್ರೌರ್ಯವನ್ನು ವಿದೇಶಾಂಗ ವ್ಯವಹಾರಗಳ ಸಚಿವಾಲಯವು (ಎಂಇಎ) ಮಂಗಳವಾರ ಕಟುವಾಗಿ ಖಂಡಿಸಿದೆ.

ಪಾಕಿಸ್ತಾನ ತನ್ನ ವೈಫಲ್ಯಗಳನ್ನು ಹೊರ ಜಗತ್ತಿನಿಂದ ಮರೆಮಾಚಲು ಮತ್ತು ಮಾನವ ಹಕ್ಕುಗಳ ಘೋರ ಉಲ್ಲಂಘನೆಯಿಂದ ಜಗತ್ತಿನ ಗಮನ ಬೇರೆಡೆ ಸೆಳೆಯಲು ಯತ್ನಿಸುತ್ತಿದೆ. ಇದೇ ಉದ್ದೇಶಕ್ಕೆ ನಿರಂತರ ಒಂದೇ ರೀತಿಯ ನಕಲಿ ಸುದ್ದಿ ಮತ್ತು ವಿಡಿಯೋಗಳನ್ನು ಹರಿಯಬಿಡುತ್ತಿದೆ ಎಂದು ವಿದೇಶಾಂಗ ವಕ್ತಾರ ರಣಧೀರ್ ಜೈಸ್ವಾಲ್ ಖಂಡಿಸಿದ್ದಾರೆ. ಮಾನವ ಹಕ್ಕುಗಳ ಘೋರ ಉಲ್ಲಂಘನೆ ಹಾಗೂ ಪಿಒಕೆನಲ್ಲಿ ಅದರ ಆಡಳಿತ ವೈಫಲ್ಯ ಮರೆಮಾಚಲು ಪಾಕಿಸ್ತಾನ ಹತಾಶ ಪ್ರಯತ್ನಗಳನ್ನು ಮಾಡುವಂತೆ ಗೋಚರಿಸುತ್ತದೆ ಎಂದು ಜೈಸ್ವಾಲ್ ಹೇಳಿದ್ದಾರೆ.
➡ಪುಟ ೭



ಏನಿದು ಜೆಎಎಸಿ?

ಜಂಟಿ ಅವಾಮಿ ಆ್ಯಕ್ಷನ್ ಸಮಿತಿ (ಜೆಎಎಸಿ), ಪಿಒಕೆನಲ್ಲಿ ಸ್ಥಳೀಯರ ಮೇಲೆ ಪಾಕ್ ಸೇನೆಯ ಹಿಂಸಾಚಾರ, ಪೊಲೀಸ್ ದೌರ್ಜನ್ಯ ವಿರೋಧಿಸಿ 2023ರ ಸೆಪ್ಟೆಂಬರ್‌ನಲ್ಲಿ ಸ್ಥಾಪಿಸಲಾದ ಸ್ಥಳೀಯ ಸಂಘಟನೆಯಾಗಿದೆ. ಈ ಸಂಘಟನೆಯಲ್ಲಿ ವ್ಯಾಪಾರಿಗಳು, ವಕೀಲರು, ಪೂರೈಕೆದಾರರು ಮತ್ತು ಸಾಮಾಜಿಕ ಹೋರಾಟಗಾರರೂ ಇದ್ದಾರೆ.

ಕಾಂಗ್ರೆಸ್‌ಗೆ ಆಘಾತ, ಚು.ಆಯೋಗದ ಎದುರು ಪ್ರತಿಭಟನೆ

ಮೀನಾಕ್ಷಿ ನಟರಾಜನ್ ನಾಮಪತ್ರ ತಿರಸ್ಕೃತ

• **ಭೋಪಾಲ್/ಹೊಸದಿಲ್ಲಿ:** ಮಧ್ಯಪ್ರದೇಶದಿಂದ ರಾಜ್ಯ ಸಭೆಗೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದ ಮೀನಾಕ್ಷಿ ನಟರಾಜನ್ ಅವರ ನಾಮಪತ್ರವನ್ನು ಚುನಾವಣಾಧಿಕಾರಿಗಳು ತಿರಸ್ಕರಿಸಿರುವುದು ಕಾಂಗ್ರೆಸ್‌ಗೆ ಭಾರೀ ಹಿನ್ನಡೆಯಾಗಿ ಪರಿಣಮಿಸಿದೆ. ನಾಮಪತ್ರ ಸಲ್ಲಿಕೆ ವೇಳೆ ಬಾಕಿ ಇರುವ ಒಂದು ಪ್ರಕರಣದ ಮಾಹಿತಿಯನ್ನು ಪ್ರಮಾಣಪತ್ರದಲ್ಲಿ ಬಹಿರಂಗಪಡಿಸದ ಕಾರಣ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ರಾಜ್ಯಸಭೆ ಚುನಾವಣೆಗೆ ಮುನ್ನ ಬಿಜೆಪಿ ಕುದುರೆ ವ್ಯಾಪಾರದ ಆತಂಕದ ಹಿನ್ನೆಲೆಯಲ್ಲಿ ಕಾಂಗ್ರೆಸ್ ತನ್ನ ಶಾಸಕರನ್ನು ಕರ್ನಾಟಕಕ್ಕೆ ಕಳುಹಿಸಿದ್ದ ವೇಳೆ ಈ ಬೆಳವಣಿಗೆ ನಡೆದಿದೆ. ನಾಮಪತ್ರ ತಿರಸ್ಕಾರವನ್ನು ಕಾಂಗ್ರೆಸ್ ತೀವ್ರವಾಗಿ ವಿರೋಧಿಸಿದ್ದು, ಇದು ಪ್ರಜಾಪ್ರಭುತ್ವದ ಮೇಲೆ ನಡೆದ ದಾಳಿ ಎಂದು ಆರೋಪಿಸಿದೆ. ಪಕ್ಷದ ಹಿರಿಯ ನಾಯಕ ಕೆ.ಸಿ.ವೇಣುಗೋಪಾಲ್ ನೇತೃತ್ವದ ನಿಯೋಗ ಚುನಾವಣಾಧಿಕಾರಿಗಳನ್ನು ಭೇಟಿ ಮಾಡಿ ಆಕ್ಷೇಪ ವ್ಯಕ್ತಪಡಿಸಿತು.
➡ಪುಟ ೭

ರಾಜ್ಯಸಭೆ ಚುನಾವಣೆಗೂ ಮುನ್ನ ಮಧ್ಯಪ್ರದೇಶದಲ್ಲಿ ರಾಜಕೀಯ ಸಂಚಲನ

ಯಾರು ಮೀನಾಕ್ಷಿ?

- ಮಧ್ಯಪ್ರದೇಶದ ಮಂದಸೌರ್ ಕ್ಷೇತ್ರದ ಮಾಜಿ ಲೋಕಸಭಾ ಸದಸ್ಯೆ
- ಕಾಂಗ್ರೆಸ್‌ನ ಹಿರಿಯ ಸಂಘಟನಾ ನಾಯಕಿ
- ಪ್ರಸ್ತುತ ತೆಲಂಗಾಣ ಕಾಂಗ್ರೆಸ್ ಉಸ್ತುವಾರಿ ಜವಾಬ್ದಾರಿ ನಿರ್ವಹಣೆ
- ರಾಜ್ಯಸಭೆಗೆ ಕಾಂಗ್ರೆಸ್ ಅಧಿಕೃತ ಅಭ್ಯರ್ಥಿಯಾಗಿ ಘೋಷಣೆಗೊಂಡಿದ್ದರು

ಬಿರುಕು ಸೃಷ್ಟಿಗೆ ಕೈ ಹುನ್ನಾರ

• **ಮಂಡ್ಯ:** ದೇವೇಗೌಡರ ಬಗ್ಗೆ ಕಾಂಗ್ರೆಸ್ಸಿಗರಿಗೆ ಈಗ ಅನುಕಂಪ ಬಂದಿದೆ. ಬಿಜೆಪಿ-ಜಾ.ದಳ ಮೈತ್ರಿಯಿಂದ ಭಯ ಶುರುವಾಗಿದೆ. ಈ ಹಿನ್ನೆಲೆಯಲ್ಲಿ ಮೈತ್ರಿಯಲ್ಲಿ ಬಿರುಕು ತರಲು



ಕಾಂಗ್ರೆಸ್ ನಾಯಕರು ಪ್ರಯತ್ನಿಸುತ್ತಿದ್ದಾರೆ ಎಂದು ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು. ತಾಲೂಕಿನ ತಗ್ಗಹಳ್ಳಿ ಗ್ರಾಮದಲ್ಲಿ ಮಿಚೆಲಿನ್ ಇಂಡಿಯಾ ಪ್ರೈ.ಲಿ.ನ ಸಿಎಸ್ ಆರ್ ಅನುದಾನ 32.50 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣವಾಗಿರುವ ಶಾಲಾ ಕೊಠಡಿಗಳನ್ನು ಉದ್ಘಾಟಿಸಿ ಅವರು ಮಾಧ್ಯಮದವರೊಂದಿಗೆ ಮಾತನಾಡಿದರು. ರಾಜ್ಯಸಭೆಗೆ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರು ಅರ್ಜಿಯನ್ನೇ ಹಾಕಿಲ್ಲ, ದೇವೇಗೌಡರದ್ದು ಹೋರಾಟದ ಬದುಕು.
➡ಪುಟ ೭

ಕಾಂಗ್ರೆಸ್‌ನ ಮೊಸಳೆ ಕಣ್ಣೀರು ಬೇಡ: ಬಿವೈವಿ • ಪುಟ ೭

ಜೀವನ ಕೌಶಲ ಬೆಳೆಸಲು ಡಿಎಸ್‌ಇಆರ್‌ಟಿ ನಿರ್ಧಾರ

ವಾರಕ್ಕೊಂದು ದಿನ ಮೌಲ್ಯಶಿಕ್ಷಣ

▸ ನಂದಿನಿ ಎನ್.

• **ಬೆಂಗಳೂರು:** ಕೇವಲ ಪಠ್ಯಪುಸ್ತಕ ಜ್ಞಾನವಷ್ಟೇ ಅಲ್ಲದೇ, ಉತ್ತಮ ವ್ಯಕ್ತಿತ್ವ, ನೈತಿಕತೆ, ಸಾಮಾಜಿಕ ಹೊಣೆಗಾರಿಕೆ ಮತ್ತು ಜೀವನ ಕೌಶಲಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವ ಉದ್ದೇಶದಿಂದ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ(ಡಿಎಸ್‌ಇಆರ್‌ಟಿ) ಮಹತ್ವದ ನಿರ್ಧಾರ ಕೈಗೊಂಡಿದ್ದು, ಶಾಲೆಗಳಲ್ಲಿ 1-10ನೇ ತರಗತಿಗಳವರೆಗೆ ವಾರಕ್ಕೆ ಒಂದು ದಿನ ಮೌಲ್ಯ ಶಿಕ್ಷಣವನ್ನು ಕಡ್ಡಾಯಗೊಳಿಸಿದೆ. ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳಲ್ಲಿ ಹೆಚ್ಚುತ್ತಿರುವ ಮಾನಸಿಕ ಒತ್ತಡ, ಸಾಮಾಜಿಕ ಮಾಧ್ಯಮಗಳ ಪ್ರಭಾವ, ನೈತಿಕ ಮೌಲ್ಯಗಳ ಕುಸಿತ ಹಾಗೂ ಸಮಾಜಮುಖಿ ಚಿಂತನೆ ಕೊರತೆ ಗಮನದಲ್ಲಿಟ್ಟುಕೊಂಡು ಈ ಕ್ರಮ ಕೈಗೊಳ್ಳಲಾಗಿದೆ.

ದಿಗಂತ ವಿಶೇಷ

ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಅಂಕಗಳು ಮತ್ತು ಸ್ಪರ್ಧಾತ್ಮಕ ಸಾಧನೆಗಳಿಗೆ ಹೆಚ್ಚಿನ ಮಹತ್ವ ಸಿಗುತ್ತಿದ್ದು, ಜೀವನ ಮೌಲ್ಯಗಳು, ಮಾನವೀಯತೆ, ಸಹಾನುಭೂತಿ, ಶಿಸ್ತು, ಪರಿಸರ ಕಾಳಜಿ ಮತ್ತು ರಾಷ್ಟ್ರಪ್ರಜ್ಞೆ ಮೊದಲಾದ ಅಂಶಗಳು ಹಿನ್ನಡೆ ಅನುಭವಿಸುತ್ತಿವೆ. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳನ್ನು ಉತ್ತಮ ನಾಗರಿಕರನ್ನಾಗಿ ರೂಪಿಸಲು ಮೌಲ್ಯ ಶಿಕ್ಷಣ ಅಗತ್ಯವಾಗಿದೆ.
➡ಪುಟ ೭



ಮೌಲ್ಯ ಶಿಕ್ಷಣಕ್ಕೆ ಶಾಲಾ ವೇಳಾಪಟ್ಟಿಯಲ್ಲಿ ಪ್ರತಿ ತರಗತಿಗೆ ಒಂದು ಅವಧಿಯನ್ನು ನಿಗದಿಪಡಿಸಲಾಗಿದ್ದು, ವಿದ್ಯಾರ್ಥಿಗಳು ಮೌಲ್ಯಗಳನ್ನು ಅಳವಡಿಸಿಕೊಳ್ಳುತ್ತಿರುವ ಬಗ್ಗೆ ಅವರ ವರ್ತನೆಯಲ್ಲಾಗುತ್ತಿರುವ ಸಕಾರಾತ್ಮಕ ಬದಲಾವಣೆಯ ಬಗ್ಗೆ ನಿರಂತರ ಅನುಪಾಲನೆ ಮಾಡಲಾಗುವುದು.
■ ಅನಿತಾ ವಿ. ನಾಜರೆ, ನಿರ್ದೇಶಕಿ (ಪ್ರಭಾರ), ಡಿಎಸ್‌ಇಆರ್‌ಟಿ

ಭಾರತದಿಂದ 12 ಅಣ್ವಸ್ತ್ರ ನಿಯೋಜನೆ

• **ಹೊಸದಿಲ್ಲಿ:** ಭಾರತ ಇತಿಹಾಸದಲ್ಲೇ ಮೊದಲ ಬಾರಿಗೆ 12 ಅಣ್ವಸ್ತ್ರಗಳನ್ನು ಕಾರ್ಯಾಚರಣೆಗೆ ಸನ್ನದ್ಧ ಸ್ಥಿತಿಯಲ್ಲಿ ನಿಯೋಜಿಸಿದೆ ಎಂದು ಸ್ಟಾಕ್‌ಹೋಮ್ ಇಂಟರ್‌ನ್ಯಾಷನಲ್ ಪೀಸ್ ರಿಸರ್ಚ್ ಇನ್‌ಸ್ಟಿಟ್ಯೂಟ್ (ಸಿಪ್ರಿ) ಬಿಡುಗಡೆ ಮಾಡಿದ ವರದಿಯಲ್ಲಿ ತಿಳಿಸಿದೆ. ಅಣ್ವಸ್ತ್ರಗಳು ಮತ್ತು ಅವುಗಳನ್ನು ಉಡಾವಣೆ ಮಾಡುವ ವ್ಯವಸ್ಥೆಗಳನ್ನು ಶಾಂತಿಕಾಲದಲ್ಲಿ ಪ್ರತ್ಯೇಕ ದಾಸ್ತಾನುಗಳಲ್ಲಿ ಇರಿಸುವ ದಶಕಗಳ ಹಳೆ ನೀತಿಯಿಂದ ಭಾರತ ಹಿಂದೆ ಸರಿದಿದೆ ಎಂದು ಈ ಜಾಗತಿಕ ಶಸ್ತ್ರಾಸ್ತ್ರ ನಿಗಾ ಸಂಸ್ಥೆ ಬಹಿರಂಗಪಡಿಸಿದೆ. ಹೊಸದಾಗಿ ನಿಯೋಜಿಸಲಾದ 12 ಅಣ್ವಸ್ತ್ರಗಳನ್ನು ಉಡಾವಣಾ ವ್ಯವಸ್ಥೆಗಳೊಂದಿಗೆ ಜೋಡಿಸಲಾಗಿದೆ ಅಥವಾ ಸಕ್ರಿಯ ಪಡೆಗಳಿರುವ ನೆಲೆಗಳಲ್ಲಿ ಇರಿಸಲಾಗಿದೆ.
➡ಪುಟ ೭

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,60,000(2,60,000) ಅಪರಂಜಿ ಚಿನ್ನ: 1,53,160(1,51,690) ಆಭರಣ ಚಿನ್ನ: 1,40,400(1,39,050) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿ.ಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)
ಷೇರು ಸೂಚ್ಯಂಕ ಬಿಎಸ್‌ಇ 73,918(394↑) ಎನ್‌ಎಸ್‌ಇ 23,242(119↑)
$1=₹94.95

ಬಿಟ್‌ಕಾಯಿನ್: ನಲಪಾಡ್ ವಿರುದ್ಧ ಎಸ್ಐಟಿ ಚಾರ್ಜ್‌ಶೀಟ್

ಬೆಂಗಳೂರು: ತುಮಕೂರಿನ ಖಾಸಗಿ ಕಂಪನಿಯ ಬಿಟ್‌ಕಾಯಿನ್ ಕಳವು ಕೃತ್ಯದಲ್ಲಿ ಅಂತಾರಾಷ್ಟ್ರೀಯ ಮಟ್ಟದ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿಯಿಂದ ಯುವ ಕಾಂಗ್ರೆಸ್ ಮುಖಂಡ ಮೊಹಮ್ಮದ್ ನಲಪಾಡ್‌ಗೆ ಪಾಲು ಸಿಕ್ಕಿದೆ ಎಂದು ಎಸ್ಐಟಿ ಸಲ್ಲಿಸಿರುವ ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಿದೆ. ಇದರಿಂದಾಗಿ ಮೊಹಮ್ಮದ್ ನಲಪಾಡ್‌ಗೆ ಸಂಕಷ್ಟ ಎದುರಾಗಿದೆ.



ಬಿಟ್ ಕಾಯಿನ್ ಪ್ರಕರಣದ ಸಂಬಂಧ ನ್ಯಾಯಾಲಯಕ್ಕೆ ವಿಶೇಷ ತನಿಖಾ ತಂಡ (ಎಸ್ಐಟಿ) ನಲಪಾಡ್ ವಿರುದ್ಧ ಆರೋಪಪಟ್ಟಿ ಸಲ್ಲಿಸಿದೆ. ಈ ಆರೋಪ ಪಟ್ಟಿಯಲ್ಲಿ, ನಲಪಾಡ್ ಜೊತೆ ಅವರ ಆಪ್ತ ಸ್ನೇಹಿತರ ಹೆಸರೂ ಹಗರಣದಲ್ಲಿ ಪ್ರಸ್ತಾಪವಾಗಿದೆ. 2017ರಲ್ಲಿ ಬಿಟ್ ಕಾಯಿನ್ ಟ್ರೇಡಿಂಗ್ ಕಂಪನಿಯಾದ ತುಮಕೂರಿನ ಖಾಸಗಿ ಕಂಪನಿ ಶ್ರೀಕಿ ಗ್ಯಾಂಗ್ ದೋಚಿತ್ತು.

ಈ ಬಗ್ಗೆ ತುಮಕೂರಿನ ಹೊಸ ಬಡಾವಣೆ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿತ್ತು. ಪ್ರಕರಣದ ತನಿಖೆ ಪೂರ್ಣಗೊಳಿಸಿದ ಎಸ್ ಐಟಿ ಅಧಿಕಾರಿಗಳು, ಕೆಲ ದಿನಗಳ ಹಿಂದೆ ಹ್ಯಾಕರ್ ಶ್ರೀಕಿ ಮತ್ತು ಆತನ ಸ್ನೇಹಿತ ರಾಬಿನ್ ವಂಡೇವಾಲಾ, ಮೊಹಮ್ಮದ್ ನಲಪಾಡ್ ಸೇರಿದ ಇತರರ ವಿರುದ್ಧ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದೆ ಎಂದು ತಿಳಿದು ಬಂದಿದೆ.

ಹಣ ವರ್ಗಾವಣೆ ಆರೋಪದಲ್ಲಿ ಜಾರಿ ನಿರ್ದೇಶನಾಲಯ (ಇಡಿ) ತನಿಖೆ ನಡೆಸುತ್ತಿದ್ದು, ಇತ್ತೀಚಿಗೆ ನಲಪಾಡ್ ಮನೆ ಮೇಲೆ ಈ ಸಂಬಂಧ ದಾಳಿಯೂ ನಡೆಸಿತು. ಇದರ ಬೆನ್ನಲ್ಲೇ ಎಸ್ಐಟಿ ಚಾರ್ಜ್ ಶೀಟ್ ಸಲ್ಲಿಸಿದೆ. ತುಮಕೂರಿನ ಖಾಸಗಿ ಕಂಪನಿಯ ಬಿಟ್ ಕಾಯಿನ್ ಕಳವು ಕೃತ್ಯದಲ್ಲಿ ಅಂತಾರಾಷ್ಟ್ರೀಯ ಮಟ್ಟದ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿಯಿಂದ ನಲಪಾಡ್‌ಗೆ ಪಾಲು ಸಿಕ್ಕಿದೆ ಎಂದು ಎಸ್ಐಟಿ ಉಲ್ಲೇಖಿಸಿದೆ.



ಭಾನುವಾರ ರಾತ್ರಿ ಹೃದಯಾಘಾತದಿಂದ ನಿಧನರಾದ ಎಐಸಿಸಿ ಕಾರ್ಯದರ್ಶಿ, ರಾಜ್ಯ ಗ್ಯಾರಂಟಿ ಅನುಷ್ಠಾನ ಸಮಿತಿ ಉಪಾಧ್ಯಕ್ಷ ಸೂರಜ್ ಹೆಗ್ಡೆ ಅವರಿಗೆ ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಅಂತಿಮ ನಮನ ಸಲ್ಲಿಸಲಾಯಿತು. ಈ ವೇಳೆ ಸಿಎಂ ಡಿ.ಕೆ. ಶಿವಕುಮಾರ್, ಮಾಜಿ ಸಿಎಂ ಸಿದ್ದರಾಮಯ್ಯ ಇದ್ದರು. ಸಂಜೆ ಸರ್ಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಜೂನ್‌ನಲ್ಲಿ ತುಂಬಿ ತುಳುಕುತ್ತಿದ್ದ ಹಾರಂಗಿ ಜಲಾಶಯ ಈಗ ಖಾಲಿ

ಮಡಿಕೇರಿ: ಜಿಲ್ಲೆಯ ಪ್ರಮುಖ ಜಲಾಶಯವಾದ ಹಾರಂಗಿ ಅಣೆಕಟ್ಟೆಯು ಕಳೆದ ಸಾಲಿನ ಜೂನ್ ಮೊದಲ ವಾರದಲ್ಲೇ ಶೇ.90ರಷ್ಟು ಭರ್ತಿಯಾಗಿತ್ತು.

ಅಲ್ಲದೆ ಅಣೆಕಟ್ಟೆಯ ಸುರಕ್ಷತೆ ದೃಷ್ಟಿಯಿಂದ ಮತ್ತು ಜೂನ್, ಜುಲೈ ತಿಂಗಳಲ್ಲಿ ಹೆಚ್ಚು ಮಳೆ ಬೀಳುವ ಮುನ್ಸೂಚನೆಯ ಹಿನ್ನೆಲೆಯಲ್ಲಿ ನದಿಗೆ ನೀರನ್ನು ಹರಿಸಲಾಗುತ್ತಿತ್ತು. ಆದರೆ ಈ ಸಾಲಿನಲ್ಲಿ ಮುಂಗಾರು ಮಳೆಯಲ್ಲಿ ಹಿನ್ನಡೆಯಾಗಿರುವುದರಿಂದ ಅಣೆಕಟ್ಟೆಯ ನೀರಿನ ಸಂಗ್ರಹ ತೀರಾ ಕಡಿಮೆ ಇದ್ದು, ಜಲಾಶಯ ಖಾಲಿ ಖಾಲಿಯಾಗಿಗೋಚರಿಸುತ್ತಿದೆ. ಕಳೆದ ಸಾಲಿನಲ್ಲಿ ಜೂನ್ ಮೊದಲ ವಾರದಲ್ಲಿ ಅಣೆಕಟ್ಟೆಯಲ್ಲಿ 6.50. ಟಿ.ಎಂ.ಸಿ. ನೀರು ಸಂಗ್ರಹ ವಾಗಿತ್ತು. ಕಳೆದ ಬಾರಿ ಮೇ ತಿಂಗಳಲ್ಲೇ ಹೆಚ್ಚು ಮಳೆ ಬಿದ್ದ ಕಾರಣದಿಂದಾಗಿ ಅಣೆಕಟ್ಟೆಯ ಒಳ ಹರಿವು 1,800 ಕ್ಯುಸೆಕ್ ಗಿಂತಲೂ ಅಧಿಕವಾಗಿತ್ತು.



ಜಲಾನಯನ ಪ್ರದೇಶದಲ್ಲಿ ಉತ್ತಮ ಮಳೆಯಾಗಿದ್ದರಿಂದ ಅಣೆಕಟ್ಟೆಯಲ್ಲಿ ನೀರಿನ ಸಂಗ್ರಹ ಹೆಚ್ಚಾಗಿ ಜೂನ್ ಮೊದಲ ವಾರದಲ್ಲೇ ವಿದ್ಯುತ್ ಘಟಕದ ಮೂಲಕ ನದಿಗೆ1600ಕ್ಯುಸೆಕ್ ನೀರನ್ನು ಹರಿಸಲಾಗಿತ್ತು. ಆದರೆ ಈ ಸಾಲಿನಲ್ಲಿ ಮಳೆಯ ಪ್ರಮಾಣ ತೀರಾ ಕಡಿಮೆ ಯಾಗಿರುವ ಹಿನ್ನೆಲೆಯಲ್ಲಿ ಪ್ರಸಕ್ತ ಅಣೆಕಟ್ಟೆಯ ನೀರಿನ ಮಟ್ಟ ಕೇವಲ 2.97 ಟಿ.ಎಂ.ಸಿ.ಗೆ ಇಳಿದಿದೆ. ದಿನಂಪ್ರತಿ ಕೇವಲ 200 ಕ್ಯುಸೆಕ್ ನೀರನ್ನು ಮಾತ್ರ ನದಿಗೆ ಹರಿಸಲಾಗುತ್ತಿದೆ. ಜಲಾಶಯದ ಸುರಕ್ಷತೆಯ ದೃಷ್ಟಿಯಿಂದ ಕಾವೇರಿ ನೀರಾವರಿ ನಿಗಮದ ಸೂಚನೆಯಂತೆ ನೀರಾವರಿ ಇಲಾಖೆಯಿಂದ ಅಣೆಕಟ್ಟೆಯ ಮುಖ್ಯ ಕ್ರಸ್ಟ್ ಗೇಟ್‌ಗಳ ದುರಸ್ತಿ ಸೇರಿದಂತೆ ಮುನ್ನೆಚ್ಚರಿಕೆ ಹಾಗೂ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಮುಂದಿನ ದಿನಗಳಲ್ಲಿ ಅಣೆಕಟ್ಟೆಯು ಸಂಪೂರ್ಣವಾಗಿ ಭರ್ತಿಯಾದ ಸಂಧರ್ಭದಲ್ಲಿ ನೀರಾವರಿ ಸಲಹಾ ಸಮಿತಿ ಸಭೆಯ ನಂತರ ಮುಂದಿನ ಹಂಗಾಮು ಬೆಳೆಗೆ ನೀರು ಹರಿಸಲಾಗುವುದು ಎಂದು ಅಣೆಕಟ್ಟೆಯ ಉಸ್ತುವಾರಿ ಕಿರಣ್ ದೇವಯ್ಯ ಮಾಹಿತಿ ನೀಡಿದ್ದಾರೆ.

ಕಿರುಸುದ್ದಿ

ಕಾರ್ತಿಕ್ ಘೋರ್ಪಡೆ ನಿಧನಕ್ಕೆ ಗಣ್ಯರ ಸಂತಾಪ

ಸಂಡೂರು: ಇಲ್ಲಿನ ಬಿಜೆಪಿ ಹಿರಿಯ ಮುಖಂಡ, ಸಂಡೂರು ಘೋರ್ಪಡೆ ರಾಜವಂಶಸ್ಥರಾದ ಕಾರ್ತಿಕೇಯ ಮುರಾರಿರಾವ್ ಘೋರ್ಪಡೆ(66) ಅವರು ಮಂಗಳವಾರ ಬೆಳಗ್ಗೆ ನಿಧನರಾದರು. ಮೃತರಿಗೆ ಪತ್ನಿ ಸೇರಿದಂತೆ ಇಬ್ಬರು ಪುತ್ರಿಯರಿದ್ದು, ಅನೇಕ ಬಂಧು ಬಳಗವನ್ನು ಅಗಲಿದ್ದಾರೆ. ಕಾರ್ತಿಕ್ ಘೋರ್ಪಡೆ ಅವರ ಅಕಾಲಿಕ ನಿಧನದ ಸುದ್ದಿ ತೀವ್ರ ಆಘಾತವನ್ನುಂಟು ಮಾಡಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸಂತಾಪ ಸಂದೇಶದಲ್ಲಿ ತಿಳಿಸಿದ್ದಾರೆ. ಬಿಜೆಪಿ ಜಿಲ್ಲಾಧ್ಯಕ್ಷ ಅನಿಲ್ ಕುಮಾರ್ ಮೋಕ, ನಗರ ಕ್ಷೇತ್ರದ ಮಾಜಿ ಶಾಸಕ ಗಾಲಿ ಸೋಮಶೇಖರ್ ರೆಡ್ಡಿ, ಎಮ್ಮಿಗನೂರು ವೈ.ಎಂ.ಸತೀಶ್, ಮಾಜಿ ಸಚಿವ ಬಿ.ಶ್ರೀರಾಮುಲು, ಮಾಜಿ ಸಂಸದ ಸಣ್ಣ ಫಕೀರಪ್ಪ, ಎಸ್ಸಿ ಮೋರ್ಚಾ ರಾಜ್ಯಾಧ್ಯಕ್ಷ ಬಂಗಾರು ಹನುಮಂತು, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಜಿ.ಟಿ.ಪಂಪಾಪತಿ, ಮಾಜಿ ಶಾಸಕರಾದ ಎಂ.ಎಸ್. ಸೋಮಲಿಂಗಪ್ಪ, ಟಿ.ಎಚ್.ಸುರೇಶ್ ಬಾಬು ಸೇರಿದಂತೆ ಸಂಡೂರಿನ ಕಾರ್ತಿಕ್ ಕಾಳೆ, ಸಂಡೂರು ರಮೇಶ್ ಅನೇಕ ಗಣ್ಯರು, ಸ್ಕಂದರ್ ಉಕ್ಕು ಕಾರ್ಖಾನೆ ಎಲ್ಲ ಸಿಬ್ಬಂದಿ, ಶಿಕ್ಷಣ ಸಂಸ್ಥೆಯ ಎಲ್ಲ ಸಿಬ್ಬಂದಿ, ಸಂತಾಪ ಸೂಚಿಸಿದ್ದಾರೆ.

ಮಹಿಳೆ ಮೇಲೆ ಅತ್ಯಾಚಾರ: ಹತ್ತು ಮಂದಿ ಬಂಧನ

ದಾವಣಗೆರೆ: ಚನ್ನಗಿರಿ ತಾಲೂಕಿನಲ್ಲಿ ಜಮೀನೊಂದರಲ್ಲಿ 41 ವರ್ಷದ ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿ, ಆಕೆ ಖಾಸಗಿ ಫೋಟೋ ಹಾಗೂ ವಿಡಿಯೋ ಚಿತ್ರೀಕರಿಸಿ ಹರಿಬಿಟ್ಟ ಆರೋಪದಲ್ಲಿ ಓರ್ವ ಅಪ್ರಾಪ್ತ ಸೇರಿದಂತೆ 10 ಮಂದಿ ವಿರುದ್ಧ ಬಸವಾಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪತಿ ಕುಡಿದು ಬಂದಿದ್ದರಿಂದ ಮುನಿಸಿಕೊಂಡ ಮಹಿಳೆಯು ಜೂ.3ರಂದು ಸಂಜೆ 7 ಗಂಟೆ ಸುಮಾರಿಗೆ ಗಂಡನ ಊರಿನಿಂದ ತನ್ನ ತವರಿಗೆ ಹೊರಟಿದ್ದಳು. ಅದೇ ಗ್ರಾಮದ ಚಿಕನ್ ಅಂಗಡಿ ಬಳಿ ಅಳುತ್ತಾ ಬರುತ್ತಿದ್ದ ಸಂತ್ರಸ್ತೆಯನ್ನು ಯುವಕನೋರ್ವ ಮಾತನಾಡಿಸಿ ತಂಪು ಪಾನೀಯ ಕುಡಿಸಿದ್ದಾನೆ. ಅಷ್ಟರಲ್ಲಿ ಆಕೆಗೆ ಮತ್ತು ಬಂದಂತಾಗಿದ್ದು, ಜೊತೆಗಿದ್ದ ಇನ್ನೊಬ್ಬನೊಂದಿಗೆ ಮನೆಗೆ ಬಿಡುವುದಾಗಿ ಹೇಳಿ ಬೈಕ್‌ನಲ್ಲಿ ಕೂರಿಸಿಕೊಂಡು, ಜಮೀನೊಂದಕ್ಕೆ ಕರೆದೊಯ್ದಿದ್ದರು. ಜೂ.8ರಂದು ಆಕೆಯ ಅಣ್ಣನ ಮಗ ಕರೆ ಮಾಡಿ, ಫೋಟೋ, ವಿಡಿಯೋ ಮೊಬೈಲ್‌ಗಳಲ್ಲಿ ಹರಿದಾಡುತ್ತಿರುವ ಸಂಗತಿ ತಿಳಿಸಿದ್ದಾನೆ. ಆಗ ಜೂ. 3ರಂದು ರಾತ್ರಿ ನಡೆದ ಘಟನೆ ಬಗ್ಗೆ ಆಕೆ ಗಮನಕ್ಕೆ ತಂದಿದ್ದಾಳೆ. ಆಗ ಮಹಿಳೆ ಅಣ್ಣನ ಮಗ ಯಲೋದಹಳ್ಳಿಯ ಇಸ್ಪೀ ನಾಗರಾಜ ಎಂಬಾತನ ಬಳಿ ಹೋಗಿ ವಿಚಾರಿಸಿದಾಗ ಮಹಿಳೆ ಮೇಲೆ ತಾನು ಸೇರಿದಂತೆ ಚಟಾಕಿ ನಾಗರಾಜ, ಮಧು, ಅರ್ಜುನ, ಬಸವಂತ, ಕುಂದೂರ ಮಾರುತಿ, ಮನು, ಜೋಗಿ ಸುನೀಲ, ಪ್ರದೀಪ ಸಾಮೂಹಿಕ ಅತ್ಯಾಚಾರ ಎಸಗಿದ್ದಾಗಿ ಬಾಯಿ ಬಿಟ್ಟಿದ್ದಾನೆ.

ರಾಜ್ಯ ಸರ್ಕಾರದಿಂದ ಕನಿಷ್ಠ ವೇತನ ಹೆಚ್ಚಳ ತೀರ್ಮಾನ: ಈಶ್ವರ್ ಖಂಡ್ರೆ

ಜಿ ರಾಮ್ ಜಿ ವೇತನ ಹೆಚ್ಚಿಸಿ

ಬೆಂಗಳೂರು: ಪ್ರಸಕ್ತ ಬೆಲೆ ಏರಿಕೆ ಸರಿದೂಗಿಸಲು ರಾಜ್ಯ ಸರ್ಕಾರ ಕಾರ್ಮಿಕರ ಕನಿಷ್ಠ ವೇತನವನ್ನು ಹೆಚ್ಚಿಸಲು ತೀರ್ಮಾನಿಸಿದ್ದು, ಈ ಹಿಂದಿನ ಮನರೇಗಾದ ಹೊಸ ರೂಪವಾದ ವಿಬಿ-ಜಿ ರಾಮ್ ಜಿ ಯ ಕನಿಷ್ಠ ವೇತನವನ್ನು ಹೆಚ್ಚಿಸಬೇಕು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ, ಕೇಂದ್ರ ಸಚಿವರನ್ನು ಆಗ್ರಹಿಸಿದರು.

ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅಧ್ಯಕ್ಷತೆಯಲ್ಲಿ ಎಲ್ಲ ರಾಜ್ಯಗಳ ಗ್ರಾಮೀಣಾಭಿವೃದ್ಧಿ ಸಚಿವರೊಂದಿಗೆ ಮಂಗಳವಾರ ನಡೆದ ವಿಡಿಯೋ ಕಾನ್ಫರೆನ್ಸ್‌ನಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಈಗಾಗಲೇ ಕಾರ್ಮಿಕರ ಕನಿಷ್ಠ ವೇತನ ಹೆಚ್ಚಳಕ್ಕೆ ಅನುಮೋದನೆ ನೀಡಿದ್ದು, ಇದೇ ಪ್ರಕಾರವಾಗಿ ಕೇಂದ್ರ ಸರ್ಕಾರವೂ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಹಣ ಹೆಚ್ಚಿಸಬೇಕು ಎಂದು ಆಗ್ರಹಿಸಿದರು.

ಗ್ರಾಮೀಣ ಜನರ ಬದುಕು ಹಸನಾಗಿಸಲು ಶ್ರಮಿಸಲಾಗುವುದು ಎಂದರು. ಜೂ. 28 ಹಾಗೂ 29ರಂದು ಹೊಸದಿಲ್ಲಿಯಲ್ಲಿ ವಿಬಿ- ಜಿ ರಾಮ್ ಜಿ ಯೋಜನೆ ಅನುಷ್ಠಾನದ ಬಗ್ಗೆ ಎಲ್ಲ ರಾಜ್ಯಗಳ ಗ್ರಾಮೀಣಾಭಿವೃದ್ಧಿ ಸಚಿವರ ಸಭೆ ಕರೆಯಲಾಗಿದ್ದು, ತಾವು ಈ ಸಭೆಯಲ್ಲಿ ಭಾಗಿಯಾಗಿ, ರಾಜ್ಯದ ಬೇಡಿಕೆಗಳನ್ನು ಮಂಡಿಸುವುದಾಗಿ ಈಶ್ವರ ಖಂಡ್ರೆ ತಿಳಿಸಿದರು. ಸಭೆಯಲ್ಲಿ ಇಲಾಖೆಯ ಕಾರ್ಯದರ್ಶಿ ಸಮೀರ್ ಶುಕ್ಲ ಮತ್ತಿತರರು ಭಾಗಿಯಾಗಿದ್ದರು.

ವಿಮಾನ ಸಮಯ ಬದಲಾವಣೆಗೆ ಸಚಿವ ಗರಂ

ಬೆಂಗಳೂರು: ಸ್ಟಾರ್ ಏರ್ ವಿಮಾನಯಾನ ಸಂಸ್ಥೆ ಬೆಂಗಳೂರು-ಬೀದರ್- ಬೆಂಗಳೂರು ನಡುವಿನ ವೇಳಾಪಟ್ಟಿಯಲ್ಲಿ ಸಮಯ ಬದಲಾವಣೆ ಮಾಡಿರುವುದಕ್ಕೆ ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ ಖಂಡ್ರೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈ ಸಂಬಂಧ ಮುಖ್ಯಮಂತ್ರಿಯವರಿಗೆ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವರಿಗೆ ಪತ್ರ ಬರೆದಿರುವ ಅವರು, ಈ ಹಿಂದೆ ಪ್ರತಿದಿನ ಬೆಂಗಳೂರಿನಿಂದ ಬೆಳಗ್ಗೆ 6.30ಕ್ಕೆ ಹಾರಾಟ ಆರಂಭಿಸುತ್ತಿದ್ದ 84 ಆಸನಗಳ ವಿಮಾನ 7.45ಕ್ಕೆ ಬೀದರ್ ವಿಮಾನ ನಿಲ್ದಾಣಕ್ಕೆ ಆಗಮಿಸುತ್ತಿತ್ತು. ಬಳಿಕ ಬೆಳಗ್ಗೆ 8.15ಕ್ಕೆ ಬೀದರ್‌ನಿಂದ ಹಾರಾಟ ಆರಂಭಿಸಿ ಬೆಳಗ್ಗೆ 9.30ಕ್ಕೆ ಬೆಂಗಳೂರಿಗೆ ಆಗಮಿಸುತ್ತಿತ್ತು ಇದು ಬೀದರ್ ಮತ್ತು ಸುತ್ತಮುತ್ತಲ ಜಿಲ್ಲೆಗಳ ಹಾಗೂ ನೆರೆಯ ತೆಲಂಗಾಣದ ವಿಮಾನಯಾನ ಪ್ರಯಾಣಿಕರಿಗೆ, ವ್ಯಾಪಾರಸ್ಥರಿಗೆ ಮತ್ತು ಪ್ರವಾಸಿಗರಿಗೆ ಅನುಕೂಲಕರವಾಗಿತ್ತು ಎಂದು ತಿಳಿಸಿದ್ದಾರೆ. ಬೀದರ್ ವಿಮಾನ ನಿಲ್ದಾಣ ಭಾರತೀಯ ವಾಯುಪಡೆಗೆ ಸೇರಿದ್ದು, ಈ ಹಿಂದೆ ಇದ್ದ ಬೆಳಗಿನ ವೇಳಾಪಟ್ಟಿಗೆ ರಕ್ಷಣಾ ಇಲಾಖೆ ಮತ್ತು ಕೇಂದ್ರ ಸರ್ಕಾರದ ನಾಗರಿಕ ವಿಮಾನಯಾನ ಸಚಿವಾಲಯ ತನ್ನ ಅನುಮತಿ ನೀಡಿತ್ತು. ಆದರೆ, ಸ್ಟಾರ್ ಏರ್ ಸಂಸ್ಥೆ ಈಗ ಏಕಾ ಏಕಿ ವೇಳಾಪಟ್ಟಿಯನ್ನು ಬದಲಾವಣೆ ಮಾಡಿ, ಜೂ.10ರಿಂದ ಮಧ್ಯಾಹ್ನ 12.30ಕ್ಕೆ ಬೆಂಗಳೂರು ವಿಮಾನ ನಿಲ್ದಾಣದಿಂದ ಹಾರಾಟ ಆರಂಭಿಸಿ 1.45ಕ್ಕೆ ಬೀದರ್‌ಗೆ ಬರಲಿದೆ. ಮತ್ತೆ ಬೀದರ್‌ನಿಂದ ಮಧ್ಯಾಹ್ನ 2.30ಕ್ಕೆ ಹೊರಟು ಬೆಂಗಳೂರಿಗೆ 3.30ಕ್ಕೆ ತಲುಪಲಿದೆ. ಈ ವೇಳಾಪಟ್ಟಿಯಿಂದ ಯಾವುದೇ ಪ್ರಯಾಣಿಕರಿಗೆ ಅನುಕೂಲ ಆಗುವುದಿಲ್ಲ, ಇದರಿಂದಾಗಿ ಪ್ರಯಾಣಿಕರ ಸಂಖ್ಯೆ ಇಳಿಮುಖವಾಗುವ ಸಾಧ್ಯತೆಯೂ ಇದೆ ಎಂದು ತಿಳಿಸಿದ್ದಾರೆ. ಸರ್ಕಾರ ಮತ್ತು ಕೆಕೆಆರ್ ಡಿಬಿಯಿಂದ ನೀಡುತ್ತಿರುವ ವಿಜಿಎಫ್ ನಿಷ್ಪ್ರಯೋಜಕವಾಗುತ್ತದೆ ಎಂದು ಹೇಳಿದರು.



> ಜು.1ರಿಂದ ಜಾರಿಯಾಗಬೇಕಿರುವ ಮನರೇಗಾ ವಿಬಿ-ಜಿ ರಾಮ್ ಜಿ ಅಡಿಯಲ್ಲಿ ಕರ್ನಾಟಕಕ್ಕೆ ಕೇಂದ್ರ ಸರ್ಕಾರ 60:40ರ ಅನುಪಾತದಲ್ಲಿ 5,709.90 ಕೋಟಿ ರೂ. ಮಧ್ಯಂತರ ಹಂಚಿಕೆ ಮಾಡಿದ್ದು, ಇದಕ್ಕೆ ಶೇ.40ರ ಅನುಪಾತದಲ್ಲಿ 3806.60 ಕೋಟಿ ರೂ. ನೀಡಬೇಕಾಗಿದೆ, ಈ ಯೋಜನೆ ಅನುಷ್ಠಾನಕ್ಕಾಗಿ ಸಿಎಂಗೆ ಪ್ರಸ್ತಾವನೆ ಸಲ್ಲಿಸಲಾಗುವುದು.
>
> ■ ಈಶ್ವರ ಖಂಡ್ರೆ, ಸಚಿವ

ಖರ್ಗೆ ಹೇಳಿಕೆಗೆ ಬಿವೈವಿ ತಿರುಗೇಟು

ಬೆಂಗಳೂರು: ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ನಿಷೇಧಿಸಲು ಪ್ರಯತ್ನಿಸಿದ ಅನೇಕ ಸರ್ಕಾರಗಳು ಜನರಿಂದ ತಿರಸ್ಕರಿಸಲ್ಪಟ್ಟಿವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದ್ದಾರೆ. ಗೃಹಸಚಿವ ಪ್ರಿಯಾಂಕ್ ಖರ್ಗೆ ಅವರ ಆರ್‌ಎಸ್‌ಎಸ್ ಕುರಿತ ಹೇಳಿಕೆಗೆ ವಿಜಯೇಂದ್ರ ಅವರು ಸಾಮಾಜಿಕ ಜಾಲತಾಣದಲ್ಲಿ ತಿರುಗೇಟು ನೀಡಿದ್ದಾರೆ.



ಪ್ರಿಯಾಂಕ್ ಖರ್ಗೆ ಅವರೇ ನಿಮ್ಮ ಮೂಲಕ ಹೇಳಿಸಿರುವ ಮಾತು ನಿಮ್ಮ ಮುಖ್ಯಸ್ಥರದೇ (ಚೀಫ್) ಆಗಿರಬೇಕು. ಹಲವು ಸರ್ಕಾರಗಳು ಬಂದು ಹೋಗಿವೆ. ಆರ್‌ಎಸ್‌ಎಸ್ ಅನ್ನು ನಿಷೇಧಿಸಲು ಪ್ರಯತ್ನಿಸಿದ ಅನೇಕ ಸರ್ಕಾರಗಳು ಅಂತಿಮವಾಗಿ ಜನರಿಂದ ತಿರಸ್ಕರಿಸಲ್ಪಟ್ಟವು. ಆದರೆ, ಆರ್‌ಎಸ್‌ಎಸ್ ಹಿಂದು ಸಮಾಜವನ್ನು ಒಗ್ಗೂಡಿಸುವ ಮತ್ತು ಹಿಂದು ಧರ್ಮದ ಸಂದೇಶವನ್ನು ಪ್ರಪಂಚದೊಂದಿಗೆ ಹಂಚಿಕೊಳ್ಳುವ ಸಾಮರ್ಥ್ಯವಿರುವ ಬಲವಾದ, ಸಮೃದ್ಧ ಭಾರತದ ದೃಷ್ಟಿಕೋನಕ್ಕೆ ಕೊಡುಗೆ ನೀಡುವ ತನ್ನ ಧ್ಯೇಯದಲ್ಲಿ ದೃಢವಾಗಿ ನಿಂತಿದೆ ಎಂದು ತಿಳಿಸಿದ್ದಾರೆ.

ನೀವು ಎತ್ತಿಹಿಡಿಯಲು ಪ್ರತಿಜ್ಞೆ ಮಾಡಿದ ಸಂವಿಧಾನದ ಚೌಕಟ್ಟಿನೊಳಗೆ ಆರ್‌ಎಸ್‌ಎಸ್ ಕಾರ್ಯನಿರ್ವಹಿಸುತ್ತದೆ. ಅಲ್ಲದೇ ನಿಮಗೆ ನಿರಾಶೆ ಉಂಟು ಮಾಡುವಂತೆ, ಆರ್‌ಎಸ್‌ಎಸ್ ಈಗ ತನ್ನ ಸ್ಥಾಪನೆಯ 100 ವರ್ಷಗಳನ್ನು ಪೂರೈಸಿದೆ. ಇದು ನಿಮಗೆ ಕಷ್ಟಕರವಾಗಿರುತ್ತದೆ ಮತ್ತು ಬಹುಶಃ ನಿಮ್ಮ ನೈಜ ಮುಖ್ಯಸ್ಥ ಒಪ್ಪಿಕೊಳ್ಳುವುದು ಇನ್ನೂ ಹೆಚ್ಚು ಕಷ್ಟಕರವಾಗಿರುತ್ತದೆ ಎಂದು ಲೇವಡಿ ಮಾಡಿದ್ದಾರೆ.

> ಆರೆಸ್ಸೆಸ್ ನಿಷೇಧಿಸಲು ಪ್ರಯತ್ನಿಸಿದ ಸರ್ಕಾರಗಳಿಗೆ ಜನರಿಂದ ತಿರಸ್ಕಾರ

ಏತನ್ಮಧ್ಯೆ, ನಿಮ್ಮ ಕಲಬುರಗಿ ಕ್ಷೇತ್ರವು ಹಲವಾರು ಅಭಿವೃದ್ಧಿ ಸೂಚಕಗಳಲ್ಲಿ ಕಳಪೆ ಸ್ಥಾನದಲ್ಲಿದೆ. ಇದು ವರ್ಷಗಳ ಅಸಮರ್ಪಕ ಆಡಳಿತ, ನಿಷ್ಪರಿಣಾಮಕಾರಿ ನಾಯಕತ್ವವನ್ನು ಪ್ರತಿಬಿಂಬಿಸುತ್ತದೆ. ನೀವು ಆರ್‌ಎಸ್‌ಎಸ್ ಮೇಲೆ ದಾಳಿ ಮಾಡುವುದು ಹೆಡ್‌ಲೈನ್ಸ್‌ಗಳನ್ನು ಸೃಷ್ಟಿಸಬಹುದು. ಆದರೆ, ಅದು ನಿಮ್ಮನ್ನು ಆಯ್ಕೆ ಮಾಡಿದ ಜನರ ಜೀವನವನ್ನು ಸುಧಾರಿಸುವುದಿಲ್ಲ ಎಂದಿದ್ದಾರೆ. ಕಲಬುರಗಿ ಮತ್ತು ಕರ್ನಾಟಕದ ಜನರು ಉತ್ತಮ ಆಡಳಿತ, ಸಮರ್ಪಕ ಅಭಿವೃದ್ಧಿ, ಹೊಣೆಗಾರಿಕೆ ಮತ್ತು ನಾಯಕತ್ವವನ್ನು ನಿರೀಕ್ಷಿಸುತ್ತಾರೆ. ಆಡಳಿತ ವೈಫಲ್ಯಗಳಿಂದ ಅವರ ಗಮನವನ್ನು ಬೇರೆಡೆ ಸೆಳೆಯಲು ಇಂತಹ ಹೇಳಿಕೆಗಳು ಯುಕ್ತವಲ್ಲ ಎಂದು ವಿಜಯೇಂದ್ರ ಎಚ್ಚರಿಸಿದ್ದಾರೆ.

ಶೇ.5.7ರಷ್ಟು ರಫ್ತು ವಲಯ ಪ್ರಗತಿ

ಬೆಂಗಳೂರು: ಕಳೆದ 12 ವರ್ಷಗಳ ಅವಧಿಯಲ್ಲಿ ಭಾರತದ ಒಟ್ಟಾರೆ ರಫ್ತು ವಲಯವು ಶೇ.5.7ರಷ್ಟು ಬೆಳವಣಿಗೆ ದಾಖಲಿಸಿದ್ದು, ಈ ಮೂಲಕ ಜಾಗತಿಕ ಮಟ್ಟದಲ್ಲಿ ದೇಶದ ವ್ಯಾಪಾರ ಸಾಮರ್ಥ್ಯ ವಿಸ್ತರಣೆ ಯಾಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ದರ್ಪಣ್ ಜೈನ್ ತಿಳಿಸಿದರು.

ಮುಕ್ತ ವ್ಯಾಪಾರ ಒಪ್ಪಂದ, ಐಟಿ ಸೇವೆಗಳ ಕ್ಷೇತ್ರದಲ್ಲಿ ಭಾರತದ 12 ವರ್ಷಗಳ ಪ್ರಗತಿ ಕುರಿತು ನಗರದ ಖಾಸಗಿ ಹೋಟೆಲ್‌ನಲ್ಲಿ ಮಾಧ್ಯಮ ಸಂವಾದದಲ್ಲಿ ಮಾಹಿತಿ ಹಂಚಿಕೊಂಡ ಅವರು, ಭಾರತದ ಸೇವಾ ವಲಯದ ರಫ್ತು ಶೇ.9.3ರಷ್ಟು ಗಣನೀಯ ಪ್ರಗತಿಯನ್ನು ಕಾಣುವ ಮೂಲಕ ದೇಶದ ಆರ್ಥಿಕತೆಗೆ ಬಲ ನೀಡಿದೆ. ಇದು ಒಟ್ಟಾರೆ ವ್ಯಾಪಾರ ಕೊರತೆಯನ್ನು ಸರಿದೂಗಿಸಲು ನೆರವಾಗಿದೆ ಎಂದರು. ಶೇ.35 ರಷ್ಟು ಇದ್ದ ರಫ್ತು ಪ್ರಮಾಣವು ಶೇ.48ಕ್ಕೆ ಏರಿಕೆಯಾಗಿದೆ ಎಂದು ಮಾಹಿತಿ ನೀಡಿದರು.

ಪ್ರಸ್ತುತ 38 ದೇಶಗಳೊಂದಿಗೆ 9 ಮುಕ್ತ ವ್ಯಾಪಾರ ಒಪ್ಪಂದಗಳನ್ನು ಕಳೆದ 5 ವರ್ಷಗಳಲ್ಲಿ ಮಾಡಲಾಗಿದೆ. ಇದರಿಂದ 56 ಟ್ರಿಲಿಯನ್ ಯುಎಸ್ ಡಾಲರ್‌ನಷ್ಟು ಜಿಡಿಪಿ ಮೌಲ್ಯ ವರ್ಧನೆಯಾಗಿದೆ. ಮೋದಿ ಅವರ ವಿಕಸಿತ ಭಾರತ 2047 ರ ದೂರದರ್ಶಿತ್ವದ ಗುರಿ ತಲುಪಲು, ಭಾರತವನ್ನು ಜಾಗತಿಕ ರಫ್ತು ಕೇಂದ್ರವಾಗಿ ಪರಿವರ್ತಿಸುವ ನಿಟ್ಟಿನಲ್ಲಿ ಇಲಾಖೆಯು ದೃಢ ಹೆಜ್ಜೆಯಿಟ್ಟಿದೆ ಎಂದು ಹೇಳಿದರು.

ರಫ್ತು ಬೆಳವಣಿಗೆ: ಎಲೆಕ್ಟ್ರಾನಿಕ್ ಸರಕುಗಳ ರಫ್ತು ಕ್ಷೇತ್ರವು ಶೇ.20.3 ರಷ್ಟು ಅತ್ಯುನ್ನತ ಬೆಳವಣಿಗೆ ಸಾಧಿಸಿದೆ. ಇದರ ರಫ್ತು ಮೌಲ್ಯ 47.96 ಶತಕೋಟಿ ಯುಎಸ್ ಡಾಲರ್‌ಗೆ ತಲುಪಿದೆ. ಇಂಜಿನಿಯರಿಂಗ್ ಸರಕುಗಳು 122.4 ಶತಕೋಟಿ ಯುಎಸ್ ಡಾಲರ್ ತಲುಪುವ ಮೂಲಕ ಸಾರ್ವಕಾಲಿಕ ದಾಖಲೆ ಬರೆದಿವೆ ಎಂದು ವಿವರಿಸಿದರು.

ನೌಕರರಿಗೆ ಶೀಘ್ರ ನೋಂದಾಯಿಸಲು ಸೂಚನೆ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರು ಮತ್ತು ಅವರ ಅವಲಂಬಿತ ಕುಟುಂಬ ಸದಸ್ಯರಿಗೆ ನಗದುರಹಿತ ವೈದ್ಯಕೀಯ ಚಿಕಿತ್ಸೆಯನ್ನು ಒದಗಿಸುವ ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ (ಕೆಎಎಸ್‌ಎಸ್) ಯಲ್ಲಿ ಇನ್ನೂ ನೋಂದಣಿ ಮಾಡಿಸದ ನೌಕರರ ವಿವರಗಳನ್ನು ತುರ್ತಾಗಿ ಎಚ್‌ಆರ್‌ಎಂಎಸ್ ತಂತ್ರಾಂಶದಲ್ಲಿ ದಾಖಲಿಸುವಂತೆ ರಾಜ್ಯ ಸರ್ಕಾರ ಸೂಚನೆ ನೀಡಿದೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಉಪಕಾರ್ಯದರ್ಶಿಗಳು ಹೊರಡಿಸಿರುವ ಸುತ್ತೋಲೆಯಲ್ಲಿ, ಕೆಎಎಸ್‌ಎಸ್ ಯೋಜನೆಗೆ ಒಳಪಡುವ ಅಥವಾ ಒಳಪಡದಿರುವ ಕುರಿತು ನೌಕರರಿಂದ ಲಿಖಿತ ಅಭಿಪ್ರಾಯ ಪಡೆಯುವ ಪ್ರಕ್ರಿಯೆ ಈಗಾಗಲೇ ಪೂರ್ಣಗೊಂಡಿರುವುದಾಗಿ ತಿಳಿಸಲಾಗಿದೆ. 2025ರ ನ.25ರ ಒಳಗೆ ಯೋಜನೆಯಿಂದ ಹೊರಗುಳಿಯುವ ಕುರಿತು ಲಿಖಿತವಾಗಿ ತಿಳಿಸದ ನೌಕರರನ್ನು ಸ್ವಯಂಚಾಲಿತವಾಗಿ ಯೋಜನೆಗೆ ಸೇರ್ಪಡೆಯಾಗಿರುವವರಾಗಿ ಪರಿಗಣಿಸಲಾಗಿದೆ.

ರಾಜ್ಯದಲ್ಲಿ ಒಟ್ಟು 3,76,955 ಸರ್ಕಾರಿ ನೌಕರರು ಕೆಎಎಸ್ ಎಸ್ ಯೋಜನೆಗೆ ಓಪಿಟಿ -ಇನ್ ಆಗಿದ್ದು, 23,081 ನೌಕರರು ಓಪಿಟಿ -ಔಟ್ ಆಗಿದ್ದಾರೆ. ಆದರೆ ಓಪಿಟಿ -ಇನ್ ಆಗಿರುವ ನೌಕರರಲ್ಲಿ ಕೇವಲ 1,79,339 ನೌಕರರು ಮತ್ತು ಅವರ ಅವಲಂಬಿತರ ವಿವರಗಳು ಮಾತ್ರ ಎಚ್‌ಆರ್‌ಎಂಎಸ್ ತಂತ್ರಾಂಶದಲ್ಲಿ ದಾಖಲೆಯಾಗಿವೆ. ಇನ್ನೂ 1,97,616 ನೌಕರರು ಮತ್ತು ಅವರ ಕುಟುಂಬದ ಅರ್ಹ ಸದಸ್ಯರ ವಿವರಗಳ ನೋಂದಣಿ ಬಾಕಿಯಿದೆ.

ಹೆಚ್ಚಿನ ಸಂಖ್ಯೆಯ ನೌಕರರ ವಿವರಗಳು ಇನ್ನೂ ನೋಂದಾಯಿಸದಿರುವುದರಿಂದ, ಯೋಜನೆಯ ಪ್ರಯೋಜನ ಪಡೆಯುವಲ್ಲಿ ತೊಂದರೆಗಳು ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ಹಿನ್ನೆಲೆಯಲ್ಲಿ ಈಗಾಗಲೇ ನೋಂದಣಿ ಮಾಡಿಸಿರುವ ನೌಕರರನ್ನು ಹೊರತುಪಡಿಸಿ ಉಳಿದಿರುವ 1.97 ಲಕ್ಷಕ್ಕೂ ಹೆಚ್ಚು ನೌಕರರು ಮತ್ತು ಅವರ ಅವಲಂಬಿತ ಕುಟುಂಬ ಸದಸ್ಯರ ಮಾಹಿತಿಯನ್ನು ಜು.15ರೊಳಗೆ ಕಡ್ಡಾಯವಾಗಿ ಎಚ್‌ಆರ್ ಎಂಎಸ್ ತಂತ್ರಾಂಶದಲ್ಲಿ ದಾಖಲಿಸಬೇಕು ಎಂದು ಎಲ್ಲಾ ಡಿಡಿಒ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ರಾಷ್ಟ್ರಚಿಂತನೆಯ ರಂಗರೂಪ: ಯುಗಪ್ರವರ್ತಕ ಡಾ. ಹೆಡಗೇವಾರ್ | ಭಾಷೆಯ ಗಡಿ ಮೀರಿ ಕನ್ನಡಿಗರ ಹೃದಯ ತಟ್ಟಿದ ನಾಟಕ

ಡಾ.ಹೆಡಗೇವಾರ್ ತಪೋಮಯ ಜೀವನದ ತಲ್ಲಣಕ್ಕೆ ಮರುಗಿದ ಪ್ರೇಕ್ಷಕರು

ಡಾ. ಶೇಖರ ದೊಡ್ಡಗೌಡರ

ರಂಗಭೂಮಿ ಎನ್ನುವುದು ಕೇವಲ ಕಲ್ಪನೆಗಳ ಲೋಕವಲ್ಲ; ಅದು ಸಮಾಜದ ಜಾಗೃತಿ ಮತ್ತು ಇತಿಹಾಸದ ಪುನರುತ್ಥಾನದ ಪ್ರಬಲ ಮಾಧ್ಯಮ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ಥಾಪನೆಯಾಗಿ ನೂರು ವರ್ಷಗಳು ತುಂಬುತ್ತಿರುವ ಈ ಭವ್ಯ ಸಂಘ ಶತಾಬ್ದಿಯ ಸಂದರ್ಭದಲ್ಲಿ, ಈ ಮಾತನ್ನು ಅಕ್ಷರಶಃ ಸತ್ಯವಾಗಿಸಿದ ಅಪೂರ್ವ ರಂಗಪ್ರಯೋಗವೊಂದಕ್ಕೆ ಸಾಕ್ಷಿಯಾಗುವ ಮೂಲಕ, ಬೆಂಗಳೂರಿನ ಸಾಂಸ್ಕೃತಿಕ ಇತಿಹಾಸದಲ್ಲಿ 2026ರ ಜೂನ್ 6 ಮತ್ತು 7ರ ಸಾಯಂಕಾಲಗಳು ಸುವರ್ಣಾಕ್ಷರಗಳಲ್ಲಿ ಬರೆದಿಡುವಂತದ್ದಾಗಿದ್ದವು. ನಾಗಪುರದ ಪ್ರಸಿದ್ಧ ನಾದಬ್ರಹ್ಮ ಸಂಸ್ಥೆ ಪ್ರಸ್ತುತಪಡಿಸಿದ ಯುಗಪ್ರವರ್ತಕ ಡಾ. ಹೆಡಗೇವಾರ್ ಹಿಂದಿ ನಾಟಕವನ್ನು ಸತತ ಎರಡು ಪ್ರದರ್ಶನಗಳಲ್ಲಿ ತೆರೆದಿಟ್ಟಿತು.

ಈ ರಂಗಪ್ರಯೋಗ ಕೇವಲ ನಾಟಕವಾಗಿರದೆ, ಶತಮಾನದ ಸಂಘದ ಗಂಗೋತ್ರಿಯ ಉಗಮವನ್ನು ಮತ್ತು ಡಾಕ್ಟರ್ ಜೀ ಅವರ ನಿಸ್ವಾರ್ಥ ಬದುಕನ್ನು ಕಣ್ಣೆದುರು ತಂದಿಟ್ಟ ದಿವ್ಯದರ್ಶನವಾಗಿತ್ತು. ಭಾಷೆಯ ಗಡಿಗಳನ್ನು ಮೀರಿ ಕನ್ನಡಿಗರ ಹೃದಯ ಮರುಗುವಂತೆ ಮಾಡಿದ ಈ ನಾಟಕದ ವೈಚಾರಿಕ ಹರಿವು ಪ್ರತಿಯೊಬ್ಬರಲ್ಲೂ ರಾಷ್ಟ್ರಭಕ್ತಿಯ ಹೊಸಚೈತನ್ಯವನ್ನು ತುಂಬಿತು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಸ್ಥಾಪಕ ಪರಮ ಪೂಜನೀಯ ಡಾ. ಕೇಶವ ಬಲಿರಾಮ್ ಹೆಡಗೇವಾರ್ ರವರ ತಪೋಮಯ ಜೀವನದ ತಲ್ಲಣಗಳನ್ನು ಪ್ರೇಕ್ಷಕರ ಎದುರು ಅತ್ಯಂತ ಮಾರ್ಮಿಕವಾಗಿ ಅನಾವರಣಗೊಳಿಸಿತು.

ಆ ತಪೋಮಯ ಪ್ರಯಾಣದ ಆರಂಭವಾಗಿ ನಾಟಕದ ಮೊದಲ ದೃಶ್ಯವೇ ಪ್ರೇಕ್ಷಕರನ್ನು ಇತಿಹಾಸದ ರಹಸ್ಯ ಕಾಲಘಟ್ಟಕ್ಕೆ ಕರೆದೊಯ್ಯುತ್ತದೆ. ಕೋಲ್ಕತ್ತಾದಲ್ಲಿ ವೈದ್ಯಕೀಯ ಶಿಕ್ಷಣ ಪಡೆಯುತ್ತಿದ್ದ ಯುವಕ ಕೇಶವರಾವ್ ಹೆಡಗೇವಾರ್, ಬ್ರಿಟಿಷರ ಕಣ್ಣಿಗೆ ಮಣ್ಣೆರಚಿ ಕ್ರಾಂತಿಕಾರಿಗಳ ಸಂಘಟನೆಯಾದ 'ಅನುಶೀಲನ ಸಮಿತಿ'ಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ರೋಮಾಂಚಕ ಸನ್ನಿವೇಶದೊಂದಿಗೆ ನಾಟಕ ತೆರೆದುಕೊಳ್ಳುತ್ತದೆ.


ಅಂದಿನ ದಿನಗಳಲ್ಲಿ ಬ್ರಿಟಿಷ್ ಗುಪ್ತಚರ ಇಲಾಖೆಯ ತೀಕ್ಷ್ಣ ನಿಗಾದಿಂದ ತಪ್ಪಿಸಿಕೊಳ್ಳಲು ಅವರಿಗೆ ನೀಡಲಾಗಿದ್ದ ರಹಸ್ಯ



ನಾಮವೇ ಕೋಶೇನ್'. ರಂಗದ ಮೇಲೆ ಮೂಡಿಬರುವ ಈ ಆರಂಭಿಕ ದೃಶ್ಯ ತೀವ್ರವಾದ ಭಾವುಕತೆಯಿಂದ ಕೂಡಿದೆ. ತಮ್ಮ ಪ್ರಾಣದ ಹಂಗು ತೊರೆದು ದೇಶಕ್ಕಾಗಿ ಹೋರಾಡುತ್ತಿದ್ದ ಸಹ ಕ್ರಾಂತಿಕಾರಿಯೊಬ್ಬರ ಅಕಾಲಿಕ ಬಲಿದಾನದ ಸುದ್ದಿ ಕೇಳಿ ಯುವ ಹೆಡಗೇವಾರ್ ತೀವ್ರವಾಗಿ ನೊಂದುಕೊಳ್ಳುವ, ಆತಂಕ ಮತ್ತು ತಲ್ಲಣಕ್ಕೆ ಒಳಗಾಗುವ ದೃಶ್ಯವನ್ನು ಕಲಾವಿದರು ಅತ್ಯಂತ ಮಾರ್ಮಿಕವಾಗಿ ಅಭಿನಯಿಸಿದ್ದಾರೆ. ಆದರೆ, ಒಡನಾಡಿಯ ನಿಧನದಿಂದ ಧೃತಿಗೆಡದ ಕೋಶೇನ್' (ಡಾ. ಹೆಡಗೇವಾರ್), ಆ ತೀವ್ರ ದುಃಖವನ್ನೇ ಬ್ರಿಟಿಷರ ವಿರುದ್ಧದ ಜ್ವಾಲಾಮುಖಿ ಆಕ್ರೋಶವನ್ನಾಗಿ ಮಾರ್ಪಡಿಸಿಕೊಳ್ಳುತ್ತಾರೆ. ಈ ದೃಶ್ಯವು ನಾಟಕದ ಮುಂದಿನ ಭವ್ಯ ಕಥಾವಸ್ತುವಿಗೆ ಮತ್ತು ಅವರ ಅಪ್ರತಿಮ ದೇಶಭಕ್ತಿಗೆ ಅತ್ಯಂತ ಶಕ್ತಿಶಾಲಿ ಮುನ್ನುಡಿಯನ್ನಿಡುತ್ತದೆ.

ದಿನನಿತ್ಯದ ಶಾಖೆ, ಸಂಘ ಕಾರ್ಯಗಳ ಕುರಿತು ಆಳವಾಗಿ ಚರ್ಚಿಸಿ, ಯೋಜನೆ ರೂಪಿಸಿ, ಅವುಗಳನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಲು ದಾರಿ ತೋರುವ ಬೈಠಕ್', ಹಾಗೂ ಸ್ವಯಂಸೇವಕರಿಗೆ ಅಗತ್ಯವಾದ ಜ್ಞಾನ, ಕೌಶಲ್ಯಗಳನ್ನು ಧಾರೆ ಎರೆದು ಅವರನ್ನು ಸಂಘ ಕಾರ್ಯಕ್ಕೆ ಸಂಪೂರ್ಣವಾಗಿ ಸಜ್ಜುಗೊಳಿಸುವ ವಿಶಿಷ್ಟ ತರಬೇತಿಯ ವರ್ಗಗಳ ಮೂಲಕ ಪರಸ್ಪರ ಪ್ರೀತಿ-ವಿಶ್ವಾಸ ಬೆಸೆಯುವ ಕಾರ್ಯಪದ್ಧತಿ, ಪ್ರಾರ್ಥನೆ ಹಾಗೂ ಭಗವಾಧ್ವಜದ ಸಮ್ಮುಖದಲ್ಲಿ ಶಿಸ್ತಿನ ಸಿಪಾಯಿಗಳನ್ನು ನಿರ್ಮಿಸುವ ಆ ಭವ್ಯ ಪ್ರಕ್ರಿಯೆಯನ್ನು ನಾಟಕವು ಪ್ರೇಕ್ಷಕರ ಕಣ್ಣಿಗೆ ಕಟ್ಟುವಂತೆ ಪ್ರಸ್ತುತಪಡಿಸಿದೆ.

ಡಾಕ್ಟರ್‌ಜೀ ಅವರು ತಮ್ಮ ಜೀವಿತಾವಧಿಯ ಕೊನೆಯ 15 ವರ್ಷಗಳಲ್ಲಿ ಹಾಕಿಕೊಟ್ಟ ಈ ಭದ್ರವಾದ ಬುನಾದಿಯೇ, ಇಂದು ಒಂದು ಯುಗವನ್ನು (ನೂರು ವರ್ಷಗಳನ್ನು) ದಾಟಿಯೂ ಜಗತ್ತಿನ ಅತಿ ದೊಡ್ಡ ಸ್ವಯಂಸೇವಾ ಸಂಘಟನೆಯಾಗಿ ಅಖಂಡವಾಗಿ ಬೆಳೆದು ನಿಲ್ಲಲು ಕಾರಣ ಎಂಬುದನ್ನು ನಾಟಕವು ತಾರ್ಕಿಕವಾಗಿ ನಿರೂಪಿಸುತ್ತದೆ. ನಿರ್ದೇಶಕರಾದ ಸುಬೋಧ್ ಸಹಸ್ರಬುದ್ಧೆ ಅವರ ರಂಗಕಲ್ಪನೆ ಅತ್ಯಂತ ಉನ್ನತ ಮಟ್ಟದ್ದಾಗಿದೆ. ನಾಟಕದ ನಡುವೆ ಪ್ರೇರಣೆಯ ರೂಪದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಪ್ರಸಂಗವನ್ನು ತಂದಿರುವುದು ಮತ್ತು ಕರ್ತವ್ಯ ಪ್ರಜ್ಞೆಯನ್ನು ಎಚ್ಚರಿಸಲು ಕೃಷ್ಣ-ಅರ್ಜುನರ ಸಂವಾದವನ್ನು ಜೋಡಿಸಿರುವುದು ನಿರ್ದೇಶನದ ವಿಶಿಷ್ಟ ಚಾತುರ್ಯವಾಗಿದೆ. ಇಡೀ ನಾದಬ್ರಹ್ಮ ತಂಡದ ಪ್ರಕಾರ, ಈ ರಂಗಪ್ರಯೋಗ ಕೇವಲ ಅವರ ವೈಯಕ್ತಿಕ ಸಾಧನೆಯಲ್ಲ, ಬದಲಿಗೆ ಡಾಕ್ಟರ್‌ಜೀ ಅವರ ಒಟ್ಟಾರೆ ತಪಸ್ಸಿನ ಪ್ರೇರಣೆಯಿಂದ ನಡೆದ ಒಂದು ಈಶ್ವರೀಯ ಕಾರ್ಯವಾಗಿದೆ. ಇಂದಿನ ಯುವ ಪೀಳಿಗೆಗೆ ನಮ್ಮ ಸಾಂಸ್ಕೃತಿಕ ಬೇರುಗಳನ್ನು ಹೆಮ್ಮೆಯಿಂದ ಪರಿಚಯಿಸಲು ಈ ನಾಟಕ ಅತ್ಯಂತ ಪ್ರಸ್ತುತವಾಗಿದೆ.



ನಾಟಕದ ಪ್ರಥಮಾರ್ಧವು ಸಂಘದ ಸ್ಥಾಪನೆಯ ಭವ್ಯ ಇತಿಹಾಸವನ್ನು ತೆರೆದಿಟ್ಟರೆ, ದ್ವಿತೀಯಾರ್ಧದಲ್ಲಿ ಮಾಧವ ಸದಾಶಿವ ಗೋಲವಲ್ಕರ್ (ಶ್ರೀಗುರೂಜಿ) ಅವರ ಪ್ರವೇಶ ಪ್ರೇಕ್ಷಕರಲ್ಲಿ ಹೊಸ ಕುತೂಹಲ ಮತ್ತು ರೋಮಾಂಚನವನ್ನು ಹುಟ್ಟುಹಾಕುತ್ತದೆ. ಅಧ್ಯಾತ್ಮದ ಕಡೆಗೆ ತೀವ್ರ ಒಲವು ಹೊಂದಿದ್ದ, ರಾಮಕೃಷ್ಣ ಮಿಷನ್‌ನ ಸನ್ಯಾಸತ್ವದತ್ತ ಆಕರ್ಷಿತರಾಗಿದ್ದ ಗುರೂಜಿಯವರ ಅದ್ಭುತ ತೇಜಸ್ಸು ಮತ್ತು ಅಪ್ರತಿಮ ಪ್ರತಿಭೆಯನ್ನು ಡಾಕ್ಟರ್‌ಜೀ ಗುರುತಿಸುವ ದೃಶ್ಯ ನಾಟಕಕ್ಕೆ ಹೊಸ ತಿರುವು ನೀಡುತ್ತದೆ. ಕೇವಲ ವೈಯಕ್ತಿಕ ಮೋಕ್ಷಕ್ಕಾಗಿ ತಪಸ್ಸು ಮಾಡುವುದಕ್ಕಿಂತ, ನೊಂದಿರುವ ಇಡೀ ಸಮಾಜದ ಮುಕ್ತಿಗಾಗಿ ಕಾಯಕ ಮಾಡುವುದೇ ನಿಜವಾದ ಆಧ್ಯಾತ್ಮ ಮತ್ತು ದೈವಕಾರ್ಯ ಎಂಬುದನ್ನು ಡಾಕ್ಟರ್‌ಜೀ ಅವರು ಗುರೂಜಿಯವರಿಗೆ ಮನವರಿಕೆ ಮಾಡಿಕೊಡುವ ಪರಿ ಅನನ್ಯ.

ಈ ಇಬ್ಬರು ಮಹಾನ್ ಚೇತನಗಳ ನಡುವಿನ ಅಪೂರ್ವ ಬಾಂಧವ್ಯ ಮತ್ತು ಕೊನೆಗೆ ಗುರೂಜಿಯವರು ಡಾಕ್ಟರ್‌ಜೀ ಅವರ ಮಾತಿಗೆ ಒಪ್ಪಿ ತಮ್ಮ ಇಡೀ ಜೀವನವನ್ನು ಸಂಘಕಾರ್ಯಕ್ಕಾಗಿ ಸಂಪೂರ್ಣವಾಗಿ ಸಮರ್ಪಿಸಿಕೊಳ್ಳುವ ಭಾವುಕ ಸನ್ನಿವೇಶವು ಪ್ರೇಕ್ಷಕರ ಕಣ್ಣಾಲಿಗಳನ್ನು ಒದ್ದೆಯಾಗಿಸುತ್ತದೆ. ಇತಿಹಾಸದ ಅತ್ಯಂತ ಅಪರೂಪದ ಹಾಗೂ ಭಾವುಕ ಕ್ಷಣವನ್ನು ಪ್ರೇಕ್ಷಕರ ಕಣ್ಣೆದುರು ಮರುಸೃಷ್ಟಿಸುತ್ತದೆ.

ಅನಾರೋಗ್ಯದ ಆ ಕಠಿಣ ದಿನಗಳ ನಡುವೆಯೂ ಮೂಡಿಬರುವ ನಾಟಕದ ಅತ್ಯಂತ ಭಾವುಕ, ಅತಿ ಹೆಚ್ಚು ಪ್ರೇರಣಾದಾಯಕ ದೃಶ್ಯವೆಂದರೆ, ಅದು 1940ರ ನಾಗಪುರದ ಸಂಘ ಶಿಕ್ಷಾ ವರ್ಗದಲ್ಲಿ ಡಾಕ್ಟರ್‌ಜೀ ಅವರು ನೀಡಿದ ಕೊನೆಯ ಐತಿಹಾಸಿಕ ಬೌದ್ಧಿಕ್. ತಮ್ಮೆಲ್ಲಾ ದೈಹಿಕ ನೋವನ್ನು ಮರೆತು ಸಿಂಹಗರ್ಜನೆ ಮಾಡುವ ಅವರ ಆ ಪ್ರಖರ ಧ್ವನಿ ಇಡೀ ರಂಗಮಂದಿರವನ್ನೇ ಒಂದು ಕ್ಷಣ ಮೌನವಾಗಿಸಿ, ನಿಶ್ಯಬ್ದಗೊಳಿಸುತ್ತದೆ. ನನಗೆ ನಿಮ್ಮ ಕಣ್ಣೆದುರು ಇಡೀ ಹಿಂದುಸ್ತಾನದ ಭವ್ಯ ವೈಭವದ ದರ್ಶನ ವಾಗುತ್ತಿದೆ. ಸಂಘ ಕಾರ್ಯವು ಕೇವಲ ನಿತ್ಯದ ಶಾಖೆಗೆ ಮಾತ್ರ ಸೀಮಿತವಾಗಬಾರದು; ನಮ್ಮಲ್ಲಿ ಯಾರೊಬ್ಬರೂ ಎಂದಿಗೂ ನಾನು ಹಿಂದೆ ಸ್ವಯಂಸೇವಕನಾಗಿದ್ದೆ ಎಂದು ಭೂತಕಾಲದಲ್ಲಿ ಮಾತನಾಡಬಾರದು. ಬದಲಿಗೆ, ನಮ್ಮ ಜೀವನದ ಕೊನೆಯ ಉಸಿರಿರುವವರೆಗೂ ನಾವು ಸ್ವಯಂಸೇವಕರಾಗಿಯೇ ರಾಷ್ಟ್ರಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು ಎಂದು ಅವರು ಗದ್ಗದಿತ ಕಂಠದಿಂದ ನೀಡುವ ಆ ಅಂತಿಮ ಸಂದೇಶ, ಕೇವಲ ರಂಗದ ಮೇಲಿದ್ದ ಸ್ವಯಂಸೇವಕರಿಗಷ್ಟೇ ಅಲ್ಲ, ಇಡೀ ಪ್ರದರ್ಶನವನ್ನು ಉಸಿರು ಬಿಗಿಹಿಡಿದು ವೀಕ್ಷಿಸುತ್ತಿದ್ದ ನಮ್ಮಂತಹ ಪ್ರತಿಯೊಬ್ಬ ಪ್ರೇಕ್ಷಕನ ನರನಾಡಿಗಳಲ್ಲೂ ಅಭೂತಪೂರ್ವ ವಿದ್ಯುತ್ ಸಂಚಲನ ಉಂಟುಮಾಡುತ್ತದೆ.



ಆ ವಿದ್ಯುತ್ ಸಂಚಲನದ ಬೆನ್ನಲ್ಲೇ ಮೂಡಿಬರುವ ನಾಟಕದ ಮಹಾಮುಕ್ತಾಯವು ಪ್ರತಿಯೊಬ್ಬ ಪ್ರೇಕ್ಷಕನ ಹೃದಯವನ್ನು ಭಾರವಾಗಿಸುತ್ತದೆ. ಜೊತೆಗೆ ಇಡೀ ಸಭಾಂಗಣ ನಿಲ್ಲದ ಕರತಾಡನಕ್ಕೆ ಸಾಕ್ಷಿಯಾಗುವಂತೆ ಮಾಡುತ್ತದೆ. 1940ರ ಜೂನ್ 21ರಂದು ಡಾಕ್ಟರ್‌ಜೀ ಅವರ ಮಹಾನಿರ್ವಾಣದ ಕೊನೆಯ ಕ್ಷಣಗಳು ಹತ್ತಿರ ಬಂದಾಗ, ರಂಗದ ಮೇಲಿನ ವಾತಾವರಣ ಅತ್ಯಂತ ಗಂಭೀರವಾಗುತ್ತದೆ.

ಸಾವು ಕಣ್ಣೆದುರು ಬಂದು ನಿಂತಿದ್ದರೂ, ದೈಹಿಕ ಪ್ರಜ್ಞೆ ತಪ್ಪುತ್ತಿದ್ದರೂ ಅವರ ಒಳಮನಸ್ಸು ನಿರಂತರವಾಗಿ ಜಪಿಸುತ್ತಿದ್ದದ್ದು ಮಾತ್ರ ತಾಯ್ನಾಡಿನ ಪರಮ ಪವಿತ್ರ ಮಂತ್ರವನ್ನೇ. ತಮ್ಮ ಕೊನೆಯ ಉಸಿರನ್ನು ಎಳೆಯುವ ಮುನ್ನ ಡಾಕ್ಟರ್‌ಜೀ ಅವರು ಅತ್ಯಂತ ಗಂಭೀರ ಹಾಗೂ ಭಕ್ತಿಪೂರ್ವಕವಾಗಿ ಉಚ್ಚರಿಸುವ ಆ ಅಂತಿಮ ಮಹಾಶಬ್ದಗಳು: ಹಿಂದೂ ರಾಷ್ಟ್ರ, ಭಾರತ್ ಮಾತಾ ಮತ್ತು ವಂದೇ ಮಾತರಂ! ಯುಗ ಪ್ರವರ್ತಕ' ಎನ್ನುವ ಶೀರ್ಷಿಕೆಗೆ ನಾಗಪುರದ ಆ ಧೀಮಂತ ಕಲಾವಿದರು ರಂಗದ ಮೇಲೆ ಸಂಪೂರ್ಣ ನ್ಯಾಯ ಒದಗಿಸಿದ್ದರು. ಡಾಕ್ಟರ್‌ಜೀ ಅವರು ದೈಹಿಕವಾಗಿ ಮರೆಯಾಗಿದ್ದರೂ, ಅವರು ಬಿತ್ತಿದ ಆ ಪ್ರಖರ ರಾಷ್ಟ್ರಚಿಂತನೆಯ ರಂಗರೂಪ ಇಂದಿಗೂ, ಮುಂದಿಗೂ ದೇಶದ ಕೋಟ್ಯಂತರ ಸ್ವಯಂಸೇವಾ ರೂಪದ ಕಾರ್ಯಕರ್ತರಲ್ಲಿ ಸದಾಜೀವಂತವಾಗಿರುತ್ತದೆ ಎಂಬುದನ್ನು ಈ ನಾಟಕ ಪ್ರತಿಯೊಬ್ಬರ ಮನದ ಆಳಕ್ಕೆ ತಲುಪಿಸುತ್ತದೆ.

ಅಧಿಕಾರಿಗಳಿಗೆ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚನೆ

ಅಗ್ನಿ ಅವಘಡ ತಡೆಗೆ ಫೈರ್ ಆಡಿಟ್



ಬೆಂಗಳೂರು: ನಗರದ ಪ್ರಮುಖ ಮಾರುಕಟ್ಟೆಯಾದ ಕೆ.ಆರ್.ಮಾರುಕಟ್ಟೆಯಲ್ಲಿ ಅಗ್ನಿ ಅವಘಡಗಳು ಸಂಭವಿಸುವುದನ್ನು ತಡೆಯುವ ಸಲುವಾಗಿ ಫೈರ್ ಆಡಿಟ್ ನಡೆಸಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ ಕೆ.ಆರ್. ಮಾರುಕಟ್ಟೆಗೆ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು, ಮಾರುಕಟ್ಟೆಯಲ್ಲಿ ಅಗ್ನಿಯಿಂದ ಉಂಟಾಗಬಹುದಾದ ಅಪಾಯಗಳು, ಅಗ್ನಿಶಾಮಕ ವ್ಯವಸ್ಥೆ ಹಾಗೂ ತುರ್ತು ಪರಿಸ್ಥಿತಿಯಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಕೂಡಲೇ ಫೈರ್ ಆಡಿಟ್ ನಡೆಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಅಗ್ನಿ ಅವಘಡ ಸಂಭವಿಸಿದ ಸಂದರ್ಭದಲ್ಲಿ ಸುರಕ್ಷಿತವಾಗಿ ಹೊರಬರಲು ತುರ್ತು ನಿರ್ಗಮನ ವ್ಯವಸ್ಥೆಗಳು ಸಮರ್ಪಕವಾಗಿರಬೇಕು. ಜೊತೆಗೆ ಅಗ್ನಿಯನ್ನು ತ್ವರಿತವಾಗಿ ನಿಯಂತ್ರಿಸುವ ಉದ್ದೇಶದಿಂದ ಅಗ್ನಿಶಾಮಕ ಪೈಪ್‌ಗಳನ್ನು ಅಳವಡಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಒತ್ತುವರಿಗಳನ್ನು ತೆರವುಗೊಳಿಸಿ: ಕೆ.ಆರ್.ಮಾರುಕಟ್ಟೆ ಕಟ್ಟಡದಲ್ಲಿರುವ ಮಳಿಗೆಗಳ ಮುಂಭಾಗದಲ್ಲಿ ಮಾಡಿರುವ ಒತ್ತುವರಿಗಳನ್ನು ಗುರುತಿಸಿ, ಸಂಬಂಧಪಟ್ಟವರಿಗೆ ದುಪ್ಪಟ್ಟು ದಂಡ ವಿಧಿಸಿ ತೆರವುಗೊಳಿಸುವ ಕಾರ್ಯ ಕೈಗೊಳ್ಳಬೇಕು. ನಾಗರಿಕರಿಗೆ ಯಾವುದೇ ರೀತಿಯ ಅಡಚಣೆ ಉಂಟಾಗದಂತೆ ನೋಡಿಕೊಳ್ಳಬೇಕು. ಜೊತೆಗೆ ಮಾರುಕಟ್ಟೆ ಮುಂಭಾಗದಲ್ಲಿರುವ ಮಾರಾಟಗಾರರು ಅವರಿಗೆ ಮೀಸಲಾದ ಸ್ಥಳಗಳಲ್ಲಿಯೇ ವ್ಯಾಪಾರ ನಡೆಸುವಂತೆ ಕ್ರಮವಹಿಸಬೇಕು. ಈ ಸಂಬಂಧ ಸ್ಥಳಗಳನ್ನು ಗುರುತಿಸಿ, ನಿಗದಿತ ಜಾಗದಲ್ಲಿಯೇ ವ್ಯಾಪಾರ ಮಾಡುವಂತೆ ನೋಡಿಕೊಳ್ಳಬೇಕೆಂದು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಶೌಚಾಲಯ ತೆರವುಗೊಳಿಸಿ

ಕೆ.ಆರ್.ಮಾರುಕಟ್ಟೆಯ ಆವರಣದಲ್ಲಿರುವ ಸಾರ್ವಜನಿಕ ಶೌಚಾಲಯ ಶಿಥಿಲಾವಸ್ಥೆಯಲ್ಲಿದ್ದು, ನೆಲ ಹಾಗೂ ಮೊದಲನೇ ಮಹಡಿಯಲ್ಲಿರುವ ಶೌಚಾಲಯಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡಿ, ಶಿಥಿಲಾವಸ್ಥೆಯ ಶೌಚಾಲಯವನ್ನು ತೆರವುಗೊಳಿಸಿ ತ್ಯಾಜ್ಯ ವಿಲೇವಾರಿ ಕಾರ್ಯಕ್ಕೆ ಆ ಜಾಗವನ್ನು ಬಳಸಿಕೊಳ್ಳುವಂತೆ ಸೂಚಿಸಿದರು.

ಸದ್ಬಳಕೆಯಾಗುವಂತೆ ಯೋಜನೆ ರೂಪಿಸಿ

ಕೆ.ಆರ್. ಮಾರುಕಟ್ಟೆ ಕಟ್ಟಡದ ಮೂರನೇ ಮಹಡಿ ಬಳಕೆಯಾಗದೆ ಇದ್ದು, ಸಂಪೂರ್ಣ ಮಹಡಿ ಸದ್ಬಳಕೆ ಮಾಡಿಕೊಳ್ಳುವ ಸಲುವಾಗಿ ಯೋಜನೆ ರೂಪಿಸಿ. ಮಾರುಕಟ್ಟೆ ಕಂದಾಯ ಕಚೇರಿ ಹಾಗೂ ತ್ಯಾಜ್ಯ ನಿರ್ವಹಣೆ ಕಚೇರಿ ಸ್ಥಾಪನೆಗೆ ಕ್ರಮ ವಹಿಸಲು ಸೂಚನೆ ನೀಡಿದರು.

ಜಿಲ್ಲಾ ಪಂಚಾಯತಿ ಯೋಜನಾ ನಿರ್ದೇಶಕ ವಿಠಲ್ ಕವಾಳೆ ಅಭಿಮತ

ಸ್ವ-ಸಹಾಯ ಸಂಘಗಳಿಂದ ಆರ್ಥಿಕ ಅಭಿವೃದ್ಧಿ



ದೊಡ್ಡಬಳ್ಳಾಪುರ: ಗ್ರಾಮೀಣ ಭಾಗದ ಸ್ವ-ಸಹಾಯ ಸಂಘಗಳಲ್ಲಿ ತೊಡಗಿಕೊಂಡಿರುವ ಮಹಿಳೆಯರು ತಯಾರಿಸಿರುವ ಉತ್ಪನ್ನಗಳನ್ನು ಮಾರಾಟ ಮಾಡಲು ವೇದಿಕೆ ಕಲ್ಪಿಸಿ, ಅವರು ಆರ್ಥಿಕವಾಗಿ ಅಭಿವೃದ್ಧಿ ಪಡಿಸಲು ಉತ್ತೇಜನ ನೀಡುವುದಕ್ಕಾಗಿ 'ಮಾಸಿಕ ಸಂತೆ' ಕಾರ್ಯಕ್ರಮ ಅನುಷ್ಠಾನಗೊಳಿಸಿದೆ ಎಂದು ಜಿಲ್ಲಾ ಪಂಚಾಯತಿ ಯೋಜನಾ ನಿರ್ದೇಶಕ ವಿಠಲ್ ಕವಾಳೆ ಹೇಳಿದರು.

ಅವರು ತಾಲೂಕಿನ ಘಾಟಿ ದೇವಾಲಯದ ಆವರಣದಲ್ಲಿ ಶ್ರೀ ಘಾಟಿ ಸುಬ್ರಹ್ಮಣ್ಯಸ್ವಾಮಿ ಸಂಜೀವಿನಿ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟ ಹಾಗೂ ಎಸ್ ಎಸ್. ಘಾಟಿ ಗ್ರಾಮ ಪಂಚಾಯಿತಿ ವತಿಯಿಂದ ಸಂಜೀವಿನಿ ಯೋಜನೆಯಡಿ

ಆಯೋಜಿಸಿದ್ದ ಸಂಜೀವಿನಿ ಮಾಸಿಕ ಸಂತೆಗೆ ಚಾಲನೆ ನೀಡಿ ಮಾತನಾಡಿದರು. ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಯೋಜನೆ (ಎನ್ ಆರ್‌ಎಲ್‌ಎಂ) ಸಂಜೀವಿನಿ ಯೋಜನೆಯಡಿ ಆರ್ಥಿಕ ನೆರವು ಪಡೆದಿರುವ ಮಹಿಳಾ ಸ್ವಸಹಾಯ ಗುಂಪುಗಳು ತಯಾರಿಸಿರುವ ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟಕ್ಕಾಗಿ ಈ ಸಂತೆಯನ್ನು ಆಯೋಜಿಸಲಾಗುತ್ತಿದೆ ಎಂದು ಹೇಳಿದರು. ಎನ್‌ಆರ್‌ಎಲ್‌ಎಂ ಸಂಜೀವಿನಿ ಯೋಜನೆಯಡಿ ಆರ್ಥಿಕ ಸೌಲಭ್ಯ ಪಡೆದಿರುವ ಮಹಿಳಾ ಸ್ವಸಹಾಯ ಗುಂಪುಗಳ ಸದಸ್ಯರು ಮನೆಗಳಲ್ಲಿಯೇ ವಿವಿಧ ಉತ್ಪನ್ನಗಳನ್ನು ತಯಾರಿಸುತ್ತಿದ್ದಾರೆ. ಈ ಉತ್ಪನ್ನಗಳಿಗೆ ಮಾರುಕಟ್ಟೆ ದೊರಕಿಸಿ ಮಹಿಳೆಯರನ್ನು ಆರ್ಥಿಕ ವಾಗಿ ಸಬಲೀಕರಣಗೊಳಿಸುವ ಉದ್ದೇಶ ದಿಂದ ಮಾಸಿಕ ಸಂತೆಯನ್ನು ಗ್ರಾಮೀಣ ಭಾಗದಲ್ಲಿ ಆಯೋಜಿಸಲಾಗಿದೆ ಎಂದರು.

ಪಂಚಾಯಿತಿ ವ್ಯಾಪ್ತಿಯ 31 ಮಹಿಳಾ ಸ್ವ-ಸಹಾಯ ಸಂಘಗಳ ಸದಸ್ಯೆಯರು ಭಾಗವಹಿಸಿದರು. ಸಂಘದ ಸದಸ್ಯರು ತಯಾರಿಸಿದ ಉತ್ಪನ್ನಗಳನ್ನು ಪ್ರದರ್ಶನ ಹಾಗೂ ಮಾರಾಟಕ್ಕೆ ಇಟ್ಟಿದ್ದರು. ಆಹಾರ ಉತ್ಪನ್ನಗಳು, ಕರಕುಶಲ ವಸ್ತುಗಳು, ಹೂ, ತೆಂಗಿನಕಾಯಿ, ಜ್ಯೂಟ್ ಬ್ಯಾಗ್, ಜೇನುತುಪ್ಪ, ಸೀರೆ, ನುಗ್ಗೆ ಕಾಯಿ-ಸೊಪ್ಪು, ಚುರುಮುರಿ, ಅಗರಬತ್ತಿ, ಬೆಂಬಲ ಮಹಿಳಾ ಕಿಸಾನ್ ಪ್ರೊಡ್ಯೂಸರ್ ಕಂಪನಿಯ ಮಿಷನರಿ ಲಭ್ಯವಿದ್ದವು.

ಕಾರ್ಯಕ್ರಮದಲ್ಲಿ ಜಿಲ್ಲಾ ಯೋಜನಾಧಿಕಾರಿಗಳು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಪಂಚಾಯಿತಿ ಸಿಬ್ಬಂದಿಗಳು ಒಕ್ಕೂಟದ ಕಮಿಟಿ ಸದಸ್ಯರುಗಳು ಮತ್ತು ತಾಲೂಕು ಅಭಿಯಾನ ನಿರ್ವಹಣಾ ಘಟಕದ ಸಿಬ್ಬಂದಿ ಒಕ್ಕೂಟದ ಸಿಬ್ಬಂದಿ ಸ್ವ-ಸಹಾಯ ಸಂಘದ ಮಹಿಳಾ ಸದಸ್ಯರು ಉಪಸ್ಥಿತರಿದ್ದರು.

ಗೋಪಾಲಗೌಡ ಪುಸ್ತಕ ಬಿಡುಗಡೆ

ಬೆಂಗಳೂರು: ರಾಜಕೀಯ ಪಕ್ಷಗಳಲ್ಲಿ ಆಂತರಿಕ ಪ್ರಜಾಪ್ರಭುತ್ವ ಇಲ್ಲದೆ ಹೋದಾಗ ಮತ್ತು ವ್ಯಾಪಾರವೇ ಸಿದ್ಧಾಂತವಾದಾಗ ಪ್ರಜಾಪ್ರಭುತ್ವಕ್ಕೆ ಉಳಿಗಾಲವಿಲ್ಲ ಎಂದು ಮಾಜಿ ಸ್ಪೀಕರ್ ಕೆ.ಆರ್.ರಮೇಶ್ ಕುಮಾರ್ ಕಳವಳ ವ್ಯಕ್ತಪಡಿಸಿದರು. ನಗರದ ನ್ಯಾಷನಲ್ ಕಾಲೇಜ್‌ನಲ್ಲಿ ಕನ್ನಡ ಜನಶಕ್ತಿ ಮತ್ತು ಶಾಂತವೇರಿ ಗೋಪಾಲಗೌಡ ಸಮಾಜವಾದಿ ಪ್ರತಿಷ್ಠಾನ ವತಿಯಿಂದ ನಡೆದ ರಾಜಕೀಯ ಸಂತ ಶಾಂತವೇರಿ ಗೋಪಾಲಗೌಡ ಪುಸ್ತಕ ಬಿಡುಗಡೆ ಮತ್ತು ಸಂಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಂದು ದೇಶದಲ್ಲಿ ಪ್ರಜಾಪ್ರಭುತ್ವ ಇದೆಯೋ ಅಥವಾ ಸಮಾಜವಾದ ಇದೆಯೋ ಎಂಬ ಪ್ರಶ್ನೆ ಕಾಡುತ್ತಿದೆ. ಪ್ರಸ್ತುತ ದಿನಗಳಲ್ಲಿ ಸರ್ವಾಧಿಕಾರಿ ಪ್ರಜಾಪ್ರಭುತ್ವ ಎಂಬ ಹೊಸ ಪರಿಭಾಷೆ ಸೃಷ್ಟಿಯಾಗಿದೆ. ಕಮ್ಯುನಿಸ್ಟ್ ಸಿದ್ಧಾಂತಗಳಿಗಿಂತ ಭಿನ್ನವಾಗಿ, ಈ ದೇಶದ ಪರಿಸರಕ್ಕೆ ಹೊಂದುವಂತಹ ಪ್ರಜಾಪ್ರಭುತ್ವವಾದಿ ಸಮಾಜವಾದ ಇಂದಿನ ಅಗತ್ಯವಾಗಿದೆ ಎಂದು ಹೇಳಿದರು. ಗೋಪಾಲಗೌಡರು ಎಂದಿಗೂ ತಪ್ಪು ಹಾದಿ ಹಿಡಿಯಲಿಲ್ಲ, ಅವಕಾಶ ಇದ್ದರು ಅಪ್ರಾಮಾಣಿಕರಾಗದ ಮಹಾ ನಾಯಕರಾಗಿದ್ದರು. ಅಂದು ನಾಯಕರಾಗಿದ್ದ ನಿಜಲಿಂಗಪ್ಪ, ದೇವರಾಜ್ ಅರಸು ಅಥವಾ ಶಾಂತವೇರಿ ಗೋಪಾಲಗೌಡರು ಅನಾರೋಗ್ಯ ಪೀಡಿತರಾದಾಗ ಬೌರಿಂಗ್ ಹಾಗೂ ವಿಕ್ಟೋರಿಯಾದಂತಹ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿದ್ದರು. ಆದರೆ ಇಂದು ರಾಜ್ಯ ಆಳುವವರೇ ಪ್ರತಿಷ್ಠಿತ ಖಾಸಗಿ ಆಸ್ಪತ್ರೆಗಳಿಗೆ ಹೋಗುತ್ತಾರೆ. ಹಾಗಾದರೆ ಸರ್ಕಾರಿ ಶಾಲೆ, ಆಸ್ಪತ್ರೆಗಳು ಇರುವುದು ಕೇವಲ ಬಡ ಜನರಿಗೆ ಮಾತ್ರವೇ? ಎಂದು ಪ್ರಶ್ನಿಸಿದರು.

ಸಂವಿಧಾನವನ್ನು ನಾವು ಮೈಮರೆತರೆ, ಸಾರ್ವಜನಿಕ ವೇದಿಕೆ ಹಾಗೂ ಸಂಸತ್ತಿನಿಂದ ಯೋಗ್ಯರನ್ನು ದೂರ ಇಟ್ಟರೆ, ಪುಂಡರು ಮತ್ತು ಲಫಂಗರು ಆ ಜಾಗವನ್ನು ಆಕ್ರಮಿಸಿಕೊಳ್ಳುತ್ತಾರೆ. ಅದರ ಪರಿಣಾಮವಾಗಿ ನಿರ್ಲಜ್ಜ ರಾಜಕಾರಣ ಸೃಷ್ಟಿಯಾಗುತ್ತದೆ ಎಂದು ಅಭಿಪ್ರಾಯಪಟ್ಟರು.

IN THE COURT OF THE HON'BLE ADDITIONAL CIVIL JUDGE AT HOSKOTE

C. Misc No. 237/2026

PETITIONERS: Chandrappa and others -V/s-
RESPONDENT: The Tahasildar, Hoskote.

GENERAL PUBLIC NOTICE

Whereas, the petitioners has filed the above said petition for seeking the direction to the respondent for the issuance of death certificate of the Mother of the petitioners No. 2 and 3 wife of petitioner No.1 as Late Shantha W/o Chandrappa at Hethakki village Nandagudi Hobali Hosakote Taluk Bangalore Rural District-562122 As she was died on 06-04-2022, the case is posted for the appearance of the interested parties / publics on **21-07-2026** before the above said court above said court. Hence, interested parties are hereby requested to appear on person/ pleader / advocate on **21-07-2026** before the ADDITIONAL CIVIL JUDGE AND J.M.F.C AT HOSAKOTE. Failing which, the above case will be disposed as experte.

Given under my hand and the seal of this court on 08-06-2026.

By order of the court, Sheristedar, Civil Judge & JMFC Hosakote.

GANESH .M, Advocate
Hoskote.

ಮಾನ್ಯ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಕುಣಿಗಲ್.
ಸಿ.ಸಿ. ನಂ. 595/2025

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಸಿ.ಮಿಸ್.ನಂ. 176/2026

ಸಾರ್ವಜನಿಕ ಪ್ರಕಟಣೆ

BEFORE THE MOTOR ACCIDENT CLAIMS TRIBUNAL AT BENAGALURU (SCCH-15)

M.V.C. No. 8696/2025

BETWEEN: SRI. MAHESH KG ...PETITIONER
AND: SRI. HEMANTH KUMAR GOWDA. N AND ANOTHER **...RESPONDENTS**

NOTICE TO RESPONDENT No. 1

SRI. HEMANTH KUMAR GOWDA. N. S/o. Sri. Nagaraju. P, Major in Age, R/at: 12th A Cross, Kaviripura, Basaveshwaranagar, Bangalore North, Bangalore- 560 079. (RC Owner of Car bearing Reg. No.KA-02-MV-7393)

WHEREAS, The petitioner has instituted the above case against the Respondent No.1 & 2, claiming compensation of Rs.40,00,000/- (Rupees Forty Lakhs Only) for the injuries occurred in a Road Traffic Accident, which took place on 10/11/2025 at about 7:30 PM Near Mangaluru Kabab Hotel Laggere Service Road, Kempegowda Layout, Bengaluru City on same road, involved car bearing Reg. No.KA-02-MV-7393, which is belongs to you and you made party to the proceedings as Respondent No.1. You are hereby summoned to Appear before this Hon'ble Court in person or through advocate on **16/07/2026** at **11.00 A.M.** before Small Cause Court Hall No.24, Bengaluru, failing which the case will be disposed off Ex-parte.

Given under my hand and Seal of the Court on this 03/06/2026.

By order of the Court, Assistant Registrar, Court of Small Causes, Bengaluru

K.N Channappa Gowda, Advocate
No.118/8, 1st Floor, Varalakshmi Bhavan, Near BMTC Bus Stop, Kurubarahalli, Bangalore- 560 086

BEFORE THE MOTOR ACCIDENT CLAIMS TRIBUNAL AT BENGALURU (SCCH-1)

M.V.C. No. 4465/2025

BETWEEN: GANGAMMA & OTHERS **...PETITIONERS**
AND: MAHADEVASWAMY. R. & ANOTHER ... **RESPONDENTS**

NOTICE TO RESPONDENT No. 1

MAHADEVASWAMY. R. S/o RAJANNA, #25/10-6, 1st FLOOR, 24th CROSS, BHUVANESHWARI NAGAR, KEMPAPURA, AGRAHARA MAGADI ROAD, BENGALURU-23.

The petitioner has filed the above case for compensation of Rs.60,00,000/- for the death of Anand Kumar @ Anand Kumar T.R in a RTA caused by MAXI CAB MINI BUS bearing Reg. No.KA-51-AC-7905, on 19.05.2025 at about 8:20 P.M., on Bengaluru-Tumkur NH-48 Service Road, Dhanojipalya Village, near Manoj Dhaba, Nelamangala Town, Bengaluru.

You are hereby directed to appear before the Honourable court MACT (SCCH-1) on **20/07/2026** at **11:00 AM** either in person or through your counsel to answer the claim. If you fail to appear before the court on the said day either in person or through your counsel, you will be placed exparte and case will be disposed off in accordance with Law.

Given under my hand and a seal of the court on this 05/06/2026

By order of the court, Assistant Registrar, Court of Small Causes, Bengaluru.

R. Chandra Shekhar, Advocate
No. 39/2, ASVNV Bhavan, Office No. 32/D, 2nd Floor, Kempegowda road, Bengaluru- 560 009.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕ ಪ್ರಕಟಣೆ

ಗೌರವಾನ್ವಿತ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ, ಕೃಷ್ಣರಾಜಪೇಟೆ.
ಸಿ.ಮಿಸ್. ಸಂಖ್ಯೆ : 96/2026

IN THE COURT OF THE SMALL CAUSES JUDGE AND MACT AT BENGALURU

E.C.A. No. 3/2026 (SCCH-25)

BETWEEN: Sri. Lingaraju. H ...Petitioner
AND: Vinay Kumar. B & others **...Respondents**

NOTICE TO THE RESPONDENTS No. 3 to 5

R-3 Venkatareddy, Father's name not known, **R-4. Kishore .T. Reddy**, Father's name not known, Major in age, **R-5. Smt. Sunanda .T. Reddy**, W/o. Kishore .T. Reddy, Major in age. All are residing at : No. B-47/1, Krishnam Building, Casia Street, Ramanamaharshi California Garden, Ananthapura Gate, Yelahanka Taluk, Bengaluru-560 064.

Take notice that the petitioner has filed the above claim petition against you claiming compensation of Rs. 37,34,200/-due to injuries sustained by the petitioner while under the course of employment with the respondents, which occurred on 23.9.2024 at about 5.30 P.M., at Property No. B-47/1, Krishnam Building, Casia Street, Ramanamaharshi California Garden, Ananthapura Gate, Yelahanka Taluk, Bengaluru-560 064.

Hence you are hereby directed to present before this Hon'ble Court on **15-07-2026** at **11.00 A.M.** personally or through a pleader duly instructed by you, failing which the matter will be heard in your absence, placing you Exparte.

Given under my hand and the seal of the Court, on this 01/06/2026

By order of the Court, Assistant Registrar, Court of Small Causes, Bengaluru

Advocate for petitioner:
R. Jagadeeshareddy
No. 16, 6th Main, Gandhinagar, Bengaluru- 560 009.

ಗೌರವಾನ್ವಿತ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ, ಕೃಷ್ಣರಾಜಪೇಟೆ.
ಕ್ರಿಮಿನಲ್ ಸಂಕೀರ್ಣ ಅರ್ಜಿ ಸಂಖ್ಯೆ : 103/2026

ಗೌರವಾನ್ವಿತ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ, ಕೃಷ್ಣರಾಜಪೇಟೆ.
ಎಂ.ವಿ.ಸಿ. ಸಂಖ್ಯೆ : 1266/2025

ಪತ್ರಿಕಾ ಪ್ರಕಟಣೆ

IN THE COURT OF THE HON'BLE SENIOR CIVIL JUDGE AT MALUR

O. S. NO. 16/2016

Between: Sri. Santhosh and another ... Plaintiff
V/s
And: Sri. Srinivas & others ... Defendants

SUMMONS TO THE DEFENDANT NO. 6 to 9 & 10 LRS a & b, 11.

6. Smt. Mamatha D/o. Srinivas, Aged about 30 years, **7. Sri. Sridhar,** S/o. Srinivas, Aged about 28 years, Grandson of Late. Ramaiah. **8. Sri. Pillappa,** S/o. Late Nanjappa, Aged about 80 years, **9. Sri. Venkataramana Gowda,** S/o. Late. Nanjappa, Aged about 80 years, All are residents of Chikkathirupathi Village, Lakkur Hobli, Malur Taluk, Kolar District. **11. Sri. Y. Bhaskar,** S/o Narayan, Aged about 45 years, R/at No.219-2A, 'Saikrupa', 2nd main Road, NGEF, Kasthurinagar, Bengaluru-560043. **10.A. Sri. N. Purushatham,** S/o B. M. Nallayappa, Aged about 53 years, **10.B. Sri. N. Giriraj,** Major, S/o B. M. Nallayappa, Aged about 48 years, Both are residing at Bellanduru Village, Varthur Hobli, Bangalore East Taluk, "Bangalore: 560037.

Whereas the plaintiffs have instituted a suit against you and others defendants for the relief of partition and separate possession and in spite of notice of proper steps taken, the summons sent by this Hon'ble court were returned as unnerved. Hence you are hereby directed to appear before this Hon'ble court on 23.07.2026 at 11-00 am, in person or through an advocate to answer the queries. If you fail to appear on the said date, the case will be determined in your absence and further order will be passed. This is given under my hand and seal of court on the 06.06.2026..

SCHEDULE

All that piece and parcel of an Land bearing Sy.125/1 measuring 2 Acres 6 Guntas situated at Chikkatirupathi Village, Lakkur Hobli, Malur Taluk and bounded on: East by: Halla, West by: Land of Yellamma, North by Land of Krishnappa, South by Land of Sugreevappa Krishnappa.

By order of the Court
Chief Ministrial Officer, Senior Civil Judge Court Malur

Advocate for plaintiff: **Sri. R. M. Muniraju, Krishnamurthy C, Srinatha. A,** Advocates, Office: S.T. Narayanappa Building, Reshme Bitthane Koti, Behind Spoorty Hospital, Maruthi Extension, Malur Town, Malur-563130.

IN THE COURT OF THE ASSISTANT COMMISSIONER AT KOLAR

RA.NO.206/2024

Appellant :S.K.Sathish
V/s
Respondents: The Tahsidlar, Malur Taluk And others

NOTICE UNDER ORDER 5 RULE 20 OF CPC TO RESPONDENT No.5

S.S.V.Devaraj S/o Venkataswamy Aged about 51 years R/at Sampangeri village Lakkur Hobli Malur Taluk

Whereas, the appellant have filed this appeal against the orders passed by the 1st respondent in respect of set aside the mutation in MR.No.18/2012-2013 dt. 14.8.2012 in respect of land bearing Old Sy.No.240 New Sy.No.240/8 measuring 0.21 guntas and new Sy.No.240/.7 to an extent of 0.10.08.00 guntas and Sy N.246/6 to extent 0.10.08 guntas of Sampangere village, Lakkur Hobli, Malur Taluk. This Hon'ble court be pleased to issued notice to the proposed RESPONDENT No.5 evading and avoiding to receive the summons issued by this is intentionally Hon'ble court. Hence you proposed RESPONDENT No. 5 is hereby notice to appear in this court in person or by an advocate on 12.06.2026 at 3:00p.m. to file objections to the appeal, in default of your appearance on the same day the court take as exparte.

Given under my hand seal and signature on this day 08th day of June 2026 at Bangalore

By order of the court.
The Assistant Commissioner Kolar

Advocate of appellant **T.M.Shivanna** Advocate, kolar

IN THE COURT OF THE HON'BLE I ADDL CIVIL JUDGE AND J.M.F.C.COURT AT BANGARPET.

C.M.C.NO. 280/2026.

Petitioner: Sri Kodeppa S/o, Sri, Late, Gangappa, Aged about 64 years, Residing at Marandahalli village, Budikote Post, Bangarpet Taluk, Presently residing at Hogari Gollahalli village, Arehalli Post, Kolar Taluk.563101, Kolar District.
V/S
Respondent: The Thasildar, Registrar of Births and deaths. Bangarpet Taluk. Bangarpet.

PUBLIC NOTICE

Whereas, the pettitioner is filed the above petition for direction to the Respondent to enter the date of death of Kempamma W/o Late, Gangappa who died on 08.06.2016 in the register of Births and deaths.

Who so ever of locality so interested in defending or prosecuting the above may appear before the Hon'ble I Addl Civil judge and J.M.F.C. Court at Bangarpet on 15.07.2026 at 11-00 A.M. and to implied themselves as parties in the above petition. Filing which the petition will be decided as per law.

Given under my hand and the seal on this 16.05.2026.

By order of the court.
Sheresthedar, I Addl Civil judge & JMFC Court, Bangarpet:-563114.

Advocate for Petitioners: **G.N.P.** Advocate. Bangarpet.

ಹಣ್ಣು, ಹೂವು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ
ಬಿನ್ನಿಪೇಟೆ, ಬೆಂಗಳೂರು-23

-: ಸಾರ್ವಜನಿಕ ಪ್ರಕಟಣೆ :-

ಹಣ್ಣು, ಹೂವು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ
ಬಿನ್ನಿಪೇಟೆ, ಬೆಂಗಳೂರು-560023.

ದಿನಾಂಕ: 09.06.2026

ಸಾರ್ವಜನಿಕ ಪ್ರಕಟಣೆ

IN THE COURT OF THE HON'BLE I ADDL SENIOR CIVIL JUDGE AND C.J.M. AT GUBBI

O.S.No.332/2025

PLAINTIFF: Usharani K.R. -V/s-
DEFENDANTS: Rathnamma and others

SUMMONS TO DEFENDANT NO.3 AND 7 ARE IN THE ABOVE CASE

D-3: K.R. Mangalagowramma @ Mangalagowri, W/o Guruprasad, D/o Late, Srinivas, aged about 38 years, R/at, Mavinakere Cross, Mayasandra Hobli, Turuvekere Taluk, Tumakuru District. **D-7: Vishwanatha** D/o Late. Sannachikkanna, aged about 43 years, R/at, Kalenahalli Village, S. Kodigehalli Post, Kasaba Hobli, Gubbi Taluk, Tumakuru District.

PUBLIC NOTICE

WHEREAS, the plaintiff has filed the above suit against the defendants and such other reliefs sought in the plaint. The plaintiffs had taken steps against the Defendant No.3 and 7 by way of ordinary summons and Speed Post. But even though the Defendant No.3 and 7 are residing in the same address as given in the cause title, they are deliberately avoiding to take notice/summons of this Hon'ble Court. Hence the summons issued by way of paper publication.

Take this notice that you are hereby called upon to appear before the Hon'ble I Addl. Senior Civil Judge and CJM at Gubbi on **04-07-2026** at 11.00 A.M. Therefore, you are hereby informed to appear on the said date., Failing which the case shall be heard and determined in your absence.

Give under my hand and the seal of the court on this 06-06-2026 at Gubbi.

By order of the Court, Sheristedar (Admin), Civil Judge, and JMFC at Gubbi.

Advocate for Plaintiff: **C.S. BETTEGOWDA**
Tumakuru Bar Association, Tumakuru.
Mob: 9538583638.

ಮಾನ್ಯ ಉಪವಿಭಾಗಾಧಿಕಾರಿಗಳ ನ್ಯಾಯಾಲಯ ದೊಡ್ಡಬಳ್ಳಾಪುರ
ಆರ್.ಎ.(ಹೊಸ) ಸಂಖ್ಯೆ 573/2024

ಮಾನ್ಯ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ತುರುವೇಕೆರೆ.
ಎಕ್ಸ್ ಕೇಸ್ ನಂ. 33/2024

PUBLIC NOTICE

This is to inform the General Public that, My client, M.R. VENKATAKRISHNA RAO, Aged about 75 years, S/o. Late. M.Ramachandra Rao, Residing at No. SF1, 5th Main Road, Sri Krishna Elegancy, Spoorthi Nagar, Ramanjaneya Layout, Uttarahalli, Bangalore – 560061, absolute owner of the Immovable Residential Property bearing Site No. 379 (Old), New No.10, 8th Cross, Jayanagar 1st Block, Bangalore – 560011, measuring East to West (22+23+26+20)/4 Feet and North to South 60 Feet, totally measuring 1463.75 Square Feet and together with building constructed thereon and bounded on East by : 3rd Schedule allocated to M.R. Nagendra Prasad's House and Vacant land, West by : 2nd Schedule allocated to M.R. Bheema Rao's House 9 x 31.3 Feet Vacant land and Site No.378, North by : Road, South by : Site No.382, has lost the Original Copy of Partition Deed dated : 25/06/2007, registered in the office of Sub-Registrar, Jayanagar, Bangalore, registered as Document No.JAY-1-01061-2007-08 of Book-I, Stored in CD No.JAYD92, dated : 26-06-2007, executed by Sri. M.R. Bheema Rao, and M.R. Nagendra Prasad in favour my Client in respect of the above said property, lost while travelling. In this regard my client has filed complaint before Karnataka State Police, Bengaluru Unit, in vide Lost Article Report Serial No. 2243926/2026 on 08/06/2026 and any Person/s finding the said original copy of Partition Deed may kindly handover the same to the undersigned or if any person/s has any objections in this regard, may file their objections/claims with documentary evidence in 07 days from the date of publication to the undersigned, thereafter any claim / objections made will not be binding on our Client, subsequently hereinafter Certificate Copy of the Partition Deed will be considered as absolute Title Deed for all future transaction.

SD/- **GANGARAJAPPA.T.**, Advocate,
Office : NO.42, 1st Floor, Govardhana Building, 1st Main, Yeshwanthapura, Bengaluru-560022.
Mobile : 9731748783
Email : gangarajappa1971@gmail.com
Place:- Bengaluru, Date:-09/06/2026

PUBLIC NOTICE

That my Client **Mr. RAHAMAN INAYATHULLLA SHARIEF**, aged 69 years, S/o. Mr. Abdul Rahman, R/at # 09, 4th C Cross, M M Layout, Kaval Byrasandra, Bangalore-560 032, is intending to Purchase the residential property bearing BDA Site No. JK-104, Arkavathy 7th Block, in Survey No. 39 of Jakkur Village, Near Jakkur Circle, Yelahanka Hobli, Bangalore North Taluk, Bangalore, **ePID No. 6000022898**, measuring East to West : 12.00 mtrs, and North to South : 9.00 mtrs, totally 108 sq.mtrs., of vacante site, from its present owner **Smt. RADHA @ RAJAMMA**, W/o. Sri. Raju .S., who got by way of registered Partition Deed No. JAL-1-00453-2017-18, in Book-I, CD No. JALD227, dated 11-05-2017, executed by the BDA allottees Sri. Munikrishnappa and Smt. Pillamma who got from BDA thru a proper allotment as Owner's share on dated 10-09-2014 and also with a absolute Sale Deed from the BDA in their favours vide document No. BDA-1-02822-2014-15 dated 24-11-2014, registered in the Office of the Addl. Dist. Registrar, BDA, Bangalore City Dist.,

Any person or persons including legal heirs who claims any right, title, or interest of any nature in or any lien, charge or enforceable right in relation to the aforesaid property and/or has any objections of any nature to the transaction should lodge such claim and/or objections in writing to the undersigned Advocate together with supporting documents within **7 days** from the date of publication of this notice, hereof, failing which it will be presumed that **NO VALID CLAIMS or OBJECTIONS** subsist and my Client would proceed to complete the sale transaction with the present owner, thereof, subject to compliance with other statutory and legal formalities.

Sd/- **MUKTHAR AHMED**, M.Com., LL.B., ADVOCATE
No. 140, M.M. Road, Frazer Town, Bangalore - 560 005. Mob. : 99454-11052.
Place : Bangalore Dated : 09-06-2026

IN THE COURT OF THE ADDITIONAL CITY CIVIL JUDGE AT BANGALORE

O.S. No. 317/2024

CCH-27 (XII ADDL.)

BETWEEN : State Bank of India, Retail Assets Central Processing Centre (RACPC-11) Branch Code 15627, No. 12, 80 ft. Road, 7th Main, 3rd Block, Koramangala, Rept. by its Chief Manager Rajesh Chander. ...Plaintiff
AND : Raju .K, ...Defendant

SUMMONS TO DEFENDANT BY PP

Raju .K., S/o Krishnappa, 11th Street, Kuvempunagara, Besravanahalli Muthagatti, Bestamaranahalli, Bangalore-06.

WHEREAS, the plaintiff has instituted a suit against you under Order 7 Rule 1 r/w Section 26 of the Code of Civil Procedure, 1908 for the relief of recovery of money for a sum of Rs. 6,76,761/- (Rupees Six Lakhs Seventy-Six Thousand Seven Hundred Sixty One Only) with full costs and current and future interests and interest compounded monthly from the date of filing of the suit.

You are hereby summoned to appear before the court i.e., Additional City Civil Judge, CCH-27, Bangalore in person or by pleader duly instructed to answer the claim **on 04.07.2026 at 11.00 A.M.** Failing which you will be placed Ex Parte.

Given under my hand and seal of the court this the 9th day of June 2026.

By order of the Court, Senior Sheristedar, City Civil Court, Bengaluru.

P & K Associates
PARAMASHIVAIAH, Advocate
No. 221, 1st Floor, LIC Building, NR Square, Opp. Halasurugate Police Station, Cubbonpet Main Road, Bengaluru - 560 002.
Mobile: 9448612449
Email: parameshadvocate2001@gmail.com

IN THE COURT OF THE HON'BLE SENIOR CIVIL JUDGE AND J M F C AT SHIDLAGHATTA

CRL. MIS. No.77/2026

BETWEEN:- 1. Sri. N. Muniraju S/o Late Narayanappa Aged About 75 Years, **2. Sri. N. Nagaraja** S/o Late Narayanappa Aged About 59 Years, **3. Sri. N. Mahesh** S/o Late Narayanappa Aged About 57 Years, All are Residing at Ward No.7, Kote, Shidalaghatta Town, Chikkaballapur District. **PETITIONERS**
V/s
AND :- The Registrar of birth and death, City Municipal Council, Sidlaghatta Town & Taluk, Chikkaballapur District. **... RESPONDENT**

DRAFT PAPER PUBLICATION

The petitioners No. 1 to 3 Grand father namely Munishami @ Muniramappa S/o Byrashetti @ Byrappa was naturally died on 02.04.1970, at Ward No.7, Kote, Shidalaghatta Town, Chikkaballapur District in petitioners residence, and the petitioners filed this petition requesting this Hon'ble court to enter the date of death of deceased in concerned Birth and Death Reg. of Respondent, hence it is hereby informed through this Paper Publication if any other legal heirs of deceased person present before this Hon'ble court on 10.07.2026 at 11 'O' clock through counsel or in person and file objection if any required, or else considering petitioners here in only, legatees to deceased this Hon'ble court pronounced Order in favour of petitioners herein.

Date this 6th day of June 2026.

By Order of the Court
Sheristedar, Sr. Civil Judge & JMFC Sidlaghatta

Advocate for Petitioners No. 1 to 3
Sri. K. Manjunatha, Advocate, Sidlaghatta.

IN THE COURT OF THE PRINCIPAL SENIOR CIVIL JUDGE AND MACT AT SIRA

M.V.C. NO.1219/2023

PETITIONERS: Akash
-Versus-
RESPONDENTS: Sony Andrews and another

DRAFT PAPER PUBLICATION

Respondent No. 1. Sony Andrews S/o Alagarasan, Aged about 40 years, R/o No.27, 1st floor, Deen Heritage, 7th cross, LBS Nagara, Neelagiris Super Market, Bangalore. (R.C owner of car bearing Reg. No.KA-51-ME-9437).

WHEREAS, the above petitioner has instituted a petition against the respondents seeking grant of compensation for the injuries sustained in RTA, which was occurred on 18-03-2023 at 3-45 pm, near Shivajinagara, on Tumakuru-Hiriyur NH-48 road, Sira Bypass, Sira, due to rash and negligent driving of car bearing. Reg.No.KA-51-ME-9437 by its driver.

The above respondent No.1 is called upon to appear before this Hon'ble Court on: 10-07-2026 at 11-00 am., either in person or through an agent or their counsel failing which, the above said case is proceeded with and decided in his absence. Given under my hand and seal of the court on this 9th day of June-2026 at Sira.

By order of the Court
Senior Sheristedar Prl. Senior Judge & JMFC Court, Sira.

Advocate for the petitioner
S.Manjunatha, B.Sc., LL.B. Advocate, Sira.
Date: 9/6/2026

IN THE COURT OF THE PRINCIPAL SENIOR CIVIL JUDGE AND MACT AT SIRA

M.V.C. NO.1220/2023

PETITIONERS: Girish
-Versus-
RESPONDENTS: Sony Andrews and another

DRAFT PAPER PUBLICATION

Respondent No.1. Sony Andrews S/o Alagarasan, Aged about 40 years, R/o No.27, 1st floor, Deen Heritage, 7th cross, LBS Nagara, Neelagiris Super Market, Bangalore. (R.C owner of car bearing Reg. No.KA-51-ME-9437).

WHEREAS, the above petitioner has instituted a petition against the respondents seeking grant of compensation for the injuries sustained in RTA, which was occurred on 18-03-2023 at 3-45 pm, near Shivajinagara, on Tumakuru-Hiriyur NH-48 road, Sira Bypass, Sira, due to rash and negligent driving of car bearing.Reg.No.KA-51-ME-9437 by its driver.

The above respondent No.1 is called upon to appear before this Hon'ble Court on: 10.07.2026. at 11-00 am. either in person or through an agent or their counsel failing which, the above said case is proceeded with and decided in his absence. Given under my hand and seal of the court on this 9th day of June-2026 at Sira.

By order of the Court
Senior Sheristedar Prl. Senior Judge & JMFC Court, Sira.

Advocate for the petitioner
S.Manjunatha, B.Sc., LL.B. Advocate, Sira.
Date: 9/6/2026

IN THE COURT OF THE 1ST ADDL SENIOR CIVIL JUDGE AND CJM AT KOLAR.

OS. NO.25/2025.

PLAINTIFFS : Kadiremma and others.
V/S
DEFENDANTS : Bhulakshmamma and others.

NOTICE UNDER ORDER 5 RULE 20 OF CPC TO Defendant No.4.

DEFENDANT No.4 : Vijayabhaskar S/o A. D. Basappa Major, Permanently residing at, Narasapura village and post, Now residing at, Jayanagara, Kolar.

Whereas, the plaintiff filed this suit against the defendants for partition and separate possession over the suit schedule properties. The Hon'ble court has issued notices and summons to the defendant no.4 to defend their case. But they are intentional evading and avoiding to receive the notice issued by this Hon'ble court. Hence of this the notices has not been served on them. As such you have them by summoned or notice to appear before Hon'ble 1st addl senior civil judge and CJM at Kolar in person or by a pleader **on 01/08/2026** at 11 AM. Take notice that in default of your appearance on the date before mentioned the petition will be heard and determined in your absence.

Given under my hand and seal of the court, on this 8th day of June 2026.

By order of the court.
Shirstedar,
Prl senior civil Judge at Kolar.

Advocate for petitioner :
L. Srinivas, Advocate, Kolar.
Place: Kolar, Dated 08.06.2026.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಬುಧವಾರ 10 ಜೂನ್ 2026, ಬೆಂಗಳೂರು

ಒಂದು ನೋಟದಲ್ಲಿ: ದಾಖಲೆ ಗುರುತಿಸುವ ಪ್ರಮುಖ ಪ್ರಥಮಗಳು



ರಕ್ಷಣೆ

ಆಮದು ರಾಷ್ಟ್ರದಿಂದ

38,400

ಕೋಟಿ ರೂ. ರಫ್ತು ರಾಷ್ಟ್ರದೆಡೆಗೆ
ಎ-ಸ್ಯಾಟ್ ಕ್ಷಿಪಣಿ ಕ್ಲಬ್ ಪ್ರವೇಶ
ಪಿಎಫ್‌ಬಿಆರ್ ಕ್ರಿಟಿಕಾಲಿಟಿ



ಭಯೋತ್ಪಾದನೆ

- ಸುಮಾರು 50 ವರ್ಷಗಳಲ್ಲಿ ಮೊದಲ ಬಾರಿಗೆ ಪಾಕ್ ನೆಲದೊಳಗೆ ಸೇನಾ ಕಾರ್ಯಾಚರಣೆ
- 370ನೇ ವಿಧಿ ನಿಷ್ಕ್ರಿಯ
- ಸಿಂಧೂ ಒಪ್ಪಂದ ಅಮಾನತು

ವಿದೇಶಾಂಗ

- ಜಿ-20 ಘೋಷಣೆಗೆ ಶೇ.100 ಒಮ್ಮತ
- ಗ್ಲೋಬಲ್ ಸೌತ್ ಧ್ವನಿಯಾಗಿ ನಾಯಕತ್ವ
- ವಿಶ್ವದ ಔಷಧಾಲಯ

ಆಡಳಿತ ನ್ಯಾಯ

ಬ್ರಿಟಿಷ್ ಕಾಲದ ಕಾನೂನು ಬದಲಿಗೆ ಮೊದಲ ಬಾರಿಗೆ ಸ್ವದೇಶಿ ಭಾರತೀಯ ನ್ಯಾಯ ಸಂಹಿತಾ ಸೇರಿದಂತೆ ಮೂರು ಹೊಸ ಕಾನೂನು





ರಾಷ್ಟ್ರ ಪ್ರಥಮ

> ಭಯೋತ್ಪಾದನೆ ವಿರುದ್ಧ ನಮ್ಮ ನೀತಿ ಶೂನ್ಯ ಸಹಿಷ್ಣುತೆ. ಭಾರತೀಯರ ರಕ್ತ ಚೆಲ್ಲಲು ಯತ್ನಿಸುವವರಿಗೆ ಅದೇ ಭಾಷೆಯಲ್ಲಿ ಉತ್ತರ ಸಿಗುತ್ತದೆ.
> ■ ನರೇಂದ್ರ ಮೋದಿ, ಪ್ರಧಾನಮಂತ್ರಿ

ಒಂದು ಸರ್ಕಾರವನ್ನು ಅಳೆಯುವ ಮಾನದಂಡಗಳು ಹಲವು. ಆದರೆ ಯಾವುದನ್ನು ಮೊದಲ ಬಾರಿಗೆ ಮಾಡಿತು ಎಂಬ ಪ್ರಶ್ನೆ ಇತಿಹಾಸದ ದೃಷ್ಟಿಯಿಂದ ಅತ್ಯಂತ ನಿರ್ಣಾಯಕವಾದದ್ದು. ಏಕೆಂದರೆ ಪ್ರಥಮ ಎಂಬುದು ಕೇವಲ ಒಂದು ಸಾಧನೆ ಅಲ್ಲ, ಅದು ಒಂದು ಮನಸ್ಥಿತಿಯ ಬದಲಾವಣೆಯ ಸಂಕೇತ. ಇದು ಸಾಧ್ಯವಿಲ್ಲ ಎಂಬ ದಶಕಗಳ ನಂಬಿಕೆಯನ್ನು ಇದು ಸಾಧ್ಯ ಎಂಬ ನಿರ್ಧಾರವಾಗಿ ಪರಿವರ್ತಿಸುವ ಕ್ಷಣವೇ ಪ್ರಥಮ. ಕಳೆದ ಹನ್ನೆರಡು ವರ್ಷಗಳಲ್ಲಿ ಕೇಂದ್ರ ಸರ್ಕಾರ ರಾಷ್ಟ್ರಪ್ರಥಮ (ನೇಷನ್ ಫಸ್ಟ್) ಎಂಬ ಮಂತ್ರವನ್ನು ಮುಂದಿಟ್ಟುಕೊಂಡು ಇಂಥ ಹಲವು ಪ್ರಥಮಗಳನ್ನು ದಾಖಲಿಸಿದೆ ಎಂಬುದು ಸರ್ಕಾರದ ಪ್ರತಿಪಾದನೆ.

ರಕ್ಷಣಾ ಕ್ಷೇತ್ರದ ಪ್ರಥಮಗಳು: ಆಮದು ರಾಷ್ಟ್ರದಿಂದ ರಫ್ತು ರಾಷ್ಟ್ರದೆಡೆಗೆ

ಭಾರತದ ರಕ್ಷಣಾ ಕ್ಷೇತ್ರ, ದಶಕಗಳ ಕಾಲ ಆಮದು ಎಂಬ ಪದದಿಂದಲೇ ಗುರುತಿಸಿಕೊಂಡಿತ್ತು. ಯುದ್ಧ ವಿಮಾನ, ಫಿರಂಗಿ, ಮದ್ದುಗುಂಡು ಸೇರಿದಂತೆ ಬಹುತೇಕ ಎಲ್ಲವೂ ವಿದೇಶದಿಂದ ಬರುತ್ತಿತ್ತು. ಆ ಚಿತ್ರಣ ಬದಲಾಗಿರುವುದು ಈ ಹನ್ನೆರಡು ವರ್ಷಗಳ ಪ್ರಥಮಗಳಲ್ಲಿ ಪ್ರಮುಖವಾದದ್ದು ಎಂಬುದು ಸರ್ಕಾರದ ವಾದ. 2014ರಲ್ಲಿ ಸುಮಾರು 689 ಕೋಟಿ ರೂ.ನಷ್ಟಿದ್ದ ರಕ್ಷಣಾ ರಫ್ತು 2026ರ ವೇಳೆಗೆ ಸುಮಾರು 38,400 ಕೋಟಿ ರೂ.ಗೆ ತಲುಪಿದೆ. ಅಂದರೆ ಸುಮಾರು 56 ಪಟ್ಟು ಹೆಚ್ಚಳ. ಇದು ಭಾರತ ಮೊದಲ ಬಾರಿಗೆ ಶಸ್ತ್ರ ಆಮದು ಮಾಡಿಕೊಳ್ಳುವ ದೇಶದಿಂದ ರಫ್ತು ಮಾಡುವ ದೇಶವಾಗಿ ಗುರುತಿಸಿಕೊಂಡ ಕ್ಷಣ ಎಂದು ಬಣ್ಣಿಸಲಾಗಿದೆ.



ಪ್ರಥಮ ಎಂಬ ಮಂತ್ರ

ರಾಷ್ಟ್ರ ಪ್ರಥಮ ಎಂಬ ಪದ ಕೇವಲ ಒಂದು ಘೋಷಣೆಯಲ್ಲ, ಅದು ಕಳೆದ ಹನ್ನೆರಡು ವರ್ಷಗಳ ಆಡಳಿತದ ತಾತ್ವಿಕ ಆಧಾರ ಎಂದು ಸರ್ಕಾರ ಪ್ರತಿಪಾದಿಸುತ್ತದೆ. ರಕ್ಷಣಾ ರಫ್ತಿನಿಂದ ನಕ್ಸಲ್ ನಿರ್ಮೂಲನೆಯವರೆಗೆ, ಕಾಶ್ಮೀರದ ಏಕೀಕರಣದಿಂದ ಸ್ವದೇಶಿ ಕಾನೂನುಗಳವರೆಗೆ ಪ್ರತಿಯೊಂದು ಪ್ರಥಮವೂ ಇದು ಸಾಧ್ಯವಿಲ್ಲ ಎಂಬ ಹಳೆಯ ನಂಬಿಕೆಯನ್ನು ಮುರಿದ ಕ್ಷಣವಾಗಿದೆ.

ಮೋದಿ ಸರ್ಕಾರದ ಪ್ರಥಮಗಳ ದಾಖಲೆ

ಸ್ವಾತಂತ್ರ್ಯಾನಂತರ ಮೊದಲ ಬಾರಿಗೆ ಎಂಬ ಪದ ಭಾರತದ ರಾಜಕೀಯ ಮತ್ತು ಆಡಳಿತ ಇತಿಹಾಸದಲ್ಲಿ ಪದೇ ಪದೇ ಮೊಳಗಿದ ಹನ್ನೆರಡು ವರ್ಷಗಳಿವು. ಗಡಿಯಿಂದ ಸಂಸತ್ತಿನವರೆಗೆ, ಕಾಶ್ಮೀರದಿಂದ ಬಸ್ತಾರ್‌ವರೆಗೆ ಕೇಂದ್ರ ಸರ್ಕಾರದ ಪ್ರಥಮಗಳ ಒಂದು ವಿಶ್ಲೇಷಣಾತ್ಮಕ ಅವಲೋಕನ.

> ನನ್ನ ಸರ್ಕಾರ ತೆಗೆದುಕೊಳ್ಳುವ ಪ್ರತಿ ನಿರ್ಧಾರ, ಸಾಗುವ ಪ್ರತಿ ದಿಕ್ಕು ಒಂದೇ ಮಾನದಂಡದ ಮೇಲೆ ನಿಂತಿದೆ: ರಾಷ್ಟ್ರ ಪ್ರಥಮ.
> ■ ನರೇಂದ್ರ ಮೋದಿ, ಪ್ರಧಾನಮಂತ್ರಿ

ಬಂದೂಕಿನ ಬದಲು ಅಭಿವೃದ್ಧಿ

ನಕ್ಸಲ್ ನಿರ್ಮೂಲನೆ ಕೇವಲ ಭದ್ರತಾ ಯಶಸ್ಸಲ್ಲ, ಅದಕ್ಕೆ ಅಭಿವೃದ್ಧಿಯ ಆಯಾಮವೂ ಇದೆ. 2017ರಿಂದೀಚೆಗೆ ನಕ್ಸಲ್-ಪೀಡಿತ ಪ್ರದೇಶಗಳಲ್ಲಿ 15,100ಕ್ಕೂ ಹೆಚ್ಚು ಕಿ.ಮೀ ರಸ್ತೆ ನಿರ್ಮಾಣ, 9,600ಕ್ಕೂ ಹೆಚ್ಚು ಮೊಬೈಲ್ ಟವರ್‌ಗಳ ಮೂಲಕ ಸಂಪರ್ಕ, ಬ್ಯಾಂಕಿಂಗ್ ಸೇವೆಯೊಂದಿಗೆ 6,000ಕ್ಕೂ ಹೆಚ್ಚು ಅಂಚೆ ಕಚೇರಿಗಳು ಮತ್ತು ಸುಮಾರು 1,800 ಬ್ಯಾಂಕ್ ಶಾಖೆಗಳು ಆರಂಭವಾಗಿವೆ. 70 ವರ್ಷಗಳ ಕಾಲ ನಿರ್ಲಕ್ಷಿತವಾಗಿದ್ದ ಹಳ್ಳಿಗಳಿಗೆ ಈಗ ರಸ್ತೆ, 4ಜಿ, ಶಾಲೆ ಮತ್ತು ಮೂಲಸೌಕರ್ಯ ತಲುಪಿವೆ ಎಂಬುದು ಭದ್ರತೆ + ಅಭಿವೃದ್ಧಿ ಮಾದರಿಯ ಯಶಸ್ಸಿನ ಸಂಕೇತ ಎಂದು ಬಣ್ಣಿಸಲಾಗಿದೆ. ಎಲ್ಲಿ ಒಮ್ಮೆ ಗುಂಡಿನ ಮೊಳಗಿತ್ತೋ ಅಲ್ಲಿ ಈಗ ಅಭಿವೃದ್ಧಿಯ ಹಾಡು ಮೊಳಗುತ್ತಿದೆ. ಎಲ್ಲಿ ಭಯದ ರಾತ್ರಿಗಳಿದ್ದವೋ ಅಲ್ಲಿ ಈಗ ಭರವಸೆಯ ಕಿರಣ ಎಂಬ ಸಂಸತ್ತಿನಲ್ಲಿ ಆಡಿದ ಕಾವ್ಯಾತ್ಮಕ ನುಡಿ ಈ ಪರಿವರ್ತನೆಯ ಸಂಕೇತವಾಗಿದೆ.

ಬಾಹ್ಯಾಕಾಶ ಮತ್ತು ಪರಮಾಣು ಪ್ರಥಮ

ಮಿಷನ್ ಶಕ್ತಿಯ ಮೂಲಕ ಶತ್ರು ಉಪಗ್ರಹವನ್ನು ನಾಶಪಡಿಸುವ ನಿಖರ ಸಾಮರ್ಥ್ಯ ಪಡೆದು ಭಾರತ ಎ-ಸ್ಯಾಟ್ ಕ್ಷಿಪಣಿ ಹೊಂದಿರುವ ಆಯ್ದ ರಾಷ್ಟ್ರಗಳ ಗುಂಪಿಗೆ ಸೇರಿತು. ಸುಮಾರು 27,000 ಕೋಟಿ ರೂ. ವೆಚ್ಚದ 52-ಉಪಗ್ರಹಗಳ ರಕ್ಷಣಾ ವ್ಯವಸ್ಥೆ ಶತ್ರುಗಳ ಮೇಲೆ ನಿರಂತರ ಕಣ್ಗಾವಲಿಡುತ್ತದೆ ಎಂದು ಹೇಳಲಾಗಿದೆ. ಪರಮಾಣು ಕ್ಷೇತ್ರದಲ್ಲಿ, ಏಪ್ರಿಲ್ 2026ರಲ್ಲಿ ಕಲ್ಪಾಕಂನ ಪ್ರೊಟೋಟೈಪ್ ಫಾಸ್ಟ್ ಬ್ರೀಡರ್ ರಿಯಾಕ್ಟರ್ (ಪಿಎಫ್‌ಬಿಆರ್) ಕ್ರಿಟಿಕಾಲಿಟಿ ಸಾಧಿಸಿದ್ದು ಮಹತ್ವದ ಹೆಜ್ಜೆ. ಎರಡನೇ ಸ್ವದೇಶಿ ಪರಮಾಣು ಚಾಲಿತ ಬ್ಯಾಲಿಸ್ಟಿಕ್ ಕ್ಷಿಪಣಿ ಜಲಾಂತರ್ಗಾಮಿ ಐಎನ್‌ಎಸ್ ಅರಿಘಾತ್ ರಕ್ಷಣಾ ಪಡೆಗೆ ಸೇರಿದ್ದು, ಶತ್ರುವಿನ ದಾಳಿಯನ್ನು ಸಹಿಸಿಕೊಂಡು ನಂತರ ಪ್ರಬಲ ಪ್ರತಿದಾಳಿ ನಡೆಸುವ ತ್ರಿವಳಿ ಪರಮಾಣು ಸಾಮರ್ಥ್ಯವನ್ನು ಬಲಪಡಿಸಿದೆ. ಮಹಿಳಾ ಭಾಗವಹಿಸುವಿಕೆಯ ದೃಷ್ಟಿಯಿಂದಲೂ ಇದು ಪ್ರಥಮಗಳ ಅವಧಿ. 2014ರಲ್ಲಿ ಸುಮಾರು 3,000 ಇದ್ದ ಮಹಿಳಾ ಅಧಿಕಾರಿಗಳ ಸಂಖ್ಯೆ 2026ರ ವೇಳೆಗೆ 11,000 ದಾಟಿದೆ. ರಕ್ಷಣಾ ಸ್ಟಾರ್ಟ್‌ಅಪ್‌ಗಳು ಅತ್ಯಲ್ಪ ಎಂಬ ಸ್ಥಿತಿಯಿಂದ 1,000ಕ್ಕೂ ಹೆಚ್ಚಿನ ಸಂಖ್ಯೆಗೆ ಬೆಳೆದಿರುವುದು ಸ್ವದೇಶಿ ತಂತ್ರಜ್ಞಾನ ಪರಿಸರ ವ್ಯವಸ್ಥೆಯ ಸಂಕೇತ ಎಂದು ಬಿಂಬಿಸಲಾಗಿದೆ.

ಅಂಕಿ-ಅಂಶಗಳ ಕನ್ನಡಿ: ರಕ್ಷಣಾ ಕ್ಷೇತ್ರ (2014 - 2026)(ರೂ.ಗಳಲ್ಲಿ)

ಮಾನದಂಡ	2014	2026	ಬದಲಾವಣೆ
ರಕ್ಷಣಾ ರಫ್ತು	686 ಕೋಟಿ	38,400 ಕೋಟಿ	56 ಪಟ್ಟು
ರಕ್ಷಣಾ ಬಜೆಟ್	2.5 ಲಕ್ಷ ಕೋಟಿ	7.9 ಲಕ್ಷ ಕೋಟಿ	3.2 ಪಟ್ಟು
ರಕ್ಷಣಾ ಉತ್ಪಾದನೆ	46,000 ಕೋಟಿ	1.5 ಲಕ್ಷ ಕೋಟಿ	3.3 ಪಟ್ಟು
ಮದ್ದುಗುಂಡು ಸ್ವದೇಶೀಕರಣ	ಶೇ.32	ಶೇ. 90	2.8 ಪಟ್ಟು
ಮಹಿಳಾ ಅಧಿಕಾರಿಗಳು	3,000	11,000+	3.7 ಪಟ್ಟು

ಐವತ್ತು ವರ್ಷಗಳಲ್ಲಿ ಮೊದಲ ಬಾರಿಗೆ

ಉರಿ ದಾಳಿಯ ನಂತರದ ಸರ್ಜಿಕಲ್ ಸ್ಟ್ರೈಕ್ (2016), ಪುಲ್ವಾಮಾ ನಂತರದ ಬಾಲಾಕೋಟ್ ವಾಯುದಾಳಿ (2019) ಮತ್ತು ಆಪರೇಷನ್ ಸಿಂದೂರ (2025) ಈ ಮೂರೂ ಪ್ರಥಮಗಳ ಸರಣಿ. ಬಾಲಾಕೋಟ್ ದಾಳಿಯನ್ನು ಮೊದಲ ಬಾರಿಗೆ ಭಾರತ ಪಾಕಿಸ್ತಾನದ ನೆಲದೊಳಗೆ ಜೈಷ್-ಎ-ಮೊಹಮ್ಮದ್ ಶಿಬಿರಗಳ ಮೇಲೆ ನಡೆಸಿದ ವಾಯುದಾಳಿಯಾಗಿದೆ. ಆಪರೇಷನ್ ಸಿಂದೂರದ ವೇಳೆ ಸುಮಾರು 50 ವರ್ಷಗಳಲ್ಲಿ ಮೊದಲ ಬಾರಿಗೆ ಭಾರತೀಯ ಸೇನೆಯ ಕಾರ್ಯಾಚರಣೆ ಪಾಕಿಸ್ತಾನದ ಒಳಭಾಗ ತಲುಪಿತು. 100ಕ್ಕೂ ಹೆಚ್ಚು ಭಯೋತ್ಪಾದಕ ಶಿಬಿರಗಳು ಮತ್ತು 9 ಅಡಗುತಾಣಗಳು ನಾಶವಾದವು, 11 ಸೇನಾ ಠಾಣೆಗಳ ಮೇಲೆ ನಿಖರ ದಾಳಿ ನಡೆಯಿತು.

ರೆಡ್ ಕಾರಿಡಾರ್‌ನಿಂದ ಗ್ರೀನ್ ಗ್ರೋಥ್ ಝೋನ್: ಶೂನ್ಯ ನಕ್ಸಲ್ ಜಿಲ್ಲೆ

ಭಾರತ ನಕ್ಸಲ್‌ಮುಕ್ತ ಎಂಬ ಘೋಷಣೆಯನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು 2026ರ ಮಾರ್ಚ್ 30ರಂದು ಲೋಕಸಭೆಯಲ್ಲಿ ಈ ಘೋಷಣೆ ಮಾಡಿದರು. ಏಪ್ರಿಲ್ 2026ರಿಂದ ಯಾವುದೇ ಜಿಲ್ಲೆ ಎಲ್‌ಡಬ್ಲ್ಯೂಇ -ಪೀಡಿತ (ಎಡಪಂಥೀಯ ಉಗ್ರವಾದ ಪೀಡಿತ) ಆಗಿ ಉಳಿದಿಲ್ಲ ಎಂದು ಗೃಹ ಸಚಿವಾಲಯ ಎಲ್ಲ ರಾಜ್ಯಗಳಿಗೆ ತಿಳಿಸಿದೆ. 2014ರಲ್ಲಿ 126 ಇದ್ದ ಎಲ್‌ಡಬ್ಲ್ಯೂಇ -ಪೀಡಿತ ಜಿಲ್ಲೆಗಳ ಸಂಖ್ಯೆ 2026ರ ವೇಳೆಗೆ ಶೂನ್ಯಕ್ಕಿಳಿದಿರುವುದೇ ಇಲ್ಲಿನ ಕೇಂದ್ರಬಿಂದು.



ಪಶುಪತಿಯಿಂದ ತಿರುಪತಿವರೆಗೆ ಚಾಚಿದ್ದ ರೆಡ್ ಕಾರಿಡಾರ್

ಒಂದು ಕಾಲದಲ್ಲಿ ಪಶುಪತಿಯಿಂದ ತಿರುಪತಿಯವರೆಗೆ ಚಾಚಿಕೊಂಡಿದ್ದ ರೆಡ್ ಕಾರಿಡಾರ್ ಅನ್ನು ಸಂಪೂರ್ಣ ಕಿತ್ತುಹಾಕಲಾಗಿದೆ. 50ಕ್ಕೂ ಹೆಚ್ಚು ವರ್ಷಗಳಲ್ಲಿ ಮೊದಲ ಬಾರಿಗೆ ಭಾರತದ ಮುಖ್ಯಭೂಮಿಯಲ್ಲಿ ಯಾವುದೇ ನಕ್ಸಲ್-ನಿಯಂತ್ರಿತ ಪ್ರದೇಶ ಉಳಿದಿಲ್ಲ ಎಂಬುದು ಇಲ್ಲಿನ ಪ್ರಮುಖ ಪ್ರಥಮ. 2024ರಲ್ಲಿ ಛತ್ತೀಸ್‌ಘಢದಲ್ಲಿ ಒಂದೇ ವರ್ಷದಲ್ಲಿ ಅತಿ ಹೆಚ್ಚು 290 ನಕ್ಸಲರು ಹತರಾದರು. 2025ರ 21 ದಿನಗಳ ಕಾರೆಗುಟ್ಟ ಗುಡ್ಡ ಕಾರ್ಯಾಚರಣೆಯಲ್ಲಿ 31 ಕುಖ್ಯಾತ ನಕ್ಸಲರನ್ನು ಒಬ್ಬ ಸೈನಿಕನೂ ಹುತಾತ್ಮನಾಗದೆ ನಿರ್ಮೂಲನೆ ಮಾಡಲಾಗಿದೆ. ತೆಲಂಗಾಣ-ಛತ್ತೀಸ್‌ಘಢ ಗಡಿಯ 50 ಕಿ.ಮೀ ಉದ್ದ, 37 ಕಿ.ಮೀ ಅಗಲದ ಗುಡ್ಡದ ಮೇಲೆ ನಡೆದ ಆಪರೇಷನ್ ಬ್ಲ್ಯಾಕ್ ಫಾರೆಸ್ಟ್ (2025) ಈ ಸಾಲಿನ ಮಹತ್ವದ ಕಾರ್ಯಾಚರಣೆ.

> ನಮ್ಮ ಸಶಸ್ತ್ರ ಪಡೆಗಳಿಗೆ ಸಾಮರ್ಥ್ಯವೂ ಇದೆ, ತಂತ್ರವೂ ಇದೆ. ಯಾರಾದರೂ ದಾಳಿ ಮಾಡಲು ಯತ್ನಿಸಿದರೆ ಶತ್ರುವಿಗೆ ಅದೇ ಭಾಷೆಯಲ್ಲಿ ಉತ್ತರ ಕೊಡುವುದು ಹೇಗೆ ಎಂದು ಮೂರೂ ಪಡೆಗಳಿಗೂ ಚೆನ್ನಾಗಿ ಗೊತ್ತಿದೆ.
> ■ ನರೇಂದ್ರ ಮೋದಿ, ಪ್ರಧಾನಮಂತ್ರಿ



ಬ್ರಿಟಿಷ್ ಕಾಲದ ಕಾನೂನುಗಳಿಗೆ ವಿದಾಯ



ಆಡಳಿತ-ನ್ಯಾಯ ಕ್ಷೇತ್ರದಲ್ಲಿ ದಾಖಲೆ ದೊಡ್ಡ ಪ್ರಥಮವೊಂದು ರಚನೆಯಾಗಿದೆ. 150 ವರ್ಷಗಳಷ್ಟು ಹಳೆಯ ಬ್ರಿಟಿಷ್ ಕಾಲದ ಕಾನೂನುಗಳ ಬದಲಿಗೆ ಭಾರತೀಯ ನ್ಯಾಯ ಸಂಹಿತಾ, ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ ಮತ್ತು ಭಾರತೀಯ ಸಾಕ್ಷ್ಯ ಅಧಿನಿಯಮದಂಥ ಮೊದಲ ಬಾರಿಗೆ ಭಾರತ ತನ್ನದೇ ಕಾನೂನುಗಳನ್ನು ಪಡೆದಿದೆ. 1860ರ ಭಾರತೀಯ ದಂಡ ಸಂಹಿತೆಯ 511 ಸೆಕ್ಷನ್‌ಗಳ ಬದಲಿಗೆ ಈಗ 358 ಸೆಕ್ಷನ್‌ಗಳಿವೆ. 7 ವರ್ಷ ಅಥವಾ ಹೆಚ್ಚಿನ ಶಿಕ್ಷೆಯ ಪ್ರತಿ ಅಪರಾಧಕ್ಕೂ ವಿಧಿವಿಜ್ಞಾನ (ಫೋರೆನ್ಸಿಕ್) ತನಿಖೆಯನ್ನು ಕಡ್ಡಾಯಗೊಳಿಸಿರುವುದು, ತನಿಖೆ-ಆರೋಪಪಟ್ಟಿ-ತೀರ್ಪಿಗೆ ಕಾಲಮಿತಿ ನಿಗದಿ ಮಾಡಿರುವುದು ಶಿಕ್ಷೆ ಅಲ್ಲ, ನ್ಯಾಯ ಎಂಬ ಆಶಯದ ಪ್ರಥಮ ಎಂದು ಬಣ್ಣಿಸಲಾಗಿದೆ. ಪ್ರಧಾನಿ ಮೊದಲ ಬಾರಿಗೆ ಸ್ವದೇಶಿ ತೇಜಸ್ ಯುದ್ಧ ವಿಮಾನದಲ್ಲಿ ಹಾರಾಟ ನಡೆಸಿದ್ದು ಆತ್ಮನಿರ್ಭರ ಸಂಕೇತದ ಪ್ರಥಮ ಕ್ಷಣ ಎಂದೂ ದಾಖಲೆ ಗುರುತಿಸುತ್ತದೆ.

ವ್ಯಾಪಾರ ಒಪ್ಪಂದಗಳು ಮತ್ತು ಜಾಗತಿಕ ನೆರವು

ರಷ್ಯಾ-ಉಕ್ರೇನ್ ಸಂಘರ್ಷದ ವೇಳೆ ಆಪರೇಷನ್ ಗಂಗಾ ಮತ್ತು ಕೋವಿಡ್-19 ಸಾಂಕ್ರಾಮಿಕದ ವೇಳೆ ವ್ಯಾಕ್ಸಿನ್ ಮೈತ್ರಿಯ ಮೂಲಕ 99 ರಾಷ್ಟ್ರಗಳಿಗೆ 30 ಕೋಟಿಗೂ ಹೆಚ್ಚು ಲಸಿಕೆ ಪೂರೈಸಿ ಭಾರತ ವಿಶ್ವದ ಔಷಧಾಲಯ ಎಂದು ಗುರುತಿಸಿಕೊಂಡಿದೆ. ಭಾರತ-ನ್ಯೂಜಿಲ್ಯಾಂಡ್ ಮುಕ್ತ ವ್ಯಾಪಾರ ಒಪ್ಪಂದದಲ್ಲಿ ಶೇ.100 ಸುಂಕ ಸಾಲುಗಳ ನಿರ್ಮೂಲನೆ, ಭಾರತ-ಐರೋಪ್ಯ ಒಕ್ಕೂಟ ಎಫ್‌ಟಿಎ ಅಡಿ ಮೌಲ್ಯದ ದೃಷ್ಟಿಯಿಂದ ಶೇ.99 ವ್ಯಾಪಾರಕ್ಕೆ ಸುಂಕ ರಿಯಾಯಿತಿ, 2026ರ ಹಾರ್ಮುಜ್ ಬಿಕ್ಕಟ್ಟಿನ ವೇಳೆ ಸಕ್ರಿಯ ರಾಜತಾಂತ್ರಿಕತೆಯ ಮೂಲಕ ತೈಲ ಪೂರೈಕೆಯಲ್ಲಿ ಅಡಚಣೆಯಾಗದಂತೆ ನೋಡಿಕೊಂಡಿದ್ದು ಇವೆಲ್ಲ ಆರ್ಥಿಕ ರಾಜತಾಂತ್ರಿಕತೆಯ ಪ್ರಥಮಗಳ ಸಾಲಿನಲ್ಲಿವೆ. 2014-25ರ ಅವಧಿಯಲ್ಲಿ 70 ಲಕ್ಷ ಕೋಟಿ ರೂ.ಗೂ ಹೆಚ್ಚು ವಿದೇಶಿ ನೇರ ಬಂಡವಾಳ ಹೂಡಿಕೆ (ಎಫ್‌ಡಿಐ) ಮತ್ತು 2024-25ರ ಆರ್ಥಿಕ ವರ್ಷದಲ್ಲಿ ಸುಮಾರು 13 ಲಕ್ಷ ಕೋಟಿ ರೂ. ವಿದೇಶಿ ರವಾನೆ (ರೆಮಿಟನ್ಸ್) ಪಡೆದು ವಿಶ್ವದಲ್ಲೇ ಅತಿ ಹೆಚ್ಚು ರೆಮಿಟನ್ಸ್ ಪಡೆಯುವ ದೇಶ ಎಂಬ ಸ್ಥಾನ ಪಡೆದಿರುವುದನ್ನೂ ದಾಖಲೆ ಪ್ರಸ್ತಾಪಿಸುತ್ತದೆ.



ವಿದೇಶಾಂಗ ನೀತಿ ಮತ್ತು ಆಡಳಿತ ಸುಧಾರಣೆಯ ಪ್ರಥಮಗಳು

ವಿದೇಶಾಂಗ ನೀತಿಯ ಕ್ಷೇತ್ರದಲ್ಲಿ ಏಕೆ ಭಾರತ? ಎಂಬ ಪ್ರಶ್ನೆ ಭಾರತ ಏಕೆ ಬೇಡ? ಎಂಬ ಆತ್ಮವಿಶ್ವಾಸದ ಹೇಳಿಕೆಯಾಗಿ ಬದಲಾಗಿದೆ. 2023ರ ಹೊಸದಿಲ್ಲಿ ಜಿ-20 ಶೃಂಗದಲ್ಲಿ ನಾಯಕರ ಘೋಷಣೆಗೆ ಶೇ. 100 ಒಮ್ಮತ ಸಾಧಿಸಿದ್ದು ವಿಭಜಿತ ಜಾಗತಿಕ ವ್ಯವಸ್ಥೆಯಲ್ಲಿ ಭಾರತದ ನಾಯಕತ್ವದ ಪ್ರಥಮ ಎಂದು ಗುರುತಿಸಲಾಗಿದೆ. ಗ್ಲೋಬಲ್ ಸೌತ್‌ನ ಧ್ವನಿಯಾಗಿ 125 ಅಭಿವೃದ್ಧಿಶೀಲ ರಾಷ್ಟ್ರಗಳ ಸಮಸ್ಯೆಗಳನ್ನು ಪ್ರತಿನಿಧಿಸಲು ವಾಯ್ಸ್ ಆಫ್ ಗ್ಲೋಬಲ್ ಸೌತ್ ಶೃಂಗಗಳನ್ನು ಆಯೋಜಿಸಿದ್ದು ಮತ್ತೊಂದು ಮೊದಲು.

ಸಿಂಧೂ ಜಲ ಒಪ್ಪಂದ ತಡೆ- ಒಂದು ನೀತಿ-ಪಲ್ಲಟ



ನೀರಿನ ಭದ್ರತೆಯ ವಿಷಯದಲ್ಲಿ ದಾಖಲೆ ಒಂದು ಸ್ಪಷ್ಟ ಪ್ರಥಮವನ್ನು ಮುಂದಿಡುತ್ತದೆ. ಹಿಂದೆ ಭಯೋತ್ಪಾದಕ ದಾಳಿಗಳ ನಂತರವೂ ಸಿಂಧೂ ಜಲ ಒಪ್ಪಂದ ಮುಂದುವರಿಯುತ್ತಿತ್ತು. ಈಗ ಆ ಒಪ್ಪಂದವನ್ನು ಅಮಾನತಿನಲ್ಲಿ (ಅಬೆಯನ್ಸ್) ಇರಿಸಲಾಗಿದೆ. ಮಾತು ಮತ್ತು ಭಯೋತ್ಪಾದನೆ ಜೊತೆಗೆ ಸಾಗಲಾರವು, ವ್ಯಾಪಾರ ಮತ್ತು ಭಯೋತ್ಪಾದನೆ ಜೊತೆಗೆ ಸಾಗಲಾರವು, ನೀರು ಮತ್ತು ರಕ್ತ ಒಟ್ಟಿಗೆ ಹರಿಯಲಾರವು ಎಂಬ ಪ್ರಧಾನಿಯ ಮಾತು ಈ ನೀತಿಯ ಸಾರಾಂಶವಾಗಿದೆ. ಇದರ ಜೊತೆಗೆ ಪ್ರಹಾರ್ ಎಂಬ ಮೊದಲ ಸಮಗ್ರ ರಾಷ್ಟ್ರೀಯ ಭಯೋತ್ಪಾದನಾ-ವಿರೋಧಿ ಕಾರ್ಯತಂತ್ರ ಮತ್ತು ಮಿಷನ್ ಸುದರ್ಶನ ಚಕ್ರ ಎಂಬ ಸಮಗ್ರ ಭದ್ರತಾ ವ್ಯವಸ್ಥೆಯ ಕೆಲಸ ಆರಂಭವಾಗಿರುವುದನ್ನೂ ಪ್ರಸ್ತಾಪಿಸಲಾಗಿದೆ. ಜಮ್ಮು-ಕಾಶ್ಮೀರದ ಚಿತ್ರಣವೂ ಐತಿಹಾಸಿಕವಾಗಿ ಬದಲಾಗಿದೆ. 2004-14ರ ಅವಧಿಯ 7,200ಕ್ಕೂ ಹೆಚ್ಚು ಭಯೋತ್ಪಾದಕ ಘಟನೆಗಳಿಗೆ ಹೋಲಿಸಿದರೆ 2014-25ರ ಅವಧಿಯಲ್ಲಿ 2,407 ಘಟನೆಗಳು ದಾಖಲಾಗಿವೆ. 2023ರಿಂದ ಏಪ್ರಿಲ್ 2026ರವರೆಗೆ ಸಂಘಟಿತ ಕಲ್ಲೆಸೆತ ಶೂನ್ಯ ಮತ್ತು ಸಂಘಟಿತ ಬಂದ್ / ಮುಷ್ಕರಗಳೂ ಸಂಪೂರ್ಣ ನಿಂತಿವೆ. 370ನೇ ವಿಧಿಯನ್ನು ನಿಷ್ಕ್ರಿಯಗೊಳಿಸಿ ಮೊದಲ ಬಾರಿಗೆ ಜಮ್ಮು-ಕಾಶ್ಮೀರವನ್ನು ಸಂಪೂರ್ಣ ಏಕೀಕರಣಗೊಳಿಸಿದ್ದು ಮತ್ತೊಂದು ಪ್ರಥಮ. ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ಶಿಕ್ಷಾ ಪ್ರಮಾಣ ಶೇ.92 ದಾಟಿದ್ದು, ವಿಶ್ವದ ಭಯೋತ್ಪಾದನಾ-ವಿರೋಧಿ ಸಂಸ್ಥೆಗಳಲ್ಲೇ ಅತ್ಯುನ್ನತ ಎಂದು ದಾಖಲೆ ಪ್ರತಿಪಾದಿಸುತ್ತದೆ.

ಭಯೋತ್ಪಾದನೆ ವಿರುದ್ಧ: ಗಡಿ ದಾಟಿದ ಪ್ರಥಮ ನೀತಿ

ಭಯೋತ್ಪಾದನೆ ವಿರುದ್ಧದ ಪ್ರಥಮಗಳು ದಾಖಲೆಯ ಅತ್ಯಂತ ಗಮನ ಸೆಳೆಯುವ ಭಾಗ. 2014ರ ಆಗ ಮತ್ತು 2026ರ ಈಗ ನಡುವಿನ ವ್ಯತ್ಯಾಸವನ್ನು ಈಗ ಗುರುತಿಸಬಹುದು. 2014ರ ಹಿಂದೆ ದಾಳಿಯ ನಂತರ ಕೇವಲ ರಾಜತಾಂತ್ರಿಕ ಪತ್ರವ್ಯವಹಾರ ನಡೆಯುತ್ತಿತ್ತು, 2026ರ ಹೊಸ ಸಾಮಾನ್ಯ (ನ್ಯೂ ನಾರ್ಮಲ್) ಎಂದರೆ ನಿರ್ಣಾಯಕ ಮತ್ತು ತ್ವರಿತ ಪ್ರತಿದಾಳಿ. ಯಾವುದೇ ಪರಮಾಣು ಬೆದರಿಕೆಯನ್ನು ಸಹಿಸದಿರುವುದು ಮೋದಿ ಆಡಳಿತ ಕಾಲದ ಹೊಸ ದೃಢ ನೀತಿ.

ತೇಜಸ್‌ನಿಂದ ಬ್ರಹ್ಮೋಸ್‌ವರೆಗೆ



ಈ ಪ್ರಥಮಗಳ ಸಾಲಿನಲ್ಲಿ ಹಲವು ನಿರ್ದಿಷ್ಟ ಮೈಲಿಗಲ್ಲುಗಳಿವೆ. 83 ತೇಜಸ್ ಎಂಕೆ-1ಎ ಯುದ್ಧ ವಿಮಾನಗಳಿಗೆ ನೀಡಲಾದ ಆದೇಶ ಇದುವರೆಗಿನ ಅತಿ ದೊಡ್ಡ ಸ್ವದೇಶಿ ಯುದ್ಧ ವಿಮಾನ ಆದೇಶವಾಗಿದೆ. ಬ್ರಹ್ಮೋಸ್ ಏರೋಸ್ಪೇಸ್‌ನ ಆದಾಯ 2025-26ರ ಆರ್ಥಿಕ ವರ್ಷದಲ್ಲಿ 5,200 ಕೋಟಿ ರೂ. ತಲುಪಿದ್ದು, ಸುಮಾರು 4,000 ಕೋಟಿ ರೂ. ಮೌಲ್ಯದ ರಫ್ತು ಆದೇಶಗಳು ಬಂದಿವೆ. 41 ಆರ್ಡ್‌ನೆನ್ಸ್ ಕಾರ್ಖಾನೆಗಳನ್ನು 7 ರಕ್ಷಣಾ ಸಾರ್ವಜನಿಕ ವಲಯ ಸಂಸ್ಥೆಗಳಾಗಿ (ಡಿಪಿಎಸ್‌ಯು) ಪುನರ್ರಚಿಸಲಾಗಿದೆ. ಇದು ಸ್ವಾತಂತ್ರ್ಯಾನಂತರದ ರಕ್ಷಣಾ ಉತ್ಪಾದನಾ ರಚನೆಯಲ್ಲಿನ ಒಂದು ಬೃಹತ್ ಬದಲಾವಣೆಯಾಗಿದೆ.

ಸಂಪಾದಕೀಯ

ಇಚ್ಛಾಶಕ್ತಿಯ ಸುದೀರ್ಘ ಹರಿವು

ಇಂದಿಗೆ ನರೇಂದ್ರ ಮೋದಿಯವರು ದೀರ್ಘಾವಧಿಯವರೆಗೆ ಪ್ರಧಾನಮಂತ್ರಿಯಾದ ನಾಯಕ ಎಂಬ ದಾಖಲೆಗೆ ಸೇರುತ್ತಾರೆ. ಇದಕ್ಕೆ ಮೊದಲು ನೆಹರು ದೀರ್ಘಾವಧಿಯವರೆಗೆ ಅಧಿಕಾರದಲ್ಲಿದ್ದವರು ಎಂಬ ದಾಖಲೆ ಇತ್ತು. ಇದು ಕೂಡ ಒಂದು ದಾಖಲೆಯೇ? ಅದು ಸಂವಿಧಾನ ಕೊಟ್ಟ ಅವಕಾಶವಲ್ಲವೇ ಎಂಬ ಪ್ರಶ್ನೆಗಳು ಅನೇಕರಿಗೆ ಬರಬಹುದು. ದಾಖಲೆ ಎಂಬ ಪದ ' ಹೊಂದಾಣಿಕೆಯಾಗದು ಎಂದೂ ಕೆಲವರಿಗನಿಸಬಹುದು. ಆದರೂ ಮೋದಿಯವರು ದೀರ್ಘಾವಧಿಯ ಪ್ರಧಾನಮಂತ್ರಿ ಎಂಬ ಸಂಗತಿಯಂತೂ ದೇಶಕ್ಕೆ ಮುಖ್ಯ. ಇವರಿಬ್ಬರು ಆಳಿದ ಕಾಲಘಟ್ಟ, ಸಂದರ್ಭ ಸಂಪೂರ್ಣ ಭಿನ್ನ. ಹಾಗಾಗಿ ವಿವೇಚನೆ ಇಲ್ಲದೆ ನೆಹರು ಮಾಡಿದ್ದನ್ನು ಮೋದಿ ಮಾಡಿದರು ಎನ್ನುವುದೂ ವಿವೇಕದ ನಡೆಯಲ್ಲ, ಆದರೆ ಅದಕ್ಕೆ ಹೊರತಾದ ಕೆಲವು ಸಂಗತಿಗಳಂತೂ ಇದ್ದೇ ಇದೆ.



ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗಿಯಾದ ನೆಹರು ಪ್ರಧಾನಮಂತ್ರಿಯಾಗಿದ್ದು ಗಾಂಧೀಜಿಯವರ ಕೃಪಾಕಟಾಕ್ಷದಿಂದ. ಸ್ವಾತಂತ್ರ್ಯದ ಆರಂಭದ ವರ್ಷಗಳಲ್ಲಿ ನೆಹರು ಅವರಿಗೆ ಸಹಜವಾದ ಗೊಂದಲಗಳಿದ್ದವು. ಆದರೆ ಸಂವಿಧಾನ ರಚನೆಯಾಗಿ ಜನರಿಂದ ಆಯ್ಕೆಯಾದ ಮೇಲೂ ಅವರ ಗೊಂದಲ ನಿವಾರಣೆಯಾಗಿರಲಿಲ್ಲ, ಕಾಶ್ಮೀರದ ಸಂಗತಿಯನ್ನು ಅಂತಾರಾಷ್ಟ್ರೀಯ ಸಮಸ್ಯೆಯೆಂಬಂತೆ ಬಿಂಬಿಸಿದ್ದಲ್ಲಿಂದ ಹಿಡಿದು ಸಮಾಜವಾದವೋ, ಬಂಡವಾಳವಾದವೋ ಎಂಬ ಗೊಂದಲ ಅವರಿಗೆ ಕೊನೆಯವರೆಗೂ ನಿವಾರಣೆಯಾಗಲಿಲ್ಲ, ಹೊಸ ಭಾರತ ಉದಯವಾಗಿದೆ ಎಂಬ ಭ್ರಮೆಯಲ್ಲಿಯೇ ಇದ್ದ ಅವರಿಗೆ ಈ ನೆಲ ಶತಮಾನಗಳ ಹಿಂದಿನಿಂದಲೇ ಶ್ರೇಷ್ಠ ನಾಗರಿಕ ಸಮಾಜವನ್ನು ಅಳವಡಿಸಿಕೊಂಡಿತ್ತು ಎಂಬುದನ್ನು ಒಪ್ಪುವ ಮನಸ್ಥಿತಿ ಅವರಿಗೆ ಬರಲೇ ಇಲ್ಲ, ಪರಿಣಾಮ ಸಮಸ್ಯೆಗಳೆಲ್ಲವೂ ಅಲ್ಲಿಂದಲೇ ಹುಟ್ಟಿದವು, ಬೆಳೆದವು, ಹೆಮ್ಮರವಾದವು. ಸೆಕ್ಯುಲರಿಸಮ್ಮಿನ ಭ್ರಾಂತಿಯಿಂದ ಮೊದಲುಗೊಂಡು ತನ್ನೆಲ್ಲಾ ಸಮಸ್ಯೆಗಳಿಗೆ ವಿದೇಶಿಯರಲ್ಲೇ ಪರಿಹಾರವಿದೆ ಎಂದು ನಂಬಿದ ಯುಗವನ್ನು ಭಟ್ಟಂಗಿಗಳು ನೆಹರೂವಿಯನ್ ಯುಗವೆಂದು ಬಣ್ಣಿಸಿ ಭಾರತದ ಓಟವನ್ನು ಕುಂಠಿತಗೊಳಿಸಿದರು. ಹಾಗಾಗಿ ಇಂದು ನಾವು ದೇಶದಲ್ಲಿ ಯಾವುದನ್ನು ಸಮಸ್ಯೆ ಎಂದು ನೋಡುತ್ತೇವೆಯೋ ಅವೆಲ್ಲವೂ ಆ ಯುಗದ ಮೂಲಕ್ಕೇ ಹೋಗುತ್ತದೆ. ಆ ಸಮಸ್ಯೆಗಳೆಲ್ಲವೂ ಇಂದು ಒಂದೊಂದಾಗಿ ಪರಿಹಾರವಾಗುತ್ತಿದೆ ಎಂದರೆ ಅದಕ್ಕೆ ಕಾರಣ ನರೇಂದ್ರ ಮೋದಿಯವರ ಭಾರತ ಪ್ರೀತಿ. ಅಂದು ಕೋಮು ಆಧಾರಿತವಾಗಿ ಪ್ರತ್ಯೇಕಿಸಿಟ್ಟ ಕಾಶ್ಮೀರ ಇಂದು ದೇಶದ ಉಳಿದ ರಾಜ್ಯಗಳಲ್ಲೊಂದು. ಇಂದು ದೇಶ ಸಬ್ ಕಾ ವಿಕಾಸ್ ಎನ್ನುವ ಘೋಷಣೆಯಲ್ಲಿ ಏಕತೆಯನ್ನು ಅನುಭವಿಸುತ್ತಿದೆ. ಅಂದು ಜಾಗತಿಕ ನಾಯಕರ ಮನೆ ಬಾಗಿಲು ಕಾಯುತ್ತಿದ್ದ ಭಾರತ ಇಂದು ವಿಶ್ವದ ಪ್ರಬಲ ಶಕ್ತಿಗಳಲ್ಲೊಂದು. ಪಟ್ಟಿ ಮಾಡುತ್ತಾ ಹೋದರೆ ಇನ್ನೆಷ್ಟೊ, ಇದಕ್ಕೆಲ್ಲಾ ಪ್ರಧಾನಮಂತ್ರಿಯವರ ಇಚ್ಛಾಶಕ್ತಿಯೇ ಕಾರಣ ಎನ್ನದೆ ಇನ್ನೇನೂ ಹೇಳಲಾಗುವುದಿಲ್ಲ, ಇಬ್ಬರು ನಾಯಕರ ತುಲನೆ ಸಲ್ಲ ಎಂದರೂ ಇಬ್ಬರು ನಾಯಕರ ಛಲ ಮತ್ತು ಇಚ್ಛಾಶಕ್ತಿಯನ್ನು ಅಳೆದರೆ ತಪ್ಪೇನಿಲ್ಲ, ನೆಹರು ಅವರಿಗೆ ಅಂದು ಗೊಂದಲಗಳಿಲ್ಲದಿದ್ದರೆ ಭಾರತದ ಸ್ಥಾನ ಇನ್ನೆಲ್ಲೋ ಇರುತ್ತಿತ್ತು ಎನ್ನುವುದು ಮಾತ್ರ ಸತ್ಯ.

ರಾಜಕಾರಣದ ವ್ಯಾಕರಣ ಬದಲಿಸಿದ ಮೋದಿ

ಅಜಯ್ ಸಿಂಗ್

ಮೈಲಿಗಲ್ಲುಗಳು ಮತ್ತು ಕಾಲಮಾನ-ಇವು ಪರಿವರ್ತನೆಯ ಯುಗದ ಸರಿಯಾದ ಅಳತೆಗೋಲುಗಳಲ್ಲ, ಅವು ಕೇವಲ ಅಂಕಿ-ಅಂಶಗಳು. ನರೇಂದ್ರ ಮೋದಿ ಅವರು ದೇಶದಲ್ಲಿ ಅತ್ಯಂತ ದೀರ್ಘಕಾಲ ಸೇವೆ ಸಲ್ಲಿಸಿದ ಪ್ರಧಾನಮಂತ್ರಿ ಆಗುವುದು ಕೇವಲ ಒಂದು ಮೈಲಿಗಲ್ಲನ್ನು ದಾಟುವುದು ಮಾತ್ರವಲ್ಲ, ಅದೊಂದು ಸುದೀರ್ಘ ಅಧಿಕಾರಾವಧಿಯ ದಾಖಲೆಗಿಂತ ಮಹತ್ವದ್ದು, ಈ ಕಾಲದ ಮನೋಭಾವವನ್ನು ಕೇವಲ ಸಂಖ್ಯೆಗಳಲ್ಲಿ ಹಿಡಿದಿಡಲು ಸಾಧ್ಯವಿಲ್ಲ ಮತ್ತು ಆ ಮನೋಭಾವದಲ್ಲಿ ಅವರು ಭಾರತದ ಪ್ರತಿಭೆಯನ್ನು ಪ್ರತಿನಿಧಿಸುತ್ತಾರೆ. ಅವರ ಸಾರ್ವಜನಿಕ ಜೀವನದ ಪಥವು ಸಾಮಾನ್ಯದಿಂದ ಅಸಾಮಾನ್ಯದ ಕಡೆಗೆ ರೂಪಾಂತರಗೊಂಡಿದೆ. ಸಂಘ ಪರಿವಾರದಿಂದ ಪ್ರೇರಣೆ ಪಡೆದ ಒಬ್ಬ ಸಾಮಾನ್ಯ ಆರ್‌ಎಸ್‌ಎಸ್ ಕಾರ್ಯಕರ್ತನಾಗಿ ಅವರ ಪಯಣ ಆರಂಭವಾಯಿತು. 1950 ಮತ್ತು 60ರ ದಶಕದಲ್ಲಿ ಅವರು ತಮ್ಮ ತವರು ರಾಜ್ಯವಾದ ಗುಜರಾತ್‌ನಲ್ಲಿ ಆಗಿನ ಕಾಲಕ್ಕೆ ಅತ್ಯಂತ ಕಡಿಮೆ ಜನಪ್ರಿಯವಾಗಿದ್ದ ಸಿದ್ಧಾಂತವನ್ನು ಪ್ರತಿಪಾದಿಸಿದವರು.



ಆ ಕಾಲದ ಸಾಂಪ್ರದಾಯಿಕ ರಾಜಕಾರಣಿಗಳಿಗಿಂತ ಭಿನ್ನವಾಗಿ ಅವರು ಹೆಮ್ಮೆಪಟ್ಟುಕೊಳ್ಳಲು ಯಾವುದೇ ರಾಜಕೀಯ ಅಥವಾ ಗಣ್ಯರ ವಂಶಾವಳಿಯ ಹಿನ್ನೆಲೆ ಇಲ್ಲದವರು. ಹ್ಯಾರೋ, ಆಕ್ಸ್‌ಫರ್ಡ್, ಕೊಲಂಬಿಯಾ ಅಥವಾ ಹಾರ್ವರ್ಡ್‌ನಂತಹ ವಿದೇಶಿ ವಿವಿಗಳಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳ ವಿಶೇಷ ಕ್ಲಬ್‌ಗಳನ್ನು ಇಡೀ ಜಗತ್ತು ಗೌರವದಿಂದ ನೋಡುತ್ತಿತ್ತು. ಸರ್ ವಿನ್‌ಸ್ಟನ್ ಚರ್ಚಿಲ್ ಮತ್ತು ಭಾರತದ ಮೊದಲ ಪ್ರಧಾನಮಂತ್ರಿ ಜವಾಹರಲಾಲ್ ನೆಹರು ಅವರು ಹ್ಯಾರೋ ಬಾಯ್ಸ್ ಎಂದೇ ಪರಿಚಿತರಾಗಿದ್ದರು. ಅವರು ಒಂದೇ ಭಾಷೆಯನ್ನು ಮಾತನಾಡುತ್ತಿದ್ದರು ಮತ್ತು ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಗಣ್ಯರ ಬಳಗದಲ್ಲಿದ್ದರು. ಆದರೆ ಮೋದಿಯವರು ಅಂತಹ ಎಲ್ಲಾ ವಿವರಣೆಗಳನ್ನು ಸಂಪೂರ್ಣವಾಗಿ ಸುಳ್ಳಾಗಿಸಿದರು. ದೇಶಾದ್ಯಂತ ಸಾಮಾನ್ಯ ಜನರೊಂದಿಗೆ ಸಂವಾದ ನಡೆಸುವ ಮೂಲಕ ತಮ್ಮ ತಳಮಟ್ಟದ ಅನುಭವದಿಂದ ಅವರು ಭಾರತೀಯ ಸಮಾಜದ ಬಗ್ಗೆ ಜ್ಞಾನವನ್ನು ಪಡೆದುಕೊಂಡರು. ಜನರ ಆತಂಕಗಳು ಮತ್ತು ಆಕಾಂಕ್ಷೆಗಳ ಬಗ್ಗೆ ಅವರಿಗೆ ಅಸಾಧಾರಣವಾದ ಒಳನೋಟಗಳಿದ್ದವು. ಅವರು ರಾಜಕಾರಣವನ್ನು ವ್ಯಕ್ತಿಯಾಗಿ ಅರಿತುಕೊಂಡರು ಮತ್ತು ಅದನ್ನು ತಮ್ಮ ಸೈದ್ಧಾಂತಿಕ ಅನ್ವೇಷಣೆಯೊಂದಿಗೆ ಜೋಡಿಸಿದರು. ಅವರ ಈ ಕಾರ್ಯಾಚರಣೆಗೆ ಸಹಾಯ ಮಾಡಿದ್ದು ಅವರ ಎರಡು ಪ್ರಬಲ ಗುಣಗಳು. ವೈಯಕ್ತಿಕ ಜೀವನದಲ್ಲಿ ಅವರ ಸಂಯಮ (ವೈರಾಗ್ಯ) ಮತ್ತು ಸಾರ್ವಜನಿಕ ನಡವಳಿಕೆಯಲ್ಲಿ ಅವರ ಪ್ರಾಯೋಗಿಕತೆ.

ಅವರು ವಿರೋಧಾಭಾಸಗಳನ್ನು ಅತ್ಯಂತ ಸುಲಭವಾಗಿ ನಿಭಾಯಿಸುತ್ತಾರೆ. ಉದಾಹರಣೆಗೆ, ಗುಜರಾತ್ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಮೋದಿಯವರು ಸಬ್ಸಿಡಿಗಳ ಮೇಲೆ ಅವಲಂಬಿತವಾಗಿರದ ಬೆಳವಣಿಗೆಯ ಮಾದರಿಯೊಂದನ್ನು ಬಲವಾಗಿ ಪ್ರತಿಪಾದಿಸಿದರು. ಅದೇ ರೀತಿ ಪ್ರಧಾನಮಂತ್ರಿಯಾಗಿ ಸಾಂಕ್ರಾಮಿಕ ರೋಗ ಹರಡಿದ ನಂತರ ದೇಶದಲ್ಲಿ ಯಾರೂ ಹಸಿವಿನಿಂದ ಬಳಲಬಾರದೆಂದು ವಿಶ್ವದ ಅತಿ ದೊಡ್ಡ ಆಹಾರ ಭದ್ರತಾ ಕಾರ್ಯಕ್ರಮವನ್ನು ಪ್ರಾರಂಭಿಸಿದರು. ಅವರ ಸಾಮಾಜಿಕ ವಸತಿ ಯೋಜನೆ ಮತ್ತು ಆಯುಷ್ಮಾನ್ ಭಾರತ್‌ನಂತಹ ವಿಮಾ ಯೋಜನೆಗಳು ಸಮಾಜದ ಅತ್ಯಂತ ದುರ್ಬಲ ವರ್ಗಗಳ ಕಾಳಜಿಯಿಂದ ಜಾರಿಯಾದಂತಹವು. ಜನರ ಅತ್ಯಂತ ಪ್ರಮುಖ ಆದ್ಯತೆಗಳಾದ ರೋಟಿ, ಕಪ್ಡಾ ಔರ್ ಮಕಾನ್ (ಅನ್ನ, ಬಟ್ಟೆ, ವಸತಿ) ಮತ್ತು ಆರೋಗ್ಯದ ಅಗತ್ಯಗಳನ್ನು ಅವರು ಪೂರೈಸಿದರು. ಈ ಕಾಳಜಿಗಳನ್ನು 60ರ ದಶಕದ ಆರಂಭದಿಂದ ಇತ್ತೀಚಿನವರೆಗೂ ಸಮಾಜವಾದಿಗಳು ರಾಜಕೀಯ ಘೋಷಣೆಗಳಾಗಿ ಮಾತ್ರ ಬಳಸುತ್ತಿದ್ದರು. ಇಂದಿನ ಭಾರತದಲ್ಲಿ ಅಂತಹ ಘೋಷಣೆಗಳು ಪ್ರಾಯೋಗಿಕವಾಗಿ ಅಪ್ರಸ್ತುತವಾಗಿವೆ.

ವಾಸ್ತವವಾಗಿ ಮೋದಿಯವರು ದೇಶದ ರಾಜಕಾರಣವನ್ನು ಅತ್ಯಂತ ಆಳವಾಗಿ ಮರುಕಲ್ಪಿಸಿದ್ದಾರೆ. ದಶಕಗಳ ಕಾಲ ದೇಶವನ್ನು ಕಾಡುತ್ತಿದ್ದ ಸಮಸ್ಯೆಗಳು ಈಗ ಇತಿಹಾಸದ ಪಠ್ಯಕ್ರಮದ ಭಾಗವಾಗಿವೆ. ಜನರ ಸಾಮೂಹಿಕ ಕಲ್ಪನೆಯಲ್ಲಿ ಅಯೋಧ್ಯೆ ಈಗ ಒಂದು ಭವ್ಯವಾದ ದೇವಾಲಯದ ಸಂಕೀರ್ಣದ ಚಿತ್ರಣವನ್ನು ನೀಡುತ್ತದೆಯೇ ಹೊರತು ದೇವಾಲಯ-ಮಸೀದಿ ವಿವಾದದ ಸ್ಥಳವಾಗಿ ಅಲ್ಲ, ದೇಶಾದ್ಯಂತ ಹಿಂದು ದೇವಾಲಯಗಳನ್ನು ಅವುಗಳ ಪ್ರಾಚೀನ ವೈಭವಕ್ಕೆ ಮರುಸ್ಥಾಪಿಸಿರುವುದು ಸಾಂಸ್ಕೃತಿಕ ಏಕತೆಯ ಪ್ರಬಲ ಸಂದೇಶವನ್ನು ರವಾನಿಸುತ್ತದೆ. ಆಶ್ಚರ್ಯಕರ ಸಂಗತಿಯೆಂದರೆ ದಕ್ಷಿಣ ಆಫ್ರಿಕಾದಿಂದ ಹಿಂದಿರುಗಿದ ನಂತರ ದೇಶ ಪ್ರವಾಸ ಕೈಗೊಂಡಾಗ ಮಹಾತ್ಮಾ ಗಾಂಧೀಜಿ ಅವರೂ ಸಹ ಇಂತಹದೇ ಪುನಶ್ಚೇತನದ ಕನಸು ಕಂಡಿದ್ದರು. ಕಾಂಗ್ರೆಸ್‌ನಲ್ಲಿದ್ದ ಗಾಂಧೀಜಿ ಅವರ ಶಿಷ್ಯರು ಅವರ ಆಶಯವನ್ನು ಈಡೇರಿಸುವಲ್ಲಿ ವಿಫಲರಾದರು. ಮೋದಿ ಆ ಕನಸನ್ನು ನನಸು ಮಾಡಿದರು.

ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದಲೂ ಜಮ್ಮು ಮತ್ತು ಕಾಶ್ಮೀರದ ಸ್ಥಾನಮಾನವು ಒಂದು ದೊಡ್ಡ ಗುಣಪಡಿಸಲಾಗದ ಗಾಯವಾಗಿತ್ತು. ರಾಜಕೀಯ ಅಸ್ಪಷ್ಟತೆಯು ಮುಸ್ಲಿಂ ಪ್ರಾಬಲ್ಯದ ಕಣಿವೆಯಲ್ಲಿ ಪ್ರತ್ಯೇಕತಾವಾದ ಮತ್ತು ಉಗ್ರಗಾಮಿತ್ವವನ್ನು ಪ್ರಚೋದಿಸಿತ್ತು. 2014ಕ್ಕಿಂತ ಮೊದಲು ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಯಲ್ಲಿ ಭಾರತೀಯ ಸಂವಿಧಾನದ ವ್ಯಾಪ್ತಿಯನ್ನು ಮೀರಿ ರಾಜ್ಯವನ್ನು 1953 ಕ್ಕಿಂತ ಮುಂಚಿನ ಸ್ಥಿತಿಗೆ ಮರುಸ್ಥಾಪಿಸಬೇಕೆಂದು ಒತ್ತಾಯಿಸಿ ಹಲವು ನಿರ್ಣಯಗಳನ್ನು ಅಂಗೀಕರಿಸಲಾಗಿತ್ತು. ಆದರೆ ಒಂದೇ ಏಟಿಗೆ ಆ ರಾಜ್ಯವನ್ನು ಇಬ್ಭಾಗ ಮಾಡಿ ಕೇಂದ್ರಾಡಳಿತ ಪ್ರದೇಶವಾಗಿ ಪರಿವರ್ತಿಸಲಾಯಿತು. ಆ ಮೂಲಕ 370ನೇ ವಿಧಿಯನ್ನು ಇತಿಹಾಸದ ಒಂದು ಅಪ್ರಸ್ತುತ ಅವಶೇಷವನ್ನಾಗಿ ಮಾಡಲಾಯಿತು. ಪ್ರತ್ಯೇಕತಾವಾದದ ಭೂತವು ಝೇಲಂ ನದಿಯ ಕೆಸರಿನಂತೆ ಆಳವಾಗಿ ಹೂತುಹೋಗಿದೆ. ದೇಶದ ಉಳಿದ ಭಾಗಗಳೊಂದಿಗೆ ಸಂಪೂರ್ಣ ಮತ್ತು ಬೇಷರತ್ತಾದ ಏಕೀಕರಣಕ್ಕಾಗಿ ಆ ಪ್ರದೇಶದ ಜನರಲ್ಲಿ ಇಂದು ತೀವ್ರ ಹಂಬಲವಿದೆ. ತೀರಾ ಇತ್ತೀಚಿನ ಭೂತಕಾಲದಲ್ಲಿ ಉಗ್ರಗಾಮಿತ್ವ ಮತ್ತು ಹಿಂಸಾಚಾರದಿಂದ ತತ್ತರಿಸಿದ್ದ ಈಶಾನ್ಯ ರಾಜ್ಯಗಳ ವಿಷಯದಲ್ಲೂ ಇದು ಅನ್ವಯಿಸುತ್ತದೆ.

ಮೋದಿ ಅವರು ಗಣಿತದ ಒಂದು ಪಾಠವನ್ನು ಅರಿವಿಲ್ಲದೆಯೇ ಅಳವಡಿಸಿಕೊಂಡಂತೆ ತೋರುತ್ತದೆ. ಅದೇನೆಂದರೆ, ಸಮಸ್ಯೆಯನ್ನು ಸೃಷ್ಟಿಸಿದ ಮನಸ್ಥಿತಿಯಿಂದಲೇ ಆ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಿಲ್ಲ, ಅವರು ದೇಶದ ರಾಜಕೀಯ ಮನಸ್ಥಿತಿಯನ್ನೇ ಸಂಪೂರ್ಣವಾಗಿ ಬದಲಾಯಿಸಿದರು ಮತ್ತು ಅದನ್ನು ಎಂದಿಗೂ ಹಿಂತಿರುಗಿಸಲಾಗದ ಹಾದಿಯಲ್ಲಿ ಮುನ್ನಡೆಸಿದರು.

ಸಾರ್ವಜನಿಕ ಜೀವನದ ನಡವಳಿಕೆಯಲ್ಲಿ ಇಂತಹ ಆಮೂಲಾಗ್ರ ಬದಲಾವಣೆಯು ತೀವ್ರ ಪ್ರತಿಕ್ರಿಯೆಗಳನ್ನು ಉಂಟುಮಾಡುವುದು ಸಹಜ. ಇದರ ಪರಿಣಾಮವಾಗಿ ಮೋದಿ ಅವರಿಗೆ ಪ್ರಶಂಸೆಗಿಂತ ಟೀಕೆಗಳೇ ಹೆಚ್ಚು ಸಿಗುತ್ತವೆ. ಆದರೆ ಅವರು ತಮ್ಮ ಬದ್ಧತೆಗಳಲ್ಲಿ ಧೃತಿಗೆಡದೆ ಸ್ಥಿರವಾಗಿ ಉಳಿದಿದ್ದಾರೆ.

ತಮ್ಮ 24 ವರ್ಷಗಳ ಆಡಳಿತಾವಧಿಯಲ್ಲಿ, ಮೊದಲು ಗುಜರಾತ್ ಮುಖ್ಯಮಂತ್ರಿಯಾಗಿ ಮತ್ತು ನಂತರ ಭಾರತದ ಪ್ರಧಾನಮಂತ್ರಿಯಾಗಿ ಅವರು ನೈಸರ್ಗಿಕ ಮತ್ತು ರಾಜಕೀಯ ಎರಡೂ ರೂಪದಲ್ಲೂ ಅನೇಕ ಅಭೂತಪೂರ್ವ ಬಿಕ್ಕಟ್ಟುಗಳನ್ನು ಎದುರಿಸಿದ್ದಾರೆ. ಗುಜರಾತ್‌ನಲ್ಲಿ ಕಾರ್ಯಾಂಗದ ಮುಖ್ಯಸ್ಥರಾಗಿ ಅವರ 13 ವರ್ಷಗಳ ಅಧಿಕಾರಾವಧಿಯಲ್ಲಿ ಯುಪಿಎ ನೇತೃತ್ವದ ಪ್ರತಿಕೂಲ ಕೇಂದ್ರ ಸರ್ಕಾರವನ್ನು ಒಂದು ದಶಕದ ಕಾಲ (2004-2014) ಎದುರಿಸಬೇಕಾಯಿತು. ಆ ಸರ್ಕಾರವು ರಾಜ್ಯವನ್ನು ಬಹುತೇಕ ಶತ್ರುವಿನಂತೆ ನಡೆಸಿಕೊಂಡಿತು. ಸೃಷ್ಟಿಸಲಾದ ಕ್ರಿಮಿನಲ್ ಪ್ರಕರಣಗಳಲ್ಲಿ ಅವರನ್ನು ಸಿಲುಕಿಸಲು ವ್ಯವಸ್ಥಿತ ಪ್ರಯತ್ನಗಳು ನಡೆದವು. ಅದೇ ರೀತಿ ಪ್ರಧಾನಮಂತ್ರಿಯಾಗಿ ಅವರ ಪ್ರಸ್ತುತ ಅವಧಿಯು ಮಾನವ ಇತಿಹಾಸದ ಅತ್ಯಂತ ಕೆಟ್ಟ ಬಿಕ್ಕಟ್ಟುಗಳಲ್ಲಿ ಒಂದಾದ ಸಾಂಕ್ರಾಮಿಕ ರೋಗವನ್ನು ಎದುರಿಸಿತು. ಯುರೋಪ್ ಮತ್ತು ಮಧ್ಯಪ್ರಾಚ್ಯದಲ್ಲಿ ಯುದ್ಧಗಳು ಭುಗಿಲೆದ್ದಿದ್ದು ಭಾರತದ ಮೇಲೆ ಭಾರಿ ಭೌಗೋಳಿಕ ರಾಜಕೀಯ ಮತ್ತು ಆರ್ಥಿಕ ಪರಿಣಾಮ ಬೀರಿದೆ. ಇದಕ್ಕೆ ಚಾಣಾಕ್ಷ ರಾಜತಾಂತ್ರಿಕ ಮಾರ್ಗದರ್ಶನದ ಅಗತ್ಯವಿತ್ತು. ಭಾರತದಲ್ಲಿ ಭಯೋತ್ಪಾದನೆಗೆ ಪಾಕಿಸ್ತಾನ ನೀಡುವ ಬೆಂಬಲವನ್ನು ತಡೆಯಲು ದಂಡನಾತ್ಮಕ ಸರ್ಜಿಕಲ್ ಸ್ಟ್ರೈಕ್‌ಗಳು, ಬಾಲಕೋಟ್ ವೈಮಾನಿಕ ದಾಳಿ ಮತ್ತು ಆಪರೇಷನ್ ಸಿಂಧೂರ್ ಅನ್ನು ಪ್ರಾರಂಭಿಸಿದಾಗಲೂ ಸಹ, ಉದ್ವಿಗ್ನತೆಯು ಸಂಪೂರ್ಣ ನಿಯಂತ್ರಣದಲ್ಲಿತ್ತು ಮತ್ತು ಅದನ್ನು ಎಂದಿಗೂ ಪೂರ್ಣ ಪ್ರಮಾಣದ ಯುದ್ಧವಾಗಿ ಬದಲಾಗಲು ಬಿಡಲಿಲ್ಲ, ಅವರ ರಾಜಕೀಯ ವಿರೋಧಿಗಳು ಅವರಲ್ಲಿರುವ ಹಲವು ವೈಫಲ್ಯಗಳನ್ನು ಎತ್ತಿ ತೋರಿಸಬಹುದು ಮತ್ತು ಭಾರತದಂತಹ ಅತಿ ವೇಗವಾಗಿ ಬೆಳೆಯುತ್ತಿರುವ ಪ್ರಜಾಪ್ರಭುತ್ವದಲ್ಲಿ, ಮೋದಿ ಅವರಂತಹ ವ್ಯಕ್ತಿತ್ವವನ್ನು ಹಲವು ರೀತಿಯಲ್ಲಿ ವಿಶ್ಲೇಷಿಸುವುದು ಸಹಜ. ಭಾರತದ ಚುನಾಯಿತ ಪ್ರಧಾನಮಂತ್ರಿಯಾಗಿ ಅವರ ಸುದೀರ್ಘ ಅವಧಿಯು ಘಟನಾಪ್ರಧಾನವಾಗಿದೆ ಮತ್ತು ಜನರ ಸೂಕ್ಷ್ಮ ಪರಿಶೀಲನೆಗೆ ಮುಕ್ತವಾಗಿದೆ.

ಇತಿಹಾಸವು ಯಾವುದೇ ಭಾವನೆಗಳು ಮತ್ತು ಪೂರ್ವಗ್ರಹಗಳಿಂದ ಮುಕ್ತವಾಗಿರುತ್ತದೆ ಎಂದು ಭಾವಿಸಲಾಗಿದೆ. ಮಹಾತ್ಮಾ ಗಾಂಧೀಜಿ ಅವರನ್ನು ಅವರದೇ ಕಾಲದಲ್ಲಿ ನಿಂದಿಸಲಾಯಿತು ಮತ್ತು ಪ್ರಶಂಸಿಸಲಾಯಿತು. ಆದರೆ ಅವರ ಅತ್ಯಂತ ಪ್ರಭಾವಶಾಲಿ ಐತಿಹಾಸಿಕ ಮೌಲ್ಯಮಾಪನವು ವಿಜ್ಞಾನದ ಪ್ರತಿಭೆ ಆಲ್ಬರ್ಟ್ ಐನ್‌ಸ್ಟೈನ್ ಅವರಿಂದ ಬಂತು. ಅವರು ಇಂತಹ ರಕ್ತಮಾಂಸದ ಮನುಷ್ಯನೊಬ್ಬ ಎಂದಾದರೂ ಈ ಭೂಮಿಯ ಮೇಲೆ ನಡೆದಾಡಿದ್ದನೆಂಬುದನ್ನು ಮುಂದಿನ ಪೀಳಿಗೆಯವರು ನಂಬುವುದು ಕಷ್ಟ ಎಂದು ಅವರು ಬರೆದಿದ್ದರು. ಇತಿಹಾಸವನ್ನು ನಿಖರವಾದ ಪದಗಳಲ್ಲಿ ಮಂಡಿಸಲು ಐನ್‌ಸ್ಟೈನ್‌ನಂತಹ ದೂರದೃಷ್ಟಿಯ ಅಗತ್ಯವಿದೆ. ಆದರೆ ಮುಂದಿನ ಪೀಳಿಗೆಗೆ ಮೋದಿ ಅವರ ಐತಿಹಾಸಿಕ ಮೌಲ್ಯಮಾಪನವೂ ಅಷ್ಟೇ ಪ್ರಭಾವಶಾಲಿಯಾಗಿರಲಿದೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ.

(ಲೇಖಕರು ಭಾರತದ ರಾಷ್ಟ್ರಪತಿಯವರ ಮಾಜಿ ಪತ್ರಿಕಾ ಕಾರ್ಯದರ್ಶಿ ಮತ್ತು 'ದಿ ಆರ್ಕಿಟೆಕ್ಟ್ ಆಫ್ ದಿ ನ್ಯೂ ಬಿಜೆಪಿ: ಹೌ ನರೇಂದ್ರ ಮೋದಿ ಟ್ರಾನ್ಸ್‌ಫಾರ್ಮ್ಡ್ ದಿ ಪಾರ್ಟಿ' ಪುಸ್ತಕದ ಕರ್ತೃ)

ದೇಶದ ಪ್ರಗತಿ ಪಥ ಬದಲಿಸಿದ ಮೋದಿ

ಏಕನಾಥ ಶಿಂಧೆ, ಮಹಾರಾಷ್ಟ್ರ ಉಪಮುಖ್ಯಮಂತ್ರಿ







ನರೇಂದ್ರ ಮೋದಿಯವರು ನಿರಂತರ ಸುದೀರ್ಘ ಅವಧಿಗೆ ಪ್ರಧಾನಿಯಾಗಿ ಕಾರ್ಯನಿರ್ವಹಿಸಿದ ಸಾಧನೆಗೆ ಈಗ ಪಾತ್ರರಾಗಿದ್ದಾರೆ. ಇಂದು ಮೋದಿಯವರು ಪ್ರಧಾನಿ ಗಾದಿಯಲ್ಲಿ 4,399 ದಿನಗಳನ್ನು ಪೂರೈಸಲಿದ್ದು, ಆ ಮೂಲಕ ಜವಾಹರಲಾಲ್ ನೆಹರೂ ಪ್ರಧಾನಿಯಾಗಿದ್ದ 4,398 ದಿನಗಳ ಸಾಧನೆಯನ್ನು ಮೀರಿ ಮುಂದುವರಿಯಲಿದ್ದಾರೆ. ನೆಹರೂ ಯುಗವು ಭಾರತದ ನಿಧಾನ ಪ್ರಗತಿಯನ್ನು ದಾಖಲಿಸಿದ್ದರೆ, ಮೋದಿಯವರ ಯುಗದಲ್ಲಿ ಭಾರತವು ಅಭಿವೃದ್ಧಿಯತ್ತ ದಾಪುಗಾಲು ಇಡುತ್ತಿರುವುದು ಈ ಎರಡು ಆಡಳಿತ ಕಾಲದ ವ್ಯತ್ಯಾಸವಾಗಿದೆ.

ಪ್ರಧಾನಿ ನರೇಂದ್ರ ಮೋದಿಯವರು ಕಳೆದ 12 ವರ್ಷಗಳಿಂದ 'ನವಭಾರತ' ನಿರ್ಮಾಣಕ್ಕಾಗಿ ಅವಿಶ್ರಾಂತವಾಗಿ ಶ್ರಮಿಸುತ್ತಿದ್ದಾರೆ. ವಿರೋಧಿಗಳ ಅಪಪ್ರಚಾರ, ಟೀಕೆ ಮತ್ತು ಚಾರಿತ್ರ್ಯಹನನದ ಪ್ರಯತ್ನಗಳನ್ನೆಲ್ಲ ಲೆಕ್ಕಿಸದೆ ಮೋದಿಯವರು ತಮ್ಮ ಗುರಿಸಾಧನೆಯ ಪ್ರಯತ್ನದಲ್ಲಿ ಅವಿಚಲಿತರಾಗಿ ಮುಂದುವರಿಯುತ್ತಿದ್ದಾರೆ.

ಈ ಹಿಂದೆಲ್ಲಾ ಸಾಮಾನ್ಯವಾಗಿ ಭಾರತದ ಪ್ರಗತಿಯನ್ನು ತುಲನೆ ಮಾಡುವಾಗ 'ಸ್ವಾತಂತ್ರ್ಯ ಪೂರ್ವ' ಮತ್ತು 'ಸ್ವಾತಂತ್ರ್ಯಾನಂತರ'ದ ಕಾಲ ಎಂದು ಹೇಳಲಾಗುತ್ತಿತ್ತು. ಆದರೆ ಈಗ ಭಾರತವು ಸಾಧಿಸಿರುವ ಅದ್ಭುತ ಪ್ರಗತಿಯ ಬಳಿಕ ದೇಶೀಯವಾಗಿಯೂ, ಜಾಗತಿಕವಾಗಿಯೂ '2014ರ ಮುನ್ನ' ಮತ್ತು '2014ರ ನಂತರ' ಎಂಬ ಕಾಲಖಂಡವನ್ನು ಉಲ್ಲೇಖಿಸಲಾಗುತ್ತಿದೆ. ಮೋದಿಯವರ ಭವಿಷ್ಯದ ಕುರಿತಾದ ದೂರದೃಷ್ಟಿಯೇ ಇದಕ್ಕೆಲ್ಲ ಕಾರಣವಾಗಿದೆ.

1947ರ ಬಳಿಕ 67 ವರ್ಷಗಳ ಅವಧಿಯಲ್ಲಿ ಭಾರತವು ಹಲವಾರು ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಿತೆಂಬುದು ನಿಜ. ಆದರೆ ಅದು ಪ್ರತಿಯೊಂದು ಪ್ರಜಾತಾಂತ್ರಿಕ ದೇಶವೂ ಸಾಧಿಸಬಹುದಾದ ನಿಧಾನ ಪ್ರಗತಿ. ಆದರೆ ಕಳೆದ 12 ವರ್ಷಗಳಲ್ಲಿ ನಾವು ಕಾಣುತ್ತಿರುವುದು ಕ್ಷಿಪ್ರವಾದ ಹಾಗೂ ದೇಶವನ್ನು ಜಾಗತಿಕವಾಗಿ ಮೇಲೆತ್ತಬಲ್ಲ ಅಭೂತಪೂರ್ವ ಪ್ರಗತಿ.

ಮೊದಲ 67 ವರ್ಷಗಳ ಆಡಳಿತದಲ್ಲಿ ಬಡತನ ನಿವಾರಣೆಗೆ ಮತ್ತು ಅಭಿವೃದ್ಧಿ ಸಾಧಿಸಲು ಹಲವಾರು ಕಾರ್ಯಕ್ರಮಗಳನ್ನು ಪ್ರಕಟಿಸಲಾಯಿತಾದರೂ ಮತ್ತು 'ಗರೀಬಿ ಹಟಾವೋ'ದಂತಹ ಘೋಷಣೆಗಳನ್ನು ಮೊಳಗಿಸಲಾಯಿತಾದರೂ ಬರೀ ಘೋಷಣೆಯಿಂದ ಏನೂ ಸಾಧಿಸಲ್ಪಡಲಿಲ್ಲ, ಕಾಂಗ್ರೆಸ್ ಆಳ್ವಿಕೆಯ ಈ ಸಮಯದಲ್ಲಿ ಖಾದಿಧಾರಿ ರಾಜಕಾರಣಿಗಳು ಮಾತ್ರ ತಮ್ಮ ಜೇಬು ತುಂಬಿಸಿಕೊಳ್ಳುತ್ತಾರೆ ಎಂಬ ಪರಿಕಲ್ಪನೆ ಜನರಲ್ಲಿ ಉಂಟಾಗಲು ಕಾರಣವಾಯಿತು. ಆದರೆ ಮೋದಿಯವರ ಆಡಳಿತದಲ್ಲಿ ಇದು ಬದಲಾಯಿತು. ರಾಷ್ಟ್ರೀಯ ಹಿತಾಸಕ್ತಿ ಆದ್ಯತೆ ಪಡೆಯಿತು. ಮೋದಿಯವರು ಭ್ರಷ್ಟಾಚಾರದ ನಿಯಂತ್ರಣ ಮಾಡಿದರು, ಪ್ರಗತಿಗೆ ಇರುವ ಅಡ್ಡಿಗಳನ್ನು ತೊಲಗಿಸಿದರು. ಪ್ರಗತಿಪರರ ಹೆಸರಿನಲ್ಲಿ ಕಾಂಗ್ರೆಸ್ ನಿರ್ಮಿಸಿದ್ದ ಬೌದ್ಧಿಕ ಅಡೆತಡೆಗಳನ್ನು ನಿವಾರಿಸಿದರು.

ಮೋದಿಯವರು 2001ರ ಅಕ್ಟೋಬರ್ 7ರಿಂದ 2014ರ ಮೇ 11ರ ವರೆಗೆ ಗುಜರಾತಿನ ಮುಖ್ಯಮಂತ್ರಿಯಾಗಿದ್ದರು. ಅವರು ಮೂರು ಅವಧಿಗಳಿಗೆ ಮುಖ್ಯಮಂತ್ರಿಯಾಗಿದ್ದಾಗ ವಿರೋಧಿಗಳು ಅವರ ವಿರುದ್ಧ ಸಾಕಷ್ಟು ಅಪಪ್ರಚಾರ ಮಾಡಿದರು, ಅವರ ಸ್ಫೂರ್ತಿಯನ್ನು ಕುಂದಿಸಲು ಯತ್ನಿಸಿದರು. ಆದರೆ ಮೋದಿಜೀ ಈ ಎಲ್ಲಾ ಅಡೆತಡೆಗಳನ್ನು ನಿವಾರಿಸಿ 'ಗುಜರಾತ್ ಮಾದರಿ' ಎಂಬ ಅಭಿವೃದ್ಧಿಯ ಹೊಸಶಕೆಯನ್ನು ಆರಂಭಿಸಿದರು. 'ವೈಬ್ರೆಂಟ್ ಗುಜರಾತ್' ಸಮ್ಮೇಳನದ ಮೂಲಕ ದೊಡ್ಡ ಪ್ರಮಾಣದಲ್ಲಿ ವಿದೇಶಿ ಹೂಡಿಕೆಯನ್ನು ಆಕರ್ಷಿಸಿದರು. ರೈತರಿಗೆ ದಿನದ 24 ಗಂಟೆ ವಿದ್ಯುತ್ ಪೂರೈಸುವ ಮೂಲಕ ರಾಜ್ಯದಲ್ಲಿ ರೈತಕ್ರಾಂತಿಯನ್ನು ಅನುಷ್ಠಾನಿಸಿದರು. ಆಡಳಿತದಲ್ಲಿ ತಂತ್ರಜ್ಞಾನವನ್ನು ಅಳವಡಿಸುವುದರೊಂದಿಗೆ ಭ್ರಷ್ಟಾಚಾರ ಕಡಿಮೆಯಾಗಿ ಪಾರದರ್ಶಕತೆಗೆ ಅವಕಾಶ ಕಲ್ಪಿಸಿತು.

"ಜನರು ನನ್ನನ್ನು ಟೀಕಿಸಲಿ ಅಥವಾ ಹೊಗಳಲಿ, ನನ್ನ ಗುರಿ ದೇಶದ ಅಭಿವೃದ್ಧಿ" ಎನ್ನುವುದು ಮೋದಿಜೀಯವರ ಧ್ಯೇಯವಾಕ್ಯ. 2014ರಲ್ಲಿ ಪ್ರಧಾನಿಯಾದ ಬಳಿಕವೂ ಅವರು ಇದೇ ಧ್ಯೇಯದೊಂದಿಗೆ ಮುಂದುವರಿಯುತ್ತಿದ್ದಾರೆ. 'ಟೀಕಾಕಾರನೊಬ್ಬ ಪಕ್ಕದಲ್ಲಿರಬೇಕು' ಎಂದು ಹೇಳುವುದಿದೆ. ಆದರೆ ಮೋದಿಜೀಗೆ ಸಂಬಂಧಿಸಿ ಹೇಳುವುದಾದರೆ ಗಲ್ಲಿಗಲ್ಲಿಯಲ್ಲಿ ಟೀಕಾಕಾರರು ಹುಟ್ಟಿಕೊಂಡರು.



ಟೀಕಾಕಾರರು ಮತ್ತು ವಿರೋಧಿಗಳು ಚೆಲ್ಲಿದ ದ್ವೇಷದ ನೆಲದಲ್ಲಿ ಮೋದಿಯವರು ಅಭಿವೃದ್ಧಿಯ ಉದ್ಯಾನವನವನ್ನು ಬೆಳೆಸಬಲ್ಲರು.

ಆದರೆ ಅಂತ್ಯದಲ್ಲಿ ಭಾರತದ ಅಭಿವೃದ್ಧಿಯ ಬಿರುಗಾಳಿಯನ್ನು ತಡೆಯಲು ಅವರಾರಿಗೂ ಆಗಲಿಲ್ಲ. ಕಳೆದ 12 ವರ್ಷಗಳಲ್ಲಿ ಭಾರತವು ಬಡತನ ನಿರ್ಮೂಲನೆಯಲ್ಲಿ ಉತ್ತಮ ಪ್ರಗತಿ ಸಾಧಿಸಿದೆ ಎಂದು ವಿಶ್ವಬ್ಯಾಂಕ್ ವರದಿ ಹೇಳುತ್ತಿದೆ. 2011-12ರಲ್ಲಿ ಶೇ. 27ರಷ್ಟಿದ್ದ ಬಡವರ ಸಂಖ್ಯೆಯು ಈಗ ಶೇ. 5-6ಕ್ಕಿಳಿದಿದೆ.

"ಮೋದೀಜಿ ಹೇಳಿದಂತೆ ನಡೆಯುವವರು ಹಾಗೂ ತಮ್ಮಿಂದ ಮಾಡಲಾಗುವುದನ್ನೇ ಹೇಳುವವರು" ಎಂಬ ಮಾತು ಈಗ ಪ್ರಚಲಿತವಾಗಿದೆ. ಕಳೆದ 12 ವರ್ಷಗಳಲ್ಲಿ, ಅವರ ಕಾರ್ಯಾನುಷ್ಠಾನ ಶೈಲಿಯು ಈ ಹೇಳಿಕೆಯನ್ನು ದೃಢಪಡಿಸಿದೆ. ದೇಶದ ನಾಯಕನೊಬ್ಬ ಎಷ್ಟು ಪತ್ರಿಕಾಗೋಷ್ಠಿಯನ್ನು ನಡೆಸಿದ್ದಾನೆ ಎಂಬ ಆಧಾರದಲ್ಲಿ ಆತನನ್ನು ಅಳೆಯುವ ಟೀಕಾಕಾರರು ಕೇವಲ ಭಾರತದಲ್ಲಷ್ಟೇ ಕಂಡುಬರುತ್ತಾರೆ. ಆದರೆ ಮೋದಿಯವರು ಮಾಧ್ಯಮಗಳ ಮುಂದೆ ದೊಡ್ಡ ದೊಡ್ಡ ಹೇಳಿಕೆಗಳನ್ನು ನೀಡಲು ಹೋಗುವುದಿಲ್ಲ, ಅವರು ಪ್ರಚಾರದಿಂದ ದೂರವಾಗಿ, ಮೌನವಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಕಳೆದ 67 ವರ್ಷಗಳಲ್ಲಿ ಕಾಂಗ್ರೆಸ್ ಆಡಳಿತ ಮತ್ತು ಕಾಂಗ್ರೆಸ್ ಸಿದ್ಧಾಂತದಿಂದ ರೂಪಿಸಲ್ಪಟ್ಟ ಕೊಳೆಗಳನ್ನು ತೊಳೆಯಲೇ ಮೋದಿಯವರು ಬಹಳಷ್ಟು ಶ್ರಮಪಡಬೇಕಾಗಿ ಬಂತು. ಆಡಳಿತ ಶುದ್ಧೀಕರಣವನ್ನು ಘೋಷಿಸಿದ ಅವರು ಈ ಕಾರ್ಯಕ್ಕೆ ಆದ್ಯತೆ ನೀಡಿದರು. ತಮ್ಮ ಕೆಲಸದ ಬಗ್ಗೆ ಮಾತಿನಿಂದ ಹೇಳುವ ಅಗತ್ಯವಿಲ್ಲ, ಅದರ ಬದಲಾಗಿ ತನ್ನ ಕೃತಿಗಳಿಂದಲೇ ಅದನ್ನು ಸಾಬೀತುಪಡಿಸುತ್ತೇನೆ ಎಂಬುದು ಮೋದಿಯವರ ಚಿಂತನೆ.

ಕಳೆದ 12 ವರ್ಷಗಳ ಮೋದಿ ಆಡಳಿತದ ಸಾಧನೆಗಳನ್ನು ವಿವಿಧ ದಿಕ್ಕುಗಳಿಂದ ನೋಡಬಹುದಾಗಿದೆ. ಸಾಮಾಜಿಕ ಸುಧಾರಣೆ, ರಾಜಕೀಯ ಬದಲಾವಣೆ, ಸಾಂಸ್ಕೃತಿಕ ಪುನರುತ್ಥಾನ, ಜಾಗತಿಕವಾಗಿ ಹೆಚ್ಚಿದ ಭಾರತದ ಘನತೆ ಮೊದಲಾದವು ಇದಕ್ಕೆ ನಿದರ್ಶನ. ಜನಧನ್ ಯೋಜನೆ, ಸ್ವಚ್ಛ ಭಾರತ ಅಭಿಯಾನ, ಜಿಎಸ್‌ಟಿ ಅನುಷ್ಠಾನ, ಆಯುಷ್ಮಾನ್ ಭಾರತ್, ಡಿಜಿಟಲ್ ಇಂಡಿಯಾ, ಆತ್ಮನಿರ್ಭರ ಭಾರತ, ತ್ರಿವಳಿ ತಲಾಖ್ ಕಾನೂನು, ಸಂವಿಧಾನದ 370ನೇ ವಿಧಿ ರದ್ದತಿ, ಹೊಸ ಸಂಸತ್‌ಭವನ ನಿರ್ಮಾಣ, ಶ್ರೀರಾಮ ಮಂದಿರ ನಿರ್ಮಾಣ, ಕಾಶಿ ವಿಶ್ವನಾಥ ಕಾರಿಡಾರ್ ನಿರ್ಮಾಣ... ಒಂದೇ ಎರಡೇ, ಮೋದಿ ಸಾಧನೆಯ ಗರಿಗಳು ಅನೇಕ!!

ಈಗ ದೇಶಾದ್ಯಂತ ಷಟ್ಪಥ ಮತ್ತು ಅಷ್ಟಪಥಗಳ ರಸ್ತೆ ಜಾಲ ಹರಡಿರಬೇಕಾದರೆ ಅದಕ್ಕೆ ಮೋದಿಜೀಯವರ ಅಭಿವೃದ್ಧಿಯ ದೃಷ್ಟಿಕೋನವೇ ಕಾರಣ. ಕಳೆದ 70 ವರ್ಷಗಳಲ್ಲಿ ದೇಶದಲ್ಲಿ ಸರಿಯಾದ ರಸ್ತೆ ಸೌಕರ್ಯಗಳನ್ನೂ ಒದಗಿಸಲು ಹಿಂದಿನ ಆಡಳಿತಗಳಿಗೆ ಸಾಧ್ಯವಾಗಲಿಲ್ಲವೆನ್ನುವುದು ದುರದೃಷ್ಟಕರ. 2014ರಿಂದ ಆರಂಭಿಸಿ ದೇಶಾದ್ಯಂತ 375000 ಕಿ.ಮೀ. ಹೊಸ ರಸ್ತೆಗಳನ್ನು ನಿರ್ಮಿಸಲಾಗಿದೆ. ರಸ್ತೆಗಳು ಆರ್ಥಿಕ ಮತ್ತು ಕೈಗಾರಿಕಾ ಪ್ರಗತಿಯ ಮೂಲಭೂತ ಅವಶ್ಯಕತೆಗಳಾಗಿವೆ. ಜತೆಗೇ ಸಾಮಾನ್ಯ ಜನರ ಜೀವನಾಡಿಯೂ ಆಗಿದೆ.ದೇಶಕ್ಕೆ ಇದನ್ನು ಅರಿತುಕೊಳ್ಳಲು ಇಷ್ಟು ದೀರ್ಘಕಾಲ ಬೇಕಾಯಿತು.

ನಮಾಮಿ ಗಂಗಾ ಯೋಜನೆಯು ನರೇಂದ್ರ ಮೋದಿ ಸರಕಾರದ ಅತ್ಯಂತ ಮಹತ್ವದ ಪರಿಸರ ಸಂರಕ್ಷಣೆ ಯೋಜನೆ. ಈ ಯೋಜನೆಯಡಿಯಲ್ಲಿ ಗಂಗಾ ಮತ್ತು ಅದರ ಉಪನದಿಗಳ ಶುದ್ಧೀಕರಣ ಕಾರ್ಯ ಕೈಗೊಳ್ಳಲಾಗಿದೆ. ಇದು ದೇಶಾದ್ಯಂತ ನದಿ ಸಂರಕ್ಷಣೆ ಕುರಿತಾದ ಜಾಗೃತಿಯನ್ನು ಮೂಡಿಸಿದೆ.

ಮೋದಿಜೀಯವರು ಭಾರತೀಯ ರೈಲ್ವೇಯನ್ನು ಆಧುನೀಕರಣಗೊಳಿಸುವಲ್ಲಿ ಮಹತ್ತರ ಯಶಸ್ಸು ಸಾಧಿಸಿದ್ದಾರೆ. ರೈಲು ನಿಲ್ದಾಣಗಳ ನವೀಕರಣ, ಹೊಸ ರೈಲುಗಳ ಸೇರ್ಪಡೆ, ಹೈಸ್ಪೀಡ್ ರೈಲು ಯೋಜನೆ ಮುಂತಾದವು ಪ್ರಯಾಣಿಕರಿಗೆ ಸುರಕ್ಷಿತ ಮತ್ತು ಉತ್ತಮ ಪ್ರಯಾಣದ ಅನುಭವ ನೀಡುತ್ತಿವೆ. ವಂದೇಭಾರತ್‌ನಂತಹ ಆಧುನಿಕ ರೈಲುಗಳು ಮತ್ತು ಪ್ರಮುಖ ನಗರಗಳಲ್ಲಿ ಮೆಟ್ರೋ ಸೇವೆ ವಿಸ್ತರಣೆ ಭಾರತೀಯರ ದೈನಂದಿನ ಜೀವನವನ್ನು ಸುಗಮಗೊಳಿಸಿದೆ.

ಸರ್ಜಿಕಲ್ ದಾಳಿಗಳನ್ನು ನಡೆಸುವ ಮೂಲಕ ಮೋದಿಜೀಯವರು ಭಾರತವು ತನ್ನ ವಿರೋಧಿಗಳಿಗೆ ಕ್ಷಿಪ್ರ ಪ್ರತ್ಯುತ್ತರ ನೀಡಬಲ್ಲುದೆಂಬುದನ್ನು ಸಾಬೀತುಪಡಿಸಿದ್ದಾರೆ. ಪಾಕಿಸ್ತಾನಿ ಪ್ರೇರಿತ ಭಯೋತ್ಪಾದಕರು ಭಾರತದೊಳಕ್ಕೆ ನುಸುಳಿ ಬಂದು ಇಲ್ಲಿ ವಿಧ್ವಂಸಕ ಕೃತ್ಯಗಳನ್ನೆಸಗಿ ಸುರಕ್ಷಿತವಾಗಿ ಪಾರಾಗಬಹುದು ಎಂದು ಈವರೆಗೆ ತಿಳಿದುಕೊಂಡಿದ್ದರು. ಆದರೆ ಈಗ ಭಾರತೀಯ ಸೇನೆಯು ವಿರೋಧಿ ನೆಲದೊಳಗೆ ನುಗ್ಗಿ ಭಯೋತ್ಪಾದಕರನ್ನು ಸದೆಬಡಿಯುವಲ್ಲಿ ಸಫಲವಾಗಿದೆ. ಆಂತರಿಕ ಭಯೋತ್ಪಾದನೆಗೆ ಹೆಸರಾದ ನಕ್ಸಲೀಯ ಪಿಡುಗನ್ನು ಕೂಡಾ ಈಗ ದಮನಿಸಲಾಗಿದೆ.

ನಾನು ಮತ್ತು ನನ್ನ ಪೂರ್ಣ ಕುಟುಂಬವು ಪ್ರಧಾನಿ ಮೋದಿಜೀಯವರ ಪ್ರೀತಿವಾತ್ಸಲ್ಯಕ್ಕೆ ಪಾತ್ರರಾಗಿರುವುದು ನಮ್ಮ ಅದೃಷ್ಟ. ಪ್ರತಿಬಾರಿ ಅವರನ್ನು ಭೇಟಿಯಾದಾಗಲೂ "ಹೇಗಿದ್ದೀರಿ ಏಕನಾಥ್‌ಜೀ" ಎಂದು ಅವರು ವಿಚಾರಿಸಿಕೊಳ್ಳುತ್ತಾರೆ.

ರಾಜಕೀಯದಲ್ಲಿ ಮೋದಿಜೀಯವರದು ಸುಗಮ ಹಾದಿಯಲ್ಲ, ಅವರ ಹಾದಿಯಲ್ಲಿ ಟೀಕಾಕಾರರು, ನಿಂದಕರು ಸದಾ ಅಡ್ಡಗಾಲಿಡಲು ಯತ್ನಿಸುತ್ತಾರೆ. ಆದರೆ ಮೋದಿಜೀಯವರು ತಮಗೆದುರಾಗುವ ಟೀಕೆ, ದ್ವೇಷ, ಅಸೂಯೆ, ವೈಯಕ್ತಿಕ ನಿಂದನೆ ಮುಂತಾದವುಗಳನ್ನೆಲ್ಲಾ ಮೀರಿ ಮುಂದೆ ಸಾಗುವರೆಂಬ ವಿಶ್ವಾಸ ನನಗಿದೆ. ಟೀಕಾಕಾರರು ಮತ್ತು ವಿರೋಧಿಗಳು ಚೆಲ್ಲಿದ ದ್ವೇಷದ ನೆಲದಲ್ಲಿ ಮೋದಿಯವರು ಅಭಿವೃದ್ಧಿಯ ಉದ್ಯಾನವನವನ್ನು ಬೆಳೆಸಬಲ್ಲರು.

ಶ್ರಾದ್ಧದ ಪ್ರಕಾರಗಳು ಮತ್ತು ಅವುಗಳ ಮಹತ್ತ್ವ

ಪಿತೃಕಾರ್ಯವು ದೇವಕಾರ್ಯದಷ್ಟೇ ಮಹತ್ತ್ವದ್ದು ಮತ್ತು ಇದನ್ನು ತಪ್ಪದೇ ಮಾಡಬೇಕೆಂಬುದಾಗಿ ಉಪನಿಷತ್ತು ತಿಳಿಸುತ್ತದೆ.

ಪದಸಂಚಲನ

ಡಾ. ವಿಶ್ವನಾಥ ಸುಂಕಸಾಳ

sunkasalvishwa@gmail.com



ಪಿತೃಋಣದ ಅಪಾಕರಣೆಗಾಗಿ ಮಾಡಲಾಗುವ ಕರ್ಮವೇ ಶ್ರಾದ್ಧಕರ್ಮ. ವ್ಯಕ್ತಿಯ ಮರಣದ ಅನಂತರ ಮಾಡಲಾಗುವ ಮೊಟ್ಟ ಮೊದಲ ಶ್ರಾದ್ಧವೆಂದರೆ, ಅದು ನಗ್ನಪ್ರಚ್ಛಾದನಶ್ರಾದ್ಧ. ಹನ್ನೆರಡನೆಯ ದಿನ ಪಿಂಡಸಂಯೋಜನೆಯ ಮೂಲಕ ಮೃತವ್ಯಕ್ತಿಗೆ ಪಿತೃಗಳ ಸ್ಥಾನ ದೊರಕುವವರೆಗೆ ಅವರು ಪ್ರೇತರಾಗಿರುತ್ತಾರೆ. ಹಾಗಾಗಿಯೇ ಅಲ್ಲಿಯವರೆಗೆ ಪಿತುಃ ಪ್ರೇತೇ ಎಂದೇ ಸಂಬೋಧಿಸಲಾಗುತ್ತದೆ. ಪ್ರೇತವನ್ನು ಕುರಿತು ಮಾಡಲಾಗುವ ಮೊದಲ ಶ್ರಾದ್ಧಕ್ಕೆ ನಗ್ನಪ್ರಚ್ಛಾದನಶ್ರಾದ್ಧ ಎಂದು ಕರೆಯಲಾಗುತ್ತದೆ. ಈ ಶ್ರಾದ್ಧದ ಅಂಗವಾಗಿ ಧಾನ್ಯಸಹಿತವಾದ ಪಾತ್ರೆ, ದೀಪ, ಕಂಚಿನ ಅಡುಗೆಯ ಪಾತ್ರೆ ಹಾಗೂ ಬಟ್ಟೆಯನ್ನು ಸೇರಿಸಿ ದಾನವಾಗಿ ಕೊಡಲಾಗುತ್ತದೆ.

ರುದ್ರಗಣಶ್ರಾದ್ಧ: ಏಕಾದಶಾಹದ ದಿನ ಹನ್ನೊಂದು ವಿಪ್ರರಲ್ಲಿ ಏಕಾದಶರುದ್ರರನ್ನು ಆವಾಹಿಸಿ ಪ್ರೇತತ್ವವಿಮೋಚನೆಗಾಗಿ ಅಕ್ಕಿ, ತೆಂಗಿನಕಾಯಿ ಮೊದಲಾದವುಗಳನ್ನು ನೀಡುವುದನ್ನು ರುದ್ರಗಣಶ್ರಾದ್ಧ ಎಂದು ಕರೆಯಲಾಗುತ್ತದೆ. ಏಕಾದಶಾಹದಂದು ಮಾಡಲಾಗುವ ಕಾರ್ಯಗಳನ್ನು ಶಿವಪ್ರೀತ್ಯರ್ಥವಾಗಿಯೂ, ಸಪಿಂಡೀಕರಣದ ದಿನ (ದ್ವಾದಶಾಹ) ಮಾಡುವ ಕಾರ್ಯಗಳನ್ನು ವಿಷ್ಣುಪ್ರೀತ್ಯರ್ಥವಾಗಿಯೂ ಮಾಡಲಾಗುತ್ತದೆ.

ನವಶ್ರಾದ್ಧ: ವ್ಯಕ್ತಿಯು ಮರಣವನ್ನು ಹೊಂದಿದ ದಿನದಿಂದ ಹನ್ನೊಂದನೆಯ ದಿನಗಳೊಳಗೆ ಬರುವ 1,3,5,7,9,11 ಈ ವಿಷಮಸಂಖ್ಯೆಯ ದಿನಗಳಲ್ಲಿ ಮಾಡಲಾಗುವ ವಿಶೇಷಶ್ರಾದ್ಧಗಳನ್ನು ನವಶ್ರಾದ್ಧ ಎಂಬುದಾಗಿ ಕರೆಯಲಾಗಿದೆ. ಸ್ನಾನದ ಅನಂತರ ಕರ್ತೃವು ಮೃಯನ್ನು ಒರೆಸಿಕೊಳ್ಳದೇ ಪವಿತ್ರಧಾರಿಯಾಗಿ ಆರು ಬಾಳೆಲೆಗಳಲ್ಲಿ ಅಕ್ಕಿ-ತೆಂಗಿನಕಾಯಿಯನ್ನು ಹಾಕಿ ದಾನ ಮಾಡುವ ಪ್ರಕ್ರಿಯೆಯನ್ನೇ ನವಶ್ರಾದ್ಧ ಎನ್ನಲಾಗುತ್ತದೆ.

ಷೋಡಶಶ್ರಾದ್ಧ: ಈ ಶ್ರಾದ್ಧಕ್ಕೆ ಮತ್ತೊಂದು ಹೆಸರು ಮಲಿನಶ್ರಾದ್ಧ ಎಂಬುದಾಗಿ. ಷೋಡಶಶ್ರಾದ್ಧದಲ್ಲಿ 360 ಪಿಂಡ ಮತ್ತು 16 ಮಾಸಿಕ ಪಿಂಡಗಳನ್ನು ನೀಡಲಾಗುತ್ತದೆ. ಇದು ಪ್ರೇತವನ್ನು ಉದ್ದೇಶಿಸಿ ಮಾಡಲಾಗುವ ಶ್ರಾದ್ಧವಾಗಿದೆ. ಪ್ರೇತಕ್ಕೆ ಪಿತೃಲೋಕವನ್ನು ಸೇರಲು ಒಂದು ವರ್ಷ ಕಾಲ ಬೇಕಾಗುತ್ತದೆಂದು ಹೇಳಲಾಗುತ್ತದೆ. ಅವರೆಗೆ ಪ್ರತಿದಿನವೂ ಪಿಂಡಪ್ರದಾನದ ಮೂಲಕ ಪ್ರೇತಾತ್ಮವನ್ನು ತೃಪ್ತಿಪಡಿಸಬೇಕೆಂಬ ಉದ್ದೇಶದಿಂದ ಇದನ್ನು ಆಚರಿಸಲಾಗುತ್ತದೆ. ಇದನ್ನು ಏಕಾದಶಾಹದಂದು ವೃಷೋತ್ಸರ್ಗಹೋಮದ ಅನಂತರ ಆಚರಿಸಲಾಗುತ್ತದೆ.

ಸಪಿಂಡೀಕರಣಶ್ರಾದ್ಧ:

ಅಶುದ್ಧಃ ಸ್ಯಾತ್ ಸದಾ ಪುತ್ರೋ ನ ಶುದ್ಧ್ಯತಿ ಕದಾಚನ ।

ಸೂತಕಂ ನ ನಿವರ್ತೇತ ಸಪಿಂಡೀಕರಣಂ ವಿನಾ ॥

ಎಂಬುದಾಗಿ ಶಾಸ್ತ್ರಗಳು ತಿಳಿಸುತ್ತವೆ. ಅರ್ಥಾತ್ ಸಪಿಂಡೀಕರಣವನ್ನು ಮಾಡದಿದ್ದರೆ ಮಕ್ಕಳಿಗೆ ಆಶೌಚದಿಂದ ಶುದ್ಧಿಯು ದೊರೆಯುವುದಿಲ್ಲ, ಎಲ್ಲ ಮಕ್ಕಳೂ ಸೇರಿ ಜ್ಯೇಷ್ಠಪುತ್ರನ ನೇತೃತ್ವದಲ್ಲಿ ಇದನ್ನು ಮಾಡಲಾಗುತ್ತದೆ. ಮರಣದ ಹನ್ನೆರಡನೆಯ ದಿನ ಈ ಶ್ರಾದ್ಧವನ್ನು ಮಾಡಲಾಗುತ್ತದೆ. ಸಪಿಂಡೀಕರಣವೆಂದರೆ ಮೃತನಾದ ವ್ಯಕ್ತಿಗಿಂತ ಮುಂಚೆ ಕಳೆದುಹೋದ ಮೂರು ತಲೆಮಾರಿನ ಪಿತೃಗಳ ಸಮೂಹದೊಡನೆ ಈಗ ತೀರಿಹೋದ ವ್ಯಕ್ತಿಯನ್ನು ಪಿತೃರೂಪದಲ್ಲಿ ಸೇರಿಸುವುದಾಗಿದೆ. ಸಪಿಂಡೀಕರಣದಿಂದ ಮೃತರಿಗೆ ಪ್ರೇತತ್ವದ ನಿವಾರಣೆಯಾಗಿ ಪಿತೃಸ್ಥಾನವು ಲಭ್ಯವಾಗುತ್ತದೆ. **ದ್ವಾದಶಾಹೇ ಸಪಿಂಡಾಖ್ಯಂ ಮುಖ್ಯಂ ಕಲಿಯುಗೇ ಸ್ಮೃತಮ್** ಎಂಬುದಾಗಿ ಶಾಸ್ತ್ರವು ಸಪಿಂಡೀಕರಣದ ಮಹತ್ತ್ವವನ್ನು ತಿಳಿಸುತ್ತದೆ.

ಪಾಥೇಯಶ್ರಾದ್ಧ: ಮರಣದ ದಿನದಿಂದ ಹದಿಮೂರನೆಯ ದಿನ ಮಾಡಲಾಗುವ ಶ್ರಾದ್ಧವನ್ನು ಪಾಥೇಯಶ್ರಾದ್ಧ ಎನ್ನಲಾಗುತ್ತದೆ. ಇದಕ್ಕೆ ಪತಂಗ ಎಂಬುದಾಗಿಯೂ ಕರೆಯಲಾಗುತ್ತದೆ. ವರ್ಷಕ್ಕೊಮ್ಮೆ ಮಾಡಲಾಗುವ ಶ್ರಾದ್ಧದ ರೀತಿಯಲ್ಲಿಯೇ ಇದನ್ನೂ ಮಾಡಲಾಗುತ್ತದೆ. ಪಾಥೇಯಶ್ರಾದ್ಧದಿಂದ ಆರಂಭಿಸಿ ಪ್ರತಿಮಾಸಿಕಶ್ರಾದ್ಧ, ಪ್ರಥಮಾಬ್ದಿಕಶ್ರಾದ್ಧ, ಪ್ರತಿಸಾಂವತ್ಸರಿಕಶ್ರಾದ್ಧ ಈ ಎಲ್ಲವುಗಳಲ್ಲಿಯೂ ಮೂರು ಪಿಂಡಗಳನ್ನು ಪ್ರದಾನ ಮಾಡಿ ಶ್ರಾದ್ಧವನ್ನು ಮಾಡಲಾಗುತ್ತದೆ. ಶ್ರಾದ್ಧಗಳಲ್ಲಿ, ಪಚನಾಗ್ನಿ, ಬ್ರಾಹ್ಮಣಭೋಜನ, ಪಿಂಡಪ್ರದಾನಗಳೆಂಬ ಮೂರು ಕಾರ್ಯಗಳು ಸಮಾನವಾಗಿರುತ್ತವೆ.

ಮಾಸಿಕಶ್ರಾದ್ಧ: ಸಾಮಾನ್ಯವಾಗಿ ಪ್ರತಿತಿಂಗಳೂ ಮಾಡುವ ಶ್ರಾದ್ಧಕ್ಕೆ ಮಾಸಿಕಶ್ರಾದ್ಧ ಎಂದು ಹೆಸರು. ಆದರೆ ವ್ಯಕ್ತಿಯ ಮರಣದಿಂದ ಒಂದು ವರ್ಷದವರೆಗೆ ಸುಮಾರು ಹದಿನಾರು ಮಾಸಿಕಶ್ರಾದ್ಧಗಳು ಬರುತ್ತವೆ. ಅವೆಲ್ಲವುಗಳಿಗೂ ಮಾಸಿಕಶ್ರಾದ್ಧವೆಂದೇ ಕರೆಯಲಾಗುತ್ತದೆ. ಇದರ ಪ್ರಕಾರ ಮೊದಲ ಮಾಸಿಕಶ್ರಾದ್ಧ ಮರಣದ ದಿನದಿಂದ ಇಪ್ಪತ್ತೊಂದನೆಯ ದಿನಕ್ಕೆ ಬರುತ್ತದೆ. ಇಪ್ಪತ್ತೇಳನೆಯ ದಿನ ಎರಡನೆಯ ಮಾಸಿಕಶ್ರಾದ್ಧವನ್ನೂ, ಮೊದಲ ತಿಂಗಳಿನ ಮರಣತಿಥಿಯಂದು ಮೂರನೆಯ ಮಾಸಿಕಶ್ರಾದ್ಧವನ್ನೂ ಆಚರಿಸಲಾಗುತ್ತದೆ. ಹಾಗೆಯೇ ಮರಣದಿನದಿಂದ ನಲವತ್ತೊಂದನೆಯ ದಿನಕ್ಕೆ ನಾಲ್ಕನೇ ಮಾಸಿಕಶ್ರಾದ್ಧವನ್ನೂ, ಮರಣತಿಥಿಯಿಂದ ಎರಡನೆಯ ತಿಂಗಳಿನ ಮರಣತಿಥಿಯಂದು ಐದನೆಯ ಮಾಸಿಕಶ್ರಾದ್ಧವನ್ನೂ ಆಚರಿಸಲಾಗುತ್ತದೆ. ಇಲ್ಲಿಂದ ಮುಂದೆ ಮೂರು, ನಾಲ್ಕು ಮತ್ತು ಐದನೆಯ ತಿಂಗಳಿಗೆ ತಿಥಿಯ ಪ್ರಕಾರ ಆರು, ಏಳು ಮತ್ತು ಎಂಟನೆಯ ಮಾಸಿಕಶ್ರಾದ್ಧವನ್ನು ಆಚರಿಸಲಾಗುತ್ತದೆ.

ಊನಷಾಣ್ಮಾಸಿಕಶ್ರಾದ್ಧ: ಇದನ್ನು ಮರಣದಿನದಿಂದ 171ನೇ ದಿನ ಆಚರಿಸಲಾಗುತ್ತದೆ. ಈ ಸಂದರ್ಭದಲ್ಲಿ ನೌಕಾದಾನ ಮಾಡಲಾಗುತ್ತದೆ. ಮೃತವ್ಯಕ್ತಿಯು ವೈತರಣೀನದಿಯನ್ನು ದಾಟಲು ಇದು ಸಹಾಯಕ ಎಂಬುದಾಗಿ ಗರುಡಪುರಾಣದಲ್ಲಿ ತಿಳಿಸಲಾಗಿದೆ.ಇಲ್ಲಿಂದ ಮುಂದೆ ಮತ್ತೆ ತಿಥಿಯ ಪ್ರಕಾರ ಆರು, ಏಳು, ಎಂಟು, ಒಂಬತ್ತು, ಹತ್ತು, ಹನ್ನೊಂದನೆಯ ತಿಂಗಳಲ್ಲಿ ಕ್ರಮವಾಗಿ ಹತ್ತು, ಹನ್ನೊಂದು, ಹನ್ನೆರಡು, ಹದಿಮೂರು, ಹದಿನಾಲ್ಕು ಮತ್ತು ಹದಿನೈದನೆಯ ಮಾಸಿಕಶ್ರಾದ್ಧವನ್ನು ಆಚರಿಸಲಾಗುತ್ತದೆ. ಮರಣದಿನದಿಂದ 346ನೇ ದಿನ ಊನಾಬ್ದಿಕಶ್ರಾದ್ಧವನ್ನು ಆಚರಿಸಲಾಗುತ್ತದೆ. ಹೀಗೆ ಹದಿನಾರು ಮಾಸಿಕಶ್ರಾದ್ಧಗಳನ್ನು ಆಚರಿಸಿ, ಹನ್ನೆರಡನೆಯ ತಿಂಗಳು ಪ್ರಥಮಾಬ್ದಿಕ ಶ್ರಾದ್ಧವನ್ನು ಆಚರಿಸಲಾಗುತ್ತದೆ. ಮರಣದಿನದಿಂದ 361ನೇ ದಿನ ಆಚರಿಸಲಾಗುವ ಶ್ರಾದ್ಧಕ್ಕೆ ಪತಂಗಶ್ರಾದ್ಧ ಅಥವಾ ಪಿತೃಸಂಗಮಶ್ರಾದ್ಧ ಎಂಬುದಾಗಿ ಕರೆಯಲಾಗುತ್ತದೆ. ಒಂದು ವೇಳೆ ಹದಿನೇಳು ಮಾಸಿಕಗಳು ಬಂದಲ್ಲಿ ಪ್ರಥಮಾಬ್ದಿಕಶ್ರಾದ್ಧವು ಒಂದು ತಿಂಗಳಿನಷ್ಟು ಮುಂದೆ ಹೋಗುತ್ತದೆ.

ತ್ರಿಪಿಂಡೀಶ್ರಾದ್ಧ: ಪ್ರೇತಬಾಧೆಯಿದೆಯೆಂದು ದೈವಜ್ಞರು ತಿಳಿಸಿದಲ್ಲಿ ಈ ಶ್ರಾದ್ಧವನ್ನು ಮಾಡಲಾಗುತ್ತದೆ. ಇದೊಂದು ವಿಶೇಷವಾದ ಶ್ರಾದ್ಧವಾಗಿದೆ. ಯಾರಿಗೆ ಪ್ರೇತಬಾಧೆ ಇದೆಯೋ ಅವರಿಗೆ ಮಾತ್ರ ಆಚರಿಸಲಾಗುವ ಶ್ರಾದ್ಧವಿದು.

ಪಿತೃಸಂಗಮಶ್ರಾದ್ಧ: ಇದನ್ನು ಪತಂಗಶ್ರಾದ್ಧ ಎಂದೂ ಕರೆಯಲಾಗುತ್ತದೆ. ಕಟಪಯಾದಿ ಸೂತ್ರದ ಅಕ್ಷರಗಳ ಲೆಕ್ಕಾಚಾರದಲ್ಲಿ ಪತಂಗವೆಂದರೆ 361ನೆಯ ದಿನವಾಗುತ್ತದೆ.

ಮಹಾಲಯಶ್ರಾದ್ಧ: ಪಿತೃಪಕ್ಷದಲ್ಲಿ ಯಾವುದೇ ನಿಶ್ಚಿತವಾದ ದಿನದಂದು ಮಹಾಲಯಶ್ರಾದ್ಧವನ್ನು ಮಾಡಲಾಗುತ್ತದೆ. ಸಾಮಾನ್ಯವಾಗಿ ವ್ಯಕ್ತಿಯು ಮರಣಹೊಂದಿದ ತಿಥಿಯಂದೇ ಮಾಡಲಾಗುತ್ತದೆ. ಆಷಾಢಮಾಸದಿಂದ ಆರಂಭಿಸಿ ಐದು ಪಕ್ಷಗಳವರೆಗೆ ಪಿತೃಪಕ್ಷವೆಂದು ಗುರುತಿಸಲಾಗುತ್ತದೆ. ಈ ದಿನಗಳಲ್ಲಿ ಪಿತೃಗಳು ಆಹಾರವನ್ನು ಬಯಸುತ್ತಾರೆ ಎಂದು ಹೇಳಲಾಗುತ್ತದೆ. ಆದರೆ ಮೃತವ್ಯಕ್ತಿಯ ಪ್ರಥಮಾಬ್ದಿಕಶ್ರಾದ್ಧವಾಗದೇ ಈ ಶ್ರಾದ್ಧವನ್ನು ಆಚರಿಸುವಂತಿಲ್ಲ.

ಹೀಗೆ ಸಂದುಹೋದ ನಮ್ಮ ಪಿತೃಗಳ ನೆನಪಿನಲ್ಲಿ ಮಾಡಲಾಗುವ ಕರ್ಮವನ್ನೇ ಶ್ರಾದ್ಧ ಎಂಬುದಾಗಿ ಕರೆಯಲಾಗುತ್ತದೆ. ಇದನ್ನು ಮಾಡುವುದರಿಂದ ಏನು ಪ್ರಯೋಜನ ಎಂದು ಕೆಲವರು ಕೇಳುವುದುಂಟು. ಇವೆಲ್ಲವೂ ಅವರವರ ಶ್ರದ್ಧೆಗೆ ಸಂಬಂಧಿಸಿದ್ದು, ಹಾಗೆ ನೋಡಿದರೆ ಎಲ್ಲ ಕರ್ಮಾಂಗಗಳೂ ಕೂಡ ಶ್ರದ್ಧೆಯುಳ್ಳವನಿಗೇ ಹೌದು.

ಕರ್ಮಣಿ ಶ್ರಾದ್ಧೋ ಅಧಿಕಾರೀ ಎಂಬುದಾಗಿ ಶಾಸ್ತ್ರಗಳು ತಿಳಿಸುತ್ತವೆ. ತಪ್ಪದೇ ಶ್ರಾದ್ಧವನ್ನು ಆಚರಿಸಿದರೆ ವಸುರೂಪದಲ್ಲಿರುವ ಪಿತೃಗಳು ಆಯುಸ್ಸನ್ನೂ, ರುದ್ರರೂಪದಲ್ಲಿರುವ ಪಿತೃಗಳು ಧನವನ್ನೂ, ಆದಿತ್ಯರೂಪದಲ್ಲಿರುವ ಪಿತೃಗಳು ಪ್ರಜಾಸಂಪತ್ತನ್ನೂ ಕರುಣಿಸುತ್ತಾರೆ ಎಂಬುದಾಗಿ ಶಾಸ್ತ್ರಗಳಲ್ಲಿ ತಿಳಿಸಲಾಗಿದೆ. ಪಿತೃಕಾರ್ಯವು ದೇವಕಾರ್ಯದಷ್ಟೇ ಮಹತ್ತ್ವದ್ದು ಮತ್ತು ಇದನ್ನು ತಪ್ಪದೇ ಮಾಡಬೇಕೆಂಬುದಾಗಿ ಉಪನಿಷತ್ತು ತಿಳಿಸುತ್ತದೆ. **ದೇವಪಿತೃಕಾರ್ಯಾಭ್ಯಾಂ ನ ಪ್ರಮದಿತವ್ಯಮ್** ಎಂಬುದಾಗಿ ತೈತ್ತಿರೀಯೋಪನಿಷತ್ತು ತಿಳಿಸಿದೆ. ದೇವತಾಕಾರ್ಯಗಳೂ ಕೂಡ ಋಣಪ್ರಜ್ಞೆಯಿಂದಲೇ ಆಚರಿಸುವಂಥದ್ದು. ಪಿತೃಕಾರ್ಯವೂ ಋಣಪ್ರಜ್ಞೆಯಿಂದಲೇ ಮಾಡುವಂಥದ್ದು, ಯಾರಿಗೆ ಇಂಥ ಋಣಭಾವ ಇದೆಯೋ ಅವರು ಖಂಡಿತವಾಗಿ ಈ ಕಾರ್ಯಗಳನ್ನು ತಮ್ಮ ಸಂಪ್ರದಾಯ, ಆಚಾರಗಳಿಗೆ ಅನುಸಾರವಾಗಿ ತಿಳಿದು ಮಾಡಬೇಕಾದದ್ದು ಸೂಕ್ತವಾದುದು.

ಅಲೆಮಾರಿ ಸಮುದಾಯದ ಏಳ್ಗೆಗೆ ಕಾರ್ಯಸಿದ್ಧರಾಗಿ: ದುರ್ಗಾದಾಸ್

• **ಬೆಂಗಳೂರು:** ಸ್ವಾಭಿಮಾನಿ, ಧರ್ಮನಿಷ್ಠ ಮತ್ತು ದೇಶಭಕ್ತ ಅಲೆಮಾರಿ ಸಮುದಾಯವು ನಮ್ಮ ಸಹೋದರರೇ ಆಗಿದ್ದಾರೆ. ಅವರ ಏಳಿಗೆಗೆ ಕೆಲಸ ಮಾಡಲು ನಾವೆಲ್ಲರೂ ಸಿದ್ಧರಾಗಬೇಕು ಎಂದು ಅಖಿಲ ಭಾರತ ಘುಮಂತು ಕಾರ್ಯ ಪ್ರಮುಖ್ ದುರ್ಗಾದಾಸ್ ವ್ಯಾಸ್ ಕರೆ ನೀಡಿದ್ದಾರೆ.

ನಗರದ ಉತ್ತುಂಗ ಸಭಾಂಗಣದಲ್ಲಿ ನಡೆದ ಘುಮಂತು ಕಾರ್ಯ (ಅಲೆಮಾರಿ, ಅರೆ ಅಲೆಮಾರಿ ಮತ್ತು ವಿಮುಕ್ತ ಬುಡಕಟ್ಟು ಸಮುದಾಯದ ಕಾರ್ಯ) ಕರ್ನಾಟಕ ದಕ್ಷಿಣ ಪ್ರಾಂತದ ಪ್ರಾಂತ ಬೈಠಕ್‌ನಲ್ಲಿ ಅವರು ಮಾತನಾಡಿದರು. ದೇಶದಲ್ಲಿ ಅಲೆಮಾರಿ ಸಮುದಾಯಕ್ಕೆ ಸೇರಿದ 15 ಕೋಟಿ ಜನಸಂಖ್ಯೆಯಿದೆ. ಈ ಪೈಕಿ 4 ಕೋಟಿ ಜನರು ದಯನೀಯ ಸ್ಥಿತಿಯಲ್ಲಿದ್ದಾರೆ. ಅಲೆಮಾರಿ ಸಮುದಾಯಕ್ಕೂ ಇತಿಹಾಸವಿದೆ. ಸ್ವಾತಂತ್ರ್ಯ ಹೋರಾಟದಲ್ಲಿಯೂ ಅವರು ಭಾಗಿಯಾಗಿದ್ದಾರೆ. ಆದರೆ, ಈ ಇತಿಹಾಸವನ್ನು ಎಲ್ಲಿಯೂ ದಾಖಲಿಸಿಲ್ಲ, ಅಲೆಮಾರಿ ಸಮುದಾಯದ ಇತಿಹಾಸಕ್ಕೆ ಮನ್ನಣೆಯನ್ನೂ ಕೊಟ್ಟಿಲ್ಲ, ಬ್ರಿಟಿಷರ ಕಾಲದಲ್ಲಿ ಅಲೆಮಾರಿ ಸಮುದಾಯಗಳನ್ನು ಅಧಿಸೂಚಿತ ಬುಡಕಟ್ಟು ಜನಾಂಗಗಳು (ನೋಟಿಫೈಡ್ ಟ್ರೈಬ್ಸ್) ಎಂದು ಗುರುತಿಸಿ ಅವರನ್ನು ಅತ್ಯಂತ ಕೀಳಾಗಿ ನಡೆಸಿಕೊಳ್ಳಲಾಗಿತ್ತು ಎಂದು ವಿವರಿಸಿದರು.

ಅಲೆಮಾರಿ ಸಮುದಾಯವು ದೇಶದ ಇತರೆಲ್ಲ ಸಮುದಾಯ, ವರ್ಗಗಳ ಅವಶ್ಯಕತೆಗಾಗಿ ಅಲೆಮಾರಿಗಳಾಗಿದ್ದಾರೆ. ಸ್ವಾತಂತ್ರ್ಯನಂತರ 1952ರಲ್ಲಿ ಕೆಲವು ಸಮುದಾಯಗಳನ್ನು



ಅಧಿಸೂಚನೆ ಯಿಂದ ತೆಗೆದುಹಾಕಲಾಯಿತು. ಇದರಿಂದ ಅಲೆಮಾರಿ, ಅರೆ ಅಲೆಮಾರಿ ಮತ್ತು ವಿಮುಕ್ತ ಬುಡಕಟ್ಟು ಸಮುದಾಯ ಎಂದು ವಿಂಗಡಣೆಯಾಯಿತು ಎಂದರು.

ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್)ವು ಇಡೀ ಸಮಾಜ ನಮ್ಮದು ಎಂಬ ನೆಲೆಯಲ್ಲಿ ನಾಲ್ಕು ವರ್ಷಗಳ ಹಿಂದೆ ಅಲೆಮಾರಿ ಸಮುದಾಯಗಳ ಮಧ್ಯೆ ಘುಮಂತು ಕಾರ್ಯ ಪ್ರಾರಂಭಿಸಿದೆ. ಅಲೆಮಾರಿ ಸಮುದಾಯದ ಈಗಿನ ಸ್ಥಿತಿಯನ್ನು ಇನ್ನಷ್ಟು ಉತ್ತಮಗೊಳಿಸಲು ಉಳ್ಳವರು ಅವಶ್ಯಕತೆ ಇದ್ದವರಿಗೆ ಸಹಾಯ ಮಾಡಲು, ಸರ್ಕಾರದ ಅನೇಕ ಯೋಜನೆಗಳನ್ನು ಅವರಿಗೆ ದೊರಕಿಸುವುದಕ್ಕಾಗಿ, ಆರೋಗ್ಯ, ಶಿಕ್ಷಣ ಮತ್ತು ಕೌಶಲಾಭಿವೃದ್ಧಿ ಇತ್ಯಾದಿಗಳನ್ನು ತಳಮಟ್ಟದ ಸಮುದಾಯಗಳಿಗೆ ತಲುಪಿಸುವುದಕ್ಕಾಗಿ ಕೆಲಸ ಮಾಡುತ್ತಿದೆ ಎಂದು ದುರ್ಗಾದಾಸ್ ತಿಳಿಸಿದರು.

ಇದಕ್ಕಾಗಿ ಘುಮಂತು ಕಾರ್ಯದಲ್ಲಿ ಆರು ಕೆಲಸಗಳು ಪ್ರಾರಂಭವಾಗಿವೆ. ಈಗಾಗಲೇ 2 ಲಕ್ಷಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ದಾಖಲೆ ಪತ್ರಗಳನ್ನು ಕೊಡಿಸಲಾಗಿದೆ. ಶಿಕ್ಷಣ ಸವಲತ್ತು, ವಿದ್ಯಾರ್ಥಿವೇತನ ಒದಗಿಸಲಾಗುತ್ತಿದೆ. ಆದರೆ, ಹೊರಗಿನಿಂದ ಬಂದವರಿಗೆ ಎಲ್ಲಾ ಸೌಲಭ್ಯ ಸಿಗುತ್ತಿದೆ. ಅವರ ಬಳಿ ಆಧಾರ್ ಕಾರ್ಡ್, ಗ್ಯಾಸ್ ಸಂಪರ್ಕ, ಪಡಿತರಚೀಟಿ ಎಲ್ಲವೂ ಇದೆ. ವಿಪರ್ಯಾಸವೆಂದರೆ, ಅಲೆಮಾರಿ ಸಮುದಾಯಕ್ಕೆ ಶಕ್ತಿ ಇಲ್ಲದಿರುವುದರಿಂದ ಅವರು ಸೌಲಭ್ಯ ಪಡೆಯಲು ಸಾಧ್ಯವಾಗುತ್ತಿಲ್ಲ, ಈ ನಿಟ್ಟಿನಲ್ಲಿ ಎಲ್ಲರೂ ಅವರ ಏಳಿಗೆಗಾಗಿ ಕೆಲಸ ಮಾಡಬೇಕು ಎಂದು ಹೇಳಿದರು.

ಸಭೆಯಲ್ಲಿ ಚಿತ್ರದುರ್ಗದ ಅಖಿಲ ಭಾರತ ಯಾದವ ಮಹಾ ಸಂಸ್ಥಾನದ ಶ್ರೀ ಕೃಷ್ಣ ಜಗದ್ಗುರು ಯಾದವಾನಂದ ಸ್ವಾಮೀಜಿ ಭಾಗವಹಿಸಿ ಆಶೀರ್ವಚನ ನೀಡಿದರು. ಆರ್‌ಎಸ್‌ಎಸ್ ದಕ್ಷಿಣ ಪ್ರಾಂತ ಪ್ರಚಾರಕ್ ಗುರುಪ್ರಸಾದ್ ಸಮಾರೋಪ ಭಾಷಣ ಮಾಡಿದರು. ಆರ್‌ಎಸ್‌ಎಸ್ ಪ್ರಾಂತ ಸಂಚಾಲಕ ಉಮಾಪತಿ, ಘುಮಂತು ಕಾರ್ಯ ಕರ್ನಾಟಕ ದಕ್ಷಿಣ ಪ್ರಾಂತದ ಸಂಯೋಜಕ್ ಗುರುಗಣೇಶ್ ಉಪಸ್ಥಿತರಿದ್ದರು.

ಇದೇ ವೇಳೆ ಅಲೆಮಾರಿ ಸಮುದಾಯದ ಕಿರು ಪರಿಚಯದ ಪತ್ರಕ ಬಿಡುಗಡೆ ಮಾಡಲಾಯಿತು. ಬೈಠಕ್‌ನಲ್ಲಿ ಕರ್ನಾಟಕ ರಾಜ್ಯ ವಾಣಿಜ್ಯ ಯಾನೆ ನಲಿಕೆ ಸಮಾಜದ ಸೇವಾ ಸಂಘದ ರಾಜ್ಯಾಧ್ಯಕ್ಷ ದೈವ ನರ್ತಕ ದಯಾನಂದ ಎಸ್., ಸಾಗರದ ಉಮಾ, ವಕೀಲ ರವಿ ಮಾವಿನಕುಂಟೆ ಭಾಗವಹಿಸಿದ್ದರು.

ರಾಮ ಬಾಣ



ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

ಜನರನ್ನು ವಿಭಜಿಸುವ ಸನಾತನ ಧರ್ಮವನ್ನು ರದ್ದು ಮಾಡಬೇಕು
– ಉದಯನಿಧಿ ಸ್ಟಾಲಿನ್

– ಪೋಲೀಸರು ನಿಜವಾದ ಕಳ್ಳನನ್ನು ಹಿಡಿಯುವ ಬದಲು ರಾಜಕೀಯ ಒತ್ತಡದಿಂದ ಯಾರೋ ನಿರಪರಾಧಿಯನ್ನು ಬಂಧಿಸಿದಂತಿದೆ ಈ ಆರೋಪ.ನಿಮಗೆ ಧೈರ್ಯವಿದ್ದರೆ ಭಾರತ ಪಾಕಿಸ್ತಾನ ವಿಭಜನೆಗೆ ಕಾರಣರಾದ ಮತೀಯರ ಬಗ್ಗೆ ಮಾತನಾಡಿ!

ದಿನ ಭವಿಷ್ಯ

ಮೇಷ
ತುಸು ಕ್ಲಿಷ್ಟಕರ ದಿನ. ವೃತ್ತಿ ಒತ್ತಡ ದೈಹಿಕ ಸುಸ್ತಿಗೂ ಕಾರಣವಾದೀತು. ಕೆಲ ವಿಷಯ ಮಾನಸಿಕ ಗೊಂದಲ ಸೃಷ್ಟಿಸುವುದು.

ವೃಷಭ
ನಿಮ್ಮ ಕಾರ್ಯ ಸಾಧಿಸಲ್ಪಡಲಿದೆ. ಆದರೆ ವಿಳಂಬವಾಗಿ. ಸಂಬಂಧದಲ್ಲಿ ಒಡಕು. ತೈಲಖಾದ್ಯ ಆರೋಗ್ಯ ಕೆಡಿಸಬಹುದು.

ಮಿಥುನ
ವೃತ್ತಿಯಲ್ಲಿ ತೊಡಕು. ಹೆಚ್ಚಿನ ಅವಕಾಶ ಸಿಗದು. ಮೇಲಧಿಕಾರಿ ಜತೆ ಉದ್ವಿಗ್ನತೆ. ವಾದ ಮಾಡಲು ಹೋಗಬೇಡಿ. ಸಹನೆ ಕಾಯ್ದುಕೊಳ್ಳಿ.

ಕಟಕ
ಧೈರ್ಯಗೆಡಬೇಡಿ. ಎಂತಹ ಪ್ರತಿಕೂಲ ಪರಿಸ್ಥಿತಿ ಎದುರಾದರೂ ದೇವರ ಕೃಪೆ ನಿಮಗಿದೆ. ಶಾಂತಿ, ಸಹನೆ ಕಾಯ್ದುಕೊಳ್ಳಿ. ಎಲ್ಲ ಸರಿಯಾಗಲಿದೆ.

ಸಿಂಹ
ಕಾರ್ಯಶೈಲಿಯಲ್ಲಿ ಬದಲಾವಣೆ ಸಂಭವ. ನಿರೀಕ್ಷೆಗಿಂತ ಹೆಚ್ಚು ಕೆಲಸದ ಒತ್ತಡ. ಸಂಜೆ ವೇಳೆಗೆ ಎಲ್ಲ ಸುಸೂತ್ರ.. ಮೆಚ್ಚುಗೆ ಪಡೆಯುವಿರಿ.

ಕನ್ಯಾ
ವೃತ್ತಿ ಕಾರ್ಯದಲ್ಲಿ ಪೂರ್ಣ ಮಗ್ನರು. ಇತರ ವಿಷಯಕ್ಕೆ ಗಮನ ಹರಿಯದು. ಕುಟುಂಬದ ಸಮಸ್ಯೆಗೂ ಗಮನ ಕೊಡಿ. ಆರ್ಥಿಕ ಒತ್ತಡ.

ತುಲಾ
ವೃತ್ತಿಯಲ್ಲಿ ಏರಿಳಿತ ಎದುರಿಸುವಿರಿ. ಲಕ್ಷ್ಯ ಕಡಿಮೆ ಮಾಡದಿರಿ. ಧಾರ್ಮಿಕ ಕ್ಷೇತ್ರ, ಭೇಟಿ ನಿರಾಳತೆ ತರುವುದು. ಆರ್ಥಿಕ ಹಿನ್ನಡೆ.

ವೃಶ್ಚಿಕ
ಕಠಿಣ ದಿನ. ಹೆಚ್ಚು ಹೊಣೆಗಾರಿಕೆ. ಉತ್ಸಾಹ ತರುವ ಇತರ ಕಾರ್ಯದಲ್ಲಿ ತೊಡಗಿ. ಆರ್ಥಿಕ ಪ್ರಗತಿ ನಿರೀಕ್ಷಿಸಿದಷ್ಟು ಆಗದು.

ಧನು
ಹೆಚ್ಚು ಪರಿಶ್ರಮ ಪಟ್ಟು ನಿಮ್ಮ ಸಾಮರ್ಥ್ಯ ತೋರ್ಪಡಿಸಿ. ಟೀಕೆಗಳಿಗೆ ಉತ್ತರ ಕೊಡಿ. ಕೆಲವರಿಗೆ ಕಾಲು, ಸೊಂಟ ನೋವು ಕಾಡಬಹುದು.

ಮಕರ
ಉತ್ಸಾಹಪೂರ್ಣ ದಿನ. ಕಾರ್ಯ ಸಫಲತೆ. ಸಂಗಾತಿ ಜತೆಗಿನ ಭಿನ್ನಮತ ಬಗೆಹರಿಸಿ. ಖರ್ಚು ಕಡಿಮೆ ಮಾಡಲು ಯೋಜನೆ ಹಾಕಿ.

ಕುಂಭ
ವೃತ್ತಿ ಮತ್ತು ಮನೆಯಲ್ಲಿ ಕಠಿಣ ದಿನ. ಸುಗಮವಾಗಿ ಸಾಗದು. ಅನಿರೀಕ್ಷಿತ ಪಯಣ. ಕ್ಷಿಪ್ರ ಕಾಲದಲ್ಲಿ ಆಹಾರ ಸೇವಿಸಿ. ಆರೋಗ್ಯ ಕಾಯ್ದುಕೊಳ್ಳಿ.

ಮೀನ
ಯೋಜಿಸಿ ಕಾರ್ಯ ಎಸಗಿ. ಇಲ್ಲವಾದರೆ ಒತ್ತಡಕ್ಕೆ ಸಿಲುಕುವಿರಿ. ಸಣ್ಣಪುಟ್ಟ ಚಿಂತೆ ಸದಾ ಕಾಡುತ್ತಿರುತ್ತದೆ. ಆಂಜನೇಯನ ಭಜಿಸಿ.

ರಾಹುಕಾಲ: 12.00-1.30
ಗುಳಿಕಕಾಲ: 10.30-12.00

ಅದೃಷ್ಟ ಸಂಖ್ಯೆ : 8,5,1,7

ಹೈನಿಂದ 15 ದಿನಗಳ ತುರ್ತು ಪೆರೋಲ್ ಮಂಜೂರು

• **ಬೆಂಗಳೂರು:** ಮರಣಶೈಯ್ಯೆಯಲ್ಲಿರುವ 97 ವರ್ಷದ ತಾತನನ್ನು ಕಂಡು ಕೊನೆಘಳಿಗೆಯಲ್ಲಿ ಆತನ ಬಳಿ ಇದ್ದು ಆರೈಕೆ ಮಾಡಲು, ಜೀವಾವಧಿ ಶಿಕ್ಷೆಗೆ ಒಳಗಾಗಿ ಸದ್ಯ ಜೈಲಿನಲ್ಲಿರುವ ಮೊಮ್ಮಗನಿಗೆ ಮಾನವೀಯತೆಯ ಆಧಾರದಲ್ಲಿ ಹೈಕೋರ್ಟ್ ಮಂಗಳವಾರ 15 ದಿನಗಳ ತುರ್ತು ಪೆರೋಲ್ ಮಂಜೂರು ಮಾಡಿದೆ. ತನ್ನ ತಂದೆ ಮರಣಶೈಯ್ಯೆಯಲ್ಲಿದ್ದು ಆತನನ್ನು ಕಾಣಲು ಮೊಮ್ಮಗನಿಗೆ ಪೆರೋಲ್ ಮಂಜೂರು ಮಾಡಬೇಕು ಎಂದು ಜೀವಾವಧಿ ಶಿಕ್ಷೆಗೊಳಗಾಗಿ ಮೈಸೂರು ಕೇಂದ್ರ ಕಾರಾಗೃಹದಲ್ಲಿರುವ ಎಸ್.ಡಿ ನವೀನ್ ಅಲಿಯಾಸ್ ಸಬ್ಬಿಡಿ ನವೀನ್ ತಂದೆ ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲೂಕು ನುಗ್ಗೇಹಳ್ಳಿ ಗ್ರಾಮದ ಎಸ್.ಎಸ್. ದೇವರಾಜು ಎಂಬುವರು ಸಲ್ಲಿಸಿದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರ ಏಕಸದಸ್ಯ ಪೀಠವು 15 ದಿನಗಳ ತುರ್ತು ಪೆರೋಲ್ ಮಂಜೂರು ಮಾಡಿ ಆದೇಶಿಸಿದೆ. ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ಕೊಲೆ ಪ್ರಕರಣದಲ್ಲಿ ನವೀನ್‌ಗೆ 2024ರ ಡಿ.18ರಂದು ಜೀವಾವಧಿ ಶಿಕ್ಷೆಯಾಗಿದೆ. ಅದಕ್ಕೂ ಮೊದಲು 2022ರ ಅಕ್ಟೋಬರ್ 20ರಿಂದ ಆತ ಜೈಲಿನಲ್ಲಿದ್ದಾನೆ. ಈಗ ಆತನ 97 ವರ್ಷದ ತಾತ ಮರಣಶೈಯ್ಯೆಯಲ್ಲಿದ್ದು, ತಾತನನ್ನು ಕಾಣಲು ಪೆರೋಲ್ ಮಂಜೂರು ಮಾಡಬೇಕು ಎಂದು ಕೋರಿದರು. ಇದಕ್ಕೆ ಸರ್ಕಾರದ ಪರ ವಕೀಲರು ಈ ಹಿಂದೆ ಅಪರಾಧಿಗೆ ಮೂರು ಬಾರಿ ಪೆರೋಲ್ ಮಂಜೂರು ಮಾಡಲಾಗಿದೆ.

ಸರ್ಕಾರದ ಯೋಜನೆ ಪರಿಣಾಮಕಾರಿ ಅನುಷ್ಠಾನಕ್ಕೆ ಪರಮೇಶ್ವರ ಸೂಚನೆ

ಯುವಕರಿಗೆ ಉತ್ತೇಜನ

• **ಬೆಂಗಳೂರು:** ಗ್ರಾಮೀಣ ಮತ್ತು ಪಾರಂಪರಿಕ ಕ್ರೀಡೆಗಳಿಗೆ ಹೆಚ್ಚಿನ ಆದ್ಯತೆ ನೀಡುವ ಯುವಕರಿಗೆ ಉತ್ತೇಜನ ನೀಡಬೇಕು ಎಂದು ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಹೇಳಿದರು.

ಮಂಗಳವಾರ ವಿಧಾನಸೌಧದಲ್ಲಿ ನಡೆದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಮುಜರಾಯಿ ಇಲಾಖೆಯ ಪ್ರಗತಿ ಪರಿಶೀಲನೆ ನಡೆಸಿ, ಅಧಿಕಾರಿಗಳೊಂದಿಗೆ ಸುದೀರ್ಘವಾಗಿ ಚರ್ಚಿಸಿದರು. ಸರ್ಕಾರದ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಂತೆ ಸೂಚನೆ ನೀಡಿದರು. ಕ್ರೀಡಾ ಕ್ಷೇತ್ರದಲ್ಲಿ ಅತ್ಯುನ್ನತ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ಸರ್ಕಾರದಿಂದ ನೀಡಲಾಗುವ ವಿವಿಧ ಪ್ರಶಸ್ತಿಗಳ ಕುರಿತು ಸಭೆಯಲ್ಲಿ ಚರ್ಚಿಸಿದರು. ಸಾಧಕರಿಗೆ ನೀಡಬೇಕಿರುವ ಕ್ರೀಡಾ ಪ್ರಶಸ್ತಿಗಳನ್ನು ಯಾವುದೇ ಕಾರಣಕ್ಕೂ ಬಾಕಿ ಉಳಿಸಬಾರದು. ಅರ್ಹ ಕ್ರೀಡಾಪಟುಗಳನ್ನು ಪಾರದರ್ಶಕವಾಗಿ ಗುರುತಿಸಿ, ಪ್ರಶಸ್ತಿಗಳನ್ನು ನೀಡುವ ಮೂಲಕ ಅವರಸಾಧನೆಯನ್ನು ಗೌರವಿಸುವಕೆಲಸವಾಗಬೇಕು. ಇದು ಇತರ ಯುವ ಕ್ರೀಡಾಪಟುಗಳಿಗೂ ಪ್ರೇರಣೆಯಾಗಲಿದೆ ಎಂದು ಅವರು ಹೇಳಿದರು.

ಒಲಿಂಪಿಕ್, ಏಷ್ಯಾನ್ ಗೇಮ್ಸ್, ಕಾಮನ್‌ವೆಲ್ತ್ ಗೇಮ್ಸ್ ಸೇರಿದಂತೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ರಾಜ್ಯಕ್ಕೆ ಕೀರ್ತಿ ತಂದ ಕ್ರೀಡಾಪಟುಗಳಿಗೆ ರಾಜ್ಯ ಸರ್ಕಾರದ ವಿವಿಧ ಇಲಾಖೆಯಲ್ಲಿನ ಹುದ್ದೆಗಳಿಗೆ ನೇಮಕ ಮಾಡುವ ಮೂಲಕ, ಕ್ರೀಡಾಪಟುಗಳಿಗೆ ಉತ್ತೇಜನ ಸರ್ಕಾರದ ಜವಾಬ್ದಾರಿ ಎಂದು ತಿಳಿಸಿದರು.



ಗ್ರಾಮೀಣ ಭಾಗದಲ್ಲಿ ಅನೇಕ ಪ್ರತಿಭಾವಂತ ಕ್ರೀಡಾಪಟುಗಳಿದ್ದು, ಅವರಿಗೆ ಸೂಕ್ತ ತರಬೇತಿ, ಆರ್ಥಿಕ ನೆರವು ಮತ್ತು ಸ್ಪರ್ಧಾತ್ಮಕ ಅವಕಾಶಗಳನ್ನು ಒದಗಿಸಿದರೆ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಲು ಸಾಧ್ಯವಾಗುತ್ತದೆ. ಅಲ್ಲದೆ, ರಾಜ್ಯದ ಸಾಂಪ್ರದಾಯಿಕ ಕ್ರೀಡೆಗಳನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ವಿಶೇಷ ಕಾರ್ಯಕ್ರಮ ರೂಪಿಸಬೇಕು.
■ **ಡಾ.ಜಿ.ಪರಮೇಶ್ವರ್, ಉಪಮುಖ್ಯಮಂತ್ರಿ**

ಭಕ್ತರಿಗೆ ದೇವಸ್ಥಾನದಲ್ಲಿ ಸೌಲಭ್ಯ ಕಲ್ಪಿಸಿ: ಮುಜರಾಯಿ ಇಲಾಖೆಯ ಆಡಳಿತಾತ್ಮಕ ವಿಚಾರಗಳ ಕುರಿತು ಸಮಗ್ರವಾಗಿ ಪರಿಶೀಲನೆ ನಡೆಸಿದರು. ರಾಜ್ಯದ ಮುಜರಾಯಿ ಇಲಾಖೆಗೆ ಒಳಪಡುವ ದೇವಸ್ಥಾನಗಳ ನಿರ್ವಹಣೆ, ಭಕ್ತರಿಗೆ ಒದಗಿಸಲಾಗುತ್ತಿರುವ ಸೌಕರ್ಯಗಳು ಹಾಗೂ ಇಲಾಖೆಯ ಕಾರ್ಯಕ್ಷಮತೆಯನ್ನು ಮತ್ತಷ್ಟು ಸುಧಾರಿಸಬೇಕು. ಖಾಲಿ ಇರುವ 235 ವಿವಿಧ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ತ್ವರಿತಗತಿಯಲ್ಲಿ ಪ್ರಾರಂಭಿಸಬೇಕು. ಈ ನಿಟ್ಟಿನಲ್ಲಿ ಇಲಾಖೆಯ ಎಲ್ಲಾ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ನಿಗದಿತ ಸಮಯದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಕಂದಾಯ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ, ಪ್ರಧಾನ ಕಾರ್ಯದರ್ಶಿ ನವೀನ್ ರಾಜ್ ಸಿಂಗ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಆಯುಕ್ತ ಕುಮಾರ್, ಸರ್ಕಾರಿ ವೈಮಾನಿಕ ತರಬೇತಿ ಶಾಲೆಯ ನಿರ್ದೇಶಕ ಬಸವರಾಜೇಂದ್ರ ಹಾಗೂ ಮುಜರಾಯಿ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಮೋದಿ ಯಶಸ್ಸಿಗೆ ಇಂದು ರಾಜ್ಯದೆಲ್ಲೆಡೆ ವಿಶೇಷ ಪೂಜೆ

• **ಬೆಂಗಳೂರು:** ಪ್ರಧಾನಮಂತ್ರಿ ಮೋದಿ ಅವರು ಚುನಾಯಿತ ಪ್ರಧಾನಿಗಳಾಗಿ ಕಳೆದ 12 ವರ್ಷಗಳಿಂದ ಪ್ರಧಾನ ಸೇವಕರಾಗಿ ಕೆಲಸ ನಿರ್ವಹಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಜೂ. 10ರಂದು ಇಡೀ ರಾಜ್ಯದಾದ್ಯಂತ ಎಲ್ಲ ದೇವಸ್ಥಾನಗಳಲ್ಲಿ ಮೋದಿ ಅವರ ಆಯುಸ್ಸು, ಆರೋಗ್ಯ ವೃದ್ಧಿಗಾಗಿ ಪೂಜೆ ನೆರವೇರಿಸಲಾಗುವುದೆಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ನಂದೀಶ್ ರೆಡ್ಡಿ ತಿಳಿಸಿದ್ದಾರೆ.



ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಅವರು ಮಲ್ಲೇಶ್ವರದಲ್ಲಿ ಪೂಜೆ ನೆರವೇರಿಸಲಿದ್ದಾರೆ. ಶಾಸಕ ಡಾ.ಸಿ. ಎನ್.ಅಶ್ವತ್ಥನಾರಾಯಣ ಉಪಸ್ಥಿತರಿರುವರು. ರಾಜ್ಯ ಉಸ್ತುವಾರಿ ಡಾ.ರಾಧಾ ಮೋಹನ್ ದಾಸ್ ಅಗ್ರವಾಲ್ ಅವರು ಗಾಂಧಿನಗರ ವಿಧಾನಸಭಾ ಕ್ಷೇತ್ರದಲ್ಲಿ, ಸಹ ಉಸ್ತುವಾರಿ ಸುಧಾಕರ ರೆಡ್ಡಿ ಮಲ್ಲೇಶ್ವರದಲ್ಲಿ ಪೂಜೆ ನೆರವೇರಿಸಲಿದ್ದಾರೆ. ವಿಪಕ್ಷ ನಾಯಕ ಆರ್.ಅಶೋಕ ಬನಶಂಕರಿಯಲ್ಲಿ ಪೂಜೆ ಸಲ್ಲಿಸುವರು ಎಂದರು.

ಮೋದಿ ಅವರು 4,398 ದಿನಗಳ ಯಶಸ್ವಿ ಆಡಳಿತದ ಮೂಲಕ ದೇಶದ ಜನರ ಸೇವೆ ಸಲ್ಲಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ಆಯುಸ್ಸು, ಆರೋಗ್ಯ ವೃದ್ಧಿಗಾಗಿ ಪೂಜೆ ನಡೆಸಲಾಗುತ್ತಿದೆ. ಶಾಸಕ ಗೋಪಾಲಯ್ಯ ಅವರು ಮಹಾಲಕ್ಷ್ಮಿ ಲೇಔಟ್‌ನ ಶ್ರೀ ವೀರಾಂಜನೇಯ ದೇವಸ್ಥಾನದಲ್ಲಿ, ವಿಧಾನ ಪರಿಷತ್ತಿನ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಶಾಂತಿನಗರ ಕೆಂಪಮ್ಮ ದೇವಸ್ಥಾನದಲ್ಲಿ ಪೂಜೆಯಲ್ಲಿ ಭಾಗವಹಿಸುವರು ಎಂದು ತಿಳಿಸಿದ್ದಾರೆ.

ಇಂದು ಮುಖ್ಯಮಂತ್ರಿ ಡಿಕೆಶಿ ದಿಲ್ಲಿಗೆ

• **ಬೆಂಗಳೂರು:** ಎರಡು ದಿನಗಳ ಕಾಲ ಸಿಎಂ ಡಿ.ಕೆ ಶಿವಕುಮಾರ್, ಡಿಸಿಎಂ ಪರಮೇಶ್ವರ್ ದಿಲ್ಲಿಗೆ ಪ್ರಯಾಣಿಸುತ್ತಿದ್ದು, ಬುಧವಾರ ಬೆಳಗ್ಗೆ ಬೆಂಗಳೂರಿನಿಂದ ತೆರಳಲಿರುವ ಅವರು, ಮಧ್ಯಾಹ್ನ ಎಐಸಿಸಿ ನಾಯಕರನ್ನು ಭೇಟಿ ಮಾಡಲಿದ್ದು, ಬಳಿಕ ಎಐಸಿಸಿ, ಎನ್‌ಎಸ್‌ಯುಐ, ಇಂಡಿಯನ್ ಯೂತ್ ಕಾಂಗ್ರೆಸ್ ಮತ್ತು ಆಲ್ ಇಂಡಿಯಾ ಮಹಿಳಾ ಕಾಂಗ್ರೆಸ್ ಕಚೇರಿಗೆ ಭೇಟಿ ನೀಡಲಿದ್ದಾರೆ. ಸಂಜೆ 7.30ಕ್ಕೆ ಹಿರಿಯ ಐಎಸ್ ಅಧಿಕಾರಿಗಳ ಜತೆಗೆ ಕರ್ನಾಟಕ ಭವನದಲ್ಲಿ ಭೋಜನ ಕೂಟದಲ್ಲಿ ಭಾಗಿಯಾಗಲಿರುವ ಅವರು, ಗುರುವಾರ ನೀತಿ ಆಯೋಗದ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ದೇವೇಗೌಡರ ಬಗ್ಗೆ ಕಾಳಜಿ ಹಾಸ್ಯಾಸ್ಪದ: ಬಿವೈವಿ

ಕಾಂಗ್ರೆಸ್‌ನ ಮೊಸಳೆ ಕಣ್ಣೀರು ಬೇಡ

• **ಬೆಂಗಳೂರು:** ದೇಶದ ಪ್ರಧಾನಿಯಾಗಿದ್ದ ಎಚ್.ಡಿ. ದೇವೇಗೌಡ ಅವರನ್ನು ಆ ಹುದ್ದೆಯಿಂದ ಕೆಳಗಿಳಿಸಿದ ಕುಖ್ಯಾತಿಯಿರುವ ಕಾಂಗ್ರೆಸ್‌ನವರು ಅವರ ಕುರಿತು ಮೊಸಳೆ ಕಣ್ಣೀರು ಸುರಿಸುವ ಅವಶ್ಯಕತೆ ಇಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, ಕರ್ನಾಟಕದ ಕಾಂಗ್ರೆಸ್ ಪಕ್ಷದ ಉಸ್ತುವಾರಿ ಸುರ್ಜೇವಾಲ ಹಾಗೂ ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಅವರು ದೇವೇಗೌಡರ ಕುರಿತು ಮೊಸಳೆ ಕಣ್ಣೀರು ಸುರಿಸುವ ಅಗತ್ಯ ಇಲ್ಲ ಎಂದಿದ್ದಾರೆ.

ಪ್ರಧಾನಮಂತ್ರಿ ಸ್ಥಾನವನ್ನು ಅಲಂಕರಿಸಿ, ಹೆಮ್ಮೆಯ ಕನ್ನಡಿಗ ಎನಿಸಿಕೊಂಡಿರುವ ಎಚ್.ಡಿ. ದೇವೇಗೌಡ ಅವರನ್ನು ಪ್ರಧಾನಿ ಪದವಿಯಿಂದ ಕೆಳಗಿಳಿಸಿದ ಕುಖ್ಯಾತಿ ಕಾಂಗ್ರೆಸ್ ಪಕ್ಷದ ಮೇಲಿರುವುದನ್ನು ಕಾಂಗ್ರೆಸ್ ಮುಂದಾಳುಗಳು ಮರೆತಂತಿದೆ. ಜನತಾದಳ ಪಕ್ಷವನ್ನು ಇಬ್ಭಾಗ ಮಾಡಲು ಯತ್ನಿಸಿದ್ದು ಕಾಂಗ್ರೆಸ್. ಈ ನೋವು ದೇವೇಗೌಡರನ್ನು ರಾಜಕೀಯ ಜೀವನದುದ್ದಕ್ಕೂ ಕಾಡಿದೆ. ಇಷ್ಟಾಗಿಯೂ ಕೊಳಕು ರಾಜಕಾರಣ ಮಾಡುವುದನ್ನು ನಿಲ್ಲಿಸದ ಕಾಂಗ್ರೆಸ್ಸಿಗರು, ದೇವೇಗೌಡರ ಕುರಿತು ಕೃತಕ ಕಾಳಜಿಯ ಮಾತನಾಡುತ್ತಿರುವ ಪರಿ ಹಾಸ್ಯಾಸ್ಪದವಾಗಿದೆ ಎಂದು ಟೀಕಿಸಿದ್ದಾರೆ.

ಬಿಜೆಪಿಯು ದೇವೇಗೌಡರನ್ನು ಅತ್ಯಂತ ಗೌರವದಿಂದ ನಡೆಸಿಕೊಂಡಿದೆ. ಭಾರತದ ಸಮಗ್ರತೆ ಉಳಿಯಬೇಕಾದರೆ, ಅಭಿವೃದ್ಧಿ ಹೊಂದಬೇಕಾದರೆ ಅದು ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತದಿಂದ ಮಾತ್ರ ಸಾಧ್ಯ ಎಂಬ ನಂಬಿಕೆಯಿಂದ ದೇವೇಗೌಡ ಅವರು ಬಿಜೆಪಿಯನ್ನು ಬೆಂಬಲಿಸಿ, ಎನ್‌ಡಿಎಗೆ ತಮ್ಮ ಜೆಡಿಎಸ್ ಪಕ್ಷವನ್ನು ಸೇರಿಸಿದ್ದಾರೆ. ಇದನ್ನು ಕಂಡು ಸಹಿಸಲಾಗದ ಸ್ಥಿತಿಯಲ್ಲಿರುವ ಕಾಂಗ್ರೆಸ್ಸಿಗರು ದೇವೇಗೌಡರ ಹೆಸರನ್ನು ಬಳಸಿಕೊಂಡು ರಾಜಕಾರಣ ಮಾಡಲು ಹೊರಟಿರುವುದು ನಾಚಿಕೆಗೇಡಿತನದ ಪರಮಾವಧಿ ಎಂದು ಆಕ್ಷೇಪಿಸಿದ್ದಾರೆ.

ಬಿರುಕು ಸೃಷ್ಟಿಗೆ ಕೈ ಹುನ್ನಾರ

ಪುಟ 1➡ ಅಧಿಕಾರಕ್ಕಾಗಿ ಇನ್ನೊಬ್ಬರ ಮನೆ ಬಾಗಿಲಿಗೆ ಹೋಗಿಲ್ಲ. ಸ್ವಾಭಿಮಾನಕ್ಕೆ ಧಕ್ಕೆಯಾದಾಗ ಪ್ರಧಾನಿ ಸ್ಥಾನವನ್ನೇ ಬಿಟ್ಟು ಬಂದರು ಎಂದರು. ಕಳೆದ ಬಾರಿ ದೇವೇಗೌಡರ ಅವಿರೋಧ ಆಯ್ಕೆಗೆ ಕಾಂಗ್ರೆಸ್ ಬೆಂಬಲ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಎಚ್‌ಡಿಕೆ, ದೇವೇಗೌಡರ ವಿರುದ್ಧ ಇನ್ನೊಬ್ಬ ಅಭ್ಯರ್ಥಿ ನಿಲ್ಲುವ ಅವಕಾಶ ಇರಲಿಲ್ಲ. ದೇವೇಗೌಡರು ಕಾಂಗ್ರೆಸ್ ಬೆಂಬಲದಿಂದ ರಾಜ್ಯಸಭೆಗೆ ಹೋಗಲಿಲ್ಲ. ಕಳೆದ ಬಾರಿ ದೇವೇಗೌಡರನ್ನು ರಾಜ್ಯಸಭೆಗೆ ಅಭ್ಯರ್ಥಿ ಮಾಡಿ, ನಾವು ಅಭ್ಯರ್ಥಿ ಹಾಕಲ್ಲ ಎಂದು ಯಡಿಯೂರಪ್ಪನವರೇ ಕರೆ ಮಾಡಿ ತಿಳಿಸಿದರು. ಅದಾದ ಬಳಿಕ ನಾನು ಒತ್ತಾಯ ಮಾಡಿ ಅಭ್ಯರ್ಥಿ ಮಾಡಿದ್ದು ಎಂದು ಹೇಳಿದರು. ದೇವೇಗೌಡರಿಗೆ ಟಿಕೆಟ್ ತಪ್ಪಿಸಿ ಒಕ್ಕಲಿಗರಿಗೆ ಬಿಜೆಪಿ ಅನ್ಯಾಯ ಮಾಡಿದೆ ಎಂಬ ಕಾಂಗ್ರೆಸ್ ಆರೋಪದಲ್ಲಿ ಹುರುಳಿಲ್ಲ. ಒಕ್ಕಲಿಗ ಮುಖ್ಯಮಂತ್ರಿ ಇರಬೇಕಾದರೆ ರಾಜ್ಯಸಭೆ ತಗೊಂಡು ಏನ್ಮಾಡ್ತೀರಾ ಎಂದು ಪ್ರಶ್ನಿಸಿದರು.

ಅವರ ಹಿರಿತನ, ಸೇವೆ ಉಲ್ಲೇಖಿಸಿ ಸಂಸತ್ತಿನಲ್ಲಿ ಸ್ವತಃ ಪ್ರಧಾನ ಮಂತ್ರಿಗಳೇ ಭಾವುಕವಾಗಿ ಮಾತನಾಡಿ ಅವರ ಕೊಡುಗೆ, ಸಾಧನೆಯನ್ನು ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ. ರಾಷ್ಟ್ರವನ್ನು ಮುನ್ನಡೆಸುವ ನಿಟ್ಟಿನಲ್ಲಿ ಅವರ ಮಾರ್ಗದರ್ಶನ ಸದಾ ನಮಗೆ ಬೇಕೆಂದು ಹೇಳಿದ್ದಾರೆ. ಈ ನಿಟ್ಟಿನಲ್ಲಿ ಅತ್ಯುತ್ತಮ ರಾಜಕೀಯ ಹಾಗೂ ವ್ಯಕ್ತಿಗತ ಗೌರವಗಳ ಬಾಂಧವ್ಯವಿರುವ ದೇವೇಗೌಡರೊಂದಿಗಿನ ಸಂಬಂಧಕ್ಕೆ ಹುಳಿ ಹಿಂಡುವ ಮಾತುಗಳು ಕಾಂಗ್ರೆಸ್ಸಿಗರ ವಿಕೃತ ನಡೆ ಎನ್ನುವುದನ್ನು ಕರ್ನಾಟಕದ ಜನತೆ ಅರ್ಥೈಸಿಕೊಳ್ಳದಷ್ಟು ಮುಗ್ಧರಲ್ಲ ಎನ್ನುವ ತಿಳುವಳಿಕೆ ಕಾಂಗ್ರೆಸ್ಸಿಗರಿಗಿರಲಿ ಎಂದು ತಿಳಿಸಿದ್ದಾರೆ.

ಭಾರತದಿಂದ 12 ಅಣ್ವಸ್ತ್ರ ನಿಯೋಜನೆ: ಸಿಪ್ರಿ ವರದಿ

ಪುಟ 1➡ **ದಾಸ್ತಾನು ಹೆಚ್ಚಳ:** ಭಾರತದ ಶಸ್ತ್ರಾಗಾರವನ್ನು ಈಗ ಕೇವಲ ದಾಸ್ತಾನು ಎಂದು ಪರಿಗಣಿಸುವ ಬದಲಿಗೆ ಕಾರ್ಯಾಚರಣೆಗೆ ನಿಯೋಜಿಸಲಾಗಿದೆ ಎಂದು ವರ್ಗೀಕರಿಸಲಾಗಿದೆ.

ಕಳೆದ ವರ್ಷಕ್ಕೆ ಹೋಲಿಸಿದರೆ ಭಾರತದ ಅಣ್ವಸ್ತ್ರಗಳ ಸಂಖ್ಯೆಯಲ್ಲಿ ಸಣ್ಣ ಪ್ರಮಾಣದ ಏರಿಕೆಯಾಗಿದ್ದು, ಜನವರಿ ಹೊತ್ತಿಗೆ ಈ ದಾಸ್ತಾನು ಸುಮಾರು 190ಕ್ಕೆ ತಲುಪಿದೆ ಎಂದು ವರದಿ ಅಂದಾಜಿಸಿದೆ. ಈ ಆಯುಧಗಳನ್ನು ನೆಲದಿಂದ ಉಡಾಯಿಸಬಹುದಾದ ಕ್ಷಿಪಣಿಗಳು, ಯುದ್ಧವಿಮಾನಗಳು ಮತ್ತು ಬ್ಯಾಲಿಸ್ಟಿಕ್ ಕ್ಷಿಪಣಿ ಜಲಾಂತರ್ಗಾಮಿಗಳಿಗೆ (ಎಸ್‌ಎಸ್‌ಬಿಎನ್), ಅಂದರೆ ತ್ರಿವಳಿ ರಕ್ಷಣಾ ವ್ಯವಸ್ಥೆಗೆ ನಿಯೋಜಿಸಲಾಗಿದೆ.

ಶಾಂತಿಕಾಲದ ಸನ್ನದ್ಧತೆ: ಭಾರತ ಇತ್ತೀಚೆಗೆ ಕ್ಷಿಪಣಿಗಳನ್ನು ಕ್ಯಾನಿಸ್ಟರ್‌ಗಳಲ್ಲಿ (ವಿಶೇಷ ಕವಚ) ಇರಿಸಲು ಮತ್ತು ಸಮುದ್ರದಲ್ಲಿ ಗಸ್ತುಗಳನ್ನು ನಡೆಸಲು ಮುಂದಾಗಿದೆ. ಭೂಗತ ಕ್ಷಿಪಣಿ ಸೈಲೋಗಳು ಮತ್ತು ಹೊಸ ಪರಮಾಣು ಜಲಾವೃತ ನೌಕೆಗಳಲ್ಲಿ ಸದಾ ಸಿದ್ಧವಿರುವ ಶಸ್ತ್ರಾಸ್ತ್ರಗಳನ್ನು ಇರಿಸುತ್ತಿರುವುದು ಶಾಂತಿಕಾಲದಲ್ಲೂ ಸನ್ನದ್ಧತೆ ಹೆಚ್ಚಿಸುವ ಸೂಚನೆಯಾಗಿದೆ.

ಬದಲಾಗದ ರಕ್ಷಣಾ ಸಿದ್ಧಾಂತ: ಈ ತಾಂತ್ರಿಕ ಬದಲಾವಣೆಗಳ ಹೊರತಾಗಿಯೂ ಭಾರತ ತನ್ನ 'ಮೊದಲು ಬಳಸುವುದಿಲ್ಲ' ಎಂಬ ಪರಮಾಣು ನೀತಿಗೆ ಬದ್ಧವಾಗಿದೆ. ಯಾವುದೇ ದೇಶದ ವಿರುದ್ಧ ಮೊದಲ ದಾಳಿ ನಡೆಸದಿರಲು ಬದ್ಧವಾಗಿರುವ ಭಾರತ, ತನ್ನ ಮೇಲಾಗುವ ಪರಮಾಣು ದಾಳಿಗೆ ಪ್ರತೀಕಾರ ತೀರಿಸಿಕೊಳ್ಳಲು ಮಾತ್ರ ಇದನ್ನು ಬಳಸಲಿದೆ. ಈ ಸಾಮರ್ಥ್ಯ ಕೇವಲ ದಾಳಿ ತಡೆಯುವ ಉದ್ದೇಶ ಹೊಂದಿದೆಯೇ ಹೊರತು ಶಸ್ತ್ರಾಸ್ತ್ರ ಸ್ಪರ್ಧೆಗೆ ಅಲ್ಲ ಎಂದು ವರದಿ ಸ್ಪಷ್ಟಪಡಿಸಿದೆ.

ಮೀನಾಕ್ಷಿ ನಟರಾಜನ್ ನಾಮಪತ್ರ ತಿರಸ್ಕೃತ

ಪುಟ 1➡ ಆದರೆ ಅಧಿಕಾರಿಗಳು ತಮ್ಮ ನಿರ್ಧಾರವನ್ನು ಬದಲಾಯಿಸಲಿಲ್ಲ, ಹೀಗಾಗಿ, ಆಯೋಗದ ಕಚೇರಿ ಮುಂದೆ ಕೈ ನಾಯಕರು ಪ್ರತಿಭಟನೆ ನಡೆಸಿದ್ದಾರೆ. ಕಾಂಗ್ರೆಸ್ ನಾಯಕರು, ಪ್ರಕರಣದ ಕುರಿತು ಕೇವಲ ನೋಟಿಸ್ ನೀಡಿರುವ ಹಂತದಲ್ಲಿದ್ದಾಗ ಅದನ್ನು ಬಹಿರಂಗಪಡಿಸುವ ಕಡ್ಡಾಯ ನಿಯಮ ಇಲ್ಲ ಎಂದು ವಾದಿಸಿದ್ದಾರೆ. ಆದಾಗ್ಯೂ ಚುನಾವಣಾಧಿಕಾರಿಗಳು ಮಾಹಿತಿಯನ್ನು ಮರೆಮಾಚಲಾಗಿದೆ ಎಂಬ ಆಕ್ಷೇಪವನ್ನು ಪರಿಗಣಿಸಿ ನಾಮಪತ್ರ ತಿರಸ್ಕರಿಸಿದ್ದಾರೆ. ಈ ಬೆಳವಣಿಗೆಯಿಂದ ಮಧ್ಯಪ್ರದೇಶದ ರಾಜ್ಯಸಭೆ ಚುನಾವಣೆ ಇನ್ನಷ್ಟು ಕುತೂಹಲ ಕೆರಳಿಸಿದ್ದು, ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಹೊಸ ರಾಜಕೀಯ ವಾಕ್ಸಮರಕ್ಕೂ ಕಾರಣವಾಗಿದೆ. ನಾಮಪತ್ರ ತಿರಸ್ಕಾರದ ವಿರುದ್ಧ ಕಾನೂನು ಹೋರಾಟ ನಡೆಸುವ ಸಾಧ್ಯತೆಯನ್ನು ಕಾಂಗ್ರೆಸ್ ಪರಿಶೀಲಿಸುತ್ತಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಹತಾಶ ಪಾಕ್‌ನಿಂದ ಪಿಒಕೆನಲ್ಲಿ ಕ್ರೌರ್ಯ

ಪುಟ 1➡ ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಪೊಲೀಸ್ ದೌರ್ಜನ್ಯ ಮಿತಿಮೀರಿದ್ದು, ವರದಿಗಳನ್ನು ನೋಡಿದ್ದೇವೆ. ವರದಿಗಳ ಪ್ರಕಾರ, ಹಲವು ಅಮಾಯಕ ನಾಗರಿಕರು ಮತ್ತು ಪ್ರತಿಭಟನಾಕಾರರು ಗುಂಡಿನ ದಾಳಿಯಲ್ಲಿ ಕೊಲ್ಲಲ್ಪಟ್ಟಿದ್ದಾರೆ, ಇನ್ನೂ ಹಲವರು ಗಾಯಗೊಂಡಿದ್ದಾರೆಂಬ ಸತ್ಯವನ್ನು ಜೈಸ್ವಾಲ್ ಉಲ್ಲೇಖಿಸಿದ್ದಾರೆ.

ಪಾಕ್ ರಾಜಕೀಯ ಕುತಂತ್ರ: ಪಿಒಕೆ ಮೇಲೆ ರಾಜಕೀಯ ನಿಯಂತ್ರಣ ಹೇರುವ ಉದ್ದೇಶದಿಂದ ಜುಲೈ 27ರಂದು ನಡೆಯಲಿರುವ ಶಾಸನಸಭೆ ಚುನಾವಣೆಯಲ್ಲಿ ನಿರಾಶ್ರಿತರಿಗೆ 12 ಸ್ಥಾನಗಳನ್ನು ಕಾಯ್ದಿರಿಸಲು ಪಾಕ್ ಯೋಜನೆ ಹಾಕಿತ್ತು. ಪಿಒಕೆನಲ್ಲಿ ಮಾನವ ಹಕ್ಕುಗಳನ್ನು ಪ್ರತಿಪಾದಿಸುವ ಜೆಎಎಸಿಯನ್ನೇ ಭಯೋತ್ಪಾದಕ ಸಂಘಟನೆಯೆಂದು ಘೋಷಿಸಿದ ಪಾಕ್ ಸರ್ಕಾರ, ಜೂ.6ರಂದು ಸಂಘಟನೆಯ ಮೇಲೆ ನಿಷೇಧ ಹೇರಿತ್ತು. ಜೂ.7ರಿಂದ ಜೆಎಎಸಿ ಸದಸ್ಯರು ಚುನಾವಣೆ ಹಿನ್ನೆಲೆಯಲ್ಲಿ ಬೀದಿ ಗಿಳಿದು ಪ್ರತಿಭಟನೆ ಆರಂಭಿಸಿದ್ದು, ಹಿಂಸಾಚಾರದಲ್ಲಿ 30 ಪ್ರತಿಭಟನಾಕಾರರು ಮೃತಪಟ್ಟಿದ್ದು, 200ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

ಪರಿವರ್ತನೆಯ ದಶಕ

ಪುಟ 1➡ 'ಸೇವೆ, ಸುಶಾಸನ ಮತ್ತು ಬಡವರ ಕಲ್ಯಾಣ' ಎಂಬ ಧ್ಯೇಯದೊಂದಿಗೆ ಸರ್ಕಾರ ಕಾರ್ಯನಿರ್ವಹಿಸಿದ್ದು, ದೇಶದ ಪ್ರತಿ ವರ್ಗದ ಜನರ ಬದುಕಿನಲ್ಲಿ ಸಕಾರಾತ್ಮಕ ಬದಲಾವಣೆ ತರಲು ಪ್ರಯತ್ನಿಸಿದೆ ಎಂದು ಹೇಳಿದರು. ಕಳೆದ 12 ವರ್ಷಗಳಲ್ಲಿ ಭಾರತ ಜಾಗತಿಕ ಮಟ್ಟದಲ್ಲಿ ತನ್ನ ಪ್ರಭಾವವನ್ನು ಹೆಚ್ಚಿಸಿಕೊಂಡಿದ್ದು, ವಿಶ್ವದ ಪ್ರಮುಖ ಆರ್ಥಿಕ ಶಕ್ತಿಗಳ ಸಾಲಿನಲ್ಲಿ ಸ್ಥಾನ ಗಿಟ್ಟಿಸಿಕೊಂಡಿದೆ ಎಂದು ಅವರು ಅಭಿಪ್ರಾಯಪಟ್ಟರು.

ಕೋಟ್ಯಂತರ ಜನರಿಗೆ ಉಚಿತ ಆಹಾರ ಧಾನ್ಯ ವಿತರಣೆ, ಪ್ರಧಾನ ಮಂತ್ರಿ ಜನಧನ್ ಯೋಜನೆ ಮೂಲಕ ಬ್ಯಾಂಕಿಂಗ್ ಸೇವೆಗಳ ವ್ಯಾಪಕ ವಿಸ್ತರಣೆ, ಆಯುಷ್ಮಾನ್ ಭಾರತ್ ಯೋಜನೆಯಲ್ಲಿ ಆರೋಗ್ಯ ರಕ್ಷಣೆ, ಪ್ರಧಾನಮಂತ್ರಿ ಆವಾಸ್ ಯೋಜನೆಯಲ್ಲಿ ಮನೆಗಳ ನಿರ್ಮಾಣ ಹಾಗೂ ಜಲ್ ಜೀವನ್ ಮಿಷನ್ ಮೂಲಕ ಗ್ರಾಮೀಣ ಮನೆಗಳಿಗೆ ಕುಡಿಯುವ ನೀರಿನ ಸಂಪರ್ಕ ಒದಗಿಸಿರುವುದನ್ನು ಪ್ರಧಾನಿ ಪ್ರಮುಖ ಸಾಧನೆಗಳಾಗಿ ಉಲ್ಲೇಖಿಸಿದರು.

ಭಾರೀ ತೆರಿಗೆ ವಿನಾಯಿತಿ: ಮಧ್ಯಮ ವರ್ಗದ ಹಿತದೃಷ್ಟಿಯಿಂದ ಕೇಂದ್ರ ಸರ್ಕಾರ ಹಲವು ನಿರ್ಧಾರಗಳನ್ನು ಕೈಗೊಂಡಿದೆ ಎಂದು ಹೇಳಿದ ಮೋದಿ, ಹೊಸ ತೆರಿಗೆ ವ್ಯವಸ್ಥೆಯಲ್ಲಿ ವಾರ್ಷಿಕ 12.75 ಲಕ್ಷ ರೂ.ವರೆಗೆ ಆದಾಯ ಹೊಂದಿರುವವರಿಗೆ ಪರಿಣಾಮಕಾರಿ ತೆರಿಗೆ ವಿನಾಯಿತಿ ನೀಡಿರುವುದನ್ನು ವಿಶೇಷವಾಗಿ ಪ್ರಸ್ತಾಪಿಸಿದರು. ಇದರಿಂದ ಮಧ್ಯಮ ವರ್ಗದ ಕುಟುಂಬಗಳ ಉಳಿತಾಯ ಹೆಚ್ಚಾಗಲಿದ್ದು, ದೇಶೀಯ ಬಳಕೆ ಮತ್ತು ಹೂಡಿಕೆ ಚಟುವಟಿಕೆಗಳಿಗೆ ಉತ್ತೇಜನ ಸಿಗಲಿದೆ ಎಂದರು. ಡಿಜಿಟಲ್ ಇಂಡಿಯಾ ಅಭಿಯಾನ ದೇಶದ ಆಡಳಿತ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆ ತಂದಿದೆ ಎಂದು ಪ್ರಧಾನಿ ಹೇಳಿದರು. ಯುಪಿಐ ಆಧಾರಿತ ಡಿಜಿಟಲ್ ವಹಿವಾಟು ವಿಶ್ವದ ಗಮನ ಸೆಳೆದಿದ್ದು, ಇಂದು ಭಾರತ ಜಾಗತಿಕ ಡಿಜಿಟಲ್ ಪಾವತಿ ಕ್ಷೇತ್ರದಲ್ಲಿ ಮುಂಚೂಣಿಯ ರಾಷ್ಟ್ರವಾಗಿ ಹೊರಹೊಮ್ಮಿದೆ. ಗ್ರಾಮೀಣ ಪ್ರದೇಶಗಳಲ್ಲಿಯೂ ಡಿಜಿಟಲ್ ಸೇವೆ ವಿಸ್ತರಿಸಿರುವುದರಿಂದ ಪಾರದರ್ಶಕತೆ ಮತ್ತು ಸುಗಮ ಸೇವಾ ವಿತರಣೆಗೆ ನೆರವಾಗಿದೆ ಎಂದು ಅವರು ತಿಳಿಸಿದರು.

ಭರಪೂರ ಮೂಲಸೌಕರ್ಯ

ಪುಟ 1➡ ಹೊಸ ರಾಷ್ಟ್ರೀಯ ಹೆದ್ದಾರಿಗಳು, ವಂದೇ ಭಾರತ್ ರೈಲುಗಳ ಜಾಲ, ಆಧುನಿಕ ವಿಮಾನ ನಿಲ್ದಾಣಗಳು, ಬಂದರುಗಳ ವಿಸ್ತರಣೆ ಹಾಗೂ ವೇಗದ ಸಂಪರ್ಕ ವ್ಯವಸ್ಥೆಗಳು ದೇಶದ ಆರ್ಥಿಕ ಬೆಳವಣಿಗೆಗೆ ಬಲ ತುಂಬಿವೆ. ಈ ಯೋಜನೆಗಳು ಉದ್ಯೋಗ ಸೃಷ್ಟಿ ಹಾಗೂ ಹೂಡಿಕೆ ಆಕರ್ಷಣೆಯಲ್ಲಿಯೂ ಮಹತ್ವದ ಪಾತ್ರ ವಹಿಸಿವೆ ಎಂದು ಅವರು ಹೇಳಿದರು. ಮಹಿಳೆಯರ ಸಬಲೀಕರಣಕ್ಕೂ ಸರ್ಕಾರ ವಿಶೇಷ ಆದ್ಯತೆ ನೀಡಿದೆ ಎಂದು ಮೋದಿ ಹೇಳಿದರು. ಉಜ್ವಲಾ ಯೋಜನೆ, ಮಾತೃತ್ವ ಸೌಲಭ್ಯಗಳ ವಿಸ್ತರಣೆ, ಮಹಿಳಾ ಸ್ವಸಹಾಯ ಸಂಘಗಳಿಗೆ ನೆರವು ಹಾಗೂ ಮಹಿಳಾ ಮೀಸಲಾತಿ ಮಸೂದೆ ಜಾರಿಯಂತಹ ಕ್ರಮಗಳು ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಿವೆ ಎಂದು ಅಭಿಪ್ರಾಯಪಟ್ಟರು.

ವಾರಕ್ಕೊಂದು ದಿನ ಮೌಲ್ಯಶಿಕ್ಷಣ

ಪುಟ 1➡ ಕಳೆದ ಶೈಕ್ಷಣಿಕ ವರ್ಷದ ದ್ವಿತೀಯಾರ್ಧದಲ್ಲಿ, ಪ್ರಾಯೋಗಿಕವಾಗಿ ಆರಂಭಗೊಂಡಿದ್ದ ಮೌಲ್ಯ ಶಿಕ್ಷಣಕ್ಕೆ ಈ ವರ್ಷ ಮತ್ತಷ್ಟು ಬಲ ನೀಡಲಾಗಿದ್ದು, ಈ ಹಿಂದೆ ಡಿಜಿಟಲ್ ಪುಸ್ತಕಗಳ ಮೂಲಕ ಬೋಧನೆ ನಡೆದಿದ್ದರೆ, ಇದೀಗ ಮುದ್ರಿತ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಲಾಗುತ್ತಿದೆ. ಶಾಲಾ ವೇಳಾಪಟ್ಟಿಯಲ್ಲಿಯೇ ಪ್ರತ್ಯೇಕ ಅವಧಿಯನ್ನು ಮೀಸಲಿಡುವ ಮೂಲಕ ಇದನ್ನು ಶಿಕ್ಷಣದ ಅವಿಭಾಜ್ಯ ಅಂಗವನ್ನಾಗಿ ರೂಪಿಸಲಾಗಿದೆ.

ಮೌಲ್ಯ ಶಿಕ್ಷಣವನ್ನು ಪ್ರತ್ಯೇಕ ವಿಷಯವನ್ನಾಗಿ ಬೋಧಿಸುವ ಬದಲಿಗೆ ಗಣಿತ, ವಿಜ್ಞಾನ ಮತ್ತು ಸಮಾಜವಿಜ್ಞಾನ ಪಠ್ಯಗಳೊಂದಿಗೆ ಸೇರಿರುವುದು ಈ ಯೋಜನೆಯ ವಿಶೇಷತೆ. ಉದಾಹರಣೆಗೆ ಭಾಷಾ ಪಾಠಗಳಲ್ಲಿ ಗೌರವ ಮತ್ತು ವೈವಿಧ್ಯತೆ ಕುರಿತು ಚಟುವಟಿಕೆಗಳನ್ನು ಸೇರಿಸಲಾಗಿದೆ. ಗಣಿತದಲ್ಲಿ ಹೊಣೆಗಾರಿಕೆ ಎಂಬ ಉಪಮೌಲ್ಯದೊಂದಿಗೆ ಜೀವನ ಮೌಲ್ಯಗಳನ್ನು ಸೇರ್ಪಡಿಸುವ ಚಟುವಟಿಕೆಗಳು ಹೊಂದಿವೆ. ಇದರೊಂದಿಗೆ ವಿದ್ಯಾರ್ಥಿಗಳಲ್ಲಿ ಮೌಲ್ಯ ಶಿಕ್ಷಣದಿಂದ ಉಂಟಾಗುವ ಸಕಾರಾತ್ಮಕ ವರ್ತನಾ ಬದಲಾವಣೆಗಳನ್ನು ಅವಲೋಕಿಸಿ ಅದನ್ನು ಸಮಗ್ರ ಪ್ರಗತಿ ಪತ್ರದಲ್ಲಿ ದಾಖಲಿಸಬೇಕಿದೆ.

ಏಕೆ ಅಗತ್ಯವಾಯಿತು ಮೌಲ್ಯ ಶಿಕ್ಷಣ?: ಇತ್ತೀಚಿನ ವರ್ಷಗಳಲ್ಲಿ ಶಾಲಾ ಹಂತದಲ್ಲಿಯೇ ಶಿಸ್ತು ಸಮಸ್ಯೆಗಳು, ಸೈಬರ್ ಕಿರುಕುಳ, ಮಾದಕ ವಸ್ತುಗಳ ಆಕರ್ಷಣೆ, ಹಿಂಸಾತ್ಮಕ ಪ್ರವೃತ್ತಿಗಳು ಮತ್ತು ಸಾಮಾಜಿಕ ಜವಾಬ್ದಾರಿಯ ಕೊರತೆ ಕಂಡುಬರುತ್ತಿದೆ. ಕೇವಲ ಶೈಕ್ಷಣಿಕ ಸಾಧನೆಗಳಿಂದ ಸಮಾಜಕ್ಕೆ ಉತ್ತಮ ನಾಗರಿಕರನ್ನು ರೂಪಿಸಲು ಸಾಧ್ಯವಿಲ್ಲ, ಎಂಬ ಅಭಿಪ್ರಾಯವೂ ವ್ಯಕ್ತವಾಗುತ್ತಿದೆ. ಅದರೊಂದಿಗೆ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಕೂಡ ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆ, ವ್ಯಕ್ತಿತ್ವ ವಿಕಸನ ಮತ್ತು ಮೌಲ್ಯಾಧಾರಿತ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿದೆ. ಈ ಶಿಫಾರಸುಗಳ ಅನುಸಾರ ರಾಜ್ಯ ಸರ್ಕಾರವೂ ಮೌಲ್ಯ ಶಿಕ್ಷಣವನ್ನು ಶಿಕ್ಷಣದ ಅವಿಭಾಜ್ಯ ಅಂಗವನ್ನಾಗಿ ಮಾಡಲು ಮುಂದಾಗಿದೆ.

234 ಚಟುವಟಿಕೆಗಳ ಮೌಲ್ಯ ಶಿಕ್ಷಣ ಬೋಧನೆ: ಮೌಲ್ಯ ಶಿಕ್ಷಣದ ಅಡಿಯಲ್ಲಿ ಗೌರವ, ಪ್ರಾಮಾಣಿಕತೆ ಮತ್ತು ನಿಷ್ಠೆ, ಭಾವನಾತ್ಮಕ ಮತ್ತು ಸ್ಥಿತಿಸ್ಥಾಪಕತ್ವ, ಅನುಭೂತಿ, ವೈವಿಧ್ಯತೆ ಸಮತೆ ಮತ್ತು ಒಳಗೊಳ್ಳುವಿಕೆ, ಸುರಕ್ಷತೆ ಸೇರಿ ಒಟ್ಟು 10 ಬಹುಮುಖ್ಯ ಮೌಲ್ಯಗಳನ್ನು ಹೊಂದಿದೆ. ಈ ಮೌಲ್ಯಗಳನ್ನು ವಿದ್ಯಾರ್ಥಿಗಳಿಗೆ ಅರ್ಥವಾಗುವ ರೀತಿಯಲ್ಲಿ ಕಲಿಸಲು 234 ಚಟುವಟಿಕೆಗಳನ್ನು ರೂಪಿಸಲಾಗಿದೆ. ಪ್ರತಿಯೊಂದರ ಮೌಲ್ಯವನ್ನು ಹಲವು ಉಪಮೌಲ್ಯಗಳಾಗಿ ವಿಂಗಡಿಸಿ, ತರಗತಿವಾರು ಮತ್ತು ವಯೋಮಾನದ ಅನುಗುಣವಾಗಿ ಚಟುವಟಿಕೆಗಳನ್ನು ಸಿದ್ಧಪಡಿಸಲಾಗಿದೆ.

ಕಿರುಸುದ್ದಿ

ಸೂರಜ್ ಹೆಗ್ಡೆ ನಿಧನ: ಕಾಂಗ್ರೆಸ್ ಶ್ರದ್ಧಾಂಜಲಿ



• **ಕೋಲಾರ:** ಹೃದಯಾಘಾತದಿಂದ ವಿಧಿವಶರಾದ ದೇವರಾಜ ಅರಸು ಅವರ ಮೊಮ್ಮಗ ಹಾಗೂ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷ ಸೂರಜ್ ಹೆಗ್ಡೆ ಅವರಿಗೆ ಜಿಲ್ಲಾ ಕಾಂಗ್ರೆಸ್ ಸಮಿತಿ ಶ್ರದ್ಧಾಂಜಲಿ ಅರ್ಪಿಸಿತು.

ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಶ್ರದ್ಧಾಂಜಲಿ ಅರ್ಪಿಸಿ ಮಾತನಾಡಿದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಲಕ್ಷ್ಮೀನಾರಾಯಣ, ಸರಳತೆ,ಸಜ್ಜನಿಕೆಗೆ ಹೆಸರಾಗಿದ್ದ ಸೂರಜ್ ಹೆಗ್ಡೆ ಅವರು, ಕಾಂಗ್ರೆಸ್ ಪಕ್ಷದ ನಿಷ್ಠಾವಂತ ನಾಯಕರಾಗಿದ್ದರು ಎಂದು ಗುಣಗಾನ ಮಾಡಿದರು.

ಕಾಂಗ್ರೆಸ್ ಎಸ್ಸಿಘಟಕದ ಜಿಲ್ಲಾಧ್ಯಕ್ಷ ಕೆ.ಜಯದೇವ್ ಮಾತನಾಡಿ, ಪಕ್ಷದ ವಿವಿಧ ಹುದ್ದೆಯಲ್ಲಿ ಕೆಲಸ ಮಾಡಿದ ಸೂರಜ್ ಅವರು, ಸೋನಿಯಾ ಗಾಂಧಿ ಕುಟುಂಬಕ್ಕೆ ಹತ್ತಿರವಾಗಿದ್ದರು, ಅವರ ನಡೆ,ಸರಳತೆ, ತಾಳ್ಮೆ ಕಾಂಗ್ರೆಸ್ ಕಾರ್ಯಕರ್ತರಿಗೆ ಆದರ್ಶವಾಗಿದೆ ಎಂದರು.

ಮಾಜಿ ಮುಖ್ಯಮಂತ್ರಿಯಾಗಿ, ದೀನದಲಿತರ ನಾಯಕರಾಗಿ ರಾಜ್ಯದಲ್ಲಿ ಹೆಸರು ಮಾಡಿದ್ದ ಅರಸು ಅವರ ಮೊಮ್ಮಗ ಎನ್ನುವುದು ಮತ್ತೊಂದು ಹೆಮ್ಮೆಯಾಗಿತ್ತು ಎಂದ ಅವರು, ಅವರ ಅಗಲಿಕೆಯಿಂದ ಕಾಂಗ್ರೆಸ್ ಪಕ್ಷಕ್ಕೆ ಅಪಾರ ನಷ್ಟವಾಗಿದೆ ಎಂದು ತಿಳಿಸಿದರು.

ಕಾಂಗ್ರೆಸ್ ಜಿಲ್ಲಾ ಕಾರ್ಯಾಧ್ಯಕ್ಷ ಊರುಬಾಗಿಲು ಶ್ರೀನಿವಾಸ್ ಮಾತನಾಡಿ, ಸೂರಜ್ ಹೆಗ್ಡೆ ಅವರು ಪಕ್ಷ ಸಂಘಟನೆಗೆ ನೀಡಿದ ಕೊಡುಗೆ ಅಪಾರವಾಗಿದ್ದು, ಅವರ ಆದರ್ಶವನ್ನು ಪಾಲಿಸಿಕೊಂಡು ಪಕ್ಷವನ್ನು ಮುನ್ನಡೆಸೋಣ ಎಂದು ಕಂಬನಿ ಮಿಡಿದರು.

ಮುಖಂಡರಾದ ಅಹಿಂದ ಒಬಿಸಿ ಮಂಜುನಾಥ್, ವೆಂಕಟಪತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಪ್ಸರ್, ಸಂಪತ್ ಕುಮಾರ್,ನಾಗರಾಜ್ ಮತ್ತಿತರರಿದ್ದರು.

ನಾಪತ್ತೆಯಾಗಿದ್ದ ಬಾಲಕಿ ಶವವಾಗಿ ಪತ್ತೆ

• **ಕೋಲಾರ:** ಕಳೆದ ಶುಕ್ರವಾರದಿಂದ ನಾಪತ್ತೆಯಾಗಿದ್ದ ಬಾಲಕಿಯೋರ್ವಳ ಶವ ತಾಲೂಕಿನ ಶ್ರೀರಾಮಪುರ ಹೊರವಲಯದ ಬಾವಿಯಲ್ಲಿ ಮಂಗಳವಾರ ಬೆಳಗ್ಗೆ ಪತ್ತೆಯಾಗಿದೆ.ತಾಲೂಕಿನ ನೆರ್ನಹಳ್ಳಿ ಗ್ರಾಮದ ಸುಕನ್ಯಾ (16) ಮೃತ ಬಾಲಕಿಯಾಗಿದ್ದಾಳೆ. ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದ ಸುಕನ್ಯಾ ಪಿಯು ವ್ಯಾಸಂಗ ಮಾಡಲು ಕಾಲೇಜು ವಿಚಾರವಾಗಿ ಪೋಷಕರೊಂದಿಗೆ ಜಗಳ ಮಾಡಿಕೊಂಡಿದ್ದಳು. ಬಳಿಕ ಬಾವಿಯಲ್ಲಿ ಮೃತದೇಹ ಪತ್ತೆಯಾಗಿದ್ದು, ಪೊಲೀಸರು ಕಾರ್ಯಾಚರಣೆ ನಡೆಸಿ ಮರಣೋತ್ತರ ಪರೀಕ್ಷೆಗಾಗಿ ಎಸ್‌ಎನ್‌ಆರ್ ಜಿಲ್ಲಾಸ್ಪತ್ರೆಗೆ ರವಾನಿಸಿ, ಪೋಷಕರಿಗೆ ಹಸ್ತಾಂತರರಿಸಿದ್ದಾರೆ.

ನೇರ ಸಂದರ್ಶನ

• **ಕೋಲಾರ:**ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ, ಅಂತರಗಂಗೆ ರಸ್ತೆ, ಕೋಲಾರ ಇಲ್ಲಿ ಜೂನ್ 12 ರಂದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ರವರೆಗೆ ವಿವಿಧ ಖಾಸಗಿ ಸಂಸ್ಥೆಯವರು ತಮ್ಮ ಸಂಸ್ಥೆಗಳಲ್ಲಿ ಲಭ್ಯವಿರುವ ಖಾಲಿ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳನ್ನು ನೇರ ಸಂದರ್ಶನದ ಮೂಲಕ ಆಯ್ಕೆ ಮಾಡಿಕೊಳ್ಳಲಿದ್ದಾರೆ. ವಿವಿಧ ವಿದ್ಯಾರ್ಹತೆಯ ಆಸಕ್ತ ಅಭ್ಯರ್ಥಿಗಳು ತಮ್ಮ ಎಲ್ಲಾ ವಿದ್ಯಾರ್ಹತೆಗೆ ಸಂಬಂಧಿಸಿದ ಅಂಕಪಟ್ಟಿಗಳ ಜೆರಾಕ್ಸ್ ಪ್ರತಿ, ಆಧಾರ್ ಕಾರ್ಡ್, ರೆಸ್ಯೂಮ್ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ 4 ಭಾವಚಿತ್ರಗಳೊಂದಿಗೆ ನೇರ ಸಂದರ್ಶನದಲ್ಲಿ ಪಾಲ್ಗೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ: 7353232456/9740154413 ಗಳನ್ನು ಅಥವಾ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದೆಂದು ತಿಳಿಸಿದ್ದಾರೆ.

ತಗ್ಗಹಳ್ಳಿಯಲ್ಲಿ ನೂತನ ಶಾಲಾ ಕೊಠಡಿ ಉದ್ಘಾಟಿಸಿದ ಕೇಂದ್ರ ಸಚಿವ ಎಚ್‌ಡಿಕೆ ಹೇಳಿಕೆ

ಕೈ ನಾಯಕರು ನಮ್ಮನ್ನು ಸಂಪರ್ಕಿಸಿಲ್ಲ



• **ಮಂಡ್ಯ:** ಕಾಂಗ್ರೆಸ್‌ನ ಯಾವ ನಾಯಕರನ್ನೂ ನಾನು ಸಂಪರ್ಕಿಸಿಲ್ಲ, ಅವರೂ ನನ್ನ ಸಂಪರ್ಕದಲ್ಲಿಲ್ಲ ಎಂದ ಮಾಜಿ ಸಚಿವ ಜಮೀರ್ ಅಹಮದ್ ಜತೆ ಸಂಪರ್ಕ ವಿಚಾರಕ್ಕೆ ಸಂಬಂಧಿಸಿದಂತೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಪ್ರತಿಕ್ರಿಯೆ ನೀಡಿದರು.

ತಾಲೂಕಿನ ತಗ್ಗಹಳ್ಳಿ ಗ್ರಾಮದಲ್ಲಿ ಮಿಚಲಿನ್ ಇಂಡಿಯಾ ಪ್ರೈ.ಲಿ.ನ ಸಿಎಸ್‌ಆರ್ ಅನುದಾನ 32.50 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣವಾಗಿರುವ ಶಾಲಾ ಕೊಠಡಿಗಳನ್ನು ಉದ್ಘಾಟಿಸಿ ನಂತರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ವಿಧಾನ ಪರಿಷತ್‌ಗೆ ಜಾತ್ಯತೀತ ಜನತಾದಳದಿಂದ ಅಭ್ಯರ್ಥಿ ಹಾಕಿರುವ ವಿಚಾರವಾಗಿ ಮಾತನಾಡಿದ ಅವರು, ನಮಗು ಎರಡು ಮತ ಬೇಕು, ಕಾಂಗ್ರೆಸ್‌ನವರಿಗೂ ಎರಡು ಮತಬೇಕು. ಇದರಲ್ಲಿ ಯಾವುದೇ ಗೇಮ್ ಪ್ಲಾನ್ ಇಲ್ಲ, ನಾವು ಬಿಜೆಪಿಯಿಂದ ಉಚ್ಚಾಟನೆಯಾಗಿರುವ ಬಸನಗೌಡ ಪಾಟೀಲ್ ಯತ್ನಾಳ್ ಅವರನ್ನು ಕೇಳುತ್ತೇವೆ. ಕಾಂಗ್ರೆಸ್‌ನವರಿಗೆ ಹಣ ಬಲ ಇದೆ. ನೋಡೋಣ ಏನಾಗುತ್ತೆ ಎಂದರು.

ಕುಮಾರಸ್ವಾಮಿ ಸಲಹೆ ಕೇಳುವುದಾಗಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೇಳಿದ್ದಾರಲ್ಲ, ನೀವು ಸಲಹೆ ಕೊಡುತ್ತೀರಾ ಎಂಬ ಪ್ರಶ್ನೆಗೆ ಉತ್ತರಿಸಿದ ಸಚಿವ ಎಚ್‌ಡಿಕೆ, ನಾನೇನು ಸಲಹೆ ನೀಡಲಿ, ಕುಮಾರಸ್ವಾಮಿ ಎರಡೂ ಬಾರಿ ಮುಖ್ಯಮಂತ್ರಿಯಾಗಿ ಏನು ಹರಿದಿದ್ದಾರೆ ಎಂದಿದ್ದಾರೆ. ಎಲ್ಲದಕ್ಕೂ ಸಾಕ್ಷಿ ಗುಡ್ಡೆ ಕೇಳುತ್ತಾರೆ. ನಾನೇನು ಹರಿದಿಲ್ಲ, ನನ್ನತ್ರ ಏನು ಸಲಹೆ ಕೇಳ್ತಾರೆ? ಅವರಿಗೆ ಪೋಟೋ ಬೇಕಿದೆ, ಅದಕ್ಕೆ ಎಲ್ಲೆಡೆ ಹೋಗ್ತಿದ್ದಾರೆ. 'ಅತಿ ವಿನಯಂ ಧೂರ್ತ ಲಕ್ಷಣಂ' ಎಂದು ಡಿಕೆಶಿ ಬಗ್ಗೆ ವ್ಯಂಗ್ಯವಾಡಿದರು.

ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಿರುವುದರಿಂದ ಒಕ್ಕಲಿಗರ ಮತದ ಮೇಲೆ ಯಾವುದೇ ವ್ಯತ್ಯಾಸವಾಗುವುದಿಲ್ಲ, ನಮ್ಮ ಮತ ನಮಗೆ ಬೀಳುತ್ತೆ, ಅವರ ಮತ ಅವರಿಗೆ ಬೀಳುತ್ತೆ. ಸಿಎಂ ಆಗಿದ್ದರಿಂದ ಯಾವುದೇ ವ್ಯತ್ಯಾಸ ಆಗುವುದಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಭಾರತದಲ್ಲಿ ಮಾತ್ರ ಆಗಿರುವುದಲ್ಲ, ವಿಶ್ವದ ಎಲ್ಲ ದೇಶಗಳಲ್ಲಿಯೂ ಈ ಪರಿಸ್ಥಿತಿ ಬಂದಿದೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.ಈ ಸಂದರ್ಭದಲ್ಲಿ ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದ್ದಿದ್ದರೆ ಏನು ಮಾಡ್ತಾ ಇದ್ದರು. ಕಾಂಗ್ರೆಸ್‌ನವರು ಅಧಿಕಾರದಲ್ಲಿದ್ದಾಗ ಎಲ್ಲದಕ್ಕೂ ಬೆಲೆ ಏರಿಸಿದ್ದಾರೆ ಎಂದರು. ಈ ಸಂದರ್ಭದಲ್ಲಿ ಶಾಸಕ ಎಚ್.ಟಿ. ಮಂಜು, ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ, ಜಾ.ದಳ ಜಿಲ್ಲಾಧ್ಯಕ್ಷ ಡಿ.ರಮೇಶ್, ಮುಖಂಡ ಬಿ.ಆರ್. ರಾಮಚಂದ್ರ ಇತರರಿದ್ದರು.

ಶಿಕ್ಷಕರು ಮಕ್ಕಳನ್ನು ಸತ್ಪ್ರಜೆಗಳನ್ನಾಗಿ ಮಾಡಲಿ

• **ಮಂಡ್ಯ:** ಕುಟುಂಬ ಬಾಂಧವ್ಯಗಳು ನಶಿಸುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಶಿಕ್ಷಕರು ವಿದ್ಯಾರ್ಥಿಗಳನ್ನು ಭವಿಷ್ಯದ ಸತ್ಪ್ರಜೆಗಳನ್ನಾಗಿ ಮಾಡಿದರೆ, ಅವರು ತಮ್ಮ ಭವಿಷ್ಯ ರೂಪಿಸಿಕೊಳ್ಳುತ್ತಾರೆ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಸಲಹೆ ನೀಡಿದರು.

ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ತಗ್ಗಹಳ್ಳಿ ಗ್ರಾಮದಲ್ಲಿ ಮಿಚಲಿನ್ ಇಂಡಿಯಾ ಪ್ರೈ.ಲಿ.ನ ಸಿಎಸ್‌ಆರ್ ಅನುದಾನ 32.50 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣವಾಗಿರುವ ಶಾಲಾ ಕೊಠಡಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಜಿಲ್ಲೆಯ ಮತದಾರರ ಆಶೀರ್ವಾದದಿಂದ ಸಂಸದನಾಗಿ ಆಯ್ಕೆಯಾಗಿ ಕೇಂದ್ರ ಸಚಿವನಾದ ಬಳಿಕ ಕೈಗಾರಿಕೆಗಳ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿ.ಎಸ್.ಆರ್) ಯಲ್ಲಿ ಅನುದಾನದ ಶಾಲೆಗಳ ಕಟ್ಟಡ, ರಸ್ತೆ, ಬಸ್ ಸೇರಿದಂತೆ ಇತರೆ ಸಮಾಜಮುಖಿ ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆ ಎಂದರು.

ಮಿಚಲಿನ್ ಇಂಡಿಯಾ ಪ್ರೈ.ಲಿ.ನ ನಿರ್ದೇಶಕ ಸಿದ್ದಾರ್ಥ ಪ್ರಸಾದ್ ಅವರ ಸಹಕಾರದಿಂದ ಜಿಲ್ಲೆಯಲ್ಲಿ ಪ್ರಥಮವಾಗಿ ಶಾಲಾ ಕಟ್ಟಡ ನಿರ್ಮಿಸಲಾಗಿದೆ. ಅವರ ಪ್ರೀತಿ ಹಾಗೂ ಸಹಕಾರಕ್ಕೆ ಧನ್ಯವಾದ ಅರ್ಪಿಸುತ್ತೇನೆ ಎಂದು ಹೇಳಿದರು.

ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ಒಂದು ಲಕ್ಷ ಶಿಕ್ಷಕರ ನೇಮಕಕ್ಕೆ ಆದೇಶ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಶೇ.50ರಷ್ಟು ಮಹಿಳಾ ಶಿಕ್ಷಕರು ಕರ್ತವ್ಯದಲ್ಲಿದ್ದಾರೆಂದು ಸ್ಮರಿಸಿದರು.

ಕುಮಾರಸ್ವಾಮಿ ಜಿಲ್ಲೆಯ ಸಂಸದರಾದರೆ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂಬ ಅಭಿಲಾಷೆಯಿಂದ ನನ್ನ ಗೆಲುವಿಗೆ ಜಿಲ್ಲೆಯ ಮತದಾರರು ಪುಷ್ಠಿ ತುಂಬಿದ್ದಾರೆ. ಈ ಹಿನ್ನೆಲೆಯಲ್ಲಿ ಸಂಸದ ಹಾಗೂ ಕೇಂದ್ರ ಸಚಿವ ಪದವಿ ಲಭಿಸಿದ್ದು, ನನ್ನ ಜೀವ ಇರುವವರೆಗೂ ಜಿಲ್ಲೆಯ ಅಭಿವೃದ್ಧಿಗೆ ಶ್ರಮಿಸುವುದಾಗಿ ತಿಳಿಸಿದರು.

ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರವನ್ನು ಬಲಪಡಿಸಬೇಕೆಂಬ ಸದುದ್ದೇಶದಿಂದ ನಮ್ಮ ಪಕ್ಷದ ಪ್ರಣಾಳಿಕೆಯಲ್ಲಿ ಸದರಿ ವಿಚಾರಗಳನ್ನು ಪ್ರಸ್ತಾಪಿಸಲಾಗಿತ್ತು. ಈ ಸಂಬಂಧ ಪಬ್ಲಿಕ್ ಶಾಲೆ ಹೆಸರಿನಲ್ಲಿ ರಾಜ್ಯ ಸರ್ಕಾರ ಗೊಂದಲ ಸೃಷ್ಟಿಸುತ್ತಿರುವುದು ಸರಿಯಲ್ಲ ಎಂದರು.

ಎಚ್‌ಡಿಕೆ ರಾಜ್ಯ ರಾಜಕಾರಣಕ್ಕೆ ಮರಳಲಿ: ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ ಮಾತನಾಡಿ, ಮಂಡ್ಯ ಜನರು ಹಾಗೂ ಜಿಲ್ಲೆಯ ಅಭಿವೃದ್ಧಿಗಾಗಿ ತಮ್ಮ ಅಧಿಕಾರವನ್ನು ಬಳಸಿ ಸಿ.ಎಸ್.ಆರ್. ಅನುದಾನದಲ್ಲಿ ಶಾಲಾ ಕಟ್ಟಡ ನಿರ್ಮಿಸಿರುವುದು ಸಾರ್ಥಕ ಕಾರ್ಯ. ಆದಷ್ಟು ಶೀಘ್ರ ರಾಜ್ಯ ರಾಜಕಾರಣಕ್ಕೆ ಮರಳಲಿ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದ ಚುಕ್ಕಾಣಿ ಹಿಡಿಯಲು ಕುಮಾರಸ್ವಾಮಿ ಅವರಿಗೆ ರಾಜ್ಯದ ಜನ ಸಹಕಾರ ನೀಡಬೇಕೆಂದು ಮನವಿ ಮಾಡಿದರು.



ವೇದಿಕೆಯಲ್ಲಿ ಶಾಸಕ ಎಚ್.ಟಿ.ಮಂಜು, ಮಾಜಿ ಶಾಸಕ ಕೆ.ಸುರೇಶ್ ಗೌಡ, ಜಿಲ್ಲಾಧ್ಯಕ್ಷ ಡಿ.ರಮೇಶ್, ಜಾ.ದಳ ಮುಖಂಡರಾದ ಬಿ.ಆರ್. ರಾಮಚಂದ್ರ, ಕೆ.ಎಸ್.ವಿಜಯ್ ಆನಂದ್, ಸಿದ್ದರಾಮೇಗೌಡ, ತಗ್ಗಹಳ್ಳಿ ಪ್ರಸನ್ನ, ಡಾ.ಆದರ್ಶ, ಶಶಿಧರ್ ಬೇಲೂರು, ಎಸ್‌ಡಿಎಂಸಿ ಅಧ್ಯಕ್ಷ ಅನಿಲ್ ಕುಮಾರ್, ಡಿಡಿಪಿಐ ಲೋಕೇಶ್, ಬಿಇಒ ಮಹದೇವ ಇತರರಿದ್ದರು.

ಚೀರನಹಳ್ಳಿ ಶಾಲಾ ಕೊಠಡಿಗೆ ಭೂಮಿ ಪೂಜೆ: ಚೀರನಹಳ್ಳಿ ಗ್ರಾಮದಲ್ಲಿ ಆರ್ಸೆಲರ್ ಮಿತ್ತಲ್ ಕಂಪನಿಯ ಸಿಎಸ್‌ಆರ್ ನಿಧಿ ಅನುದಾನದಲ್ಲಿ 32.50 ಲಕ್ಷ ವೆಚ್ಚದಲ್ಲಿ ಸರ್ಕಾರಿ ಶಾಲೆಯ ಎರಡು ಕೊಠಡಿಗಳ ನಿರ್ಮಾಣಕ್ಕೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ, ಶಾಸಕ ಎಚ್.ಟಿ.ಮಂಜು ಅವರು ಭೂಮಿ ಪೂಜೆ ನೆರವೇರಿಸಿದರು.

ಸಾಲ ಬಾಧೆ: ಕುಟುಂಬದ ಮೂವರ ಆತ್ಮಹತ್ಯೆ

• **ಮಂಡ್ಯ:** ಒಂದೇ ಕುಟುಂಬದ ಮೂವರು ಅನುಮಾನಾಸ್ಪದವಾಗಿ ಮೃತಪಟ್ಟಿರುವ ಘಟನೆ ನಗರದ ನೆಹರು ನಗರದಲ್ಲಿ ಮಂಗಳವಾರ ನಡೆದಿದೆ. ಕಾಮಧೇನು ಕಲ್ಪವೃಕ್ಷ ಬಟ್ಟೆ ಅಂಗಡಿ ಮಾಲೀಕ ಪ್ರಭಾಕರ್ (65), ಪತ್ನಿ ಜ್ಯೋತಿ (55), ಮಗ ಸಂತೋಷ್ (30) ಮೃತ ದುರ್ದೈವಿಗಳು. ಆರ್ಥಿಕ ಸಂಕಷ್ಟವೇ ಘಟನೆಗೆ ಕಾರಣ ಎನ್ನಲಾಗುತ್ತಿದೆ.

ಪ್ರಭಾಕರ್ ಅವರು ಪತ್ನಿ ಜ್ಯೋತಿಯನ್ನು ಪಂಚೆಯಿಂದ ಉಸಿರುಗಟ್ಟಿಸಿ ಕೊಲೆ ಮಾಡಲು ಮುಂದಾಗಿದ್ದಾರೆ. ಆಗ ಮಧ್ಯೆದಲ್ಲಿ ಬಂದ ಪುತ್ರ ಸಂತೋಷ್‌ನನ್ನು ಉಸಿರುಗಟ್ಟಿಸಿ ಇಬ್ಬರನ್ನು ಕೊಲೆ ಮಾಡಿದ್ದಾರೆ. ನಂತರ ಬಟ್ಟೆ ಅಂಗಡಿಗೆ ತೆರಳಿದ ಪ್ರಭಾಕರ್ ಅಲ್ಲಿಯೇ ಹಗ್ಗದಿಂದ ನೇಣಿಗೆ ಶರಣಾಗಿದ್ದಾರೆ ಎಂದು ತಿಳಿದು ಬಂದಿದೆ. ಸೋಮವಾರ ತಡರಾತ್ರಿ 3 ಗಂಟೆಯಿಂದಲೂ ಮನೆಯಲ್ಲಿ ಇಷ್ಟೆಲ್ಲ ಘಟನೆ ನಡೆದರೂ ಸೊಸೆಗೆ ವಿಷಯ ತಿಳಿದೇ ಇಲ್ಲ, ಮುಂಜಾನೆ 3.30ರಲ್ಲಿ ಘಟನೆ ನಡೆದಿದ್ದರಿಂದ ಗಾಢ ನಿದ್ರೆಯಲ್ಲಿದ್ದರು. ಬೆಳಗ್ಗೆ ಎದ್ದು ತಿಂಡಿ ಮಾಡಲು ಅತ್ತೆ ಎಬ್ಬಿಸಲು ರೂಂಗೆ ತೆರಳಿದ ವೇಳೆ ಘಟನೆ ಬೆಳಕಿಗೆ ಬಂದಿದೆ ಎನ್ನಲಾಗಿದೆ.

ಡೆತ್‌ನೋಟ್ ಪತ್ತೆ: ಘಟನೆ ಸ್ಥಳದಲ್ಲಿ ಡೆತ್‌ನೋಟ್ ಪತ್ತೆಯಾಗಿದೆ. ಡೆತ್‌ನೋಟ್‌ನಲ್ಲಿ ಬಟ್ಟೆ ಅಂಗಡಿ ನಡೆಸುತ್ತಿದ್ದ ಪ್ರಭಾಕರ್ ಸಾಲದ ಸುಳಿಗೆ ಸಿಲುಕಿದ್ದು, ಸಾಲಕ್ಕೆ ಬಡ್ಡಿ ಕಟ್ಟಲಾಗದೆ ಮನನೊಂದಿದ್ದೇನೆ ಎಂದು ಬರೆದಿದ್ದಾರೆ. ಬಟ್ಟೆ ವ್ಯಾಪಾರ ಮಾಡಿಕೊಂಡು ಜೀವನ ಸಾಗಿಸುತ್ತಿದ್ದೆವು. ಸರ್ಕಾರ 'ಶಕ್ತಿ' ಯೋಜನೆಯಡಿ ಉಚಿತ ಬಸ್ ಬಿಟ್ಟಿರುವುದರಿಂದ ವ್ಯಾಪಾರ ಕಮ್ಮಿಯಾಯಿತು. ಇದರಿಂದ ಸಾಲ ತೀರಿಸಲಾಗುತ್ತಿಲ್ಲ, ಖಾಸಗಿ ಫೈನಾನ್ಸ್‌ಗಳು ಸಾಲ ಕಟ್ಟಿಲ್ಲ ಎಂದರೆ ಮನೆ ಬಳಿ ಬರುತ್ತಾರೆ. ಅದ್ದರಿಂದ ಸಾಲದ ಕಿರುಕುಳದಿಂದ ಮನನೊಂದಿದ್ದೇನೆ ಎಂದು ಡೆತ್‌ನೋಟ್‌ನಲ್ಲಿ ಉಲ್ಲೇಖಿಸಲಾಗಿದೆ.



> ಮಹಿಳೆಯರಿಗೆ ಬಸ್‌ನಲ್ಲಿ ಉಚಿತ ಪ್ರಯಾಣದ ಅವಕಾಶ ನೀಡಿರುವುದು ತಮ್ಮ ವ್ಯಾಪಾರ ನಷ್ಟ ಆಗಲು ಕಾರಣ ಎಂದು ಡೆತ್‌ನೋಟ್‌ನಲ್ಲಿ ಪ್ರಭಾಕರ್ ಉಲ್ಲೇಖಿಸಿದ್ದಾರೆ. ಕೃತ್ಯ ನಡೆದಾಗ ನಾಲ್ಕು ಜನರಿದ್ದರು. ಕಳೆದ ಒಂದೂವರೆ ತಿಂಗಳ ಹಿಂದೆ ಪುತ್ರ ಸಂತೋಷ್ ಹಾಗೂ ಮೇಘನಾಗೆ ಮದುವೆ ಮಾಡಲಾಗಿತ್ತು. ಪ್ರಕರಣದ ಸಂಪೂರ್ಣ ತನಿಖೆ ನಡೆಯುತ್ತಿದೆ.
>
> ■ ಡಾ.ವಿ.ಜೆ.ಶೋಭಾರಾಣಿ, ಜಿಲ್ಲಾ ಪೊಲೀಸ್ ಅಧೀಕ್ಷಕರು

ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ವಿ.ಜೆ. ಶೋಭಾರಾಣಿ ಹಾಗೂ ಇನ್ನಿತರೆ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು. ನಗರದ ಪೂರ್ವ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಪೊಲೀಸರು ತನಿಖೆ ಕೈಗೊಂಡಿದ್ದಾರೆ. ಶವಗಳನ್ನು ಮರಣೋತ್ತರ ಪರೀಕ್ಷೆಗೆ ಜಿಲ್ಲಾಸ್ಪತ್ರೆಗೆ ರವಾನಿಸಲಾಗಿದೆ.

ಒಂದೂವರೆ ತಿಂಗಳ ಹಿಂದಷ್ಟೇ ಮದುವೆ: ಘಟನೆ ನಡೆದಾಗ ಮನೆಯಲ್ಲಿ ನಾಲ್ಕು ಜನರಿದ್ದರು. ರಾತ್ರಿ ನಾನು ಮತ್ತು ಸಂತೋಷ್ ಒಂದು ರೂಂನಲ್ಲಿದ್ದೆವು. ಆದರೆ, ಸಂತೋಷ್ ಯಾವಾಗ ಎದ್ದು ಹೋದರು ಎಂಬುದು ಗೊತ್ತಾಗಿಲ್ಲ, ಬೆಳಗ್ಗೆ ಎದ್ದು ನೋಡಿದಾಗ ಕೃತ್ಯ ನಡೆದಿರುವುದು ತಿಳಿಯಿತು ಎಂದು ಸೊಸೆ ಮೇಘನಾ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಕಳೆದ ಏ.26ರಂದು ಕುಟುಂಬಸ್ಥರು ಸೇರಿ ಮೃತ ಸಂತೋಷ್ ಹಾಗೂ ಮೇಘನಾಗೆ ಮದುವೆ ಮಾಡಿದ್ದರು. ಒಂದೂವರೆ ತಿಂಗಳಲ್ಲೇ ಈ ಘಟನೆ ನಡೆದಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ.

ಸಾವಿಗೆ 'ಶಕ್ತಿ' ಯೋಜನೆ ನಷ್ಟಕ್ಕೆ ಕಾರಣವಾಯಿತೇ?: ಒಂದೇ ಕುಟುಂಬದ ಮೂವರು ಸಾವನ್ನಪ್ಪಲು ಶಕ್ತಿ ಯೋಜನೆ ಕಾರಣವಾಯಿತೇ ಎಂಬ ಪ್ರಶ್ನೆ ಎದ್ದಿದೆ. ಮೃತ ಪ್ರಭಾಕರ್ ಡೆತ್‌ನೋಟ್‌ನಲ್ಲಿ ಮಹಿಳೆಯರಿಗೆ ಸರ್ಕಾರ ಸಾರಿಗೆ ಬಸ್‌ನಲ್ಲಿ ಉಚಿತ ಪ್ರಯಾಣಕ್ಕೆ ಬಿಟ್ಟಿರುವುದರಿಂದ ವ್ಯಾಪಾರದಲ್ಲಿ ನಷ್ಟ ಸಂಭವಿಸಿ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದೇನೆ ಎಂದು ಉಲ್ಲೇಖಿಸಿದ್ದಾರೆ. ಆದರೆ ಮಹಿಳೆಯರಿಗೆ ಉಚಿತ ಪ್ರಯಾಣಕ್ಕೂ ವ್ಯಾಪಾರ ಕಡಿಮೆಯಾಗುವುದಕ್ಕೂ ಯಾವ ರೀತಿ ಸಂಬಂಧ ಎಂಬುದರ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಮೇಲ್ನೋಟಕ್ಕೆ ಮಗ ಸಂತೋಷ್ ಸಾವಿಗೀಡಾಗಿರುವುದನ್ನು ಗಮನಿಸಿದರೆ ಆತನನ್ನು ತಂದೆ ಪ್ರಭಾಕರ್ ಕೊಲೆ ಮಾಡಿರುವುದಾಗಿ ಕಂಡು ಬರುತ್ತಿದೆ. ಆ ಬಗ್ಗೆ ತನಿಖೆ ನಡೆಯುತ್ತಿದೆ. ವ್ಯಾಪಾರದಲ್ಲಿ ನಷ್ಟ ಉಂಟಾಗಿ ಹೋಂ ಲೋನ್ ಇಎಂಐ ಕಟ್ಟಲಾಗದೆ ಕೃತ್ಯ ಮಾಡಲಾಗಿದೆ.

ಜಾನಪದ ಗಾಯಕ ಗೋ.ನಾ.ಸ್ವಾಮಿ

ಸರ್ಕಾರಿ ಶಾಲೆ ದುರಸ್ತಿಗೆ ನಿರ್ಧಾರ

• **ಕೋಲಾರ:** ಅಂತರರಾಷ್ಟ್ರೀಯ ಜಾನಪದ ಗಾಯಕ ಗೋ.ನಾ.ಸ್ವಾಮಿ ಅವರು ತಮ್ಮ 53ನೇ ಜನ್ಮದಿನದ ಅಂಗವಾಗಿ ಸರ್ಕಾರಿ ಶಾಲೆಯ ಪುನರ್ ನಿರ್ಮಾಣ ಮಾಡುವ ತೀರ್ಮಾನ ಕೈಗೊಂಡಿದ್ದಾರೆ.

ಈ ಉದ್ದೇಶಕ್ಕಾಗಿ ಅವರ ಸ್ವಗ್ರಾಮವಾದ ಮಾಲೂರು ತಾಲೂಕಿನ ಟೇಕಲ್ ಹೋಬಳಿಯ ಯಲುವಗುಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ಆಯ್ಕೆ ಮಾಡಿಕೊಂಡಿದ್ದಾರೆ.

ಸುಮಾರು 1969ರಲ್ಲಿ ನಿರ್ಮಾಣಗೊಂಡಿರುವ ಈ ಶಾಲೆಯ ಕಟ್ಟಡ ಹಳೆಯದಾಗಿದ್ದು ಅದನ್ನು ಸ್ವಂತ ಖರ್ಚಿನಲ್ಲಿ ಪುನರ್ ನಿರ್ಮಾಣ ಮಾಡುವ ಕಾರ್ಯಕ್ಕೆ ಮುಂದಾಗಿದ್ದಾರೆ.

ನನ್ನ ಬೆಳೆಸಿದ ಊರಿನ ಜನರಿಗೆ ನನ್ನ ಕಡೆಯಿಂದ ಪುಟ್ಟ ಸಹಾಯ ಮಾಡಬೇಕು ಅಂದುಕೊಂಡು ಈ ಕೆಲಸಕ್ಕೆ ಮುಂದಾಗಿದ್ದೇನೆ. ಎಲ್ಲಾ ಕಲಾವಿದರೂ ಸಮಾಜದಿಂದಲೇ ಬೆಳೆಯುತ್ತಾರೆ, ಹಣಗಳಿಸುವರು. ಆದರೆ, ಹೆಚ್ಚಿನವರು ವಾಪಸ್ ಸಮಾಜಕ್ಕೆ ಏನೂ ಕೊಡಲ್ಲ, ಆ ರೀತಿ ಆಗಬಾರದು. ಗಾಯನದಿಂದ ಬಂದ ಹಣವನ್ನೇ ಇದಕ್ಕೆ ಬಳಸುತ್ತೇನೆ. ಜೊತೆಗೆ ಸಮಾನ ಮನಸ್ಕ ದಾನಿಗಳು ಹಣ ನೀಡಿದರೆ ಅದನ್ನೂ ಬಳಸುತ್ತೇನೆ ಎಂದು ಗೋ.ನಾ.ಸ್ವಾಮಿ ತಿಳಿಸಿದರು.

ನಾನು ಕೂಡ ಸರ್ಕಾರಿ ಶಾಲಾ ಶಿಕ್ಷಕನಾಗಿ ಕೆಲಸ ಮಾಡಿದ್ದೇನೆ. ಸಮಸ್ಯೆಗಳ ಅರಿವು ಇದೆ. ಗ್ರಾಮದ ವಿದ್ಯಾರ್ಥಿಗಳಿಗೆ ಅನುಕೂಲವಾಗಬೇಕು. ಅವರು ಶೈಕ್ಷಣಿಕವಾಗಿ ಮುಂದೆ ಬರಬೇಕು ಎಂಬುದು ಸರ್ಕಾರಿ ಶಾಲೆ ಮರುನಿರ್ಮಾಣದ ಉದ್ದೇಶವಾಗಿದೆ ಎಂದರು. ಈಗಾಗಲೇ ಕೋಲಾರ ತಾಲೂಕಿನ ಸುಗಟೂರಿನಲ್ಲಿ ಹೈಟೆಕ್ ಬಸ್ ತಂಗುದಾಣವನ್ನು ಅಭಿವೃದ್ಧಿ ಪಡಿಸಿದ್ದಾರೆ ಅಲ್ಲಿ ದಿನಪತ್ರಿಕೆಗಳು, ಕುಡಿಯಲು ನೀರಿನ ವ್ಯವಸ್ಥೆ, ಫ್ಯಾನ್, ವಿದ್ಯುತ್ ದೀಪ ಸೇರಿದಂತೆ ಪ್ರಯಾಣಿಕರಿಗೆ ಬೇಕಾದ ಸೌಲಭ್ಯಗಳು ಇಲ್ಲಿವೆ. ಸುಗಟೂರಿನಲ್ಲಿ ಅವರ ತಾಯಿ ಜಯಮ್ಮ ಹೆಸರಿನಲ್ಲಿ ದ್ವಾರಬಾಗಿಲು ನಿರ್ಮಿಸಿದ್ದಾರೆ. ಜತೆಗೆ ದೇಗುಲಗಳ ಅಭಿವೃದ್ಧಿ ಹಾಗೂ ಮತ್ತೊಂದು ಸ್ವಾಗತದ್ವಾರ ಸೇರಿದಂತೆ ವೀಕ್ಷಣೀಯ ಸ್ಥಳವಾಗಿ ಅಭಿವೃದ್ಧಿ ಪಡಿಸಲು ನಿರ್ಧರಿಸಲಾಗಿದೆ, ಸುಗಟೂರಿನಲ್ಲಿ ನಡೆದ ತಮ್ಮ ಜನ್ಮ ದಿನಾಚರಣೆಯಲ್ಲಿ ಅವರು ಈ ತೀರ್ಮಾನ ಕೈಗೊಂಡರು.

ಡಾ.ಬಾನಂದೂರು ಕೆಂಪಯ್ಯ 75ನೇ ಹುಟ್ಟುಹಬ್ಬ

• **ಕೋಲಾರ:** ಅಂತಾರಾಷ್ಟ್ರೀಯ ಖ್ಯಾತಿಯ ಜಾನಪದ ಗಾಯಕ, ಆಕಾಶವಾಣಿ ಮತ್ತುದೂರದರ್ಶನದ ನಿವೃತ್ತ ನಿರ್ದೇಶಕ ಹಾಗೂ ಕರ್ನಾಟಕ ಜಾನಪದ ಅಕಾಡೆಮಿ ಮಾಜಿ ಅಧ್ಯಕ್ಷ ಡಾ. ಬಾನಂದೂರು ಕೆಂಪಯ್ಯ ಅವರ 75ನೇ ವರ್ಷದ ಹುಟ್ಟುಹಬ್ಬದ ಸಂಭ್ರಮದ ಪ್ರಯುಕ್ತ ಕೋಲಾರದಲ್ಲಿ ಅರ್ಥಪೂರ್ಣ ಸಾಂಸ್ಕೃತಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಮುಂಬರುವ ಜೂನ್ 14ರ ಭಾನುವಾರ ಬೆಳಿಗ್ಗೆ 10:30ಕ್ಕೆ ನಗರದ ಸುವರ್ಣ ಕನ್ನಡ ಭವನದಲ್ಲಿ ''ಮೂಡಲ ಸೀಮೆಯ ಜಾನಪದ ಗಾಯಕರಿಂದ ಗಂಧರ್ವ ಜಾನಪದ ಗೀತಗಾಯನ ಗುಚ್ಛ' ಕಾರ್ಯಕ್ರಮವು ಜರುಗಲಿದೆ ಎಂದು ಸಂಘಟಕ ಬಿ.ವೆಂಕಟಾಚಲಪತಿ ತಿಳಿಸಿದ್ದಾರೆ. ಈ ಸಾಂಸ್ಕೃತಿಕ ಉತ್ಸವವನ್ನು ಕೋಲಾರದ ?ಈನೆಲ ಈಜಲ ಕಲೆ ಮತ್ತು ಸಾಂಸ್ಕೃತಿಕ ಸಂಸ್ಥೆ?, ದಲಿತ ಸಂಘರ್ಷ ಸಮಿತಿ ಸಂಘಟನೆಗಳ ಒಕ್ಕೂಟ ಹಾಗೂ ಕೋಲಾರ ಜಿಲ್ಲೆಯ ಎಲ್ಲಾ ಕಲಾವಿದರು, ರೈತ, ಕನ್ನಡ, ಮಹಿಳಾ ಮತ್ತು ಪ್ರಗತಿಪರ ಒಕ್ಕೂಟಗಳ ವತಿಯಿಂದ ಜಂಟಿಯಾಗಿ ಆಯೋಜಿಸಲಾಗುತ್ತಿದೆ.

ಡಾ.ಬಾನಂದೂರು ಕೆಂಪಯ್ಯ ಜಾನಪದ ಕ್ಷೇತ್ರಕ್ಕೆ ಸಲ್ಲಿಸಿರುವ ಅನುಪಮ ಸೇವೆಯನ್ನು ಪರಿಗಣಿಸಿ ಅವರಿಗೆ ಕರ್ನಾಟಕ ಸರ್ಕಾರದಅತ್ಯುನ್ನತ 'ರಾಜ್ಯೋತ್ಸವ ಪ್ರಶಸ್ತಿ', 'ಡಾ. ಬಿ. ಆರ್.ಅಂಬೇಡ್ಕರ್‌ರಾಜ್ಯ ಪ್ರಶಸ್ತಿ'' ಹಾಗೂ ಬೆಂಗಳೂರಿನ ''ಕೆಂಪೇಗೌಡ ಪ್ರಶಸ್ತಿ'' ನೀಡಿ ಗೌರವಿಸಲಾಗಿದೆ.ಅವರ 75ನೇ ಜನ್ಮದಿನದ ಅಂಗವಾಗಿ ಅವರ ಸುದೀರ್ಘ ಕಲಾ ಸೇವೆಯನ್ನು ಸ್ಮರಿಸುವ ಉದ್ದೇಶದಿಂದ ಈ ವಿಶಿಷ್ಟ ಗಾಯನ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ.



ಕಲೆ ಮತ್ತು ಸಾಂಸ್ಕೃತಿಕ ಹಿನ್ನೆಲೆಯುಳ್ಳ ಕಾರ್ಯಕ್ರಮವಾಗಿದ್ದು, ಕೋಲಾರದ ಜನತೆ ಹಾಗೂ ಕಲಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ಸಂಘಟಕರು ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ. ಈ ಸಂದರ್ಭದಲ್ಲಿ ಬೆಗ್ಲಾನಹಳ್ಳಿ ಮುನಿವೆಂಕಟಪ್ಪ, ದಲಿತ ಮುಖಂಡರಾದ ಚಂದ್ರಮೌಳಿ, ಟಿ.ವಿಜಯಕುಮಾರ್, ಶ್ರೀನಿವಾಸ್, ಪಂಡಿತ್ ಮುನಿವೆಂಕಟಪ್ಪ, ಗೋವಿಂದ್ ಮುಂತಾದವರು ಭಾಗವಹಿಸಿದ್ದರು.

ಸಮಾಜ ಕಲ್ಯಾಣ ಇಲಾಖೆ ಶ್ರೀನಿವಾಸನ್ ನಿಯೋಜನೆ ರದ್ದು: ಹೋರಾಟಕ್ಕೆ ಜಯ

ಭ್ರಷ್ಟಾಚಾರ ತನಿಖೆಗೆ ದಲಿತರ ಆಗ್ರಹ

• **ಕೋಲಾರ:** ದಲಿತ ವಿರೋಧಿ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಶ್ರೀನಿವಾಸನ್ ಅವರ ನಿಯೋಜನೆಯನ್ನು ರದ್ದು ಮಾಡಿರುವುದು ದಲಿತ ಸಂಘಟನೆಗಳ ಸಂಯುಕ್ತ ರಂಗದ ಹೋರಾಟಕ್ಕೆ ಸಂದ ಜಯವಾಗಿದೆ ಎಂದು ನಗರದ ನಚಿಕೇತ ನಿಲಯದಲ್ಲಿ ಸಂಘಟನೆಯ ದಲಿತ ಮುಖಂಡರು ಹರ್ಷ ವ್ಯಕ್ತಪಡಿಸಿ ಶ್ರೀನಿವಾಸನ್ ವಿರುದ್ಧದ ಇಲಾಖೆಯಲ್ಲಿನ ಭ್ರಷ್ಟಾಚಾರವನ್ನು ಕೂಡಲೇ ಉನ್ನತ ಮಟ್ಟದ ಅಧಿಕಾರಿಗಳಿಂದ ತನಿಖೆ ನಡೆಸುವಂತೆ ಒತ್ತಾಯಿಸಿದರು.

ದಮನಿತರ ಸೇವಾ ಸಮಿತಿಯ ರಾಜ್ಯ ಅಧ್ಯಕ್ಷ ಮೇಡಿಹಾಳ ಮುನಿಅಂಜಿನಪ್ಪ ಮಾತನಾಡಿ ಜಾಗೃತಿ ಸಮಿತಿಯ ನಿಯಮಗಳನ್ನು ಉಲ್ಲಂಘಿಸಿ ಕಾನೂನು ಬಾಹಿರವಾಗಿ ಆಯ್ಕೆ ಮಾಡಿದ ದಲಿತ ವಿರೋಧಿ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಶ್ರೀನಿವಾಸನ್ ಅವರ ನಿಯೋಜನೆ ರದ್ದು ಮಾಡಿದ್ದು ಜಿಲ್ಲೆಯ ದಲಿತ ಸಂಘಟನೆಗಳ ಶಕ್ತಿಗೆ ಸಂದ ಜಯವಾಗಿದೆ ಇಲಾಖೆಗೆ ಹೊಸದಾಗಿ ನೇಮಕವಾಗಿರುವ ನೂತನ ಅಧಿಕಾರಿ ಜವಾಬ್ದಾರಿ ತೆಗೆದುಕೊಳ್ಳಬಾರದು ಎಂದು ಕೆಲವರು ಬೆದರಿಕೆ, ಧಮ್ಕಿ ಹಾಕಿದ್ದು ಅಂತಹವರನ್ನು ಪತ್ತೆ ಹಚ್ಚಿ ಅವರ ವಿರುದ್ಧ ಕಾನೂ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.



ದಲಿತ ಸಂಘಟನೆಗಳ ಸಂಯುಕ್ತ ರಂಗದ ಅಧ್ಯಕ್ಷ ಡಿಪಿಎಸ್ ಮುನಿರಾಜು ಮಾತನಾಡಿ, ಸಮಾಜ ಕಲ್ಯಾಣ ಇಲಾಖೆಯು ದಲಿತರ ಅಭಿವೃದ್ಧಿಗೆ ಇರುವ ಪ್ರಮುಖ ಇಲಾಖೆಯಾಗಿದ್ದು ಪ್ರಭಾರಿ ಅಧಿಕಾರಿಯನ್ನು ನೇಮಕ ಮಾಡುವುದನ್ನು ಬಿಟ್ಟು ಪೂರ್ಣಪ್ರಮಾಣದ ಅಧಿಕಾರಿಯನ್ನು ನೇಮಕ ಮಾಡಿ ದಲಿತರಿಗೆ ನಿತ್ಯ ಸಿಗುವಂತೆ ಮಾಡಬೇಕು ಎಂದು ಒತ್ತಾಯಿಸಿದರು.

ದಲಿತ ಸಂಘಟನೆಗಳ ಮುಖಂಡರಾದ ದಲಿತ್ ನಾರಾಯಣಸ್ವಾಮಿ, ಗಾಂಧಿನಗರ ರಾಜಕುಮಾರ್, ಮೋಚಿಪಾಳ್ಯ ನಾಗೇಶ್, ಅಂಬೇಡ್ಕರ್ ನಗರ ಮಂಜುನಾಥ್, ಮತ್ತಿಕುಂಟೆ ಕೃಷ್ಣ, ಚೇತನ್

ಶೋಷಿತರ ಏಕತಾ ದಿನವಾಗಿ ಪ್ರೊ.ಬಿ.ಕೃಷ್ಣಪ್ಪ ಜಯಂತಿ ಆಚರಣೆ

ಸಮಸಮಾಜದ ಕನಸು ಕಂಡ ನಾಯಕ

• **ಕೋಲಾರ:** ಸಮಾನತೆ ಸಮಾಜ ಹಾಗೂ ಪ್ರಬುದ್ಧ ದೇಶ ನಿರ್ಮಾಣ ಮಾಡುವ ಕನಸನ್ನು ಪ್ರೊ.ಬಿ. ಕೃಷ್ಣಪ್ಪ ಹೊಂದಿದ್ದರು ಎಂದು ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ- ಕರ್ನಾಟಕ ರಾಜ್ಯಾಧ್ಯಕ್ಷ ಡಾ.ಆರ್.ಮೋಹನ್‌ರಾಜ್ ತಿಳಿಸಿದರು.

ನಗರದಪತ್ರಕರ್ತರಭವನದಲ್ಲಿರಿಪಬ್ಲಿಕನ್ ಪಾರ್ಟಿ ಆಫ್‌ಇಂಡಿಯಾ-ಕರ್ನಾಟಕಹಾಗೂಕರ್ನಾಟಕದಲಿತ ಸಂಘರ್ಷ ಸಮಿತಿ ಅಂಬೇಡ್ಕರ್ ಮಾರ್ಗ ವತಿಯಿಂದ ಪ್ರೊ. ಬಿ. ಕೃಷ್ಣಪ್ಪ ಜನ್ಮದಿನದ ಕಾರ್ಯಕ್ರಮದಲ್ಲಿ ಪುಷ್ಪನಮನ ಸಲ್ಲಿಸಿ ಅವರು ಮಾತನಾಡಿ, ಸಮಾನತೆ ಸಮಾಜ ಹಾಗೂ ಪ್ರಬುದ್ಧ ದೇಶ ನಿರ್ಮಾಣ ಮಾಡುವ ಕನಸು ಕಂಡ ಅಂಬೇಡ್ಕರ್ ರವರ ಆದರ್ಶಗಳ ಹಾದಿಯಲ್ಲಿ ನಡೆದವರು ಪ್ರೊ.ಬಿ.ಕೃಷ್ಣಪ್ಪ ಅವರ ಜನ್ಮದಿನವನ್ನು ಶೋಷಿತರ ಬಹುಜನರ ಏಕತಾ ದಿನವಾಗಿ ಆಚರಿಸಲಾಗುತ್ತಿದೆ ಎಂದರು.

ದಲಿತರ,ಶೋಷಿತರ ಏಳ್ಗೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟವರು ಕೃಷ್ಣಪ್ಪ ಎಂದ ಅವರು, ದಲಿತರು ರಾಜಕೀಯವಾಗಿಯೂ ಪ್ರಬಲರಾದಾಗ ಮಾತ್ರ ತಮ್ಮ ಸಮುದಾಯದ ಅಭಿವೃದ್ಧಿಯನ್ನು ಕಾಣಬಹುದು ಎಂಬ ಸತ್ಯ ಅರಿತಿದ್ದ ಅವರು, ನಮಗೆಲ್ಲಾ ಆದರ್ಶವಾಗಿದ್ದರು ಎಂದರು.



ಸ್ವಾತಂತ್ರ ಭಾರತದಲ್ಲಿ ದಲಿತ. ಹಿಂದುಳಿದ, ಹಾಗೂ ಶೋಷಣೆಗೆ ಒಳಗಾದ ಸಮುದಾಯಗಳು ಇಂದಿಗೂ ಸಹ ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಅಭಿವೃದ್ಧಿ ಕಾಣದಿರುವುದು ದುರಂತ. ಸ್ವತಂತ್ರದ ನಂತರ ಅಂಬೇಡ್ಕರ್ ಸ್ಥಾಪಿಸಿತ ಸಂವಿಧಾನದ ಅಡಿಯಲ್ಲಿ ದೇಶವನ್ನು ಆಳಿದ ರಾಜಕೀಯ ಪಕ್ಷಗಳು ದಲಿತ. ಹಿಂದುಳಿದ, ಹಾಗೂ ಶೋಷಣೆಗೆ ಒಳಗಾದ ಸಮುದಾಯಗಳ ಏಳಿಗೆಗೆ ಶ್ರಮಿಸಿದವರಲ್ಲ, ಇನ್ನಾದರೂ ನಾವು ಸಂಘಟಿತರಾಗಿ ಆಳುವವರನ್ನು ಪ್ರಶ್ನಿಸುವ ಜೊತೆಗೆ ನಾವೇ ಆಳುವವರಾಗಬೇಕು ಎಂದು ತಿಳಿಸಿದರು.

ಸ್ವಾತಂತ್ರ್ಯ ಬಂದು ಇಷ್ಟೊಂದು ವರ್ಷಗಳು ಉರುಳಿದರೂ ಇಂದಿಗೂ ಶೋಷಣೆ ಇದೆ ಎಂದರೆ ಅದು ತಲೆತಗ್ಗಿಸುವಂತದ್ದು ಎಂದ ಅವರು, ಪ್ರೊ.ಬಿ.ಕೃಷ್ಣಪ್ಪ ಅವರ ಆದರ್ಶವನ್ನು ಪಾಲಿಸುವ ಮೂಲಕ ನಾವೆಲ್ಲಾ ದೀನ ದಲಿತರ ಏಳ್ಗೆಗೆ ಶ್ರಮಿಸುವ ಸಂಕಲ್ಪ ತೊಡೋಣ ಎಂದರು.

ಕಾರ್ಯಕ್ರಮದಲ್ಲಿ ಬಹುಜನ ಚಳುವಳಿ ಚಿಂತಕರು ಎಂ. ಗೋಪಿನಾಥ್ , ರಾಜ್ಯ ಸಂಘಟನ ಕಾರ್ಯದರ್ಶಿ ವಕ್ಕಲೇರಿ ಶಂಕರ್, ಬೆಂಗಳೂರು ಜಿಲ್ಲಾ ಅಧ್ಯಕ್ಷ ನಾರಾಯಣಸ್ವಾಮಿ , ರಾಜ್ಯ ಸಮಿತಿ ಸದಸ್ಯ ಆನೇಕಲ್ ನಾರಾಯಣ ಸ್ವಾಮಿ , ಜಿಲ್ಲಾ ಸಂಚಾಲಕ ಲಕ್ಷ್ಮಿಪುರ ಲೋಕೇಶ್, ಹಿರಿಯ ಹೋರಾಟಗಾರರಾದ ಶೈಲಜಮ್ಮ, ಆರ್‌ಪಿಐ ಕೋಲಾರ ಜಿಲ್ಲಾ ಅಧ್ಯಕ್ಷ ಚಂದ್ರು, ಹಳೆಹಳ್ಳಿ ತಿಮ್ಮರಾಯಪ್ಪ , ಬೈರಂಡಹಳ್ಳಿ ತಾಲೂಕು ಅಧ್ಯಕ್ಷ ರವೀಂದ್ರ ಕುಮಾರ್, ಕಲ್ಪನ, ಕೆಜಿಎಫ್ ಬಾಬು, ಮೈಸೂರು ರಾಮಸ್ವಾಮಿ, ಆರ್, ಮೋಹನ್ ರಾಜು, ರಾಮಪುರ ಲೋಕೇಶ್ ಸೇರಿದಂತೆ ಹಲವರು ಹಾಜರಿದ್ದರು.

ಸಿದ್ಧಾರ್ಥ ಬಡಾವಣೆ ಒಳಚರಂಡಿ ಕಾಮಗಾರಿಗೆ ಶಾಸಕ ಚಾಲನೆ

ನಗರಗಳ ಅಭಿವೃದ್ಧಿಗೆ ಆಧುನಿಕ ಸ್ಪರ್ಶ

• **ಮದ್ದೂರು:** ನಗರವನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸುವ ಉದ್ದೇಶದಿಂದ ಆಧುನಿಕ ಸ್ಪರ್ಶ ನೀಡಲಾಗುತ್ತಿದೆ ಎಂದು ಶಾಸಕ ಕೆ.ಎಂ.ಉದಯ್ ಹೇಳಿದರು.

ನಗರದ ಸಿದ್ಧಾರ್ಥ ಬಡಾವಣೆಯಲ್ಲಿ ಅಂದಾಜು 110 ಕೋಟಿ ರೂ ವೆಚ್ಚದಲ್ಲಿ ಒಳಚರಂಡಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿ, ರಾಜ್ಯದ ಬೇರೆ ನಗರಗಳಿಗೆ ಹೋಲಿಸಿದರೆ ಮದ್ದೂರು ನಗರ ಅಭಿವೃದ್ಧಿಯಲ್ಲಿ 20 ವರ್ಷಗಳ ಹಿಂದೆ ಇದೆ. ಹೀಗಾಗಿ ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಒಂದೇ ಬಾರಿಗೆ ಮಾಡಲು ಸಾಧ್ಯವಿಲ್ಲ, ಮುಂದಿನ ಎರಡು ವರ್ಷಗಳಲ್ಲಿ ಮಾದರಿ ನಗರವನ್ನಾಗಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ಈ ಹಿಂದೆ ನಗರದಲ್ಲಿ ನಡೆದಿರುವ ಒಳ ಚರಂಡಿ ಕಾಮಗಾರಿಯಲ್ಲಿ ಸಾಕಷ್ಟು ನ್ಯೂನತೆ ಕಂಡು ಬಂದಿದ್ದು, ಹೀಗಾಗಿ ಅವುಗಳನ್ನು ಹಂತ ಹಂತವಾಗಿ ಅಭಿವೃದ್ಧಿ ಪಡಿಸಲಾಗುತ್ತಿದೆ. ಇನ್ನು ಮುಂದೆ ಈ ರೀತಿಯ ಸಮಸ್ಯೆ ತಲೆದೋರುವುದಿಲ್ಲ ಎಂದು ತಿಳಿಸಿದರು.ಮಳವಳ್ಳಿ ಸಮೀಪದ ನಗರಕ್ಕೆ ಕುಡಿಯುವ ನೀರಿನ ಶುದ್ಧೀಕರಣ ಘಟಕದಲ್ಲಿ ವಿದ್ಯುತ್ ಸಮಸ್ಯೆ ಉಂಟಾಗಿತ್ತು. ಹೀಗಾಗಿ ಕೆಲವು ದಿನಗಳಿಂದ ಕುಡಿಯುವನೀರಿನಸಮಸ್ಯೆ ನಗರದಲ್ಲಿಉಂಟಾಗಿತ್ತು. ಅದರ ತುರ್ತು ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದ್ದು, ಇನ್ನು 15 ದಿನಗಳ ಬಳಿಕ ನಿರಂತರವಾಗಿ ಮನೆಮನೆಗೆ ಕುಡಿಯುವ ನೀರು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗಿದೆ ಎಂದರು.



ನಗರದಲ್ಲಿ ಪ್ರಮುಖ ಸಮಸ್ಯೆಯಾಗಿದ್ದ ಕೆಮ್ಮಣ್ಣು ನಾಲೆಯನ್ನು 100 ಕೋಟಿ ಅನುದಾನದಲ್ಲಿ ಅಭಿವೃದ್ಧಿ ಪಡಿಸಲಾಗಿದ್ದು, ನಾಲೆಗೆ ಚರಂಡಿ ನೀರು, ಮಳೆನೀರು ಯಾವುದೇ ಸೇರದ ಹಾಗೆ ಕಾಮಗಾರಿ ನಡೆಸಲಾಗಿದೆ. ಈಗಾಗಲೇ ನಗರದ ಸರ್ಕಾರಿ ಕಾಲೇಜು ವೃತ್ತದಿಂದ ಗೊರವನಹಳ್ಳಿಯವರೆಗೆ 8 ಕೋಟಿ ಅನುದಾನದಲ್ಲಿ ರಸ್ತೆ ಅಗಲೀಕರಣ ಮಾಡಿ ಅಭಿವೃದ್ಧಿ ಪಡಿಸಲಾಗುತ್ತಿದ್ದು, ಇನ್ನು ಕೆಲ ದಿನಗಳಲ್ಲೇ 20 ಕೋಟಿಗೂ ಹೆಚ್ಚಿನ ಅನುದಾನದಲ್ಲಿ ಹಂತ ಹಂತವಾಗಿ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡಲಾಗುವುದು ಎಂದರು.ಮದ್ದೂರು ನಗರವನ್ನು ಸ್ವಚ್ಛ, ಸುಂದರ ನಗರವನ್ನಾಗಿಸಲು ಈಗಾಗಲೇ ಸಂಬಂಧ ಪಟ್ಟ ಅಧಿಕಾರಿಗಳ ಜೊತೆಗೆ ಚರ್ಚೆ ನಡೆಸಲಾಗಿದ್ದು, ಯೋಜನೆಗಳನ್ನು ರೂಪಿಸಲಾಗಿದೆ. ನಗರದ ಪೇಟೆ ಬೀದಿ 80 ಅಡಿ ರಸ್ತೆಯನ್ನಾಗಿ ಮೇಲ್ದರ್ಜೆಗೆ, ತಾಲೂಕು ಕಚೇರಿ, ನಗರಸಭೆ ಕಟ್ಟಡ, ನ್ಯಾಯಾಲಯ ಸಂಕೀರ್ಣ ಹಾಗೂ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಶೀಘ್ರದಲ್ಲೇ ಪ್ರಾರಂಭ ಮಾಡಲಾಗುವುದು ಎಂದರು.

ನಗರಸಭೆಯ ಪೌರಾಯುಕ್ತೆ ರಾಧಿಕಾ, ನಗರಸಭಾ ಮಾಜಿ ಸದಸ್ಯರಾದ ಸಿದ್ದರಾಜು, ಎಂ.ಬಿ.ಸಚಿನ್, ಮುಖಂಡರಾದ ಎಂ.ಡಿ.ಮಹಾಲಿಂಗಯ್ಯ, ಸಾಲರ್, ಆರಿಫ್, ಇಂತಿಯಾಜ್ ಖಾನ್, ಮಹಾದೇವಯ್ಯ, ಮರೀದೇವರು ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಕಿರುಸುದ್ದಿ

ತಿರುವು ಕಾಲುವೆ ಕಾಮಗಾರಿ ಪೂರ್ಣಗೊಳಿಸಿ



• **ಬೆಂಗಳೂರು:** ಹಲಗೆವಡೇರಹಳ್ಳಿ ಕೆರೆಗೆ ಕೊಳಚೆ ನೀರು ಸೇರದಂತೆ ನಿರ್ಮಿಸುತ್ತಿರುವ ತಿರುವು ಕಾಲುವೆಯನ್ನು 15 ದಿನಗಳಲ್ಲಿ ಪೂರ್ಣಗೊಳಿಸುವಂತೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಎಫ್‌ಐಸಿ ವಿಶೇಷ ಆಯುಕ್ತೆ ಸುಷಮಾ ಗೋಡಬೋಲೆ ಅಧಿಕಾರಿಗಳಿಗೆ ಸೂಚಿಸಿದರು. ಬೆಂಗಳೂರು ಪಶ್ಚಿಮ ವಲಯದ ಆರ್.ಆರ್ ನಗರ ವ್ಯಾಪ್ತಿಯ ಪ್ರವಾಹ ಪೀಡಿತ ಪ್ರದೇಶಗಳು ಹಾಗೂ ಕೆರೆಗಳನ್ನು ಪರಿಶೀಲಿಸಿದ ಅವರು, ಹಲಗೆವಡೇರಹಳ್ಳಿ ಕೆರೆಯ ಅಭಿವೃದ್ಧಿ ಕಾಮಗಾರಿ ಪ್ರಗತಿಯಲ್ಲಿದ್ದು, ವಾಕ್‌ವೇಗೆ ಗ್ರಾವೆಲ್ ಅಳವಡಿಸಬೇಕು ಹಾಗೂ ಬಾಕಿ ಉಳಿದಿರುವ ಫೆನ್ಸಿಂಗ್ ಕಾಮಗಾರಿಯನ್ನು ಕೂಡಲೇ ಪೂರ್ಣಗೊಳಿಸುವಂತೆ ಸೂಚನೆ ನೀಡಿದರು. ಕೆರೆಗೆ ಕೊಳಚೆ ನೀರು ಸೇರದಂತೆ ತಿರುವು ಗಾಲುವೆ ನಿರ್ಮಾಣ ಕಾಮಗಾರಿ ಶೇ. 60ರಷ್ಟು ಪೂರ್ಣಗೊಂಡಿದ್ದು, ಉಳಿದ ಕಾಮಗಾರಿಯನ್ನು 15 ದಿನಗಳಲ್ಲಿ ಪೂರ್ಣಗೊಳಿಸಬೇಕು. ತೋಟಗಾರಿಕಾ ವಿಭಾಗದೊಂದಿಗೆ ಸಮನ್ವಯ ಸಾಧಿಸಿ, ಕೆರೆಯ ಸುತ್ತಮುತ್ತ ಅಲಂಕಾರಿಕ ಹೂಬಿಡುವ ಸಸಿಗಳು ಹಾಗೂ ಹಣ್ಣಿನ ಸಸಿಗಳನ್ನು ನೆಡುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಬಾವಿ ಪುನಶ್ಚೇತನಕ್ಕೆ ಪ್ರಸ್ತಾವನೆ ಸಲ್ಲಿಸಿ:ಹಲಗೆವಡೇರಹಳ್ಳಿ ಕೆರೆ ಸಮೀಪದಲ್ಲಿರುವ ಹಳೆಯ ಬಾವಿಯ ಪುನಶ್ಚೇತನ ಕಾಮಗಾರಿಗೆ ಸಂಬಂಧಿಸಿದಂತೆ ಪ್ರಸ್ತಾವನೆ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಯಿತು. ರಾಜರಾಜೇಶ್ವರಿ ನಗರ ಆರ್ಚ್ ಸಮೀಪದ ರಾಜಕಾಲುವೆಯನ್ನು ಪರಿಶೀಲಿಸಿ, ಭಾರಿ ಮಳೆಯ ಸಂದರ್ಭದಲ್ಲಿ ಹೆಚ್ಚುವರಿ ನೀರು ಮುಖ್ಯ ರಸ್ತೆಗೆ ಹರಿದು ಪ್ರವಾಹ ಉಂಟಾಗುವುದನ್ನು ತಡೆಗಟ್ಟಲು ರಸ್ತೆಯ ಪಕ್ಕದಲ್ಲಿರುವ ರಾಜಕಾಲುವೆಯ ತಡೆಗೋಡೆಯ ಎತ್ತರವನ್ನು ಹೆಚ್ಚಿಸುವಂತೆ ಸಲಹೆ ನೀಡಿದರು. ಪ್ರವಾಹ ಪೀಡಿತ ಪ್ರದೇಶಗಳಿಗೂ ಭೇಟಿ ನೀಡಿ, ಪರಿಶೀಲನೆ ನಡೆಸಿ,ಚರಂಡಿಗಳ ದುರಸ್ತಿ ಹಾಗೂ ಹೂಳೆತ್ತುವಿಕೆ ಕಾರ್ಯಗಳನ್ನು ತ್ವರಿತವಾಗಿ ಕೈಗೊಳ್ಳುವಂತೆ ಸೂಚಿಸಿದರು.

ಅತ್ಯಾಧುನಿಕ ರಿಸರ್ಚ್ ಸೆಂಟರ್ ಉದ್ಘಾಟನೆ



• **ಬೆಂಗಳೂರು:** ಭಾರತದ ಔಷಧ ಸಂಶೋಧನೆ ಮತ್ತು ಅಭಿವೃದ್ಧಿ ಕ್ಷೇತ್ರಕ್ಕೆ ಹೊಸ ಮೈಲಿಗಲ್ಲು ಸೇರ್ಪಡೆಯಾಗಿದ್ದು, ಹೈದರಾಬಾದ್ ಮೂಲದ ಜಿವಿಆರ್‌ಪಿ ಮತ್ತು ಸ್ಟೆಪ್ಸ್ ಬಯೋಸೈನ್ಸಸ್ ಸಂಸ್ಥೆಗಳ ಸಹಭಾಗಿತ್ವದಲ್ಲಿ ಬೆಂಗಳೂರಿನಲ್ಲಿ ಅತ್ಯಾಧುನಿಕ ಜಿವಿಆರ್‌ಪಿ ಸ್ಟೆಪ್ಸ್ ಬಯೋ ರಿಸರ್ಚ್ ಸೆಂಟರ್ (ಜಿಎಸ್‌ಆರ್‌ಸಿ) ಉದ್ಘಾಟನೆಯಾಗಿದೆ. ಜಿವಿಆರ್‌ಪಿ ಲೈಫ್ ಸೈನ್ಸಸ್ ಕ್ಲಸ್ಟರ್ ಲೈಫ್‌ಸ್ಕೇಪ್ಸ್ ಆವರಣದಲ್ಲಿ ನಿರ್ಮಾಣವಾಗಿರುವ 15,000 ಚದರ ಅಡಿ ವಿಸ್ತೀರ್ಣದ ಈ ಕೇಂದ್ರವನ್ನು ಔಷಧ ಸಂಯೋಜನೆ (ಫಾರ್ಮುಲೇಶನ್) ಸಂಶೋಧನೆ ಮತ್ತು ಅಭಿವೃದ್ಧಿಗೆ ಮೀಸಲಾದ ಅತ್ಯಾಧುನಿಕ ಸೆಂಟರ್ ಆಫ್ ಎಕ್ಸಲೆನ್ಸ್ ಆಗಿ ರೂಪಿಸಲಾಗಿದೆ. ಜಾಗತಿಕ ಮಟ್ಟದಲ್ಲಿ ಹೆಚ್ಚುತ್ತಿರುವ ಸಂಕೀರ್ಣ ಔಷಧ ಅಭಿವೃದ್ಧಿ ಅಗತ್ಯಗಳಿಗೆ ಸ್ಪಂದಿಸುವ ಉದ್ದೇಶದಿಂದ ಈ ಕೇಂದ್ರ ಸ್ಥಾಪನೆಯಾಗಿದೆ. ಕೇಂದ್ರದಲ್ಲಿ ಸ್ಟೆರೈಲ್ ಇಂಜೆಕ್ಟಬಲ್ಸ್, ಕಣ್ಣಿನ ಮತ್ತು ಕಿವಿ ಸಂಬಂಧಿತ ಔಷಧಗಳು ಸೇರಿದಂತೆ ಸಂಕೀರ್ಣ ಔಷಧ ರೂಪಗಳ ಅಭಿವೃದ್ಧಿಗೆ ಅಗತ್ಯವಿರುವ ಅತ್ಯಾಧುನಿಕ ಪ್ರಯೋಗಾಲಯಗಳು ಹಾಗೂ ವೈಜ್ಞಾನಿಕ ಮೂಲ ಸೌಕರ್ಯಗಳನ್ನು ಅಳವಡಿಸಲಾಗಿದೆ. ಪ್ರಿಕ್ಲಿನಿಕಲ್ ಸಂಶೋಧನೆಯಿಂದ ಹಿಡಿದು ಅಂತಿಮ ಔಷಧ ಉತ್ಪನ್ನ ಅಭಿವೃದ್ಧಿವರೆಗೆ ಸಮಗ್ರ ಸೇವೆ ಒದಗಿಸುವ ಸಾಮರ್ಥ್ಯ ಈ ಕೇಂದ್ರಕ್ಕಿದೆ.

ಸಿಬ್ಬಂದಿಗೆ ಸಂಬಳ, ಕರೆಂಟ್ ಬಿಲ್, ಇಂಟರ್‌ನೆಟ್ ಬಿಲ್ ಕಟ್ಟಲು ಏಜೆನ್ಸಿಗಳ ಪರದಾಟ

ಸಂಕಷ್ಟದಲ್ಲಿ ಗ್ರಾಮ ಒನ್ ಕೇಂದ್ರಗಳು

▸ ಎಸ್. ರುದ್ರೇಶ್ವರ

ದಿಗಂತ ವಿಶೇಷ



• **ರಾಮನಗರ:** ಗ್ರಾಮೀಣ ಪ್ರದೇಶದ ಜನರಿಗೆ ಒಂದೇ ಸೂರಿನಡಿ ಸರ್ಕಾರದ ಎಲ್ಲಾ ಸೌಲಭ್ಯಗಳನ್ನು ತಲುಪಿಸುವ ಸಲುವಾಗಿ ಆರಂಭಿಸಿದ್ದ ಗ್ರಾಮ ಒನ್ ಕೇಂದ್ರಗಳು ಇದೀಗ ಸೂಕ್ತ ಆದಾಯ ಕಾಣದೇ ಸಂಕಷ್ಟಕ್ಕೆ ಸಿಲುಕಿವೆ.

ಕಳೆದ ಬಿಜೆಪಿ ಸರ್ಕಾರ ಗ್ರಾಮ ಒನ್ ಯೋಜನೆಗೆ ಚಾಲನೆ ನೀಡಿತ್ತು. ನಾಗರಿಕರು ಸರಕಾರಿ ಸೇವೆಗಳನ್ನು ಪಡೆಯಲು ಜಿಲ್ಲೆ, ತಾಲೂಕು ಮತ್ತು ಹೋಬಳಿ ಕೇಂದ್ರಗಳಿಗೆ ಅಲೆಯುವುದನ್ನು ತಪ್ಪಿಸಿ, ಅವರಿಗೆ ತಮ್ಮ ಗ್ರಾಮಗಳಲ್ಲಿಯೇ ಸರ್ಕಾರಿ ಸೇವೆಗಳು ಸಿಗುವಂತೆ ಮಾಡುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿತ್ತು.

ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಗ್ರಾಮ ಒನ್ ಕೇಂದ್ರಗಳಿದ್ದು, ಬೆಂಗಳೂರು ದಕ್ಷಿಣ ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿ 178 ಗ್ರಾಮಾ ಒನ್ ಫ್ರಾಂಚೈಸಿಗಳು ಕಾರ್ಯಾರಂಭ ಮಾಡುತ್ತಿದ್ದವು. ಇನ್ನೊಂದೆಡೆ ಫ್ರಾಂಚೈಸಿ ಪಡೆದವರ ಜೀವನೋಪಾಯಕ್ಕೆ ಅನುಕೂಲ ವಾಗುವ ನಿಟ್ಟಿನಲ್ಲಿಯೂ ಈ ಯೋಜನೆ ರೂಪಿಸಲಾಗಿತ್ತು. ಆದರೆ ಬದುಕು ಕಟ್ಟಿಕೊಳ್ಳುವ ಸಲುವಾಗಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಫ್ರಾಂಚೈಸಿ ಪಡೆದಿದ್ದವರಿಗೆ ಇದೀಗ ಕಚೇರಿ ಬಾಡಿಗೆ ಹೊಂದಿಸುವುದಕ್ಕೂ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ.

ಸರ್ಕಾರದ ಆಯುಷ್ಮಾನ್ ಭಾರತ್, ಗೃಹಜ್ಯೋತಿ, ಗೃಹಲಕ್ಷ್ಮಿ, ಯುವನಿಧಿ ಯೋಜನೆಗಳ ಅರ್ಜಿಗಳನ್ನು ಗ್ರಾಮ ಒನ್ ಕೇಂದ್ರಗಳಲ್ಲಿ ಸಲ್ಲಿಸಿದ್ದು ಈ ಯೋಜನೆಗಳ ಕಮಿಷನ್ ಹಣವೂ ಬಂದಿಲ್ಲದ ಕಾರಣ ಇದನ್ನೇ ನಂಬಿಕೊಂಡಿದ್ದ ಸಿಬ್ಬಂದಿಗೆ ನಿರ್ವಹಣೆ ಕಷ್ಟವಾಗಿದೆ. ಸಾಕಷ್ಟು ಆಸೆ ಇಟ್ಟುಕೊಂಡು ನಮ್ಮ ಜೀವನ ನಿರ್ವಹಣೆಗೆ ಒಂದು ದಾರಿ ಸಿಕ್ಕಿತೆಂದು ಸಾಲ ಮಾಡಿ ಪ್ರಾರಂಭಿಸಿದ ಗ್ರಾಮಾ ಒನ್ ಕೇಂದ್ರಗಳು ಹಲವು ಸಮಸ್ಯೆಗಳ ಕಾರಣ ತೀವ್ರ ಸಂಕಷ್ಟಕ್ಕೆ ಸಿಲುಕಿಕೊಂಡಿವೆ.

ಶಾಲಾ ಕಾಲೇಜುಗಳು ಪ್ರಾರಂಭದ ಸಮಯ ಇಲ್ಲವೆ, ಸರ್ಕಾರ ಯಾವುದಾದರೂ ಹೊಸ ಯೋಜನೆಗಳನ್ನು ಜಾರಿಗೆ ತಂದಾಗ ಮಾತ್ರ ಗ್ರಾಮಾ ಒನ್‌ಗಳತ್ತ ತಲೆ ಹಾಕುವ ಸಾರ್ವಜನಿಕರು, ಉಳಿದ ಸಮಯದಲ್ಲಿ ಇವುಗಳ ಕಡೆ ತಿರುಗಿಯೂ ನೋಡುತ್ತಿಲ್ಲ, ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ಈ ಕೇಂದ್ರಗಳ ಬಾಡಿಗೆ ಕಟ್ಟಲು ಕೆಲವರು ಕಷ್ಟ ಪಡುತ್ತಿದ್ದಾರೆ.

ಸಂಬಳ, ಕರೆಂಟ್ ಬಿಲ್, ಇಂಟರ್‌ನೆಟ್ ಬಿಲ್‌ಗಳನ್ನು ಕಟ್ಟಲು ಸಾಧ್ಯವಾಗದೆ ಸಿಬ್ಬಂದಿ ನರಳಾಡುತ್ತಿದ್ದು ಇದರ ಸಹವಾಸವೇ ಸಾಕಪ್ಪ ಎಂದು ಹಲವರು ಕೇಂದ್ರಗಳ ಬಾಗಿಲು ಹಾಕಿ ಬೇರೆ ಕೆಲಸಗಳನ್ನು ಹುಡುಕಿಕೊಂಡಿದ್ದಾರೆ. ಇದರೊಟ್ಟಿಗೆ ಗ್ರಾಮ ಒನ್ ಕೇಂದ್ರಗಳು ಭದ್ರತಾ ಠೇವಣಿಯಾಗಿ 5 ಸಾವಿರ ಕಟ್ಟಬೇಕೆಂಬ ನಿಯಮವಿದ್ದು, ಬಾಡಿಗೆ ಕಟ್ಟಲು ಹಣವಿಲ್ಲದ ಸಿಬ್ಬಂದಿಗಳು ಭದ್ರತಾ ಠೇವಣಿ ಕಟ್ಟದಿರುವ ಕಾರಣ ಹಲವು ಕೇಂದ್ರಗಳಲ್ಲಿ ಅವರ ಲಾಗಿನ್ ಐಡಿ ಬಂದ್ ಮಾಡಲಾಗಿದೆ.

ನಿರ್ವಹಣೆ ಕಷ್ಟ

ಸರ್ಕಾರದ ಎಲ್ಲಾ ಸೇವೆಗಳನ್ನು ಒಂದೆ ಕಡೆ ನೀಡುವ ಮೂಲಕ ಪಾರದರ್ಶಕತೆ ತಂದು ಸಾರ್ವಜನಿಕರಿಗೆ ಅನೂಕೂಲ ಕಲ್ಪಿಸುವ ಉದ್ದೇಶದಿಂದ ಜಾರಿಗೆ ಬಂದ ಈ ಕೇಂದ್ರಗಳನ್ನು ಬಲಪಡಿಸಲು ಸರ್ಕಾರ ಗಮನಹರಿಸಬೇಕಿತ್ತು. ಆದರೆ ಈ ಹಿಂದೆ ಗ್ರಾಮ ಪಂಚಾಯಿತಿಗಳಲ್ಲಿ ಆರಂಭವಾಗಿದ್ದ ಬಾಪೂಜಿ ಕೇಂದ್ರಗಳನ್ನು ಬಂದ್ ಮಾಡದ ಕಾರಣ ಅಲ್ಲಿಯೂ ಎಲ್ಲಾ ಸೇವೆಗಳು ಸಿಗುವ ಕಾರಣ ಸಾರ್ವಜನಿಕರು ತಮ್ಮೆಲ್ಲಾ ಕೆಲಸಗಳನ್ನು ಅಲ್ಲೆ ಮಾಡಿಸಿಕೊಳ್ಳುವ ಕಾರಣ ಗ್ರಾಮಾ ಒನ್ ಗಳತ್ತ ಮುಖ ಮಾಡುತ್ತಿಲ್ಲ. ಇದು ಗ್ರಾಮ ಒನ್ ಕೇಂದ್ರಗಳ ಮೇಲೆ ಪರಿಣಾಮ ಬೀರಿದ್ದು ಕೆಲವು ಯೋಜನೆಗಳಿಗಾಗಿ ಮಾತ್ರ ಜನರು ಗ್ರಾಮ ಒನ್ ಕೇಂದ್ರಗಳಲ್ಲಿ ಸೇವೆ ಪಡೆಯಲು ಆಗಮಿಸುವಂತಾಗಿದ್ದು, ಪ್ರಾರಂಭದಲ್ಲಿ ಅತ್ಯುತ್ಸಾಹದಲ್ಲಿ ಫ್ರಾಂಚೈಸಿ ಪಡೆದ ಸಿಬ್ಬಂದಿ ಅದರ ನಿರ್ವಹಣೆಗೂ ಕಷ್ಟ ಪಡುವಂತಾಗಿದೆ.

ಬೆಂಗಳೂರು ಒನ್‌ನಲ್ಲಿ ಶೇ.50 ದಂಡ ಪಾವತಿಸಿ

• **ಬೆಂಗಳೂರು:** ವಾಹನಗಳ ಮೇಲೆ ಬಾಕಿಯಿರುವ ದಂಡದ ವಿವರ ಹಾಗೂ ಪಾವತಿಸುವ ವಿಧಾನವನ್ನು ಕರ್ನಾಟಕ ಸ್ಟೇಟ್ ಪೊಲೀಸ್ ಆ್ಯಪ್, ಬಿಟಿಪಿ ಅಸ್ತ್ರ ಆ್ಯಪ್, ಸಂಚಾರ ಪೊಲೀಸ್ ಠಾಣೆ, ಸಂಚಾರ ನಿರ್ವಹಣ ಕೇಂದ್ರ ಹಾಗೂ ಕರ್ನಾಟಕ/ ಬೆಂಗಳೂರು ಒನ್ ವೆಬ್‌ಸೈಟ್‌ಗಳಲ್ಲಿ ಲಭ್ಯವಾಗಲಿದೆ. ಪೊಲೀಸ್ ಇಲಾಖೆ ದಾಖಲಿಸಿರುವ ಇ-ಚಲನ್ ಪ್ರಕರಣಗಳಲ್ಲಿ ದಂಡ ಪಾವತಿಸದೆ ಬಾಕಿ ಉಳಿಸಿಕೊಂಡವರು, ದಂಡ ಮೊತ್ತದಲ್ಲಿ ಶೇ.50 ರಷ್ಟು ರಿಯಾಯಿತಿ ಪಡೆಯ ಬಹುದಾಗಿದೆ ಎಂದು ಸಾರಿಗೆ ಇಲಾಖೆ ಕಾರ್ಯದರ್ಶಿ ಪುಷ್ಪ ವಿ.ಎಸ್. ಈಗಾಗಲೇ ಆದೇಶ ಹೊರಡಿಸಿದ್ದಾರೆ. 2026ರ ಮೇ ತಿಂಗಳ ಮೊದಲು ಪೊಲೀಸ್ ಇಲಾಖೆಯ ಸಂಚಾರಿ ಇ-ಚಲನ್‌ನಲ್ಲಿ ದಾಖಲಾಗಿರುವ ಮತ್ತು ಇನ್ನೂ ಪಾವತಿ ಯಾಗದಿರುವ ಪ್ರಕರಣಗಳಿಗೆ ಈ ರಿಯಾಯಿತಿ ಅನ್ವಯವಾಗಲಿದೆ. ಈ ರಿಯಾಯಿತಿಯನ್ನು ಪಡೆಯಲು ವಾಹನ ಮಾಲೀಕರಿಗೆ ಜೂ. 21ರಿಂದ ಜು.10ರವರೆಗೆ ಕಾಲಾವಕಾಶ ನೀಡಲಾಗಿದೆ.

ಈ ಅವಧಿಯಲ್ಲಿ ಬಾಕಿ ದಂಡದ ಅರ್ಧ ಮೊತ್ತ ಪಾವತಿಸುವ ಮೂಲಕ ಪ್ರಕರಣಗಳನ್ನು ಇತ್ಯರ್ಥಪಡಿಸಿ ಕೊಳ್ಳಬಹುದಾಗಿದೆ.

ನಾಳೆಯಿಂದ ಪ್ರದರ್ಶನ ಮೇಳ

• **ಬೆಂಗಳೂರು:** ನಗರದ ಅಂತಾರಾಷ್ಟ್ರೀಯ ವಸ್ತುಪ್ರದರ್ಶನ ಕೇಂದ್ರ ದಲ್ಲಿ ಜೂ. 11 ರಿಂದ 13 ರವರೆಗೆ ಆಹಾರ, ಪಾನೀಯ, ಕೋಳಿ ಸಾಕಣೆ, ಹೈನುಗಾರಿಕೆ ಮತ್ತು ಅಡುಗೆ ಸಲಕರಣೆಗಳ ಪಾಲುದಾರರನ್ನು ಒಂದೇ ವೇದಿಕೆಯಲ್ಲಿ ಒಗ್ಗೂಡಿಸುವ ಐದು ಪ್ರಮುಖ ವಲಯಗಳ ವ್ಯಾಪಾರ ಮತ್ತು ಪ್ರದರ್ಶನ ಮೇಳ ಆಯೋಜಿಸಲಾಗಿದೆ. ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್. ಮುನಿಯಪ್ಪ ಅವರು ಸಮ್ಮೇಳನಕ್ಕೆ ಚಾಲನೆ ನೀಡಲಿದ್ದು, ದೇಶ, ವಿದೇಶಗಳ ತಯಾರಕರು, ಪೂರೈಕೆದಾರರು, ವಿತರಕರು, ನವೋದ್ಯಮಗಳು ಹಾಗೂ ಕೈಗಾರಿಕಾ ವೃತ್ತಿಪರರಿಗೆ ತಮ್ಮ ಇತ್ತೀಚಿನ ಉತ್ಪನ್ನಗಳು, ತಂತ್ರಜ್ಞಾನ ಮತ್ತು ನವೀನ ಆವಿಷ್ಕಾರಗಳನ್ನು ಪ್ರದರ್ಶಿಸಲು ಸಮಗ್ರ ವೇದಿಕೆಯನ್ನು ಇದು ಒದಗಿಸಲಿದೆ. ಆಹಾರ ಸಂಸ್ಕರಣೆ, ಚಹಾ-ಕಾಫಿ ಹಾಗೂ ಕೋಳಿ ಸಾಕಣೆ ಕ್ಷೇತ್ರಗಳ 100ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಲಿದ್ದು, ಸುಧಾರಿತ ಯಂತ್ರೋಪಕರಣಗಳು, ನವೀನ ಪ್ಯಾಕೇಜಿಂಗ್ ಹಾಗೂ ಆಟೋಮೇಷನ್ ಪರಿಹಾರಗಳು, ವಿಶೇಷ ಆಹಾರ ಪದಾರ್ಥಗಳು ಸೇರಿದಂತೆ ಹಲವು ಉತ್ಪನ್ನಗಳನ್ನು ಪ್ರದರ್ಶಿಸಲಾಗುತ್ತಿದೆ. ಈ ವಸ್ತು ಪ್ರದರ್ಶನದಲ್ಲಿ ಕರ್ನಾಟಕ ಪ್ರಗತಿಪರ ಹೈನುಗಾರರ ಸಂಘದ ಅಧ್ಯಕ್ಷ ಬಿ.ಜಿ. ಪೃಥ್ವಿಗೌಡ, ಎಫ್‌ಕೆಸಿಸಿಐ ಅಧ್ಯಕ್ಷೆ ಉಮಾ ರೆಡ್ಡಿ, ಫೇರಿ ಅಧ್ಯಕ್ಷ ರಮೇಶ್ ಶಿವಣ್ಣ, ಕ್ರೆಸ್ಮಾ ಅಧ್ಯಕ್ಷ ಸುರೇಂದ್ರ ಕುಮಾರ್ ಸೇರಿದಂತೆ ಇತರರು ಭಾಗವಹಿಸಲಿದ್ದಾರೆ.

ಶಿಕ್ಷಕಿ ವಿಜಯಲಕ್ಷ್ಮೀ ಸೇವೆಗೆ ಅಭಿನಂದನೆ



• **ನೆಲಮಂಗಲ:** ಕೂಲಿಪುರ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ 34ವರ್ಷಗಳು ಸೇವೆ ಸಲ್ಲಿಸಿದ ಮುಖ್ಯ ಶಿಕ್ಷಕಿ ವಿಜಯಲಕ್ಷ್ಮೀ ಎ.ಸಿರವರಿಗೆ ಹಳೆಯ ವಿದ್ಯಾರ್ಥಿಗಳು ಚಿನ್ನದ ಉಂಗುರ ನೀಡಿ ಅಭಿನಂದನೆ ಸಲ್ಲಿಸಿದರೆ ಗ್ರಾಮಸ್ಥರು ಅನ್ನದಾನ ಮಾಡಿದ್ದಾರೆ.

ನಗರಸಭೆ ವ್ಯಾಪ್ತಿಯ ಕೂಲಿಪುರಗ್ರಾಮದ ಸರಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯ ಆವರಣದಲ್ಲಿ ಆಯೋಜಿಸಲಾಗಿದ್ದ ವಯೋ ನಿವೃತ್ತ ಮುಖ್ಯಶಿಕ್ಷಕಿ ವಿಜಯಲಕ್ಷ್ಮೀರವರಿಗೆ ಅಭಿನಂದನಾ ಸಮಾರಂಭವನ್ನು ಅದ್ದೂರಿಯಾಗಿ ಆಚರಣೆ ಮಾಡಿದರು.

ಗ್ರಾಮಸ್ಥರಿಂದ ಅನ್ನದಾನ : ಕೂಲಿಪುರ ಶಾಲೆಯಲ್ಲಿಯೇ ಸಂಪೂರ್ಣವೃತ್ತಿ ಜೀವನವನ್ನು ಕಳೆದಿರುವ ವಿಜಯಲಕ್ಷ್ಮೀಯವರು ಮೇ31ರಂದು ವಯೋನಿವೃತ್ತಿ ಹೊಂದಿದ್ದರು. ಕೂಲಿಪುರ ಗ್ರಾಮದ ಬಹುಪಾಲು ವಿದ್ಯಾರ್ಥಿಗಳಿಗೆ ಇವರೇ ಶಿಕ್ಷಕಿಯಾಗಿದ್ದಾರೆ. ಪ್ರೀತಿಯ ಶಿಕ್ಷಕಿಯವಯೋ ನಿವೃತ್ತಿ ಹಿನ್ನಲೆ ಗ್ರಾಮದಲ್ಲಿ ಅಭಿನಂದನಾ ಸಮಾರಂಭವನ್ನು ಹಬ್ಬದಂತೆ ಆಚರಣೆ ಮಾಡಿದ್ದು ಗ್ರಾಮದ ಜನರು ಒಟ್ಟಾಗಿ ಸೇರಿ ಅವರ ಹೆಸರಿನಲ್ಲಿ ಅನ್ನದಾನವನ್ನು ಮಾಡಿದ್ದು, ಗ್ರಾಮದ ಜನರು ಪ್ರೀತಿ ಕಂಡು ಆನಂದದ ಕಣ್ಣೀರು ಹಾಕಿದ್ದಾರೆ.

ವಿದ್ಯಾರ್ಥಿಗಳ ಕಣ್ಣೀರು: ನಮ್ಮ ಶಿಕ್ಷಕರು ನಮ್ಮ ಮಕ್ಕಳು, ಮೊಮ್ಮಕ್ಕಳಿಗೂ ಶಿಕ್ಷಕರಾಗಿದ್ದರು ಅವರನ್ನು ಪ್ರತಿ ದಿನ ನಮ್ಮ ಗ್ರಾಮದ ಶಾಲೆಗೆ ಕಂಡು ಮಾತನಾಡಿಸುತ್ತಿದ್ದೇವು, ಈಗ ನಿವೃತ್ತಿಯಾಗಿದ್ದಾರೆ. ಒಂದು ಕಡೆ ಬೇಸರವಾಗುತ್ತದೆ. ಅವರ ಸೇವೆಯನ್ನು ನಾವು ಎಂದಿಗೂ ಮರೆಯುವಂತಿಲ್ಲ ಎಂದು ಹಳೆಯ ವಿದ್ಯಾರ್ಥಿಗಳು, ಪ್ರಸ್ತುತ ವಿದ್ಯಾರ್ಥಿಗಳು ಕಣ್ಣೀರು ಹಾಕಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ಸಿರಮೇಶ್ ಮಾತನಾಡಿ, ಒಂದೇಶಾಲೆಯಲ್ಲಿ 34 ವರ್ಷಸೇವೆಸಲ್ಲಿಸುವುದು ಸವಾಲಿನ ಕೆಲಸ, ಅದಕ್ಕೆಗ್ರಾಮದಜನರು ಪ್ರೀತಿ, ನಂಬಿಕೆ ಬಹಳಷ್ಟು ಮುಖ್ಯ. ವಿಜಯಲಕ್ಷ್ಮಿರವರು ನಿರಂತರ ಸೇವೆ ಸಮಾಜಕ್ಕೆ ಮಾದರಿಯಾಗಿದ್ದು, ಗ್ರಾಮಸ್ಥರು ಮಾಡಿರುವ ಅಭಿನಂದನಾ ಸಮಾರಂಭವನ್ನು ಗಮನಿಸಿದರೇ ಶಿಕ್ಷಕಿಯ ಸೇವೆಯಶ್ರೇಷ್ಠತೆ ಅರಿವಾಗುತ್ತದೆ ಎಂದರು.

ಸಂದರ್ಭದಲ್ಲಿ, ನಗರಸಭೆ ಅಧ್ಯಕ್ಷ ಎನ್. ಗಣೇಶ್, ಎಡಿಸಿಐ ನರಸಿಂಹಮೂರ್ತಿ, ಬಿಆರ್‌ಸಿ ಅನಿತಾ, ಸಿಆರ್‌ಪಿ ಮಂಜುನಾಥ್, ವಿದ್ಯಾ ಇಲಾಖೆ ನೌಕರರಸಂಘ ಅಧ್ಯಕ್ಷ ನಂಜುಂಡಯ್ಯ, ಪ್ರಾಥಮಿಕ ಶಾಲೆ ಶಿಕ್ಷಕರಸಂಘದ ಅಧ್ಯಕ್ಷ ಗಿರೀಶ್, ಕಾರ್ಯದರ್ಶಿ ಕೃಷ್ಣಮೂರ್ತಿ, ಗ್ರಾ.ಪಂ‌ಮಾಜಿ ಉಪಾಧ್ಯಕ್ಷ ರವಿ.ಕೆ, ರಾಜಣ್ಣ, ಮಾಜಿ ಸದಸ್ಯ ವೆಂಕಟರಮಣ, ಉಮಾದೇವಿ,ಹಳೆಯವಿದ್ಯಾರ್ಥಿಗಳಾದಕುಮಾರ್, ಮುಖ್ಯಶಿಕ್ಷಕಿ ವಿಜಯಲಕ್ಷ್ಮಿ ಮಗಳು ಪ್ರೀತಿ.ಆರ್ ವಸಂತ್, ಶಿಕ್ಷಕರಾದ ಮಂಜುನಾಥ್, ಮಂಜುಳ ಸೇರಿದಂತೆ ಹಳೆಯವಿದ್ಯಾರ್ಥಿಗಳು, ಗ್ರಾಮಸ್ಥರು ಭಾಗವಹಿಸಿದ್ದರು.

ಹಾಡೋನಹಳ್ಳಿ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಡಾ.ಬಾಲಾಜಿ ಕಿವಿಮಾತು

ಸುಸ್ಥಿರ ಕೃಷಿ ಪದ್ಧತಿಯಿಂದ ಅಧಿಕ ಇಳುವರಿ



• **ದೊಡ್ಡಬಳ್ಳಾಪುರ:** ಕೃಷಿ ಕ್ಷೇತ್ರದಲ್ಲಿ ಹೆಚ್ಚುತ್ತಿರುವ ಉತ್ಪಾದನಾ ವೆಚ್ಚ, ಮಣ್ಣಿನ ಫಲವತ್ತತೆ ಕುಸಿತ ಹಾಗೂ ಪರಿಸರದ ಮೇಲೆ ಉಂಟಾಗುತ್ತಿರುವ ದುಷ್ಪರಿಣಾಮಗಳನ್ನು ತಡೆಗಟ್ಟಲು ವೈಜ್ಞಾನಿಕ ಮತ್ತು ಸುಸ್ಥಿರ ಕೃಷಿ ಪದ್ಧತಿಗಳನ್ನು ರೈತರು ಅಳವಡಿಸಿಕೊಳ್ಳಬೇಕು ಎಂದು ಹಾಡೋನಹಳ್ಳಿ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಡಾ.ಬಾಲಾಜಿ ಹೇಳಿದರು.

ತಾಲೂಕಿನ ಕೋಳೂರು ಗ್ರಾಮದಲ್ಲಿ ಕೃಷಿ ಇಲಾಖೆಯ ಕೇಂದ್ರ ಪುರಸ್ಕೃತ ಆತ್ಮ ಯೋಜನೆಯಡಿ ಖೇತ್ ಬಚಾವೋ ಅಭಿಯಾನದ ಅಂಗವಾಗಿ ಸಮತೋಲನ ರಸಗೊಬ್ಬರಗಳ ಬಳಕೆ ಕುರಿತು ಆಯೋಜಿಸಿದ್ದ ಅರಿವು ಮೂಡಿಸುವ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮಣ್ಣಿನ ಆರೋಗ್ಯ ಮತ್ತು ಬೆಳೆಗಳ ಗುಣಮಟ್ಟದ ಇಳುವರಿಯನ್ನು ಕಾಪಾಡಿಕೊಳ್ಳಲು ಸಮತೋಲಿತ ರಸಗೊಬ್ಬರಗಳ ಬಳಕೆ ಅತ್ಯಗತ್ಯ. ಮಣ್ಣು ಪರೀಕ್ಷೆಯ ಆಧಾರದ ಮೇಲೆ ಸಾರಜನಕ, ರಂಜಕ, ಪೊಟ್ಯಾಸಿಯಮ್ ಹಾಗೂ ಲಘು ಪೋಷಕಾಂಶಗಳನ್ನು ಸೂಕ್ತ ಪ್ರಮಾಣದಲ್ಲಿ ಬೆಳೆಗಳಿಗೆ ನೀಡುವುದೇ ಸಮತೋಲಿತ ಬಳಕೆಯಾಗಿದೆ.ಸಮತೋಲಿತ ರಸಗೊಬ್ಬರ ಬಳಕೆಯ ಪ್ರಮುಖ ಮಣ್ಣು ಪರೀಕ್ಷೆಯನ್ನು ರಸಗೊಬ್ಬರ ಹಾಕುವ ಮುನ್ನ ಕಡ್ಡಾಯವಾಗಿ ಮಣ್ಣು ಪರೀಕ್ಷೆ ಮಾಡಿಸಬೇಕು ಎಂದರು.

ಹಾಗೂ ರಾಸಾಯನಿಕ ಗೊಬ್ಬರಗಳನ್ನು ಅತಿಯಾಗಿ ಬಳಸದೇ ಮಣ್ಣಿನಆರೋಗ್ಯ ಕಾಪಾಡಲುಮಣ್ಣುಪರೀಕ್ಷೆಆಧಾರಿತಸಮತೋಲಿತ ರಸಗೊಬ್ಬರಗಳನ್ನು ಮತ್ತು ಜೈವಿಕ ಗೊಬ್ಬರಗಳನ್ನು ಬಳಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಆತ್ಮ ಯೋಜನೆಯ ತಾಂತ್ರಿಕ ವ್ಯವಸ್ಥಾಪಕರಾದ ಅರ್ಚನಾ, ಕೊಡಿಗೆಹಳ್ಳಿ ವಿ.ಎಸ್.ಎಸ್.ಎನ್ ನ ನಿರ್ದೇಶಕ ಬಸವರಾಜು, ಪ್ರಗತಿ ಪರ ರೈತರು ಹಾಗೂ ಗ್ರಾಮದ ರೈತರು ಭಾಗವಹಿಸಿದ್ದರು.

ಮಕ್ಕಳ ವ್ಯಕ್ತಿತ್ವ ವಿಕಸನ ಅಗತ್ಯ

• **ಆನೇಕಲ್:** ಶಿಸ್ತು, ಶೈಕ್ಷಣಿಕ ಶ್ರೇಷ್ಠತೆ ಹಾಗೂ ಸಮಗ್ರ ವ್ಯಕ್ತಿತ್ವ ವಿಕಸನವು ವಿದ್ಯಾರ್ಥಿಗಳ ಯಶಸ್ಸಿನ ಭದ್ರ ಬುನಾದಿ ಯಾಗಿದೆ ಎಂದು ಎಪಿಯುಸಿ ಪ್ರಾಂಶುಪಾಲರಾದ ಡಾ. ಬಿ.ಎಚ್.ಎಸ್. ತಿಮ್ಮಪ್ಪ, ತಿಳಿಸಿದರು.

ಅಲಯನ್ಸ್ ಪ್ರಿ-ಯೂನಿವರ್ಸಿಟಿ ಕಾಲೇಜು (ಎಪಿಯುಸಿ) ತನ್ನ ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗಾಗಿ 'ಇಗ್ನೈಟ್ 2026?27' ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿಗಳು ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಕರೆ ನೀಡಿದರು.

ಹೊಸ ಶೈಕ್ಷಣಿಕ ವರ್ಷದ ಆರಂಭವನ್ನು ಗುರುತಿಸಿದ ಈ ಕಾರ್ಯಕ್ರಮವು ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಸಂಸ್ಥೆಯ ಶೈಕ್ಷಣಿಕ ಸಂಸ್ಕೃತಿ, ಮೌಲ್ಯಗಳು ಹಾಗೂ ಲಭ್ಯವಿರುವ ಅವಕಾಶಗಳ ಕುರಿತು ಸಮಗ್ರ ಮಾಹಿತಿ ನೀಡುವ ವೇದಿಕೆಯಾಯಿತು. ಜ್ಞಾನ ಮತ್ತು ಪ್ರಬುದ್ಧತೆಯ ಸಂಕೇತವಾದ ಸಾಂಪ್ರದಾಯಿಕ ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಅಲಯನ್ಸ್ ವಿಶ್ವವಿದ್ಯಾಲಯದ ಇನ್‌ಕ್ಯುಬೇಷನ್ ಮತ್ತು ಇನ್ನೋವೇಷನ್ ವಿಭಾಗದ ಪ್ರೊ-ಉಪಕುಲಪತಿಗಳಾದ ಡಾ. ರೇ ಟ್ರೈಟಸ್ ಮಾತನಾಡಿ, ವಿದ್ಯಾರ್ಥಿಗಳು ನವೋದ್ಯಮ, ಸೃಜನಶೀಲತೆ ಮತ್ತು ಉದ್ಯಮಶೀಲ ಮನೋಭಾವವನ್ನು ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ನಿರಂತರ ಕಲಿಕೆ, ಹೊಂದಾಣಿಕೆ ಸಾಮರ್ಥ್ಯ ಮತ್ತು ಪರಿಶ್ರಮದ ಮಹತ್ವವನ್ನು ತಿಳಿಸಿದರು.

ಆನೇಕಲ್ ರೈಲ್ವೆ ಗೇಟ್: ಶೀಘ್ರ ಮೇಲ್ಸೇತುವೆ



• **ಆನೇಕಲ್** : ಅತ್ತಿಬೆಲೆ ರಸ್ತೆಯಲ್ಲಿನ ರೈಲು ಗೇಟ್ ಎಲ್.ಸಿ.112 ಬಳಿ ಆದಷ್ಟು ಬೇಗ ಫ್ಲೈ ಓವರ್ ನಿರ್ಮಿಸಲು ರೈಲ್ವೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ ಎಂದು ಬೆಂಗಳೂರು ಗ್ರಾಮಾಂತರ ಸಂಸದ ಡಾ. ಮಂಜುನಾಥ್ ತಿಳಿಸಿದರು.

ಅವರು ಆನೇಕಲ್ ರೈಲು ನಿಲ್ದಾಣ ಕಾಮಗಾರಿ ವೀಕ್ಷಣೆ ಹಾಗೂ ಸಾರ್ವಜನಿಕರ ಒತ್ತಾಸೆಯಂತೆ ರಸ್ತೆಯ ಅಗಲೀಕರಣ ಮತ್ತು ಸ್ಟೇಷನ್ ಉನ್ನತೀಕರಣ ಮುಂತಾದ ಸಮಸ್ಯೆ ಆಲಿಸಿ ಮಾತನಾಡಿದರು. (ಕಾಕತಾಳೀಯ ಎಂಬಂತೆ ಅದೇ ಸಮಯಕ್ಕೆ ಎರಡು ಗೂಡ್ಸ್ ಗಾಡಿಗಳು ಬಂದಾಗ ರೈಲು ಗೇಟ್‌ನ ಎರಡೂ ಬದಿ ಕಿಲೋ ಮೀಟರ್ ಗಟ್ಟಲೆ ವಾಹನಗಳು ನಿಂತವು. ಸ್ವಯಂ ಸಂಸದರ ವಾಹನವೇ ನಿಂತು ನಡೆದು ಬರಬೇಕಾಯಿತು.) ಆನೇಕಲ್ ರೈಲು ಗೇಟ್ ರಾಜ್ಯ ಹೆದ್ದಾರಿಯಲ್ಲಿದ್ದು ಸಮಸ್ಯೆ ಯನ್ನು ನಾನೇ ಹಲವು ಬಾರಿ ಅನುಭವಿಸಿದ್ದೇನೆ. ಎಲ್‌ಸಿ ಗೇಟ್ 112 ಬಳಿ ತಾತ್ಕಾಲಿಕವಾಗಿ ತಡೆ ಕಂಬ ಸರಿಸಲು ಸೂಚಿಸಿದ್ದು ವಾಹನ ಸಂಚಾರ ಸ್ವಲ್ಪ ಸುಧಾರಿಸುತ್ತದೆ.ಆದರೂಫ್ಲೈಓವರ್‌ನಿರ್ಮಾಣಅನಿವಾರ್ಯವಾಗಿದ್ದು ಕೇಂದ್ರ ರೈಲ್ವೆ ಸಚಿವರಾದ ಅಶ್ವಿನ್ ವೈಷ್ಣವ್ ಮತ್ತು ರಾಜ್ಯ ಸಚಿವರಾದ ಸೋಮಣ್ಣ ರವರ ಜೊತೆ ಚರ್ಚಿಸಿರುವೆ. ಅಂದಾಜು ?. 70 ಕೋಟಿ ಮಂಜೂರಾಗಿದ್ದು ಅಧಿಕಾರಿಗಳ ಜೊತೆ ಸಭೆ ನಡೆಸಿ ಕಾಮಗಾರಿಗೆ ಶೀಘ್ರ ಚಾಲನೆ ನೀಡಲಾಗುವುದು ಎಂದರು. ಹಾಗೆಯೇ ಮುಖ್ಯರಸ್ತೆ ಇಂದ ರೈಲು ನಿಲ್ದಾಣಕ್ಕೆ ಸಂಪರ್ಕ ರಸ್ತೆ, ಅಗಲೀಕರಣ ಕಾಮಗಾರಿ ಗೆ ?. 45 ಲಕ್ಷ ಮಂಜೂರಾಗಿದ್ದು ಟೆಂಡರ್ ಪ್ರಕ್ರಿಯೆ ಪೂರ್ಣವಾಗಿದೆ ಎಂದರು.

ಅಧಿಕಾರಿಗಳಿಗೆ ಉತ್ತರ ನಗರ ಪಾಲಿಕೆ ಆಯುಕ್ತ ಪಿ.ಸುನೀಲ್ ಕುಮಾರ್ ಸೂಚನೆ

ಆದ್ಯತೆ ಮೇರೆಗೆ ದೂರುಗಳ ಇತ್ಯರ್ಥಕ್ಕೆ ಕ್ರಮ



• **ಬೆಂಗಳೂರು:** ಸಹಾಯ ಪೋರ್ಟಲ್ ಹಾಗೂ ಫೋನ್-ಇನ್ ಕಾರ್ಯಕ್ರಮಗಳ ಮೂಲಕ ಸ್ವೀಕರಿಸಲಾದ ಸಾರ್ವಜನಿಕ ದೂರುಗಳನ್ನು ಆದ್ಯತೆಯ ಮೇರೆಗೆ ಇತ್ಯರ್ಥಪಡಿಸಬೇಕೆಂದು ಬೆಂಗಳೂರು ಉತ್ತರ ನಗರ ಪಾಲಿಕೆ ಆಯುಕ್ತ ಪಿ.ಸುನೀಲ್ ಕುಮಾರ್ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಬೆಂಗಳೂರು ಉತ್ತರ ನಗರ ಪಾಲಿಕೆ ವ್ಯಾಪ್ತಿಯ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ಪಾಲಿಕೆಯ ವಿವಿಧ ಅಭಿವೃದ್ಧಿ ಕಾಮಗಾರಿಗಳು, ಸಾರ್ವಜನಿಕ ದೂರುಗಳ ನಿರ್ವಹಣೆ, ಘನತ್ಯಾಜ್ಯ ವಿಲೇವಾರಿ, ರಸ್ತೆ ನಿರ್ವಹಣೆ, ಮಳೆಗಾಲ ಪೂರ್ವ ಸಿದ್ಧತೆ, ಉದ್ಯಾನಗಳ ನಿರ್ವಹಣೆ, ಪ್ರಾಣಿ ಕಲ್ಯಾಣ, ಇ-ಆಡಳಿತ ವ್ಯವಸ್ಥೆಗಳು ಸೇರಿದಂತೆ ಹಲವು ವಿಷಯಗಳ ಕುರಿತು ಸಮಗ್ರ ಪರಿಶೀಲನೆ ನಡೆಸಿದ್ದಾರೆ.

ಸಾರ್ವಜನಿಕ ದೂರುಗಳನ್ನು ಇತ್ಯರ್ಥಪಡಿಸಿ: ಸಹಾಯ ಪೋರ್ಟಲ್ ಹಾಗೂ ಫೋನ್-ಇನ್ ಕಾರ್ಯಕ್ರಮಗಳ ಮೂಲಕ ಸ್ವೀಕರಿಸಲಾದ ಸಾರ್ವಜನಿಕ ದೂರುಗಳನ್ನು ಆದ್ಯತೆಯ ಮೇರೆಗೆ ಇತ್ಯರ್ಥಪಡಿಸಬೇಕು.ಅಧಿಕಾರಿಗಳ ಲಾಗಿನ್ನಲ್ಲಿ ಬಾಕಿ ಉಳಿದಿರುವ ಹಾಗೂ ಪುನರಾವರ್ತಿತ ದೂರುಗಳನ್ನು ತಕ್ಷಣ ಪರಿಹರಿಸಿ, ಸಹಾಯ ಪೋರ್ಟಲ್ ನಲ್ಲಿ ಆ ಪ್ರಕರಣವನ್ನು ಮುಕ್ತಾಯ ಪಡಿಸಬೇಕು.ವರ್ಗಾವಣೆಗೊಂಡಿರುವ ಅಧಿಕಾರಿಗಳ ಲಾಗಿನ್ ನಲ್ಲಿ ಬಾಕಿ ಉಳಿದಿರುವ ಪ್ರಕರಣಗಳನ್ನು ಸಂಬಂಧಿತ ಅಧಿಕಾರಿಗಳಿಗೆ ಲಾಗಿನ್ ಗೆ ವರ್ಗಾಯಿಸಿ ಇತ್ಯರ್ಥಪಡಿಸುವಂತೆ ಸೂಚನೆ ನೀಡಿದ್ದಾರೆ.

ಸಂಪೂರ್ಣ ಸ್ವಚ್ಛತೆ ಕಾಪಾಡಿ: ಮಾರುಕಟ್ಟೆ ಪ್ರದೇಶಗಳು, ಕಸದ ವಾಹನಗಳು ಸಮರ್ಪಕವಾಗಿ ಕಾರ್ಯನಿರ್ವಹಿಸದ ಕಾರಣದಿಂದ ಉಂಟಾಗಿರುವ ಬ್ಲಾಕ್ ಸ್ಪಾಟ್ ಗಳು ಹಾಗೂ ಕಸ ಸಂಗ್ರಹವಾಗಿರುವ ಪ್ರದೇಶಗಳನ್ನು ತಕ್ಷಣ ಸ್ವಚ್ಛಗೊಳಿಸಲು ನಿರ್ದೇಶನ ನೀಡಿದ್ದಾರೆ. ಯಬಿ100 ಅಭಿಯಾನದಡಿ ಗುರುತಿಸಲಾದ ಬ್ಲಾಕ್ ಸ್ಪಾಟ್ ಸ್ಥಳಗಳಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿ ಸಂಪೂರ್ಣ ಸ್ವಚ್ಛತೆ ಕಾಪಾಡಬೇಕೆಂದು ತಿಳಿಸಿದ್ದಾರೆ.

ಕಾನೂನು ಕ್ರಮಕ್ಕೆ ಸೂಚನೆ: ಸೂಚಿಸಿದ ಅವರು, ಸ್ವಚ್ಛಗೊಳಿಸಿದ ಸ್ಥಳಗಳಲ್ಲಿ ಪುನಃ ಕಸ ಹಾಕುತ್ತಿರುವುದು ಕಂಡುಬಂದಲ್ಲಿ ಸಾಕ್ಷ್ಯಾಧಾರಗಳೊಂದಿಗೆ ಎಫ್ ಐಆರ್ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಜೂನ್ 20 ಮತ್ತು 21 ರ ಒಳಗೆ, 25 ಸಾವಿರಕ್ಕೂ ಹೆಚ್ಚು ಗಿಡ ನೆಡುವ ಕಾರ್ಯಕ್ಕೆ ಸಿದ್ಧತೆ ಮಾಡಿಕೊಳ್ಳಬೇಕು.ಜೂನ್ 15ರೊಳಗೆ ರಸ್ತೆಗಳ ಬದಿಯಲ್ಲಿ ಬಿದ್ದಿರುವ ಮರದ ಅವಶೇಷಗಳು ಹಾಗೂ ತ್ಯಾಜ್ಯಗಳನ್ನು ತೆರವುಗೊಳಿಸುವಂತೆ ತಿಳಿಸಿದ್ದಾರೆ.

ನಗರದ ಅಪಾಯಕಾರಿ ಕಟ್ಟಡಗಳು ಹಾಗೂ ಕುಸಿಯುವ ಸ್ಥಿತಿಯಲ್ಲಿರುವ ಕಾಂಪೌಂಡ್‌ಗಳನ್ನು ತೆರವುಗೊಳಿಸಲು ಕ್ರಮ ಕೈಗೊಂಡು ಸಾರ್ವಜನಿಕ ಸುರಕ್ಷತೆ ಖಚಿತಪಡಿಸಿಕೊಳ್ಳುವಂತೆ ಮಾಹಿತಿ ನೀಡಿದ್ದಾರೆ.

ಅನಧಿಕೃತ ವಾಹನ ನಿಲುಗಡೆ ವಿರುದ್ಧ ಟೋಯಿಂಗ್ ಕಾರ್ಯಾಚರಣೆಯನ್ನು ಬಲಪಡಿಸಿ, ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದ್ದಾರೆ. ಅರ್ಹ ಎನ್‌ಜಿಒಗಳನ್ನು ಆಯ್ಕೆ ಮಾಡಿ ಅಗತ್ಯ ಕಾರ್ಯಾದೇಶಗಳನ್ನು ನೀಡಬೇಕು ಹಾಗೂ ಪ್ರತಿದಿನ ಕನಿಷ್ಠ 40 ಎಬಿಸಿ ಶಸ್ತ್ರಚಿಕಿತ್ಸೆಗಳನ್ನು ನಡೆಸುವ ಗುರಿ ಹೊಂದಬೇಕು ಎಂದು ಸೂಚಿಸಿದ್ದಾರೆ.ಟೌನ್ ಪ್ಲಾನಿಂಗ್ ವಿಭಾಗವು ಅನುಮೋದಿತ ಕಟ್ಟಡ ನಕ್ಷೆ ಉಲ್ಲಂಘನೆಗಳ ವಿರುದ್ಧ ಕಟ್ಟುನಿಟ್ಟಿನ ನಿಗಾವಹಿಸಿ ಕ್ರಮ ಕೈಗೊಳ್ಳಬೇಕೆಂದು ಹೇಳಿದ್ದಾರೆ.

ಮೋದಿ ಸರ್ಕಾರಕ್ಕೆ 12 ವರ್ಷ ಪೂರ್ಣ

ಸುದೀರ್ಘ ನಾಯಕತ್ವ ಇಂದು ಎನ್‌ಡಿಎ ಸಭೆ

• ಹೊಸದಿಲ್ಲಿ: ಕೇಂದ್ರದಲ್ಲಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ 12 ವರ್ಷಗಳನ್ನು ಪೂರ್ಣಗೊಳಿಸಿರುವ ಹಿನ್ನೆಲೆ ಹಾಗೂ ದೇಶದ ಅತಿ ದೀರ್ಘಾವಧಿ ನಿರಂತರವಾಗಿ ಸೇವೆ ಸಲ್ಲಿಸಿದ ಚುನಾಯಿತ ಪ್ರಧಾನಿಯಾಗಿ ಮೋದಿ ಹೊಸ ದಾಖಲೆ ನಿರ್ಮಿಸುತ್ತಿರುವ ಸಂದರ್ಭದಲ್ಲಿ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟ (ಎನ್‌ಡಿಎ) ಬುಧವಾರ ರಾಜಧಾನಿಯಲ್ಲಿ ಮಹತ್ವದ ಸಭೆ ನಡೆಸಲಿದೆ.



ಭಾರತ ಮಂಟಪಂನಲ್ಲಿ ನಡೆಯಲಿರುವ ಈ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಬಿಜೆಪಿ ಉನ್ನತ ನಾಯಕರು ಹಾಗೂ ಎನ್‌ಡಿಎಯ ಎಲ್ಲ ಮಿತ್ರಪಕ್ಷಗಳ ಪ್ರಮುಖರು ಭಾಗವಹಿಸಲಿದ್ದಾರೆ. ಮೋದಿ ಅವರು ಭಾರತದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರ ದಾಖಲೆಯನ್ನು ಹಿಂದಿಕ್ಕುತ್ತಿರುವ ಹಿನ್ನೆಲೆಯಲ್ಲಿ ಅವರನ್ನು ಅಭಿನಂದಿಸುವ ವಿಶೇಷ ನಿರ್ಣಯವೊಂದನ್ನು ಸಭೆಯಲ್ಲಿ ಅಂಗೀಕರಿಸುವ ಸಾಧ್ಯತೆಯಿದೆ.

1952ರ ಸಾರ್ವತ್ರಿಕ ಚುನಾವಣೆಯ ನಂತರ ಚುನಾಯಿತ ಪ್ರಧಾನಿಯಾಗಿ ನೆಹರೂ 4,399 ದಿನಗಳ ಕಾಲ ಅಧಿಕಾರದಲ್ಲಿದ್ದರು. ಜೂ.10ರಂದು ಮೋದಿ ಅವರು ಈ ದಾಖಲೆಯನ್ನು ಮೀರಲಿದ್ದು, ದೇಶದ ಅತಿ ಹೆಚ್ಚು ದಿನಗಳ ಕಾಲ ನಿರಂತರವಾಗಿ ಅಧಿಕಾರದಲ್ಲಿರುವ ಚುನಾಯಿತ ಪ್ರಧಾನಿಯಾಗಲಿದ್ದಾರೆ. 2014ರ ಮೇ 26ರಂದು ಮೊದಲ ಬಾರಿಗೆ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ್ದ ಮೋದಿ, 2019ರಲ್ಲಿ ಮರು ಆಯ್ಕೆಯಾಗಿ ಎರಡನೇ ಅವಧಿ ಆರಂಭಿಸಿದ್ದರು. 2024ರ ಜೂನ್ 9ರಂದು ಮೂರನೇ ಅವಧಿಗೂ ಅಧಿಕಾರ ಸ್ವೀಕರಿಸಿದ್ದರು. ಮೂಲಗಳ ಪ್ರಕಾರ, ಆಂಧ್ರ ಪ್ರದೇಶ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರು ಪ್ರಧಾನಿ ಮೋದಿ ಅವರ ಸಾಧನೆಯನ್ನು ಅಭಿನಂದಿಸುವ ನಿರ್ಣಯ ಮಂಡಿಸಲಿದ್ದು, ನಾಗಾಲ್ಯಾಂಡ್ ಮುಖ್ಯಮಂತ್ರಿ ನೆಫಿಯು ರಿಯೊ ಅದನ್ನು ಅನುಮೋದಿಸಲಿದ್ದಾರೆ. ಬಳಿಕ ವಿವಿಧ ಮಿತ್ರಪಕ್ಷಗಳ ನಾಯಕರು ಚರ್ಚೆಯಲ್ಲಿ ಭಾಗವಹಿಸಿ ನಿರ್ಣಯವನ್ನು ಅಂಗೀಕರಿಸಲಿದ್ದಾರೆ. ನಿರ್ಣಯದ ಬಳಿಕ ಪ್ರಧಾನಿ ಮೋದಿ ಸಭೆಯನ್ನು ಉದ್ದೇಶಿಸಿ ಮಾತನಾಡುವ ನಿರೀಕ್ಷೆಯಿದೆ.

75ಕ್ಕೂ ಹೆಚ್ಚು ನಾಯಕರು ಭಾಗಿ: ಎನ್‌ಡಿಎ ಆಡಳಿತವಿರುವ 22 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಹಾಗೂ ಮೈತ್ರಿಕೂಟದ ಎಲ್ಲಾ ಪಕ್ಷಗಳ ಅಧ್ಯಕ್ಷರು ಮತ್ತು ಹಿರಿಯ ನಾಯಕರು ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಸುಮಾರು 35 ಮಿತ್ರಪಕ್ಷಗಳನ್ನು ಪ್ರತಿನಿಧಿಸುವ 75ಕ್ಕೂ ಹೆಚ್ಚು ಹಿರಿಯ ನಾಯಕರು ಸಭೆಯಲ್ಲಿ ಉಪಸ್ಥಿತರಿರಲಿದ್ದಾರೆ ಎಂದು ತಿಳಿದುಬಂದಿದೆ.

ಬಿಜೆಪಿ ಅಧ್ಯಕ್ಷ ನಿತಿನ್ ನವೀನ್ ಅವರ ಅಧ್ಯಕ್ಷತೆಯಲ್ಲಿ ನಡೆಯಲಿರುವ ಸಭೆಯಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಗೃಹ ಸಚಿವ ಅಮಿತ್ ಶಾ, ಕೇಂದ್ರ ಸಚಿವರಾದ ನಿತಿನ್ ಗಡ್ಕರಿ, ಜೆ.ಪಿ. ನಡ್ಡಾ, ಶಿವರಾಜ್ ಸಿಂಗ್ ಚೌಹಾಣ್ ಸೇರಿದಂತೆ ಹಲವು ಬಿಜೆಪಿ ನಾಯಕರು ಭಾಗವಹಿಸಲಿದ್ದಾರೆ. ಮಿತ್ರಪಕ್ಷಗಳ ಪರವಾಗಿ ಟಿಡಿಪಿಯ ಕೆ. ರಾಮ್ ಮೋಹನ್ ನಾಯ್ಡು, ಜೆಡಿಯುನ ರಾಜೀವ್ ರಂಜನ್ ಸಿಂಗ್, ಜೆಡಿಎಸ್‌ನ ಎಚ್.ಡಿ. ಕುಮಾರಸ್ವಾಮಿ ಹಾಗೂ ಅಪ್ನಾದಳದ ಅನುಪ್ರಿಯಾ ಪಟೇಲ್ ಕೂಡ ಹಾಜರಾಗುವ ಸಾಧ್ಯತೆ ಇದೆ.

ಸುವೇಂದು ಸರ್ಕಾರಕ್ಕೆ ಬಹುಪರಾಕ್

ಪಶ್ಚಿಮ ಬಂಗಾಳದಲ್ಲಿ ಕಮಲ ಅರಳಿ ಒಂದು ತಿಂಗಳು, ಯೋಜನೆ ಆವಿಷ್ಕಾರ ಹತ್ತಾರು

ಪಶ್ಚಿಮ ಬಂಗಾಳದಲ್ಲಿ ಸುವೇಂದು ಅಧಿಕಾರಿ ನೇತೃತ್ವದ ಸರ್ಕಾರ ಅಧಿಕಾರದಲ್ಲಿ ತನ್ನ ಮೊದಲ ತಿಂಗಳನ್ನು ಪೂರೈಸಿದ್ದು, ವ್ಯಾಪಕ ಆಡಳಿತಾತ್ಮಕ ನಿರ್ಧಾರಗಳು, ಮೂಲಸೌಕರ್ಯ ಯೋಜನೆಗಳು ಮತ್ತು ನೀತಿ ಬದಲಾವಣೆಗಳನ್ನು ಜಾರಿಗೆ ತಂದಿದೆ. ಇದೇ ಸಮಯದಲ್ಲಿ ಪ್ರಮುಖ ವಿರೋಧ ಪಕ್ಷ ತೃಣಮೂಲ ಕಾಂಗ್ರೆಸ್, ಆಂತರಿಕ ಅಸ್ಥಿರತೆಯಿಂದ ನಲುಗಿದೆ, ಸಂಭವನೀಯ ಭಾರೀ ಬಂಡಾಯವೊಂದಕ್ಕೆ ಪಕ್ಷ ಸಿದ್ಧವಾಗುತ್ತಿದೆ.



ಸುದ್ದಿ ಸಮಗ್ರ

ಮೂಲಸೌಕರ್ಯ ಅಭಿವೃದ್ಧಿ

ಹಲವಾರು ರಾಜಕೀಯ ಬೆಳವಣಿಗೆಗಳ ನಡುವೆಯೇ ಮುಖ್ಯಮಂತ್ರಿ ಸುವೇಂದು ಅಧಿಕಾರಿ ನವದೆಹಲಿಗೆ ಭೇಟಿ ನೀಡಿ ಕೇಂದ್ರ ಸಚಿವರೊಂದಿಗೆ ಸಭೆ ನಡೆಸಿದರು. ಇದರ ಫಲವಾಗಿ ಪಶ್ಚಿಮ ಬಂಗಾಳದಲ್ಲಿ ಆಯುಷ್ಮಾನ್ ಭಾರತ್ ಆರೋಗ್ಯ ವಿಮೆ ಯೋಜನೆಯನ್ನು ಜಾರಿಗೊಳಿಸುವ ಒಪ್ಪಂದವನ್ನು ಅಂತಿಮಗೊಳಿಸಲಾಯಿತು. ವಿವಿಧ ಅಭಿವೃದ್ಧಿ ಯೋಜನೆಗಳು, ಗಡಿ ಭದ್ರತೆ, ಕಾನೂನು ಜಾರಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ಸೇರಿದಂತೆ ಹಲವು ರಂಗಗಳಲ್ಲಿ ಸರ್ಕಾರ ಮುಂದಡಿ ಇಟ್ಟಿದೆ ಎಂದು ರಾಜ್ಯ ಸರ್ಕಾರ ಸಮರ್ಥಿಸಿಕೊಂಡಿದೆ.

ಗಡಿ ಮೂಲಸೌಕರ್ಯ ಮೇಲ್ದರ್ಜೆಗೆ

ಸರ್ಕಾರ ತನ್ನ ಆರಂಭಿಕ ತಿಂಗಳಿನಲ್ಲಿ ಗಡಿ ನಿರ್ವಹಣೆ ಮತ್ತು ಕಾನೂನುಬಾಹಿರ ನುಸುಳುವಿಕೆಯನ್ನು ತಡೆಯುವಿಕೆಗೆ ಆದ್ಯತೆ ನೀಡಿದೆ. ಮೂಲಸೌಕರ್ಯ ಅಭಿವೃದ್ಧಿಗೆ ಅನುಕೂಲವಾಗುವಂತೆ ಗಡಿ ಭದ್ರತಾ ಪಡೆಗೆ (ಬಿಎಸ್‌ಎಫ್) 142 ಎಕರೆಗಿಂತ ಹೆಚ್ಚು ಭೂಮಿ ಹಸ್ತಾಂತರಿಸಲಾಗಿದೆ. ಪಶ್ಚಿಮ ಬಂಗಾಳದಲ್ಲಿ ಭಾರತ-ಬಾಂಗ್ಲಾದೇಶ ಗಡಿಯಲ್ಲಿ ಈ ಹಿಂದೆ ಬೇಲಿ ಹಾಕದ ದೊಡ್ಡ ಪ್ರದೇಶದಲ್ಲಿ ಬೇಲಿ ಹಾಕುವ ಪ್ರಕ್ರಿಯೆಯನ್ನು ಸುಗಮಗೊಳಿಸುವ ಇಚ್ಛೆಯನ್ನು ಸರ್ಕಾರ ವ್ಯಕ್ತಪಡಿಸಿದ್ದು, ಯೋಜನೆಗಳ ತ್ವರಿತ ಜಾರಿಗೆ ವಿವಿಧ ವಿಭಾಗಗಳಿಗೆ ಗುರಿಗಳನ್ನು ನಿಗದಿಪಡಿಸಿದೆ.

ಸಾರ್ವಜನಿಕ ಸ್ಥಳಗಳ ನಿಯಂತ್ರಣ

ಸಾರ್ವಜನಿಕ ರಸ್ತೆಗಳು ಮತ್ತು ಪ್ರಮುಖ ಸಾರಿಗೆ ಮಾರ್ಗಗಳಲ್ಲಿ ನಮಾಜ್ ಮಾಡುವುದನ್ನು ನಿಷೇಧಿಸುವುದು ಸೇರಿದಂತೆ ಸಾರ್ವಜನಿಕ ಸ್ಥಳಗಳನ್ನು ನಿಯಂತ್ರಿಸುವ ಕ್ರಮಗಳನ್ನು ಸರ್ಕಾರ ಪರಿಚಯಿಸಿದೆ. ಸಾರ್ವಜನಿಕ ರಸ್ತೆಗಳು ಸಾರಿಗೆ ಮತ್ತು ತುರ್ತು ಸೇವೆಗಳಿಗಾಗಿ ಮುಕ್ತವಾಗಿರಬೇಕು ಎಂದು ಸರ್ಕಾರ ವಾದಿಸಿದೆ. ಧಾರ್ಮಿಕ ಚಟುವಟಿಕೆಗಳನ್ನು ಸಾರ್ವಜನಿಕ ಸಾರಿಗೆ ಮಾರ್ಗಗಳ ಬದಲಿಗೆ ಗೊತ್ತುಪಡಿಸಿದ ಸ್ಥಳಗಳಲ್ಲಿ ನಡೆಸಬೇಕು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಲ್ಯಾಣ ಕಾರ್ಯಕ್ರಮಗಳಿಗೆ ಚಾಲನೆ

ಸರ್ಕಾರ ಅಧಿಕಾರ ವಹಿಸಿಕೊಂಡ ಕೆಲವೇ ವಾರಗಳಲ್ಲಿ ಮಹಿಳೆಯರು ಮತ್ತು ಕುಟುಂಬಗಳಿಗಾಗಿ ಕಲ್ಯಾಣ ಯೋಜನೆಗಳನ್ನು ಘೋಷಿಸಲಾಯಿತು. ಸಾರಿಗೆ ವೆಚ್ಚವನ್ನು ಕಡಿಮೆ ಮಾಡಲು, ರಾಜ್ಯದಲ್ಲಿ ಮಹಿಳಾ ಪ್ರಯಾಣಿಕರಿಗೆ ಉಚಿತ ಬಸ್ ಪ್ರಯಾಣವನ್ನು ಪರಿಚಯಿಸಿತು. ಹೆಚ್ಚುವರಿಯಾಗಿ, ಸಾಮಾಜಿಕ ಬೆಂಬಲ ವ್ಯವಸ್ಥೆಗಳನ್ನು ಬಲಪಡಿಸಲು ಮತ್ತು ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಗೆ ಹಣಕಾಸಿನ ನೆರವನ್ನು ವಿಸ್ತರಿಸಲು ಅನ್ನಪೂರ್ಣ ಯೋಜನೆಯನ್ನು ಪ್ರಮುಖ ಕಲ್ಯಾಣ ಕಾರ್ಯಕ್ರಮವಾಗಿ ಪ್ರಾರಂಭಿಸಲಾಯಿತು.

ವಾಣಿಜ್ಯ ಮತ್ತು ಶೈಕ್ಷಣಿಕ ನಿಯಮಗಳು

ಆರೋಗ್ಯ ಸೌಲಭ್ಯಗಳು ಮತ್ತು ಶಿಕ್ಷಣ ಸಂಸ್ಥೆಗಳ ಸುತ್ತ ಸುರಕ್ಷಿತ ವಾತಾವರಣ ನಿರ್ಮಿಸಲು ಶಾಲೆಗಳು ಮತ್ತು ಆಸ್ಪತ್ರೆಗಳ ಸಮೀಪದಲ್ಲಿ ಮದ್ಯದ ಅಂಗಡಿಗಳ ಕಾರ್ಯಾಚರಣೆಯನ್ನು ನಿಷೇಧಿಸಲು ಸರ್ಕಾರ ನಿರ್ಧರಿಸಿದೆ. ಜತೆಗೆ, ಶಾಲೆಗಳಲ್ಲಿ ವಂದೇ ಮಾತರಂ ಗಾಯನವನ್ನು ಕಡ್ಡಾಯಗೊಳಿಸಿ ನಿರ್ದೇಶನ ಹೊರಡಿಸಲಾಗಿದ್ದು, ವಿದ್ಯಾರ್ಥಿಗಳಲ್ಲಿ ನಾಗರಿಕ ಮೌಲ್ಯಗಳು ಮತ್ತು ರಾಷ್ಟ್ರೀಯ ಪ್ರಜ್ಞೆಯನ್ನು ಉತ್ತೇಜಿಸುವ ಪ್ರಯತ್ನ ಎಂದು ಬಿಜೆಪಿ ಆಡಳಿತ ಬಣ್ಣಿಸಿದೆ.

ಕಾನೂನು ಜಾರಿ ಅಭಿಯಾನಗಳು

ಕಾನೂನು ಮತ್ತು ಸುವ್ಯವಸ್ಥೆಗೆ ಹೆಚ್ಚಿನ ಗಮನ ನೀಡಲಾಗಿದ್ದು, ರಾಜ್ಯಾದ್ಯಂತ ಸುಲಿಗೆ ಮತ್ತು ಕಾನೂನುಬಾಹಿರ ಹಣ ವಸೂಲಿ ವಿರುದ್ಧ ಕಠಿಣ ಕ್ರಮವನ್ನು ಪ್ರಾರಂಭಿಸಲಾಗಿದೆ. ಹಲವಾರು ದೂರುಗಳನ್ನು ಪರಿಶೀಲಿಸಲು ಮತ್ತು ಸಾಕ್ಷ್ಯಗಳಿರುವಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಜಾರಿ ಸಂಸ್ಥೆಗಳಿಗೆ ಸೂಚನೆ ನೀಡಲಾಗಿದೆ. ಆರ್ ಜಿ ಕರ್ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರ ಹಲವಾರು ಪೊಲೀಸ್ ಸಿಬ್ಬಂದಿಯನ್ನು ಅಮಾನತುಗೊಳಿಸಿದ್ದು, ಹೊಣೆಗಾರಿಕೆ ಮತ್ತು ಪಾರದರ್ಶಕತೆಗೆ ತನ್ನ ಬದ್ಧತೆ ತೋರ್ಪಡಿಸಿದೆ.

ಅಧಿಕಾರಶಾಹಿಯ ಪುನರ್‌ರಚನೆ

ಅಧಿಕಾರಶಾಹಿ ಪುನರ್‌ರಚನೆಯಲ್ಲಿ, ರಾಜ್ಯ ಮತ್ತು ಕೇಂದ್ರದ ನಡುವಿನ ಸಮನ್ವಯವನ್ನು ಬಲಪಡಿಸಲು ರಾಜ್ಯ ಕೇಡರ್ ಅಧಿಕಾರಿಗಳಿಗೆ ಕೇಂದ್ರ ಸರ್ಕಾರಕ್ಕೆ ನಿಯೋಜನೆ ಮೇಲೆ ಹೋಗುವ ಅವಕಾಶಗಳನ್ನು ಸುಗಮಗೊಳಿಸಲಾಗಿದೆ. ಸಾರಿಗೆ ಮೂಲಸೌಕರ್ಯದಲ್ಲಿ, ಕೇಂದ್ರ ಸಂಸ್ಥೆಗಳೊಂದಿಗೆ ಸಮನ್ವಯ ಸುಧಾರಿಸುವ ಮೂಲಕ ವರ್ಷಗಳಿಂದ ವಿಳಂಬವಾಗಿದ್ದ ಮೆಟ್ರೋ ರೈಲು ಯೋಜನೆಗಳ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಪ್ರಗತಿ ಸಾಧಿಸಲಾಗಿದೆ ಎಂದು ಸರ್ಕಾರ ಹೇಳಿಕೊಂಡಿದೆ. ಜತೆಗೆ ಹೈ-ಸ್ಪೀಡ್ ರೈಲು ಮತ್ತು ಬುಲೆಟ್ ರೈಲು ಜಾಲಗಳಿಗೆ ಬೆಂಬಲ ವ್ಯಕ್ತಪಡಿಸಿದೆ.

ಕೈಗಾರಿಕಾ ಅಭಿವೃದ್ಧಿ ಯೋಜನೆಗಳು

ಮಮತಾ ಬ್ಯಾನರ್ಜಿ ನೇತೃತ್ವದ ಪ್ರತಿಭಟನೆಗಳ ನಂತರ ಟಾಟಾ ಗ್ರೂಪ್ ತನ್ನ ಯೋಜನೆಯನ್ನು ಹಿಂತೆಗೆದುಕೊಂಡಾಗ ಉಂಟಾಗಿದ್ದ ರಾಜ್ಯದ ಐತಿಹಾಸಿಕ ಕೈಗಾರಿಕಾ ವಿರೋಧಿ ಗ್ರಹಿಕೆಯನ್ನು ಬದಲಾಯಿಸಲು ಸರ್ಕಾರ ಹಲವಾರು ಉದ್ಯಮಿಗಳೊಂದಿಗೆ ಮಾತುಕತೆ ನಡೆಸಿದೆ. ಟಾಟಾ ಗ್ರೂಪ್ ಅನ್ನು ಪಶ್ಚಿಮ ಬಂಗಾಳಕ್ಕೆ ಮರಳಿ ತರಲು ಸರ್ಕಾರ ಶ್ರಮಿಸುತ್ತಿದೆ. ಹೆಚ್ಚುವರಿಯಾಗಿ, ಅಮುಲ್‌ನ ಅತಿ ದೊಡ್ಡ ಡೈರಿ ಪ್ಲಾಂಟ್‌ಗೆ ಜೂನ್ 13 ರಂದು ಶಂಕುಸ್ಥಾಪನೆ ಮತ್ತು ಭೂಮಿ ಪೂಜೆ ನೆರವೇರಲು ದಿನಾಂಕ ನಿಗದಿಯಾಗಿದೆ. ಆರಂಭಿಕ ತಿಂಗಳು ಹಿಂದಿನ ಸರ್ಕಾರದ ಆದ್ಯತೆಗಳಿಂದ ಹಿಂದೆ ಸರಿಯುವ ಕೆಲಸ ನಡೆದಿದೆ. ಸಾಕಷ್ಟು ಜನಪ್ರಿಯ ಘೋಷಣೆಗಳನ್ನು ಮಾಡಲಾಗಿದೆ. ಎರಡನೇ ತಿಂಗಳು ಪ್ರಾರಂಭವಾಗುತ್ತಿದ್ದಂತೆ, ಅನುಷ್ಠಾನ, ಯೋಜನೆಗಳ ವಿಸ್ತರಣೆ ಮತ್ತು ಫಲಿತಾಂಶಗಳ ಮೌಲ್ಯಮಾಪನದ ಕಡೆಗೆ ಗಮನ ಹರಿಸುವ ನಿರೀಕ್ಷೆಯಿದೆ.



ಮೋದಿ ಯುಗದಲ್ಲಿ ಭೂ ಬಂದರು ವ್ಯಾಪಾರ ವೃದ್ಧಿ

• ಹೊಸದಿಲ್ಲಿ: ವಿಜ್ಞಾನ ಭವನದಲ್ಲಿ ಭೂ ಬಂದರು ನಿರ್ವಹಣಾ ವ್ಯವಸ್ಥೆಯನ್ನು (ಎಲ್‌ಪಿಎಂಎಸ್) ಮಂಗಳವಾರ ಉದ್ಘಾಟಿಸಿದ ಕೇಂದ್ರ ಗೃಹ ಸಚಿವ ಅಮಿತ್ ಶಾ, ಕಳೆದ 12 ವರ್ಷಗಳ ಪ್ರಧಾನಿ ಮೋದಿ ಆಡಳಿತದಲ್ಲಿ 2014ರಲ್ಲಿ 5000 ಕೋಟಿ ರೂ. ಇದ್ದ ಭೂ ಬಂದರು ವ್ಯಾಪಾರ 83,000 ಕೋಟಿ ರೂ. ವರೆಗೆ ಬೆಳೆದಿದೆ ಎಂದು ಮೋದಿ ನಾಯಕತ್ವವನ್ನು ಕೊಂಡಾಡಿದ್ದಾರೆ.

ಹೊಸ ಭೂ ಬಂದರು ನಿರ್ವಹಣಾ ವ್ಯವಸ್ಥೆಯಿಂದ ಶೇ.90 ದಾಖಲೆಪತ್ರಗಳ ಕೆಲಸ ಕಡಿಮೆಯಾಗುತ್ತದೆ ಹಾಗೂ ಅಂತಾರಾಷ್ಟ್ರೀಯ ಗಡಿ ಭದ್ರತೆಯನ್ನು ಹೆಚ್ಚಿಸುತ್ತದೆ. ಇದು ಸಿಂಗಲ್ ಎಲೆಕ್ಟ್ರಾನಿಕ್ ವಿಂಡೋ ಸಿಸ್ಟಂ ಹೊಂದಿದ್ದು, ಪ್ರಕ್ರಿಯೆಯ ಸಮಯ ಶೇ.40ರಿಂದ 60ರಷ್ಟು ಕಡಿಮೆಯಾಗಲಿದೆ. ಪ್ರಸ್ತಾವಿಸಲಾದ ಸ್ಮಾರ್ಟ್ ಗಡಿಗಳು ಹೊಸ ಡಿಜಿಟಲ್ ಅಡಿಪಾಯವನ್ನು ಹಾಕಿಕೊಟ್ಟಿವೆ ಎಂದು ಶಾ ಹೇಳಿದ್ದಾರೆ. ಮುಂದಿನ 3 ವರ್ಷಗಳಲ್ಲಿ 11 ಭೂ ಬಂದರು: ಗಡಿ ಜಿಲ್ಲೆಗಳ ಮೇಲಿನ ವಲಸೆ ಒತ್ತಡವನ್ನು ಕಡಿಮೆ ಮಾಡುವುದಲ್ಲದೆ ಸ್ಥಳೀಯ ಆರ್ಥಿಕತೆಯನ್ನು ಬಲಪಡಿಸುವಲ್ಲಿ ಮಹತ್ವದ ಪಾತ್ರ ವಹಿಸುವ 15 ಭೂ ಬಂದರುಗಳು ಪ್ರಸ್ತುತ ದೇಶದಲ್ಲಿ ಕಾರ್ಯನಿರ್ವಹಿಸುತ್ತಿವೆ. ಮುಂದಿನ ಮೂರು ವರ್ಷಗಳಲ್ಲಿ ಇನ್ನೂ 11 ಭೂ ಬಂದರುಗಳನ್ನು ಅಭಿವೃದ್ಧಿಪಡಿಸುವ ಯೋಜನೆ ಇದೆ.

ಭೂ ಬಂದರುಗಳು ಕೇವಲ ವ್ಯಾಪಾರ ಸಾಗಣೆಯ ಮಾರ್ಗಗಳಷ್ಟೇ ಅಲ್ಲ; ಅವು ಭದ್ರತೆಯ ಕವಚ, ಸಾಂಸ್ಕೃತಿಕ ವಿನಿಮಯದ ಸೇತುವೆ ಹಾಗೂ ಗಡಿಭಾಗಗಳಿಂದ ವಲಸೆಯನ್ನು ನಿಯಂತ್ರಿಸುವ ಸಾಧನವೂ ಆಗಿವೆ ಎಂದು ಅವರು ಹೇಳಿದರು.

ಕಿರುಸುದ್ದಿ

ಶೀಘ್ರ ಮೋದಿ ಫ್ರಾನ್ಸ್, ಸ್ಲೋವಾಕಿಯಾ ಪ್ರವಾಸ

• ಹೊಸದಿಲ್ಲಿ: ಜೂನ್ 13ರಿಂದ ಒಂದು ವಾರಗಳ ಭೇಟಿಗಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಫ್ರಾನ್ಸ್ ಮತ್ತು ಸ್ಲೋವಾಕಿಯಾಗಳಿಗೆ ಒಂದು ವಾರದ ಪ್ರವಾಸವನ್ನು ಕೈಗೊಳ್ಳಲಿದ್ದಾರೆ. ತಮ್ಮ ಈ ಭೇಟಿಯಲ್ಲಿ ಅವರು ದ್ವಿಪಕ್ಷೀಯ ಸಂಬಂಧಗಳನ್ನು ವಿಸ್ತರಿಸುವ ಮಾರ್ಗಗಳನ್ನು ಅನ್ವೇಷಣೆ ಮತ್ತು ಜಾಗತಿಕ ಸವಾಲುಗಳ ಬಗ್ಗೆ ಚರ್ಚಿಸಲಿದ್ದಾರೆ. ವಿದೇಶಾಂಗ ವ್ಯವಹಾರಗಳ ಸಚಿವಾಲಯದ (ಎಂಇಎ) ಪ್ರಕಾರ, ಮೋದಿಯವರು ಫ್ರಾನ್ಸ್‌ನ ಇವಿಯಾನ್‌ನಲ್ಲಿ ಜೂ16 ಮತ್ತು 17ರಂದು ನಡೆಯುವ ಜಿ7 ಶೃಂಗಸಭೆಯಲ್ಲಿ ಭಾಗವಹಿಸಲಿದ್ದಾರೆ.

ಸೋನಿಯಾ-ದೀದಿ ಭೇಟಿ

• ಹೊಸದಿಲ್ಲಿ: ವಿಧಾನಸಭೆ ಚುನಾವಣೆ ಬಳಿಕ ತೃಣಮೂಲ ಕಾಂಗ್ರೆಸ್ ಆಂತರಿಕ ಕಲಹ ಬಳಲುತ್ತಿರುವ ಮಧ್ಯೆ ಪಕ್ಷದ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಮಂಗಳವಾರ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ. ಉಭಯ ನಾಯಕಿಯರು ಮುಂದಿನ ಕಾರ್ಯತಂತ್ರ ಕುರಿತು ಸಮಾಲೋಚನೆ ನಡೆಸಿದ್ದಾರೆ.

ಕುವೈತ್ ದೊರೆಗೆ ಬೆಂಬಲ ಸೂಚಿಸಿದ ಪ್ರಧಾನಿ ಮೋದಿ

• ಹೊಸದಿಲ್ಲಿ: ಮಧ್ಯಪ್ರಾಚ್ಯ ಯುದ್ಧ ಸಂದರ್ಭ ಕುವೈತ್‌ನ ಸಾರ್ವಭೌಮತ್ವ ಮತ್ತು ಪ್ರಾದೇಶಿಕ ಸಮಗ್ರತೆಗೆ ಭಾರತದ ಬಲವಾದ ಬೆಂಬಲವನ್ನು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಪುನರುಚ್ಚರಿಸಿದ್ದಾರೆ.

ಕುವೈತ್ ದೊರೆ ಶೇಖ್ ಮೇಶಲ್ ಅಲ್-ಅಹ್ಮದ್ ಅಲ್-ಜಾಬರ್ ಅಲ್ ಸಬಾ ಅವರೊಂದಿಗೆ ದೂರವಾಣಿ ಕರೆ ಮೂಲಕ ಪ್ರಧಾನಿ ಮೋದಿ ಮಾತುಕತೆ ನಡೆಸಿದ್ದಾರೆ. ಮಧ್ಯಪ್ರಾಚ್ಯದಲ್ಲಿನ ಇತ್ತೀಚಿನ ಬೆಳವಣಿಗೆಗಳ ಕುರಿತು ಚರ್ಚಿಸಿದ್ದಾರೆ.

ಪಶ್ಚಿಮ ಏಷ್ಯಾ ಪ್ರದೇಶದಲ್ಲಿ ತೀವ್ರಗೊಂಡಿರುವ ಉದ್ವಿಗ್ನತೆ ಕುರಿತು ಪ್ರಧಾನಿ ಮೋದಿ ಅತೀವ ಕಾಳಜಿ ವ್ಯಕ್ತಪಡಿಸಿದ್ದು, ಕುವೈತ್‌ನ ಸಾರ್ವಭೌಮತ್ವ ಮತ್ತು ಭೌಗೋಳಿಕ ಅಖಂಡತೆಯ ಮೇಲೆ ನಡೆಯುವ ದಾಳಿಗಳನ್ನು ಭಾರತವು ಬಲವಾಗಿ ಖಂಡಿಸುತ್ತದೆ ಎಂದು ಪುನರುಚ್ಚರಿಸಿದ್ದಾರೆ ಎಂದು ಸರ್ಕಾರ ಪ್ರಕಟಣೆಯಲ್ಲಿ ತಿಳಿಸಿದೆ.

ಕುವೈತ್‌ನಲ್ಲಿ ವಾಸಿಸುತ್ತಿರುವ ದೊಡ್ಡ ಭಾರತೀಯ ಸಮುದಾಯದ ಯೋಗಕ್ಷೇಮ ಮತ್ತು ಸುರಕ್ಷತೆಯ ಬಗ್ಗೆ ವೈಯಕ್ತಿಕವಾಗಿ ಗಮನ ಹರಿಸಿರುವುದಕ್ಕೆ ಕುವೈತ್ ದೊರೆಗೆ ಪ್ರಧಾನಿ ಮೋದಿ ಕೃತಜ್ಞತೆಗಳನ್ನು ತಿಳಿಸಿದ್ದಾರೆ.

ಪ್ರದೇಶದಲ್ಲಿ ಉದ್ವಿಗ್ನತೆ ಕಡಿಮೆಗೊಳಿಸುವುದು, ಶಾಂತಿ ಮಾತುಕತೆ ಮೊದಲಾದ ರಾಜತಾಂತ್ರಿಕ ಮಾರ್ಗ ಅನುಸರಿಸುವಂತೆ ಮೋದಿ ಪುನರುಚ್ಚರಿಸಿದ್ದಾರೆ. ಇದೇ ಸಂದರ್ಭ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್‌ನೊಂದಿಗೆ ಕೆಲವೇ ದಿನಗಳಲ್ಲಿ ಒಪ್ಪಂದ ಆಗಬಹುದು. ಒಪ್ಪಂದ ಅಂತಿಮಗೊಳ್ಳುವವರೆಗೆ ಹಾರ್ಮುಜ್ ಮೇಲಿನ ನಿರ್ಬಂಧಗಳು ಹಾಗೆಯೇ ಇರಲಿವೆ ಎಂದು ಹೇಳಿದ್ದಾರೆ.

ಪಂಜಾಬ್: ಉಗ್ರ ಜಾಲದ ಸಹಚರರಿಬ್ಬರ ಬಂಧನ

• ಅಮೃತಸರ: ಪಂಜಾಬ್ ಪೊಲೀಸ್ ಮತ್ತು ಕೇಂದ್ರ ಸಂಸ್ಥೆಗಳು ಗಡಿಯಾಚೆಗಿನ ಹ್ಯಾಂಡ್ಲರ್‌ಗಳೊಂದಿಗೆ ಸಂಪರ್ಕ ಹೊಂದಿದ್ದ ಇಬ್ಬರು ವ್ಯಕ್ತಿಗಳನ್ನು ಮಂಗಳವಾರ ಬಂಧಿಸಿದ್ದು, ಅಮೃತಸರದ ಖಾಸಾ ಪ್ರದೇಶದಲ್ಲಿ ಅವರಿಂದ ಎರಡು ಹ್ಯಾಂಡ್ ಗ್ರೆನೇಡ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಬಂಧಿತರನ್ನು ತಾರ್ನ್ ತಾರನ್ ನಿವಾಸಿಗಳಾದ ದೇವಿಂದರ್ ಸಿಂಗ್ ಮತ್ತು ರಾಜ್‌ವಿಂದರ್ ಸಿಂಗ್ ಎಂದು ಗುರುತಿಸಲಾಗಿದೆ ಎಂದು ಪೊಲೀಸ್ ಮಹಾನಿರ್ದೇಶಕ ಗೌರವ್ ಯಾದವ್ ತಿಳಿಸಿದ್ದಾರೆ. ಗುಪ್ತಚರ ಮಾಹಿತಿ ಆಧಾರಿತ ಶೋಧ ಕಾರ್ಯಾಚರಣೆಯ ಸಂದರ್ಭದಲ್ಲಿ, ಹ್ಯಾಂಡ್ ಗ್ರೆನೇಡ್‌ಗಳು ಪತ್ತೆಯಾದ ನಂತರ ಅಧಿಕಾರಿಗಳು ಆರೋಪಿಗಳು ಪ್ರಯಾಣಿಸುತ್ತಿದ್ದ ವಾಹನವನ್ನು ಜಪ್ತಿ ಮಾಡಿದ್ದಾರೆ. ಪ್ರಾದೇಶಿಕ ಶಾಂತಿ ಕದಡುವ ಚಟುವಟಿಕೆಗಳನ್ನು ಯೋಜಿಸಲು ಆರೋಪಿಗಳು ವಿದೇಶಿ ಮೂಲದ ಹ್ಯಾಂಡ್ಲರ್‌ಗಳೊಂದಿಗೆ ನೇರ ಸಂಪರ್ಕದಲ್ಲಿದ್ದರು ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ಅಮೃತಸರ ಜೈಲಿನಲ್ಲಿದ್ದ ಹರ್ವಂತ್ ಸಿಂಗ್ ಅಲಿಯಾಸ್ ಹ್ಯಾರಿ ಎಂಬ ಕೈದಿ ಈ ಇಬ್ಬರನ್ನು ವಿದೇಶಿ ಹ್ಯಾಂಡ್ಲರ್‌ಗೆ ಪರಿಚಯಿಸಿದ್ದ ಎಂದು ಹಿರಿಯ ಪೊಲೀಸ್ ಅಧೀಕ್ಷಕ ಕನ್ವಲ್‌ಪ್ರೀತ್ ಸಿಂಗ್ ಚಾಹಲ್ ತಿಳಿಸಿದ್ದಾರೆ. ಶಂಕಿತರು ಈ ಹಿಂದೆ ಹರ್ವಂತ್‌ನ ಸಹಚರರಿಗೆ ಹಲವಾರು ಶಸ್ತ್ರಾಸ್ತ್ರಗಳು ಮತ್ತು ಸ್ಫೋಟಕಗಳನ್ನು ಕಳ್ಳಸಾಗಣೆ ಮಾಡಿದ್ದರು. ಕಾನೂನು ಜಾರಿ ಅಧಿಕಾರಿಗಳು ಕಾರಾಗೃಹದ ಆವರಣದೊಳಗೆ ಹರ್ವಂತ್‌ಗೆ ಸೇರಿದ ಮೊಬೈಲ್ ಫೋನ್ ಅನ್ನು ವಶಪಡಿಸಿಕೊಂಡಿದ್ದು, ಈ ಕುರಿತು ಪ್ರತ್ಯೇಕ ಪ್ರಕರಣ ದಾಖಲಿಸಲಾಗಿದೆ.

ನಕಲಿ ಸಹಿ: ಮಮತಾ ನಿವಾಸದಲ್ಲಿ ಶೋಧ

• ಕೋಲ್ಕತ್ತಾ: ಶಾಸಕರ ನಕಲಿ ಸಹಿ ಹಗರಣದ ತನಿಖೆಗೆ ಸಂಬಂಧಿಸಿದಂತೆ ಅಪರಾಧ ತನಿಖಾ ಇಲಾಖೆ (ಸಿಐಡಿ) ಮಾಜಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಕೋಲ್ಕತಾ ನಿವಾಸಕ್ಕೆ ಶೋಧನಾ ವಾರಂಟ್‌ನೊಂದಿಗೆ ಮಂಗಳವಾರ ದಾಳಿ ನಡೆಸಿದೆ.

ಕಾಳಿಘಾಟ್ ಪೊಲೀಸ್ ಸಿಬ್ಬಂದಿಯೊಂದಿಗೆ ಆಗಮಿಸಿದ ಅಧಿಕಾರಿಗಳು ಮಧ್ಯಾಹ್ನದ ವೇಳೆಗೆ 30 ಬಿ ಹರೀಶ್ ಚಟರ್ಜಿ ರಸ್ತೆಯಲ್ಲಿರುವ ಪಕ್ಷದ ಕೇಂದ್ರ ಕಚೇರಿ ತಲುಪಿದರು. ಸದ್ಯ ದಿಲ್ಲಿಯಲ್ಲಿರುವ ಬ್ಯಾನರ್ಜಿ ನಿವಾಸ ಹಾಗೂ ಸಂಸದ ಅಭಿಷೇಕ್ ಬ್ಯಾನರ್ಜಿಯ ಕಚೇರಿ ಮತ್ತು ನಿವಾಸ ಸೇರಿದಂತೆ ಒಟ್ಟು ಮೂರು ಸ್ಥಳಗಳಲ್ಲಿ ಸಿಐಡಿಯ ಪ್ರತ್ಯೇಕ ತಂಡಗಳು ಏಕಕಾಲದಲ್ಲಿ ಪರಿಶೀಲನೆ ನಡೆಸಿವೆ. ಪಕ್ಷದ ಶಾಸಕರ ಸಹಿಗಳನ್ನು ಈ ಕೇಂದ್ರ ಕಚೇರಿಯಲ್ಲೇ ಸಂಗ್ರಹಿಸಲಾಗಿತ್ತು ಎಂದು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ನೀಡಿದ ಉತ್ತರದ ಆಧಾರದ ಮೇಲೆ ಈ ಕ್ರಮ ಕೈಗೊಳ್ಳಲಾಗಿದೆ. ಶೋವಂದೇಬ್ ಚಟ್ಟೋಪಾಧ್ಯಾಯ ಅವರನ್ನು ವಿರೋಧ ಪಕ್ಷದ ನಾಯಕರನ್ನಾಗಿ ಗುರುತಿಸುವಂತೆ ಕೋರಿ ವಿಧಾನಸಭೆಯ ಸ್ಪೀಕರ್‌ಗೆ ಸಲ್ಲಿಸಲಾದ ಪ್ರಸ್ತಾವನೆಗೆ ಸಂಬಂಧಿಸಿದಂತೆ ಈ ತನಿಖೆ ನಡೆಯುತ್ತಿದೆ.

ದಾಖಲೆಯಲ್ಲಿರುವ 70 ಸಹಿಗಳಲ್ಲಿ 14 ಸಹಿಗಳನ್ನು ನಕಲು ಮಾಡಲಾಗಿದೆ ಎಂದು ಶಾಸಕರಾದ ರಿತಬ್ರತ ಬ್ಯಾನರ್ಜಿ ಮತ್ತು ಸಂದೀಪನ್ ಸಹಾ ದೂರು ನೀಡಿದ್ದರು. ಎಫ್‌ಐಆರ್ ದಾಖಲಾದ ನಂತರ ಮುಖ್ಯಮಂತ್ರಿ ಸುವೇಂದು ಅಧಿಕಾರಿ ದೂರುದಾರರ ಹೆಸರುಗಳನ್ನು ಬಹಿರಂಗಪಡಿಸಿದ್ದರು, ಮತ್ತು ಪಕ್ಷ ತಕ್ಷಣವೇ ಇಬ್ಬರನ್ನೂ ಉಚ್ಚಾಟಿಸಿತ್ತು.

ವಾಯುಪಡೆ, ಸಿಆರ್‌ಪಿಎಫ್ ನಿಯೋಜನೆ

• ಹೊಸದಿಲ್ಲಿ: ಜೂನ್ 21ರಂದು ನಡೆಯಲಿರುವ ನೀಟ್-ಯುಜಿ ಮರುಪರೀಕ್ಷೆಯನ್ನು ಸುರಕ್ಷಿತವಾಗಿ ನಡೆಸಲು ಕೇಂದ್ರ ಶಿಕ್ಷಣ ಸಚಿವಾಲಯ ಮತ್ತು ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು (ಎನ್‌ಟಿಎ) ಭಾರತೀಯ ವಾಯುಪಡೆ ಹಾಗೂ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳನ್ನು ನಿಯೋಜಿಸುತ್ತಿದೆ. ಪ್ರಶ್ನೆಪತ್ರಿಕೆಗಳ ಸಾಗಣೆ ಸಮಯವನ್ನು ಹತ್ತು ದಿನಗಳಿಂದ ನಾಲ್ಕೈದು ದಿನಗಳಿಗೆ ಕಡಿತಗೊಳಿಸಲು ವಾಯುಪಡೆಯ ಹೆಲಿಕಾಪ್ಟರ್ ಮತ್ತು ವಿಮಾನಗಳನ್ನು ಬಳಸಿಕೊಳ್ಳುವ ಕುರಿತು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರೊಂದಿಗೆ ಚರ್ಚಿಸಿದ್ದಾರೆ. ವಿತರಣಾ ಕೇಂದ್ರಗಳಿಂದ ಪರೀಕ್ಷಾ ಕೇಂದ್ರಗಳಿಗೆ ಸುರಕ್ಷಿತ ಸಾಗಣೆಯನ್ನು ಖಚಿತಪಡಿಸಿಕೊಳ್ಳಲು ಸಿಆರ್‌ಪಿಎಫ್, ಬಿಎಸ್‌ಎಫ್ ಮತ್ತು ಸಿಐಎಸ್‌ಎಫ್ ಒಳಗೊಂಡ ಕೇಂದ್ರ ಪಡೆಗಳನ್ನು ನಿಯೋಜಿಸುವ ಸಾಧ್ಯತೆಯಿದೆ.

ಗ್ರಾಮೀಣ ಉದ್ಯೋಗಕ್ಕೆ ಹೊಸ ಚೈತನ್ಯ | ಜುಲೈ 1ರಿಂದ ಜಿರಾಮ್‌ಜಿ ಆರಂಭ

ಗ್ರಾಮೀಣಾಭಿವೃದ್ಧಿಗೆ 1.25 ಲಕ್ಷ ಕೋ. ರೂ.

• ಹೊಸದಿಲ್ಲಿ: ಗ್ರಾಮೀಣ ಉದ್ಯೋಗ, ಕಾರ್ಮಿಕರ ಭದ್ರತೆ ಹಾಗೂ ಹಳ್ಳಿಗಳ ಸಮಗ್ರ ಅಭಿವೃದ್ಧಿಗೆ ಹೊಸ ಉತ್ತೇಜನ ನೀಡುವ ಉದ್ದೇಶದಿಂದ ಕೇಂದ್ರ ಸರ್ಕಾರ ನರೇಗಾ ಬದಲಿಗೆ ಹೊಸದಾಗಿ ಜಾರಿ ಮಾಡಲಿರುವ ವಿಕಸಿತ ಭಾರತ ಜಿರಾಮ್‌ಜಿ ಅಡಿಯಲ್ಲಿ 1.25 ಲಕ್ಷ ಕೋಟಿ ರೂ. ಮೊತ್ತದ ಅನುದಾನ ಘೋಷಿಸಲಾಗಿದೆ.

ಜು.1ರಿಂದ ಜಾರಿಗೆ ಬರುವ ವಿಕಸಿತ ಭಾರತ ಜಿರಾಮ್‌ಜಿ ಕುರಿತಂತೆ ರಾಜ್ಯಗಳ ಗ್ರಾಮೀಣಾಭಿವೃದ್ಧಿ ಸಚಿವರೊಂದಿಗೆ ನಡೆದ ಸಭೆಯಲ್ಲಿ ಕೇಂದ್ರ ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಈ ಘೋಷಣೆ ಮಾಡಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ ವಿಕಸಿತ ಭಾರತ ಜಿರಾಮ್‌ಜಿ ಗ್ರಾಮೀಣ ಭಾರತದಲ್ಲಿ ಉದ್ಯೋಗ ಸೃಷ್ಟಿ, ಮೂಲಸೌಕರ್ಯ ನಿರ್ಮಾಣ ಮತ್ತು ಕಾರ್ಮಿಕರ ಜೀವನೋಪಾಯಕ್ಕೆ ಹೊಸ ದಿಕ್ಕು ನೀಡಲಿದೆ ಎಂದು ಚೌಹಾಣ್ ಹೇಳಿದರು.

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ(ಎಂಎನ್‌ಆರ್‌ಇಜಿಎ) ಅಡಿಯಲ್ಲಿ ಈಗಾಗಲೇ 30,000 ಕೋಟಿ ರೂ. ಬಿಡುಗಡೆ ಮಾಡಲಾಗಿದೆ. ಇದರ ಜೊತೆಗೆ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಮಧ್ಯಂತರವಾಗಿ 95,692 ಕೋಟಿ ರೂ. ಅನುದಾನ ಮಂಜೂರು ಮಾಡಲಾಗಿದ್ದು, ಒಟ್ಟಾರೆ ಅನುದಾನ 1.25 ಲಕ್ಷ ಕೋಟಿ ರೂ. ಮೀರಿದೆ. ಈ ಹಣ ದೇಶದ ಸುಮಾರು 2.8 ಲಕ್ಷ ಗ್ರಾಮ ಪಂಚಾಯಿತಿಗಳಿಗೆ ತಲುಪಲಿದ್ದು, ಅಭಿವೃದ್ಧಿ ಕಾಮಗಾರಿಗಳು ಮತ್ತು ಉದ್ಯೋಗ ಸೃಷ್ಟಿಗೆ ಬಳಸಲಾಗುವುದು ಎಂದು ಸಚಿವರು ತಿಳಿಸಿದರು.

ಗ್ರಾಮ ಪಂಚಾಯಿತಿಗಳು ಹಾಗೂ ಗ್ರಾಮಸಭೆಗಳ ಮೂಲಕ ಅಭಿವೃದ್ಧಿ ಕಾಮಗಾರಿಗಳನ್ನು ಆಯ್ಕೆ ಮಾಡಲಾಗುವುದು. ಉದ್ಯೋಗ ಸೃಷ್ಟಿ ಮತ್ತು ವೇತನ ಪಾವತಿಯಲ್ಲಿ ಯಾವುದೇ ವ್ಯತ್ಯಯ ಉಂಟಾಗದಂತೆ ನೋಡಿಕೊಳ್ಳಬೇಕು ಎಂದು ರಾಜ್ಯಗಳಿಗೆ ನಿರ್ದೇಶನ ನೀಡಲಾಗಿದೆ. ಜೂ.28 ಮತ್ತು 29ರಂದು ಹೊಸದಿಲ್ಲಿಯ ಪೂಸಾ ಸಂಸ್ಥೆಯಲ್ಲಿ ನಡೆಯಲಿರುವ ರಾಷ್ಟ್ರೀಯ ಗ್ರಾಮೀಣಾಭಿವೃದ್ಧಿ ಸಮ್ಮೇಳನದಲ್ಲಿ ಈ ಯೋಜನೆಯ ಪರಿಣಾಮಕಾರಿ ಅನುಷ್ಠಾನದ ಕುರಿತು ಸವಿಸ್ತಾರ ಚರ್ಚೆ ನಡೆಯಲಿದೆ.

ಕರ್ನಾಟಕಕ್ಕೆ 5,709 ಕೋಟಿ ರೂ.

ಹೊಸ ಮಧ್ಯಂತರ ಅನುದಾನದಡಿ ಕರ್ನಾಟಕಕ್ಕೆ 5,709.09 ಕೋಟಿ ರೂ. ಮಂಜೂರು ಮಾಡಲಾಗಿದೆ. ಉತ್ತರ ಪ್ರದೇಶಕ್ಕೆ ಅತಿ ಹೆಚ್ಚು 12,221.48 ಕೋಟಿ ರೂ., ಪಶ್ಚಿಮ ಬಂಗಾಳಕ್ಕೆ 8,508 ಕೋಟಿ ರೂ. ಹಾಗೂ ತಮಿಳುನಾಡಿಗೆ 7,957.57 ಕೋಟಿ ರೂ. ಅನುದಾನ ಬಿಡುಗಡೆಯಾಗಿದೆ. ರಾಜ್ಯಗಳು ಮುಂಚಿತವಾಗಿಯೇ ಕಾಮಗಾರಿಗಳಿಗೆ ಅನುಮೋದನೆ ನೀಡುವ ಮೂಲಕ ಜುಲೈ 1ರಿಂದ ವೇಗವಾಗಿ ಯೋಜನೆ ಜಾರಿಗೊಳಿಸಬೇಕು ಎಂದು ಕೇಂದ್ರ ಸರ್ಕಾರ ಸೂಚಿಸಿದೆ.

ರಾಷ್ಟ್ರ ಪರಂಪರೆ ಗೌರವಿಸದವರಿಗೆ ಭಾರತ ಧರ್ಮಛತ್ರವಾಗಿರಲು ಸಾಧ್ಯವಿಲ್ಲ

ಲವ್ ಜಿಹಾದ್ ವಿರುದ್ಧ ಎಚ್ಚರಿಸಿದ ಯೋಗಿ

• ಲಖನೌ: ರಾಷ್ಟ್ರದ ಪರಂಪರೆ, ಮೌಲ್ಯಗಳಿಗೆ ಗೌರವ ನೀಡದವರಿಗೆ ಭಾರತ ''ಧರ್ಮಶಾಲೆ''ಯಾಗಿರಲು ಸಾಧ್ಯವಿಲ್ಲ ಎಂದು ಸಾರಿದ ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು, 'ಲವ್ ಜಿಹಾದ್', ಕಾನೂನುಬಾಹಿರ ಮತಾಂತರ ಮತ್ತು ಲ್ಯಾಂಡ್ ಜಿಹಾದ್‌ಗಳಂತಹ ಪಿಡುಗುಗಳ ವಿರುದ್ಧ ಜಾಗೃತರಾಗಿರಲು ದೇಶದ ಜನತೆಯನ್ನು ಆಗ್ರಹಿಸಿದ್ದಾರೆ.

ಅವರು ಲಖನೌದಲ್ಲಿ ಜಗದ್ಗುರು ಶ್ರೀ ರಮಾನಂದಾಚಾರ್ಯ ಸ್ವಾಮಿ ರಾಮಭದ್ರಾಚಾರ್ಯರು ಆಯೋಜಿಸಿದ 9ದಿನಗಳ ಶ್ರೀರಾಮ ಕಥಾ ಮಹೋತ್ಸವದ ಸಮಾರೋಪದಲ್ಲಿ ಮಾತನಾಡಿದರು. ಭಗವಾನ್ ಶ್ರೀರಾಮ ರಾಷ್ಟ್ರೀಯ ಏಕತೆಯ ಒಂದು ಶಕ್ತಿಶಾಲಿ ಸಂಕೇತವಾಗಿ ಉಳಿಯಲಿದ್ದಾರೆ ಎಂದರು.

ರಾಜಕೀಯ ಪ್ರಚೋದನೆ ಮತ್ತು ಪೂರ್ವಾಗ್ರಹಗಳಿಂದ ಕೂಡಿದ ಕೆಲವೇ ವ್ಯಕ್ತಿಗಳನ್ನು ಹೊರತುಪಡಿಸಿ ಭಾರತೀಯ ಡಿಎನ್‌ಎ ಹೊಂದಿದ ಮತ್ತು ಯಾವುದೇ ರೂಪದಲ್ಲಿ ಭಗವಾನ್ ಶ್ರೀರಾಮನ ಚಿಂತನೆಗಳನ್ನು ತಮ್ಮ ಜೀವನದ ಭಾಗವಾಗಿಸದೆ ಇರುವ ಯಾವುದೇ ವ್ಯಕ್ತಿಗಳನ್ನು ನೀವು ಕಾಣಲು ಸಾಧ್ಯವಿಲ್ಲ ಎಂದು ಅವರು ದೃಢವಾಗಿ ಹೇಳಿದರು.



ಶ್ರೀ ರಾಮಜನ್ಮಭೂಮಿ ಚಳುವಳಿಯು ತಲೆಮಾರುಗಳವರೆಗೆ ಉಳಿದುಕೊಂಡಿರುವುದು ಏಕೆಂದರೆ, ಸಂತರು ಇದನ್ನು ಭಾರತದ ನಾಗರಿಕ ಪರಂಪರೆಯನ್ನು ರಕ್ಷಿಸುವ ಧ್ಯೇಯವೆಂದು ಪರಿಗಣಿಸಿದ್ದರು. ಸುಪ್ರೀಂ ಕೋರ್ಟ್‌ನ 2019ರ ತೀರ್ಪನ್ನು ಉಲ್ಲೇಖಿಸಿ, ಸಂವಿಧಾನ ಪೀಠವು ರಾಮಲಲ್ಲಾ ಅವರ ಜನ್ಮಸ್ಥಳವನ್ನು ಸರ್ವಾನುಮತದಿಂದ ಗುರುತಿಸಿದೆ ಮತ್ತು ನ್ಯಾಯಬದ್ಧ ಕಾನೂನು ಹೋರಾಟದಲ್ಲಿ ಸ್ವಾಮಿ ರಾಮಭದ್ರಾಚಾರ್ಯರ ಪಾತ್ರವನ್ನು ಶ್ಲಾಘಿಸಿದೆ ಎಂದು ಅವರು ಬೊಟ್ಟು ಮಾಡಿದರು.

ರಾಮಾಯಣವನ್ನು ಉಲ್ಲೇಖಿಸಿದ ಅವರು, ತಾಟಕಿಯಂತಹ ರಾಕ್ಷಸರು ಕಲಿಕೆ ಮತ್ತು ಸಂಶೋಧನೆಯಂತಹ ಜ್ಞಾನದ ಕೇಂದ್ರಗಳನ್ನು ನಾಶಗೈಯ್ಯಲು ಮಾಡಿದ ಎಲ್ಲ ಯತ್ನಗಳನ್ನೂ ಭಗವಾನ್ ಶ್ರೀರಾಮ ಸೋಲಿಸಿದ್ದನ್ನು ಪ್ರಸ್ತಾವಿಸಿದರು.

ಭಗವಾನ್ ಶ್ರೀರಾಮ ರಾಷ್ಟ್ರೀಯ ಏಕತೆಯ ಸಂಕೇತವಾಗಿದ್ದುಹೀ, ಶ್ರೀರಾಮ ಭಾರತೀಯರ ಸ್ಫೂರ್ತಿಯಾಗಿದ್ದಾರೆ ಎಂದರು. ಇಂದು ಭಾರತೀಯ ಸಮಾಜವನ್ನು ಉಧ್ವಸ್ತಗೊಳಿಸುವ ಷಡ್ಯಂತ್ರದ ಭಾಗವಾಗಿ ನಡೆಯುತ್ತಿರುವ 'ಲವ್ ಜಿಹಾದ್', ಕಾನೂನುಬಾಹಿರ ಮತಾಂತರ, 'ಲ್ಯಾಂಡ್ ಜಿಹಾದ್'ನಂತಹ ಪಿಡುಗುಗಳ ವಿರುದ್ಧ ದೇಶದ ಜನತೆ ಜಾಗೃತರಾಗಿರುವಂತೆ ಕರೆ ನೀಡಿದರು. ಲವ್ ಜಿಹಾದ್ ಭಾರತೀಯ ಧಾರ್ಮಿಕ ಜನಸಂಖ್ಯಾ ವ್ಯವಸ್ಥೆಯನ್ನೇ ಬುಡಮೇಲುಗೊಳಿಸುವ ಸಂಚಿನ ಭಾಗವಾಗಿದೆ ಎಂದರು.

ಪ್ರಕಟಣೆ

ಮಂಜುನಾಥ ಜಿ ಎಸ್ ಬಿನ್ ಸೀತಾರಾಮಯ್ಯ ಜಿ ಟಿ (MANJUNATHA GS S/O SEETHARAMAIAH G. T. ಎಂಬ ನಾನು ನಿವೃತ್ತ ಸರ್ಕಾರಿ ನೌಕರನಾಗಿದ್ದು ಹಾಲಿ NO. 28, INCHARA SHANKARA LAYOUT OLD R T NAGAR DATTAGALLI 570033 ಈ ವಿಳಾಸದಲ್ಲಿ ವಾಸವಿದ್ದೇನೆ. [illegible] MANJUNATH G S ಎಂದು [illegible] ಈ ಹೆಸರಿನ [illegible] 09.06.2026ರಂದು [illegible]

IN THE COURT OF THE XXIV Addl. HON'BLE CITY CIVIL AND SESSIONS JUDGE AT BANGALORE (CCH-6)

OS. NO. 3148/2019

BETWEEN: Sri. Gururaj H Pagad, Aged about 60 years, s/o Sri Hanumantha Rao Pagad, presently residing at No.776, 4th main Road, 5th cross BEML Layout, 3rd Stage, Rajarajeshwari Nagar, Bangalore-560045. ....**PLAINTIFF**

AND: Smt. Shobha TV ...DEFENDANT

SUMMONS TO BE SERVED ON THE PROPOSED DEFENDANT NO 2 AT THE FOLLOWING ADDRESS

D.2 Sri Sudhakara Reddy C B, S/o Sri. Bayareddy, Aged about 38 years, R/ at No. 12, C.C Road, Chokkanahalli, Yenigadale, Chikkaballapura-563125.

WHEREAS, the plaintiff has instituted the above suit as against you for specific performance and permanent injunction reliefs in respect of schedule property.

You are hereby summoned to appear in this court in person or by a pleader on **19-06-2026** at 11:00 A.M (Principal Civil Judge at Bangalore) to answer the same failing which proceedings will be disposed off ex-parte.

SCHEDULE PROPERTY

All that piece and parcel of residential property bearing site no 39, old katha No 132/1 and 132/2, present katha No132/2 .PID No 192- W0126-10 situated at KAMMANAHALLI VILLAGE, Begur Hobli Bangalore south taluk Bangalore presently comes under the limits of Bruhath Bangalore Mahanagara Palike Bangalore measuring East to west 30-00 feet and North to South 40-00 feet, totally measuring 1200 square feet along with house and bounded on : East by: Site No. 38, West by: Site no. 40, North by: Road, South by: Property belongs to Thimmarayappa

Given under my hand, signature and seal of this Hon'ble court on 25-04-2026.

By order of the court, Senior Sheristedar, City Civil Court at Bangalore.

PRAVEEN S. REDDY, Advocate
No. 22/1, 1st floor, 2nd main Road, Gandhinagar Bangalore -560009.
Mob:8553355448

IN THE COURT OF THE DEPUTY REGISTRAR OF CHITS FIRST ZONE MARGOSA ROAD MALLESHWARAM AT BANGALORE DISPUTE NO. DRB-1/CFS/ DISP/ 152/2025-26

BETWEEN: MUTHOOT PAPPACHAN CHITS (INDIA) PVT LTD., Registered branch office at:No.2732, First Floor,Darpana Square, 14th Main Road,E-Block, Sahakar Nagar Opp: Attide BIZ Bengaluru-560092. Represented by its Authorized Person/ Foreman Sri.G.Ramesh ....**DISPUTANT**

AND

SRI DEEPAK KARANTH B C AND OTHERS ....**OPPONENTS**

SRI. MALLAN GOUDA Son of Tippan Gouda Age major R/at No. 365 Celebrity Prime Ecofront, Anekal Main Road, Kasaba Hobli, Kumbaranahalli village, Jigani, Bengaluru-560105.

Claim amount of Rs. 2,86,719/-
Notice of conditional attachment in the Schedule Immovable Property of Opponent No.03 under Section 68(1) of the Chit Funds Act 1982.
BY WAY OF PAPER PUBLICATION

Whereas, the Disputant has filed the above Dispute before the Deputy Registrar of Chits First Zone Malleshwaram at Bengaluru under Section 64(1) of the Chit Funds Act 1982. For recovery of **Rs.2,86,719/-**from the Opponents towards the Chit amount due from them due to the Disputant Company.

Whereas, it is brought to my notice by the Disputant through an application filed under Section 68(1) of the Chit Funds Act 1982, accompanied by an affidavit stating that, the Opponent No.03 is the Immovable property belonging to him as mentioned in the Schedule Guarntor of this Chit and now she is contemplating to dispose the optics Dereunder with an intention to delay or defeat the enforcement or execution of the Order /Decision ie., likely to be passed in the above Dispute against him.

Therefore, I passed the following order.

ORDER

Whereas, it is brought to my notice by the Disputant through an application filed under Section 68(1) of the Chit Funds Act. 1982, accompanied by an affidavit stating that, the Opponent No.03 is the Guarantor of this Chit and now he is contemplating to dispose the immovable property belonging to him as mentioned in the Schedule hereunder with an intention to delay or defeat the enforcement or execution of the Order i.e., likely to be passed in the above Dispute against him.

The notice issued by speed post to Opponent No.03 to appear before the Hon'ble Court on 25/5/2026 at 3-00 PM is not served. Therefore, the Opponent No.03 is hereby summoned to appear before this Court in person on 25/6/2026 at 3.00 pm before the Nominee of the Deputy Registrar of Chits First Zone Malleshwaram Bengaluru, Sitting at Registered branch office at: No.2732, First Floor, Darpana Square, 14th Main Road, E-Block, Sahakar Nagar Opp: Attide BIZ Bengaluru- 560092, without fail the Opponent No. 03 to take notice that in default of her appearance absolute order will be passed.

Further the Opponent No.03 is hereby informed that, if she desires to have this attachment raised she shall furnish cash security to the extent of the Dispute claim by depositing the amount to the Disputant Company and producing the original receipt issued by her to this court on or before 25/6/2026 at 3:00 pm without fail for raising the attachment if she fail to do so within the stipulated period this conditional attachment shall be deemed to have confirmed and made absolute to the extent of the Dispute claim as per the order / Decision.

SCHEDULE PROPERTY OF OPPONENT NO.03
SCHEDULE 'A' PROPERTY (ENTIRE LAYOUT SHEDULE)

All that piece and parcel of the Total 413 sites formed in Residential converted lands to an extent of 27 Acre 5 Guntas comprised in Sy. No's: 8, 9, 91/1, 98/1, 98/2, 99/1, 99/2, 100, 101, 102, 103, 106/48, 110, 112 and 113 formed as residential layout situated at Kumbaranahalli Village, Kasaba Hobli, Anekal, Bangalore South Taluk, Bangalore bounded on the: East by : Sy. No. 6, West by : Sy. No.6 and remaining part of Sy. No.8, 9 and 106, North by : Sy. No.104, South by : Sy. No. 97 and Jigani Anekal Road

SCHEDULE 'B' PROPERTY OF OPPONENT NO.03

All that piece and parcel of the Vaccant Residential Site Property bearing No. 365, Khata PID No. 150200102800120326 formed in Sy. No. 8 in a residential converted layout comprising of Sy. No's 8, 9, 91/1, 98/1, 98/2, 99/1, 99/2, 100, 101, 102, 103, 106/48, 110, 112 and 113 lay out situated at Kumbaranahalli Village, Kasaba Hobli, Anekal, Bangalore South Taluk, Bangalore District measuring East to West 30 Feet North to 40 Feet in all measuring 1200 Sq. Feet and bounded on the: East by : Site No. 366, West by: Site No. 364, North by : Site No. 335, South by : 30 Feet Wide Road

Issued under my hand and seal of this office on 25/5/2026.

ARUN V.
NOMINEE OF THE DEPUTY REGISTRAR OF CHITS OF FIRST ZONE MALLESHWARM BENGALURU

IN THE COURT OF THE DEPUTY REGISTRAR OF CHITS FIRST ZONE MARGOSA ROAD MALLESHWARAM AT BANGALORE DISPUTE NO. DRB-1/CFS/ DISP/ 152/2025-26

BETWEEN: MUTHOOT PAPPACHAN CHITS (INDIA) PVT LTD., Registered branch office at: No.2732, First Floor,Darpana Square, 14th Main Road, E-Block, Sahakar Nagar Opp: Attide BIZ Bengaluru-560092. Represented by its Authorized Person/ Foreman Sri.G.Ramesh... **DISPUTANT**

AND

SRI DEEPAK KARANTH B C AND OTHERS ....**OPPONENTS**

SMT. ROOPA W/o Chandrashekar Age Major R/at No. 32, 2A Cross, Magadi Main Road, Herohalli, Thunganagar, Bengaluru-560091.

Claim amount of Rs. 2,86,719/-
Notice of conditional attachment in the Schedule Immovable Property of Opponent No.04 under Section 68(1) of the Chit Funds Act 1982.
BY WAY OF PAPER PUBLICATION

Whereas, the Disputant has filed the above Dispute before the Deputy Registrar of Chits First Zone Malleshwaram at Bengaluru under Section 64(1) of the Chit Funds Act 1982. For recovery of **Rs.2,86,719/-**from the Opponents towards the Chit amount due from them due to the Disputant Company.

Whereas, it is brought to my notice by the Disputant through an application filed under Section 68(1) of the Chit Funds Act 1982, accompanied by an affidavit stating that, the Opponent No.04 is the Guarntor of this Chit and now she is contemplating to dispose the immovable property belonging to him as mentioned in the Schedule hereunder with an intention to delay or defeat the enforcement or execution of the Order /Decision i.e., likely to be passed in the above Dispute against him.

Therefore, I passed the following order.

ORDER

Whereas, it is brought to my notice by the Disputant through an application filed under Section 68(1) of the Chit Funds Act. 1982, accompanied by an affidavit stating that, the Opponent No.04 is the Guarantor of this Chit and now she is contemplating to dispose the immovable property belonging to her as mentioned in the Schedule hereunder with an intention to delay or defeat the enforcement or execution of the Order i.e., likely to be passed in the above Dispute against her.

The notice issued by speed post to Opponent No.04 to appear before the Hon'ble Court on 25/05/2026 at 3-00 PM is not served. Therefore, the Opponent No.04 is hereby summoned to appear before this Court in person on 25/06/2026 at 3.00 pm before the Nominee of the Deputy Registrar of Chits First Zone Malleshwaram Bengaluru, Sitting at Registered branch office at: No.2732, First Floor, Darpana Square, 14th Main Road, E-Block, Sahakar Nagar Opp: Attide BIZ Bengaluru- 560092, without fail the Opponent No. 04 to take notice that in default of her appearance absolute order will be passed.

Further the Opponent No.04 is hereby informed that, if she desires to have this attachment raised she shall furnish cash security to the extent of the Dispute claim by depositing the amount to the Disputant Company and producing the original receipt issued by her to this court on or before 25/06/2026 at 3:00 pm without fail for raising the attachment if she fail to do so within the stipulated period this conditional attachment shall be deemed to have confirmed and made absolute to the extent of the Dispute claim as per the order / Decision.

SCHEDULE PROPERTY OF OPPONENT NO.04

All that piece and parcel of the Residential Western portion of Site bearing No. 50 Residential Site bearing new Assessment No.113/1 Old Assessment No.113 situated at Kannalli Village, Yeshwanthpura Hobli, Bangalore North Taluk measuring East to West 15 Feet and North to South 40 Feet totally 600 Sq. Feet bounded on the East by : Remaining portion of the Site No.50, West by : Site No. 51, North by : Road, South by : Site No.41

Issued under my hand and seal of this office on. 25.05.2026.

ARUN V.
NOMINEE OF THE DEPUTY REGISTRAR OF CHITS OF FIRST ZONE MALLESHWARM BENGALURU

ಗೌರಿಬಿದನೂರಿನ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಕುಣಿಗಲ್

ಅ.ದಾ.ಸಂ. 173/2025

ವಾದಿ: [illegible] –ವಿರುದ್ಧ–

[illegible]

ಸಾರ್ವಜನಿಕ ಪತ್ರಿಕಾ ಪ್ರಕಟಣೆ

[illegible] 06/07/2026 ರ ಬೆಳಿಗ್ಗೆ 11.00 [illegible]

ದಾವಾ ಶೆಡ್ಯೂಲ್ ಸ್ವತ್ತಿನ ವಿವರ

ಕುಣಿಗಲ್ ತಾಲ್ಲೂಕು, [illegible] ಸರ್ವೆ ನಂ.94/1, [illegible] ಸರ್ವೆ ನಂ.94/3 [illegible] ಸರ್ವೆ ನಂ.122 & 94/2 [illegible] ಸರ್ವೆ ನಂ.93 [illegible]

ಸದರಿ ಪ್ರಕಟಣೆಯು ದಿನಾಂಕ: 16-05-2026 ರಂದು [illegible]

ನ್ಯಾಯಾಲಯದ ಆದೇಶದ ಮೇರೆಗೆ, ಗೌರಿಬಿದನೂರಿನ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಕುಣಿಗಲ್

ವಾದಿ ಪರ ವಕೀಲರು: [illegible] ಬಿ.ಎ. [illegible] ಕುಣಿಗಲ್.

[illegible] ನ್ಯಾಯಾಲಯ, ಬೆಂಗಳೂರು

ಕ್ರಿ.ಮಿಸ್. ನಂ. 1026/2026

[illegible]

By Order of the Court, Sheristedar, Court of Chief Judicial Magistrate, Bangalore Rural Dist., Bangalore.

[illegible]

ತೋಟ ಉತ್ಪನ್ನಗಳ ಮಾರಾಟ ಸಹಕಾರ ಸಂಘ ನಿ., ಚನ್ನಗಿರಿ

ಎಪಿಎಂಸಿ ಆವರಣ ಚನ್ನಗಿರಿ, ದಾವಣಗೆರೆ ಜಿಲ್ಲೆ,-577213,
Email:tumcoscng@gmail.com, info@tumcos.com Mo:7349033006

TUMCOS/2026-27/268 DATE: 08-06-2026

ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಪ್ರಕಟಣೆ

[illegible] ಅಂದಾಜು ಮೊತ್ತ:7,93,98,032/-ರೂ.ಗಳು, ಇ.ಎಂ.ಡಿ.ಮೊತ್ತ:9,10,000/-ರೂ.ಗಳು, ಟೆಂಡರ್ ನಂಬರ್:TUMCOSL/2026-27/OW/WORK_INDENT4, ಟೆಂಡರ್ ಟೈಟಲ್ :PROPOSED COMMERCIAL BUILDING AT TUMCOS LTD, APMC YARD, HOLALKERE, CHITRADURGA DISTRICT.. ಕರ್ನಾಟಕ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ದಲ್ಲಿ 08/07/2026 ರ ಸಂಜೆ 4.00 ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ [illegible] https://www.tumcos.com [illegible]

ಸಹಿ/- ವ್ಯವಸ್ಥಾಪಕ ನಿರ್ದೇಶಕರು, ತುಮ್‌ಕೋಸ್ ಲಿ.,ಚನ್ನಗಿರಿ

ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ,
ಲೋಕೋಪಯೋಗಿ ಇಲಾಖೆ, ಗದಗ ವಿಭಾಗ, ಗದಗ
ದೂರವಾಣಿ : 08372-238782, ಇಮೇಲ್ : eepwdgad@gmail.com

ಸಂಖ್ಯೆ : ಕಾ.ನಿ.ಇಂ.ಗ./ಲೋ.ಇ./ಪಿಬಿ-1, 5/ವಿವಿಧ/2026-27/817
ದಿನಾಂಕ : 09-06-2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ ಒಟ್ಟು 848.00 ಲಕ್ಷ ಮೊತ್ತದಲ್ಲಿ ಒಟ್ಟು 08 ಕಾಮಗಾರಿಗೆ (ಕನಿಷ್ಠ ಮೊತ್ತ ರೂ. 2.00 ಲಕ್ಷ ಹಾಗೂ ಗರಿಷ್ಠ ಮೊತ್ತ ರೂ. 250.00 ಲಕ್ಷ) ಕೆ.ಪಿ.ಪಿ.ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಕೆ.ಪಿ.ಪಿ.ಪಿ. ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ. – 1, 2, 3 ಹಾಗೂ 4 ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ http://www.kppp.karnataka.gov.in ದಲ್ಲಿ ನೋಡಿ ಕೊಳ್ಳಬಹುದು.

Work Indent No. : Part-1, 27553/Call-2.

ಮೇಲಿನ ಕಾಮಗಾರಿಗಳ ಪ್ರಶ್ನೋತ್ತರ ದಿನಾಂಕ : 22-06-2026 ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 23-06-2026 ಮಧ್ಯಾಹ್ನ 4.00 ಘಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 24-06-2026. ಆರ್ಥಿಕ ಬಿಡ್ ತೆರೆಯುವ ದಿನಾಂಕ : 25-06-2026.

Work Indent No. : Part-2, 32764/Call-3, 32781/Call-3, 32783-SC/Call-2, 35125.

ಮೇಲಿನ ಕಾಮಗಾರಿಯ ಟೆಂಡರ್ ವಿವರ : ಪ್ರಶ್ನೋತ್ತರ ದಿನಾಂಕ : 16-06-2026, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 17-06-2026 ರ ಮಧ್ಯಾಹ್ನ 4.00 ಘಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 18-06-2026. ಆರ್ಥಿಕ ಬಿಡ್ ತೆರೆಯುವ ದಿನಾಂಕ : 19-06-2026.

Work Indent No. : Part-3, 33451, 33444, 36229.

ಮೇಲಿನ ಕಾಮಗಾರಿಗಳ ಟೆಂಡರ್ ವಿವರ : ಪ್ರಶ್ನೋತ್ತರ ದಿನಾಂಕ : 30-06-2026, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 01-07-2026 ರ ಮಧ್ಯಾಹ್ನ 4.00 ಘಂಟೆಯವರೆಗೆ, ತಾಂತ್ರಿಕ ಬಿಡ್ / ಆರ್ಥಿಕ ಬಿಡ್ ತೆರೆಯುವ ದಿನಾಂಕ : 02-07-2026.

ಪರಿಶಿಷ್ಟ ಜಾತಿ ಮತ್ತು ಪಂಗಡ, ಕೆಟಗರಿ-1 ಹಾಗೂ ಕೆಟಗರಿ-2ಎ ಕ್ಕೆ ಮೀಸಲಿರಿಸಿದ ಕಾಮಗಾರಿಗಳ ಟೆಂಡರ್‌ಗಳಲ್ಲಿ ಭಾಗವಹಿಸುವ ಗುತ್ತಿಗೆದಾರರು ಕಡ್ಡಾಯವಾಗಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಪೂರಕ ದಾಖಲೆಗಳಾದ ಜಾತಿ ಪ್ರಮಾಣ ಪತ್ರ, 10 ವರ್ಷದ ರಹವಾಸಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

GST shall be paid separately as per prevailing Government Order. The increase in GST shall not be paid in the extended period of contract for which the contractor alone is responsible for delay as determined by the authority while granting the extension of time.

ಸಹಿ/- ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ಗದಗ ವಿಭಾಗ,
ಗದಗ.

[illegible]/2026-27

[illegible] ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಚಿಕ್ಕಬಳ್ಳಾಪುರ

ಕ್ರಿಮಿನಲ್ ಮಿಸ್ ನಂ. 19/2026

[illegible]

[illegible] ನ್ಯಾಯಾಲಯ, ಬೆಂಗಳೂರು

[illegible] ನಂ. 50398/2025

[illegible]

ಅರ್ಜಿದಾರರ ಪರ ವಕೀಲರು: [illegible]

BEFORE THE HON'BLE COURT OF THE II ADDITIONAL CIVIL JUDGE & J M F C AT PANDAVAPURA

O.S. 212/2025

BETWEEN : P. Suresh & Another ...Plaintiff

AND : P Mahadevan @ Mahadevaih & Others ...Defendants

DEFENDANT No.1 : Sri P. Mahadevan @ Mahadevaiah, S/o Late Puttaveeraiah @ Kullaih, Aged about 78 years, Residing at: No.42, Kamakshipalya, 1st Cross, Sannakkibayalu, Bangalore-560 079.

DEFENDANT No. 2 : Smt. Sharada, W/o P. Mahadevan @ Mahadevaiah, Aged about 68 years, Residing at: No.42, Kamakshipalya, 1st Cross, Sannakkibayalu, Bangalore-560 079.

COURT NOTICE TO DEFENDANT

Whereas, the plaintiff herein has filed this suit against both of you for partition. Hence, hereby directed you to appear before the Hon'ble Civil Judge & J M F C at Pandavapura, Mandya Dist, in the above suit, in person or through a pleader/ advocate duly instructed and also to answer all the questions related the above suit **on the Day of 29.06.2026 at 11.00 a.m**. Take further notice that in default of your appearance at the day and time afore mentioned, the above suit will be heard Exparte and it will be decided in your absence.

Given under my hand seal of this Hon'ble II Additional Civil Judge & J M F C at Pandavapura, Mandya Dist, on this 02nd day of May 2026.

By order of the Court, Sheristedar, Civil Judge & JMFC Court, Pandavapura.

Advocate for Plaintiff : **RAGHU K S**, Advocate
No. 492, K N Complex, 4th Cross, Malleshwaram, Bangalore.
Mob:9845728672

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ

[illegible], ಬೆಂಗಳೂರು–22.

ಸಂಖ್ಯೆ: ಕೃಉಮಾಸ/[illegible]/669/2026–27 ದಿನಾಂಕ: 09–06–2026

ಸಾರ್ವಜನಿಕ ಪ್ರಕಟಣೆ

[illegible] ನಂ. 52/2/22, [illegible] – 22 [illegible] 31-03-2028 [illegible] ನಂ. 80/1, 3ನೇ [illegible] 07 [illegible]

ಸಹಿ/– ಕಾರ್ಯದರ್ಶಿ

ಸಾರ್ವಜನಿಕ ಪ್ರಕಟಣೆ

[illegible] 72 [illegible]

"ಶೆಡ್ಯೂಲ್ ಸ್ವತ್ತಿನ ವಿವರ"

ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು, [illegible] ಸ.ನಂ. 94/4 [illegible] 07-21 [illegible] 5-65 [illegible]

[illegible]
[illegible], ಮೊ: 9535026366
[illegible], ಮೊ: 9972280191

IN THE COURT OF THE HON'BLE SENIOR CIVIL JUDGE AND J M F C AT SHIDLAGHATTA

CRL. MIS. No.78/2026

BETWEEN:- 1. Sri. N. Muniraju S/o Late Narayanappa Aged About 75 Years, **2. Sri. N. Nagaraja** S/o Late Narayanappa Aged About 59 Years, **3. Sri. N. Mahesh** S/o Late Narayanappa Aged About 57 Years, All are Residing at Ward No.7, Kote, Shidalaghatta Town, Chikkaballapur District. **PETITIONERS**

V/s

AND :- The Registrar of birth and death, City Municipal Council, Sidlaghatta Town & Taluk, Chikkaballapur District. .... **RESPONDENT**

DRAFT PAPER PUBLICATION

The petitioners No. 1 to 3 father namely Narayanappa S/o Munishami @ Muniramappa was naturally died on 24.10.1984 at Ward No. 7, Kote, Shidalaghatta Town, Chikkaballapur District in petitioners residence, and the petitioners filed this petition requesting this Hon'ble court to enter the date of death of deceased in concerned Birth and Death Reg. of Respondent, hence it is hereby informed through this Paper Publication if any other legal heirs of deceased person present before this Hon'ble court on 10.07.2026 at 11 'O' clock through counsel or in person and file objection if any required, or else considering petitioners here in only, legatees to deceased this Hon'ble court pronounced Order in favour of petitioners herein.

Date this 6th day of June 2026.

By Order of the Court
Sheristedar, Sr. Civil Judge & JMFC Sidlaghatta

Advocate for Petitioners No. 1 to 3
Sri. K. Manjunatha, Advocate, Sidlaghatta.

IN THE COURT OF THE DEPUTY REGISTRAR OF CHITS FIRST ZONE MARGOSA ROAD MALLESHWARAM AT BANGALORE DISPUTE NO. DRB-1/CFS/DISP/ 152/2025-26

BETWEEN: MUTHOOT PAPPACHAN CHITS (INDIA) PVT LTD., Registered branch office at: No.2732, First Floor, Darpana Square, 14th Main Road,E-Block, Sahakar Nagar, Opp: Attide BIZ, Bengaluru-560092. Represented by its Authorized Person / Foreman Sri. G. Ramesh .... **DISPUTANT**

AND

SRI. DEEPAK KARANTH. B. C. AND OTHERS ...... **OPPONENTS**

01.SRI. DEEPAK KARANTH. B. C S/o Chandrashekar, Age major, R/at No.32, 2-A Cross, Magadi Main Road, Herohalli, Thunganagar, Bangalore-560091.

02. SMT.SUMANGALA W/o Mallan Gouda Age major, R/at No.365, Celebrity Prime Ecofront,Anekal Main Road, Kasaba Hobli, Kumbaranahalli village, Jigani, Bengaluru-560105.

03. SRI. MALLAN GOUDA Son of Tippan Gouda, Age major, R/at No. 365 Celebrity Prime Ecofront, Anekal Main Road, Kasaba Hobli, Kumbaranahalli village, Jigani, Bengaluru-560105.

04. SMT. ROOPA W/o Chandrashekar Age Major, R/at No. 32, 2A Cross, Magadi Main Road, Herohalli, Thunganagar, Bengaluru-560091.

05. DINESH KUMAR M S/o Manohar C.K Age Major R/at No.57, Someshwar Temple, Avalahalli, Bengaluru-560064.

.........**OPPONENTS**

NOTICE TO THE OPPONENT NO.01 TO 05 THROUGH PAPER PUBLICATION

Whereas, the Disputant has filed the above Dispute under Section 64 of the Chit Funds Act 1982 before the Deputy Registrar of Chits First Zone Malleshwaram at Bengaluru for recovery of sum of **Rs.2,86,719/-(Two Lakh Eighty Six Thousand Seven Hundred And Nineteen)** only along with interest at 18% P.A. and the Court cost from the Opponents.

The notice issued to the Opponent No.01 to 05 through Speed post is returned unserved.

The Opponent No. 01 to 05 named above are hereby directed to appear before the Authority on 25.06.2026at 03.00 PM before the Nominee of the Deputy Registrar of Chits of First Zone, Malleshwaram Bengaluru sitting at Registered branch office at: No.2732, First Floor, Darpana Square, 14th Main Road, E- Block, Sahakar Nagar Opp: Attide BIZ Bengaluru-560092. The Opponent No.01 to 05 shall appear with all the relevant documents on the date and time mentioned above failing which the above Dispute will be decided as per the law in your absence.

Given my hand and seal of my of this office on 25.05.2026 at Bengaluru.

ARUN V.
NOMINEE OF THE DEPUTY REGISTRAR OF CHITS OF FIRST ZONE MALLESHWARM BENGALURU

(ಮೀನುಗಾರಿಕೆ ಇಲಾಖೆ)
ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ
ಮೀನುಗಾರಿಕೆ ಸಹಾಯಕ ನಿರ್ದೇಶಕರು ರವರ ಕಚೇರಿ

ಬೆಂಗಳೂರು ಉತ್ತರ ತಾಲ್ಲೂಕು, ಕಬ್ಬನ್ ಪಾರ್ಕ್, ಕೆ.ಆರ್. ಸರ್ಕಲ್, ಬೆಂಗಳೂರು-560 001
ದೂರವಾಣಿ: 080-22350078 ಫ್ಯಾಕ್ಸ್: 080-22375660

ಸಂಖ್ಯೆ: ಮಸನಿ/02/2026-27 ದಿನಾಂಕ: 08/06/2026

ಸರ್ಕಾರಿ ಸ್ವಾಮ್ಯದ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ನೇರ ಗುತ್ತಿಗೆ ಮುಖಾಂತರ ವಿಲೇವಾರಿ ಮಾಡುವ ಬಗ್ಗೆ ಪ್ರಕಟಣೆ.

ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ ಹಾಗೂ ಯಲಹಂಕ ತಾಲ್ಲೂಕುಗಳ ಇಲಾಖಾ ವ್ಯಾಪ್ತಿಯ 1) ಕಟ್ಟಿಗೇನಹಳ್ಳಿ ಕೆರೆ 2) ಕಾಕೋಳು ಅಮಾನಿ ಕೆರೆ 3) ಬೆಳ್ಳಹಳ್ಳಿ ಕೆರೆ 4) ಮಲ್ಲಸಂದ್ರ ಕೆರೆ 5) ಕರಿಹೋಬನಹಳ್ಳಿ ಕೆರೆ 6) ದೊಡ್ಡಬಿದರಕಲ್ಲು ಕೆರೆ 7) ಚಿಕ್ಕಬಾಣಾವರ ಕೆರೆ 8) ಉಲ್ಲಾಲ ಕೆರೆ 9) ಕಾಚೋಹಳ್ಳಿ ಕೆರೆ ಹಾಗೂ 10) ಕೋಗಿಲು ಕೆರೆ ಈ ಕೆರೆಗಳ ಮೀನು ಪಾಶುವಾರು ಹಕ್ಕನ್ನು 2026-27ನೇ ಸಾಲಿನಿಂದ 2030-31ರ ವರೆಗೆ 05 ವರ್ಷಗಳ ಅವಧಿಗೆ ನೇರ ಗುತ್ತಿಗೆ ಮೂಲಕ ನಿಯಮಾನುಸಾರ ವಿಲೇವಾರಿ ಮಾಡಲಾಗುವುದು. ಆಸಕ್ತಿಯುಳ್ಳ ಅರ್ಹ ಮೀನುಗಾರರ ಸಹಕಾರ ಸಂಘಗಳು ಹಾಗೂ ಮೀನುಗಾರಿಕೆ ಇಲಾಖೆಯಿಂದ ಅನುಮತಿಸಲಾದ ರೈತ ಮೀನುಗಾರ ಉತ್ಪಾದಕರ ಸಂಸ್ಥೆಗಳಿಗೆ (FFPOs) ಗಳಿಂದ ಮಾತ್ರ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಿದ್ದು, ದಿನಾಂಕ:29/06/2026 ರೊಳಗೆ ಕಛೇರಿ ವೇಳೆಯಲ್ಲಿ ಈ ಕಛೇರಿಗೆ ಅರ್ಜಿಯನ್ನು ದಾಖಲಾತಿಗಳೊಂದಿಗೆ ಸಲ್ಲಿಸತಕ್ಕದ್ದು, ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ.

ಸಹಿ/- ಮೀನುಗಾರಿಕೆ ಸಹಾಯಕ ನಿರ್ದೇಶಕರು,
ಬೆಂಗಳೂರು ಉತ್ತರ ತಾಲ್ಲೂಕು.

DIPR/CP/AAPL/RO1064/26-27

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ ಡಾ: ಎಂ. ಹೆಚ್. ಮರಿಗೌಡ ರಸ್ತೆ ಬೆಂಗಳೂರು-560 029
ಫೋನ್: 26096832/26096910/877 ಫ್ಯಾಕ್ಸ್: 080-25536105
ಇ-ಮೇಲ್: purchase@kmf.coop

ಅಧಿಸೂಚನೆ ಸಂಖ್ಯೆ: ಕಹಾಮ/ಖರೀದಿ/ಟೆಂಡರ್-935/2026-27 ದಿನಾಂಕ: 09.06.2026

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ)

ಕರ್ನಾಟಕ ಸಹಕಾರ ಹಾಲು ಮಹಾಮಂಡಳ, ಬೆಂಗಳೂರು ಈ ಕೆಳಕಂಡ ವಿವರದಂತೆ ಆಸಕ್ತಿಯುಳ್ಳ ಸಂಸ್ಥೆದಾರರಿಂದ ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆದಾರರು ವಿವರಗಳನ್ನು ಅಂತರ್‌ಜಾಲದ ಮೂಲಕ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ https://kppp.karnataka.gov.in ಗೆ ಭೇಟಿ ನೀಡಿ ಪಡೆಯಬಹುದಾಗಿದೆ.

Sl. No.	Description	Approx. Qty (Kgs.)	EMD (Rs.)
1	Supply of Laminated Film for packing 1kg Chelated Mineral Mixture to KMF Cattle Feed Plants For A Period of Three months	44500 Kgs	1,64,000/-

ಇ-ಪ್ರೊಕ್ಯೂರ್‌ಮೆಂಟ್ https://kppp.karnataka.gov.in ಮೂಲಕ ಟೆಂಡರ್ ಅನ್ನು ದಿನಾಂಕ 16.06.2026 ರಂದು 05.15 ಗಂಟೆಯ ಒಳಗೆ ಸಲ್ಲಿಸಬಹುದಾಗಿದೆ. ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/- ನಿರ್ದೇಶಕರು (ಖರೀದಿ)

ನಗರಸಭಾ ಕಾರ್ಯಾಲಯ, ಹೂಟಗಳ್ಳಿ

[illegible] ಹತ್ತಿರ, ಕೆ.ಹೆಚ್.ಬಿ ಕಾಲೋನಿ ಹೂಟಗಳ್ಳಿ, ಮೈಸೂರು ಜಿಲ್ಲೆ –570018. ದೂ: 0821-2001737.
ಇ-ಮೇಲ್: [illegible]@gmail.com, ವೆಬ್‌ಸೈಟ್: ka.hootagalli.cmc@gmail.com

ಸಂ: [illegible]/ಸಿ.ಆರ್.04/2026-27 ದಿನಾಂಕ: 08.06.2026

ಟೆಂಡರ್ ಪ್ರಕಟಣೆ

ಹೂಟಗಳ್ಳಿ ನಗರಸಭೆ ವ್ಯಾಪ್ತಿಯಲ್ಲಿ 2026–27ನೇ ಸಾಲಿನ ಎಸ್.ಎಫ್.ಸಿ. ಅನುದಾನದಲ್ಲಿ ಕೆ.ಟಿ.ಪಿ.ಪಿ. ಕಾಯ್ದೆ 2000ರ ಪ್ರಕಾರ ಕೆ.ಡಬ್ಲ್ಯೂ–01ರ ನಿಯಮದಂತೆ KPP ಪೋರ್ಟಲ್ ಮೂಲಕ ಕಾಮಗಾರಿಗಳಿಗೆ ಐಟಂವಾರು ಟೆಂಡರ್ ಕರೆಯಲಾಗಿದ್ದು, ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ಗಳನ್ನು **https://kppp.karnataka.gov.in** ಪೋರ್ಟಲ್ ಮೂಲಕ ಸಲ್ಲಿಸಬಹುದಾಗಿದೆ. ಗುತ್ತಿಗೆದಾರರಿಂದ ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 23.06.2026 ಸಂಜೆ 5:30 ಗಂಟೆಯವರೆಗೆ** ಹಾಗೂ ಟೆಂಡರ್ ತೆರೆಯುವ **ದಿನಾಂಕ: 25.06.2026 ಬೆಳಿಗ್ಗೆ 11.00 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ಕಛೇರಿಯ ತಾಂತ್ರಿಕ ಶಾಖೆ ಅಭಿಯಂತರರನ್ನು ಸಂಪರ್ಕಿಸಬಹುದಾಗಿದೆ. ಟೆಂಡರನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ. ಪೂರ್ಣಗೊಂಡ ಕಾಮಗಾರಿಗೆ ಅನುದಾನಕ್ಕೆ ಅನುಗುಣವಾಗಿ ಬಿಲ್ ಪಾವತಿಸಲಾಗುವುದು.

ಕ್ರ ಸಂ.	ಕಾಮಗಾರಿಯ ಇಂಡೆಂಟ್ ನಂ.	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)
1	DMA/2026-27/RD/WORK_INDENT59495	1.60	3,400/-
2	DMA/2026-27/RD/WORK_INDENT59498	1.30	2,800/-
3	DMA/2026-27/RD/WORK_INDENT59532	1.00	2,200/-
4	DMA/2026-27/WS/WORK_INDENT59542	15.00	32,000/-

ಸಹಿ/–
ಪೌರಾಯುಕ್ತರು
ನಗರಸಭೆ, ಹೂಟಗಳ್ಳಿ

DIPR/MYS/288/SA/2026-27

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಬೆಳಗಾವಿ

ನಂ.ಕಾ.ನಿ.ಅ/ಗ್ರಾ.ಕು.ನೀ&ನೈ/ಬೆಳಗಾವಿ/ಪಿಬಿ–2/ಕು.ನೀ.ಸ.ಯೋ/ಕೆಡಬ್ಲ್ಯು–3/ ಟೆಂಡರ್–2/2026–27/389 ದಿ:08–06–2026

ಇ–ಪ್ರೊಕ್ಯೂರಮೆಂಟ್‌ರೀತ್ಯಾ ಏಕಲಕೋಟೆ &ದ್ವಿ–ಲಕೋಟೆ ಮಾದರಿಯ ಹೊಸ ಟೆಂಡರ್ ಪ್ರಕಟಣೆ ಸಂಖ್ಯೆ :2/2026–27

ಈ ಕೆಳಕಂಡ ಹೊಸ ಕಾಮಗಾರಿಗಳು Standard Tender Document KW-1,2&3 ರ ನಿಬಂಧನೆಗೊಳಪಟ್ಟಂತೆ ಏಕಲಕೋಟೆ & ದ್ವಿ–ಲಕೋಟೆ ಪದ್ಧತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟರ್ನಕೀಆಧಾರದ ಮೇಲೆ ಟೆಂಡರನ್ನು ಆಹ್ವಾನಿಸಲಾಗಿದೆ. ಸದರಿ ಟೆಂಡರಿನಲ್ಲಿ ಇ–ಪ್ರೊಕ್ಯೂರಮೆಂಟ್ ಮೂಲಕ ಭರ್ತಿ ಮಾಡಿದ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಟೆಂಡರ ತೆರೆಯುವ ದಿನಾಂಕಗಳು ಈ ಕೆಳಗಿನಂತಿದೆ.

ಅನುಸೂಚಿತ ಪರಿಶಿಷ್ಟ ಪಂಗಡಕ್ಕೆ ಮೀಸಲಿಟ್ಟ ಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಗಳು:–, ಅನುಸೂಚಿತ ಪರಿಶಿಷ್ಟ ಜಾತಿಗೆ ಮೀಸಲಿಟ್ಟ ಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಗಳು:–, ಸಾಮಾನ್ಯ ಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಗಳು:9773 Call-3, 9816/CALL-5, 9782/CALL-6. CAT-II(A), ಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಗಳು:–, CAT-Iಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಗಳು:–

1)ಇ–ಪ್ರೊಕ್ಯೂರಮೆಂಟ್ ಟೆಂಡರಿಂಗ್ ಮೂಲಕ ಭರ್ತಿ ಮಾಡಿದ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ:17–06–2026 ಸಾಯಂಕಾಲ 17:00 ಘಂಟೆವರೆಗೆ 2)ಇ–ಪ್ರೊಕ್ಯೂರಮೆಂಟ್ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ:18–06–2026 ಸಾಯಂಕಾಲ 17:30 ಘಂಟೆ ನಂತರ 3)ಭರ್ತಿ ಮಾಡಿದ ಇ–ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ:ತಾಂತ್ರಿಕ ಬಿಡ್ ಅನುಮೋದಿಸಿದ ನಂತರ, ಕಾಮಗಾರಿ ಮುಕ್ತಾಯಗೊಳಿಸಬೇಕಾದ ಅವಧಿಯು ಮಳೆಗಾಲವನ್ನು ಒಳಗೊಂಡಿರುತ್ತದೆ.

ಸೂಚನೆ:–ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿದವರ ಕಛೇರಿಗೆ ಅಥವಾ https://kppp.karnataka.gov.in ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು,
ಗ್ರಾ. ಕು. ನೀ. & ನೈ. ವಿಭಾಗ, ಬೆಳಗಾವಿ.

DIPR/BGM/RO-NO-393/KSMCA/2026-27

ಕರ್ನಾಟಕ ಸರ್ಕಾರ
ಬೀದರ ಮಹಾನಗರ ಪಾಲಿಕೆ ಬೀದರ

ದೂರವಾಣಿ: 08482-240432 ಫ್ಯಾಕ್ಸ ನಂ: 08482-240432 Web Site:www.bidarcity.mrc.gov.in
E-mail ID:itstaff_ulb-bidar@yahoo.com, ka.bidar.cmc@gmail.com

ಸಂ:ಬೀಮಪಾ/ಆರೋಗ್ಯ/ಸಿಆರ್– /2025–26 ದಿನಾಂಕ: 06–06–2026

– : ಇ–ಪ್ರಕ್ಯೂರ್‌ಮೆಂಟ್ ಪ್ರಕಟಣೆ (ದರ ಆಹ್ವಾನಕ್ಕಾಗಿ): –

1) ಕಾಮಗಾರಿ/ಸರಕು/ಸೇವೆಯ ವಿವರ {DMA/2026-27/OW/WORK_INDENT59474}:- hiring of power screen warrior 1200 and trommel machine on hourly basis for processing of municipal solid (for preparation of estimate), 2) ಕಾಮಗಾರಿ/ಸರಕು/ಸೇವೆಯ ಅಂದಾಜು ಮೊತ್ತ KPPP-portal ನಲ್ಲಿ ನಮೂದಿಸಿದಂತೆ. 3) ಗುತ್ತಿಗೆದಾರರ ಅರ್ಹತೆ ವಿವರ KPPP-portal ನಲ್ಲಿ ನಮೂದಿಸಿದಂತೆ. 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ KPPP-portal ನಲ್ಲಿ ನಮೂದಿಸಿದಂತೆ. 5) ಟೆಂಡರ ಫಾರಂ ಪಡೆಯಲು ಅಂತಿಮ ದಿನಾಂಕ & ಭರ್ತಿ ಮಾಡಿ ಸಲ್ಲಿಸಲು **16-06-2026 upto 04.00 PM,** 6) ಟೆಂಡರ ತೆರೆಯುವ **ದಿನಾಂಕ 17-06-2026 at 04.30 PM,** 7) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಛೇರಿ ವಿಳಾಸ, ದೂರವಾಣಿ ಸಂಖ್ಯೆ ಆಯುಕ್ತರು ಮಹಾನಗರ ಪಾಲಿಕೆ ಬೀದರ ಇ–ಮೇಲ್: ka.bidar.cmo@gmail.com 08482-240432, 8) ಅಂತರಜಾಲ ತಾಣದ ವಿಳಾಸ https://kppp.karnataka.gov.in/

ಸಹಿ/–ಆಯುಕ್ತರು,
ಬೀದರ ಮಹಾನಗರ ಪಾಲಿಕೆ ಬೀದರ

ವಾ.ಸಾ.ಸಂ.ಇ/ಬೀದರ/54/ಕೆ.ಎಸ್.ಎಂ.ಸಿ.&ಎ/2026–27

ನಗರಸಭಾ ಕಾರ್ಯಾಲಯ ರಾಬರ್ಟ್‌ಸನ್‌ಪೇಟೆ ಕೆ.ಜಿ.ಎಫ್–563122 CITY MUNICIPAL COUNCIL ROBERTSONPET KOLAR GOLD FIELDS - 563122

Website: www.robertsonpetcity.mrcgov.in, E mail: itstaff_ ulb_robertsonpet@yahoo.com
Phone No:08153-260256

ಸಂಖ್ಯೆ:ನಸರಾ/ತಾಶಾ/ಸ.ಅ/ಇ-ಪ್ರೊಕ್/ಸಿಆರ್/04/2026–27 ದಿನಾಂಕ:06.06.2026

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ) (ದ್ವಿ–ಲಕೋಟೆ ಪದ್ಧತಿ)

ರಾಬರ್ಟ್‌ಸನ್‌ಪೇಟೆ ನಗರಸಭೆ ವ್ಯಾಪ್ತಿಯಲ್ಲಿ ಎಸ್.ಎಫ್.ಸಿ ಯೋಜನೆ ಮತ್ತು ನಗರಸಭೆ ನಿಧಿ ಅನುದಾನದ ಅಡಿಯಲ್ಲಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅರ್ಹ ನೊಂದಾಯಿತ ಗುತ್ತಿಗೆದಾರರುಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕ ಅಧಿನಿಯಮ (ಕೆ.ಟಿ.ಪಿ.ಪಿ–1999 ನಿಯಮಗಳು 2000) ಅನ್ವಯ ಐಟಂವಾರು ದರಗಳ ದ್ವಿ–ಲಕೋಟೆ ಪದ್ಧತಿ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ.

Sl no	Name of work	Estcost (Rs.In Lakhs)	Category
1	DMA/2025-26/Ws/WORK_INDENT59124	2.91	Others
2	DMA/2025-26/OW/WORK_INDENT59128	1.675	SC
3	DMA/2025-26/OW/WORK_INDENT59130	15.00	ST
4	DMA/2025-26/OW/WORK_INDENT59131	6.04	Others
5	DMA/2025-26/RD/WORK_INDENT59132	18.00	Others
6	DMA/2025-26/RD/WORK_INDENT59136	3.52	Others
7	DMA/2025-26/WS/WORK_INDENT59138	1.6	Cat-II(A)
8	DMA/2025-26/OW/WORK_INDENT59140	3.75	Cat-II(A)
9	DMA/2025-26/OW/WORK_INDENT59146	9.32	Others
10	DMA/2025-26/OW/WORK_INDENT59147	8.4	Others
11	DMA/2025-26/OW/WORK_INDENT59460	13.94	Others
12	DMA/2025-26/SE7012/CALL-3		

ಆಯಾ ಕಾಮಗಾರಿಗಳಿಗೆ ಅನ್ವಯಿಸುವ ಟೆಂಡರ್ ದಾಸ್ತಾವೇಜಿನ ನಿಯಮಾವಳಿಗಳಿಗೆ ಒಳಪಟ್ಟಿರುತ್ತದೆ. ಹೆಚ್ಚಿನ ಮಾಹಿತಿಗಳನ್ನು ತಾಂತ್ರಿಕ ಶಾಖೆ ನಗರಸಭೆ ರಾಬರ್ಟ್‌ಸನ್‌ಪೇಟೆ ರವರನ್ನು ಸಂಪರ್ಕಿಸಿ ಪಡೆಯಬಹುದು. ದೂರವಾಣಿ ಸಂಖ್ಯೆ: 08153–260256.

ಸಹಿ/–
ಡಾ॥ಎಂ.ಆರ್ ರವಿ
ಆಡಳಿತಾಧಿಕಾರಿಗಳು, ನಗರಸಭೆ, ಕೆಜಿಎಫ್
ಜಿಲ್ಲಾಧಿಕಾರಿ, ಕೋಲಾರ ಜಿಲ್ಲೆ

ಸಹಿ/–
ಶ್ರೀಧರ್ ವಿ
ಪೌರಾಯುಕ್ತರು
ನಗರಸಭೆ, ಕೆಜಿಎಫ್

ವಾಸಾಸಂಇ/ ಕೋಲಾರ/ ಆರ್.ಓ.ಸಂಖ್ಯೆ:104/ಕೆಎಸ್ಎಂಸಿಎ/ 2026–27

15 ಲಕ್ಷ ಸಸಿ ನೆಡಲು ಬಿಡಿಎ ನಿರ್ಧಾರ

• **ಬೆಂಗಳೂರು:** ನಗರದ ಕೆಂಪೇಗೌಡ ಲೇಔಟ್‌ನಲ್ಲಿ 5 ಲಕ್ಷ ಸೇರಿದಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ)ದ ವಿವಿಧ ಬಡಾವಣೆಗಳಾದ್ಯಂತ 15 ಲಕ್ಷ ಸಸಿಗಳನ್ನು ನೆಡಲು ಬಿಡಿಎ ಮುಂದಾಗಿದ್ದು, ಗಿನ್ನೆಸ್ ವಿಶ್ವ ದಾಖಲೆ ನಿರ್ಮಿಸಲು ಯೋಜನೆ ರೂಪಿಸಿದೆ.



ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಿರ್ದೇಶನದ ಮೇರೆಗೆ, ಬಿಡಿಎ ಕೆಂಪೇಗೌಡ ಜಯಂತಿಯ ಅಂಗವಾಗಿ ಜೂನ್ 27 ರಂದು ನಾಡಪ್ರಭು ಕೆಂಪೇಗೌಡ ಬಡಾವಣೆ ಮತ್ತು ಇತರ ಬಿಡಿಎ ನಿರ್ಮಿತ ಲೇಔಟ್‌ಗಳಲ್ಲಿ 15 ಲಕ್ಷ ಸಸಿಗಳನ್ನು ನೆಡಲು ಸಿದ್ಧತೆಗಳನ್ನು ಆರಂಭಿಸಿದೆ.

ಬೆಂಗಳೂರನ್ನು ಮತ್ತೆ ಹಸಿರು ನಗರವನ್ನಾಗಿ ಪರಿವರ್ತಿಸುವ ದೂರದೃಷ್ಟಿಯೊಂದಿಗೆ, ದೀರ್ಘಕಾಲದ ಪರಿಸರ ಸುಸ್ಥಿರತೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಭವಿಷ್ಯದಲ್ಲಿ ಅಂತರ್ಜಲ ಕುಸಿತವನ್ನು ತಡೆಯಲು ಕೆಂಪೇಗೌಡ ಬಡಾವಣೆಯಲ್ಲಿ 5 ಲಕ್ಷ ಸಸಿಗಳನ್ನು ನೆಡಲಾಗುವುದು. ಉಳಿದ 10 ಲಕ್ಷ ಸಸಿಗಳನ್ನು ಬನಶಂಕರಿ 6ನೇ ಹಂತ ಸೇರಿದಂತೆ ಇತರ ಬಿಡಿಎ ಬಡಾವಣೆಗಳಲ್ಲಿ ಹಾಗೂ ಪ್ರಮುಖ ರಸ್ತೆಗಳ ಬದಿಗಳಲ್ಲಿ ನೆಡಲಾಗುವುದು ಎಂದು ಬಿಡಿಎ ತಿಳಿಸಿದೆ.

ಒಂದು ಮನೆ-ಒಂದು ಔಷಧೀಯ ಸಸ್ಯ: ಮಾವು, ಹಲಸು, ಬೇವಿನ ಗಿಡ, ಸಪೋಟ ಮುಂತಾದ ವೈವಿಧ್ಯಮಯ ಸ್ಥಳೀಯ ಮತ್ತು ಔಷಧೀಯ ಪ್ರಭೇದಗಳೊಂದಿಗೆ ಸುಮಾರು 350 ಬಗೆಯ ಸ್ಥಳೀಯ ಔಷಧೀಯ ಸಸ್ಯಗಳನ್ನು ನೆಡಲಾಗುವುದು. ವಸತಿ ಪ್ರದೇಶಗಳಲ್ಲಿ ಹಸಿರನ್ನು ಸಂಯೋಜಿಸುವ ಉದ್ದೇಶದಿಂದ ಒಂದು ಮನೆ, ಒಂದು ಔಷಧೀಯ ಸಸ್ಯ ಎಂಬ ಪರಿಕಲ್ಪನೆಯಡಿಯಲ್ಲಿ ಈ ಉಪಕ್ರಮವನ್ನು ಮುನ್ನಡೆಸಲಾಗುತ್ತಿದೆ ಎಂದು ಬಿಡಿಎ ಅರಣ್ಯ ವಿಭಾಗ ತಿಳಿಸಿದೆ.

ಈ ಯೋಜನೆಯನ್ನು ಕೇವಲ ನಗರದ ಹಸಿರನ್ನು ಹೆಚ್ಚಿಸಲು ಮಾತ್ರವಲ್ಲದೆ, ಮಾಲಿನ್ಯವನ್ನು ಕಡಿಮೆ ಮಾಡಲು, ಅಂತರ್ಜಲ ಮಟ್ಟವನ್ನು ಸುಧಾರಿಸಲು ಮತ್ತು ಕ್ಷಿಪ್ರ ನಗರೀಕರಣದ ನಡುವೆ ಪರಿಸರ ಸಮತೋಲನವನ್ನು ಬಲಪಡಿಸಲು ವಿನ್ಯಾಸಗೊಳಿಸಲಾಗಿದೆ. ತುಳಸಿ, ಬೇವು, ನೆಲ್ಲಿಕಾಯಿ, ಅಶ್ವಗಂಧ, ಅಲೋವೆರಾ ಮತ್ತು ಬ್ರಾಹ್ಮಿಯಂತಹ ಔಷಧೀಯ ಸಸ್ಯಗಳು ಪರಿಸರ ಮತ್ತು ಆರೋಗ್ಯ ಎರಡಕ್ಕೂ ಪ್ರಯೋಜನಗಳನ್ನು ನೀಡಲಿವೆ, ಜೊತೆಗೆ ಸಾಂಪ್ರದಾಯಿಕ ಜ್ಞಾನ ಪದ್ಧತಿಗಳನ್ನು ಸಂರಕ್ಷಿಸಲು ಸಹಾಯ ಮಾಡಲಿವೆ ಎಂದು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ.

ಗಿನ್ನೆಸ್ ವಿಶ್ವ ದಾಖಲೆಯತ್ತ -ಚಿತ್ತ

ಕೆಂಪೇಗೌಡ ಜಯಂತಿಯ ಒಂದೇ ದಿನದಲ್ಲಿ 15 ಲಕ್ಷ ಸಸಿಗಳನ್ನು ನೆಡುವ ಯೋಜನೆಯನ್ನು ಜಾರಿಗೊಳಿಸಲು ಉದ್ದೇಶಿಸಿದೆ. ಯೋಜನೆಯ ಪ್ರಕಾರ ಇದು ಯಶಸ್ವಿಯಾಗಿ ಅನುಷ್ಠಾನಗೊಂಡರೆ, ಈ ಉಪಕ್ರಮವು ಗಿನ್ನೆಸ್ ವಿಶ್ವ ದಾಖಲೆಯನ್ನು ನಿರ್ಮಿಸುವ ಸಾಧ್ಯತೆಯಿದ್ದು, ಆ ನಿಟ್ಟಿನಲ್ಲಿ ಕೆಲಸ ನಡೆಯುತ್ತಿದೆ ಎಂದು ಬಿಡಿಎ ತಿಳಿಸಿದೆ.

> **ಕೆಂಪೇಗೌಡ ಜಯಂತಿಯಂದು 15 ಲಕ್ಷ ಸಸಿಗಳನ್ನು ನೆಡುವ ಗುರಿಯೊಂದಿಗೆ ಗಿನ್ನೆಸ್ ವಿಶ್ವ ದಾಖಲೆ ಸಾಧಿಸುವ ವಿಶ್ವಾಸ ಹೊಂದಿದ್ದೇವೆ.**
> ■ **ಎನ್.ಎ.ಹ್ಯಾರಿಸ್**, ಬಿಡಿಎ ಅಧ್ಯಕ್ಷ

ಒತ್ತುವರಿ ತೆರವು

• **ಬೆಂಗಳೂರು:** ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯ ಜೆ.ಪಿ.ನಗರದ ಉದ್ಯಾನವನದ ಜಾಗದಲ್ಲಿದ್ದ ಅನಧಿಕೃತ ಶೆಡ್‌ಗಳನ್ನು ಪಾಲಿಕೆ ತೆರವುಗೊಳಿಸಿ, ಅಂದಾಜು 2 ಕೋಟಿ ಮೌಲ್ಯದ ಜಾಗ ಪಾಲಿಕೆ ವಶಕ್ಕೆ ಪಡೆದುಕೊಂಡಿದೆ.

ಈ ಬಗ್ಗೆ ಮಾಧ್ಯಮ ಪ್ರಕಟಣೆ ನೀಡಿರುವ ಪಾಲಿಕೆ, ಜಯನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಜೆ.ಪಿ.ನಗರ 2ನೇ ಹಂತ, ಕೆ.ಎಸ್.ಆರ್.ಟಿ.ಸಿ ಲೇಔಟ್ 5ನೇ ಅಡ್ಡರಸ್ತೆಯ ಎಚ್.ಟಿ.ಲೈನ್ ಕೆಳಭಾಗದಲ್ಲಿ ಒತ್ತುವರಿಗೊಂಡಿದ್ದ ಜಾಗವನ್ನು ಅಧಿಕಾರಿಗಳು ತೆರವುಗೊಳಿಸಿ ಪಾಲಿಕೆ ವಶಕ್ಕೆ ಪಡೆದಿದ್ದಾರೆ ಎಂದು ತಿಳಿಸಿದೆ.

ಸಾರ್ವಜನಿಕ ದೂರಿನ ಮೇರೆಗೆ ಕ್ರಮ:ಜೆಪಿ ನಗರದ ಕೆಎಸ್‌ಆರ್‌ಟಿಸಿ ಬಡಾವಣೆಯ ಸಾರ್ವಜನಿಕ ಉದ್ಯಾನವನಕ್ಕಾಗಿ ಜಾಗವನ್ನು ಮೀಸಲಿಡಲಾಗಿತ್ತು. ಈ ಪ್ರದೇಶವನ್ನು ಅನಾಮಧೇಯ ವ್ಯಕ್ತಿಗಳು ಒತ್ತುವರಿ ಮಾಡಿ ಕೊಂಡಿರುವುದಾಗಿ ಸಾರ್ವಜನಿಕ ದೂರುಗಳು ಬಂದಿದ್ದ ಹಿನ್ನಲೆಯಲ್ಲಿ ಪಾಲಿಕೆಯ ಆಯುಕ್ತ ಕೆ.ಎನ್. ರಮೇಶ್ ನಿರ್ದೇಶನದ ಮೇರೆಗೆ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಒತ್ತುವರಿ ತೆರವುಗೊಳಿಸಿದ್ದಾರೆ ಎಂದು ಪಾಲಿಕೆ ಮಾಹಿತಿ ನೀಡಿದೆ.

ಸಮಾಲೋಚನೆ



ದಕ್ಷಿಣ ಭಾರತದಲ್ಲಿ ಶ್ರೀಲಂಕಾ ಡೆಪ್ಯುಟಿ ಹೈಕಮಿಷನರ್ ಆಗಿರುವ ಡಾ. ಗಣೇಶನಾಥನ್ ಗೆತಿಶ್ವರನ್ ಅವರು ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಅವರನ್ನು ವಿಧಾನಸೌಧದ ಕಚೇರಿಯಲ್ಲಿ ಮಂಗಳವಾರ ಭೇಟಿ ಮಾಡಿ ಸಮಾಲೋಚನೆ ನಡೆಸಿದರು.

ಕಿರುಸುದ್ದಿ

ಉನ್ನತೀಕರಣಕ್ಕೆ ರೈಲ್ವೆ ಇಲಾಖೆ ಅನುಮೋದನೆ

• **ಬೆಂಗಳೂರು:** ಬೆಂಗಳೂರು-ತುಮಕೂರು ಮಾರ್ಗದಲ್ಲಿ ರೈಲು ಸಾಮರ್ಥ್ಯ ಮತ್ತು ಕಾರ್ಯಾಚರಣೆಯ ದಕ್ಷತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ, ನೈಋತ್ಯ ರೈಲ್ವೆಯ ವಿದ್ಯುತ್ ಎಳೆತ ವ್ಯವಸ್ಥೆಯನ್ನು ಉನ್ನತೀಕರಣಗೊಳಿಸಲು ಭಾರತೀಯ ರೈಲ್ವೆ ಅನುಮೋದನೆ ನೀಡಿದೆ. ಈ ಯೋಜನೆಯು ಪ್ರಸ್ತುತ ಇರುವ 1x25 ಕೆವಿ ವಿದ್ಯುತ್ ಎಳೆತ ವ್ಯವಸ್ಥೆಯನ್ನು 120 ಟ್ರ್ಯಾಕ್ ಕಿ.ಮೀ. ವ್ಯಾಪ್ತಿಯಲ್ಲಿ 2x25 ಕೆವಿ ವಿದ್ಯುತ್ ಎಳೆತ ವ್ಯವಸ್ಥೆಯಾಗಿ ಪರಿವರ್ತಿಸುವುದನ್ನು ಒಳಗೊಂಡಿದೆ. ಈ ಯೋಜನೆಗೆ ಮಂಜೂರಾದ ಒಟ್ಟು ವೆಚ್ಚ 162.57 ಕೋಟಿ ರೂ.ಆಗಿದೆ. ಬೆಂಗಳೂರು-ತುಮಕೂರು ವಿಭಾಗವು ಆಯಕಟ್ಟಿನ ದೃಷ್ಟಿಯಿಂದ ಅತ್ಯಂತ ಪ್ರಮುಖವಾದ ಮತ್ತು ಹೆಚ್ಚು ಬಳಕೆಯಲ್ಲಿರುವ ಮಾರ್ಗ-10ರ ಭಾಗವಾಗಿದೆ. ಇದು ಪುಣೆ-ಕನ್ಯಾಕುಮಾರಿ ಕಾರಿಡಾರ್ ಉದ್ದಕ್ಕೂ ಇರುವ ಪ್ರಮುಖ ಆರ್ಥಿಕ ಮತ್ತು ಕೈಗಾರಿಕಾ ಕೇಂದ್ರಗಳನ್ನು ಸಂಪರ್ಕಿಸುತ್ತದೆ. 2x25 ಕೆವಿ ಟ್ರ್ಯಾಕ್ಷನ್ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವುದರಿಂದ ರೈಲು ಕಾರ್ಯಾಚರಣೆಗಾಗಿ ವಿದ್ಯುತ್ ಪೂರೈಕೆ ವ್ಯವಸ್ಥೆಯು ಬಲಗೊಳ್ಳಲಿದ್ದು, ಈ ವಿಭಾಗವು ಹೆಚ್ಚಿನ ಪ್ರಮಾಣದ ಸಂಚಾರ ದಟ್ಟಣೆಯನ್ನು ಹೆಚ್ಚು ದಕ್ಷತೆಯಿಂದ ನಿಭಾಯಿಸಲು ಅನುವು ಮಾಡಿಕೊಡುತ್ತದೆ. ಉನ್ನತೀಕರಣಗೊಳಿಸಲಾದ ಈ ವ್ಯವಸ್ಥೆಯು ಒಟ್ಟಾರೆ ವಿದ್ಯುತ್ ಟ್ರ್ಯಾಕ್ಷನ್ ಮೂಲಸೌಕರ್ಯದ ವಿಶ್ವಾಸಾರ್ಹತೆಯನ್ನು ಸುಧಾರಿಸುವ ಜೊತೆಗೆ, ಹೆಚ್ಚು ಭಾರದ ಸರಕು ಸಾಗಣೆ ರೈಲುಗಳು ಮತ್ತು ಸುದೀರ್ಘವಾದ ಪ್ರಯಾಣಿಕ ರೈಲುಗಳ ಕಾರ್ಯಾಚರಣೆಗೆ ಬೆಂಬಲ ನೀಡುವ ನಿರೀಕ್ಷೆಯಿದೆ.

ಜೂ.15 ರವರೆಗೆ ವಿಸ್ತರಣೆ

• **ಬೆಂಗಳೂರು:** ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಪದವಿ ಕೋರ್ಸ್‌ಗಳ ಪ್ರವೇಶಾತಿಗೆ ದಂಡ ಶುಲ್ಕವಿಲ್ಲದೆ ಅಂತಿಮ ದಿನಾಂಕವನ್ನು ಜೂ.15 ರವರೆಗೆ ವಿಸ್ತರಿಸಲಾಗಿದೆ. ಯುಯುಸಿಎಂಎಸ್ ಪೋರ್ಟಲ್‌ನಲ್ಲಿ ಉಂಟಾಗಿದ್ದ ತಾಂತ್ರಿಕ ಸಮಸ್ಯೆಗಳನ್ನು ಪರಿಗಣಿಸಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸ್ನಾತಕ ಪದವಿ ಕೋರ್ಸ್‌ಗಳ ಪ್ರವೇಶದ ಕಾಲಾವಕಾಶವನ್ನು ವಿಸ್ತರಿಸಿ ಅಧಿಕೃತ ಅಧಿಸೂಚನೆ ಹೊರಡಿಸಲಾಗಿದೆ ಎಂದು ವಿಶ್ವವಿದ್ಯಾಲಯದ ಕುಲಸಚಿವ ಎ. ನವೀನ್ ಜೋಸೆಫ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದಿರಾ ದತ್ತಿ ಪ್ರಶಸ್ತಿಗೆ ಕೃತಿ ಆಹ್ವಾನ

• **ಬೆಂಗಳೂರು:** ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ನೀಡಲಾಗುವ ಡಾ.ಎಚ್.ವಿಶ್ವನಾಥ್ ಮತ್ತು ಇಂದಿರಾ ದತ್ತಿ ಪ್ರಶಸ್ತಿಗಾಗಿ ಅರ್ಹ ಬರಹಗಾರರಿಂದ ಕೃತಿಗಳನ್ನು ಆಹ್ವಾನಿಸಲಾಗಿದೆ. ಈ ದತ್ತಿಯ ವಿಶೇಷ ದೃಷ್ಟಿಚೇತನ ಬರಹಗಾರರಿಗೆ ಮೀಸಲಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಆಡಳಿತಾಧಿಕಾರಿ ಕೆ.ಎ.ದಯಾನಂದ ತಿಳಿಸಿದ್ದಾರೆ.

ಡಾ.ಎಚ್.ವಿಶ್ವನಾಥ್ ಮತ್ತು ಇಂದಿರಾ ದತ್ತಿ ಪ್ರಶಸ್ತಿಯು ರಾಜ್ಯಮಟ್ಟದ ಪ್ರಶಸ್ತಿಯಾಗಿದ್ದು, ರಾಜ್ಯದ ಯಾವುದೇ ಭಾಗದ ಹೊರನಾಡಿನ, ಹೊರದೇಶದ ಅರ್ಹ ಅಭ್ಯರ್ಥಿಗಳೂ ಕೂಡ ತಮ್ಮ ಕೃತಿಗಳನ್ನು ಜೂ.20 ರೊಳಗಾಗಿ ತಮ್ಮ ಇತ್ತೀಚಿನ ಕೃತಿ ಮತ್ತು ಸ್ವ ಪರಿಚಯದ ಜೊತೆಗೆ ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560018 ಇಲ್ಲಿಗೆ ಕಳುಹಿಸಿ ಕೊಡಬೇಕೆಂದು ಪತ್ರಿಕಾ ಪತ್ರಿಕೆಯಲ್ಲಿ ತಿಳಿಸಿದ್ದಾರೆ.

ನಗರಪಾಲಿಕೆ ನಡೆಗೆ ಸ್ಥಳೀಯ ವಿರೋಧ | ದೇವಸ್ಥಾನದ ಸೇವಾ ಟ್ರಸ್ಟ್‌ನಿಂದ ಪ್ರತಿಭಟನೆ ಎಚ್ಚರಿಕೆ

ಹಳೆಯ ದೇವಸ್ಥಾನ ತೆರವಿಗೆ ನೋಟಿಸ್

• **ಬೆಂಗಳೂರು:** ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಗೆ ಬರುವ ಬಾಪೂಜಿ ನಗರದಲ್ಲಿರುವ 70 ವರ್ಷದ ಇತಿಹಾಸ ಹೊಂದಿರುವ ವಿನಾಯಕ ದೇವಸ್ಥಾನ ಇರುವ ಜಾಗ ಸರ್ಕಾರದ್ದಾಗಿದ್ದು, ತೆರವುಗೊಳಿಸುವಂತೆ ಪಶ್ಚಿಮ ನಗರ ಪಾಲಿಕೆ ನೋಟಿಸ್ ನೀಡಿದೆ ಎಂದು ದೇವಸ್ಥಾನದ ಮಯೂರ ವಿನಾಯಕ ಸೇವಾ ಟ್ರಸ್ಟ್ ತಿಳಿಸಿದೆ.

1963ರಿಂದಲೂ ಈ ದೇವಸ್ಥಾನಕ್ಕೆ ಸಂಬಂಧಿಸಿದಂತೆ ಪತ್ರ ವ್ಯವಹಾರ ನಡೆಸಿದ ಅಧಿಕೃತ ದಾಖಲೆಗಳು ನಮ್ಮ ಬಳಿಯಿವೆ. ದೇವರಾಜ ಅರಸು ಅವರು ಕಾರ್ಮಿಕ ಸಚಿವರಾಗಿದ್ದ ಕಾಲದಿಂದಲೂ ನಮ್ಮ ತಂದೆಯವರ ನೇತೃತ್ವದಲ್ಲಿ ದೇವಸ್ಥಾನದ ನಿರ್ವಹಣೆ ನಡೆಯುತ್ತಾ ಬಂದಿದೆ. ಮೂಲತಃ ಇದು ಮೈಸೂರು ಹೌಸಿಂಗ್ ಬೋರ್ಡ್, ಪ್ರಸ್ತುತ ಕರ್ನಾಟಕ ಹೌಸಿಂಗ್ ಬೋರ್ಡ್ ನೌಕರರ ಕ್ವಾಟರ್ಸ್ ಜಾಗವಾಗಿದೆ. ಸಿವಿಕ್ ಅಮೆನಿಟಿ (ಸಿಎ) ಉದ್ದೇಶಕ್ಕಾಗಿ ಬಿಟ್ಟಿದ್ದ ಜಾಗವಾಗಿದೆ. ಕಳೆದ ತಿಂಗಳು ಸರ್ಕಾರ ನಮಗೆ ಜಾಗ ಖಾಲಿ ಮಾಡುವಂತೆ ನೋಟಿಸ್ ನೀಡಿತ್ತು. ನಮ್ಮ ಬಳಿ ಇರುವ ಹಳೆಯ ದಾಖಲೆಗಳನ್ನು ಅಧಿಕೃತವಾಗಿ ಕಚೇರಿಗಳಿಂದ ಪಡೆದು ಸಲ್ಲಿಸಲು ನಮಗೆ ಕನಿಷ್ಠ 6 ತಿಂಗಳ ಕಾಲಾವಕಾಶಬೇಕೆಂದು ನಾವು ಕೋರಿದ್ದೆವು. ಆದರೆ ಕಾನೂನಿನಲ್ಲಿ ಅದಕ್ಕೆ ಅವಕಾಶವಿಲ್ಲ ಎಂದು ನಿರಾಕರಿಸಿರುವ ಅಧಿಕಾರಿಗಳು, ಕೇವಲ 7 ದಿನಗಳ ಒಳಗೆ ದಾಖಲಾತಿ ನೀಡಬೇಕು. ಇಲ್ಲದಿದ್ದರೆ ಪಾಲಿಕೆಯ ವಶಕ್ಕೆ ತೆಗೆದುಕೊಳ್ಳಲಾಗುವುದು. ಆ ಸಮಯದಲ್ಲಿ ಏನಾದರೂ ಅಡ್ಡಿಪಡಿಸಿದರೆ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದೆಂದು ನೋಟಿಸ್ ನೀಡಲಾಗಿದೆ ಎಂದು ಟ್ರಸ್ಟ್‌ನ ಕಾರ್ಯದರ್ಶಿ ಲಕ್ಷ್ಮೀನಾರಾಯಣ್ ತಿಳಿಸಿದ್ದಾರೆ.



> ▸ ಮೂಲತಃ ಇದು ಮೈಸೂರು ಹೌಸಿಂಗ್ ಬೋರ್ಡ್, ಪ್ರಸ್ತುತ ಕರ್ನಾಟಕ ಹೌಸಿಂಗ್ ಬೋರ್ಡ್ ನೌಕರರ ಕ್ವಾಟರ್ಸ್ ಜಾಗವಾಗಿದೆ
> ▸ ಸರ್ಕಾರದ ಈ ಏಕಪಕ್ಷೀಯ ಧೋರಣೆಯ ವಿರುದ್ಧ ತೀವ್ರ ಟ್ರಸ್ಟ್ ಅಸಮಾಧಾನ

ಪಾಲಿಕೆ ಅಧಿಕಾರಿಗಳು ನೋಟಿಸ್ ನೀಡಿರುವ ಹಿನ್ನೆಲೆಯಲ್ಲಿ ದೇವಾಲಯದ ಟ್ರಸ್ಟ್‌ನ ಸದಸ್ಯರು ಮತ್ತು ಭಕ್ತರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸರ್ಕಾರದ ಈ ಏಕಪಕ್ಷೀಯ ಧೋರಣೆಯ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಟ್ರಸ್ಟ್‌ನ ಪ್ರಮುಖರು, ಬೇರೆ ಬೇರೆ ಧರ್ಮದ ಹಲವಾರು ಪ್ರಾರ್ಥನಾ ಮಂದಿರಗಳು ಇಂತಹದ್ದೇ ಜಾಗಗಳಲ್ಲಿ ತಲೆ ಎತ್ತಿವೆ. ಆದರೆ ಸರ್ಕಾರ ಇಷ್ಟೊಂದು ಸುಸಜ್ಜಿತವಾಗಿ ಬೆಳೆದಿರುವ ನಮ್ಮ ದೇವಸ್ಥಾನವನ್ನು ಮಾತ್ರ ಗುರಿಯಾಗಿಸಿಕೊಂಡು ನೋಟಿಸ್ ನೀಡಿರುವುದು ಎಷ್ಟು ಸರಿ? ಇಷ್ಟು ವರ್ಷ ಇಲ್ಲದ ಈ ನಡೆ ಈಗ ಏಕಾ-ಏಕಿ ಏಕೆ ? ಎಂದು ಪ್ರಶ್ನಿಸಿದ್ದಾರೆ.

ಒಂದು ವೇಳೆ ಪಾಲಿಕೆ ಅಧಿಕಾರಿಗಳು ಏಕಪಕ್ಷೀಯವಾಗಿ ದೇವಸ್ಥಾನ ತೆರವುಗೊಳಿಸಲು ಮುಂದಾದರೆ, ಮುಂದಿನ ದಿನಗಳಲ್ಲಿ ಸಾವಿರಾರು ಭಕ್ತರು ಬೀದಿಗಿಳಿದು ಉಗ್ರ ಹೋರಾಟ ನಡೆಸಲಿದ್ದಾರೆ ಎಂದು ಟ್ರಸ್ಟ್ ಮತ್ತು ಭಕ್ತರು ಎಚ್ಚರಿಸಿದ್ದಾರೆ.

> **ಬೇರೆ ಯಾರಿಗೂ ಇಲ್ಲದ ಕಾನೂನು ನಮ್ಮ ದೇವಸ್ಥಾನಕ್ಕೆ ಮಾತ್ರ ಯಾಕೆ?. ಈ ವಿಷಯಕ್ಕೆ ಹಲವು ಹಿಂದು ಪರ ಸಂಘಟನೆಗಳು ಬೆಂಬಲ ವ್ಯಕ್ತಪಡಿಸಿವೆ. ದೇವಸ್ಥಾನವನ್ನು ಉಳಿಸಿಕೊಳ್ಳಲು ಭಕ್ತರು ಹಾಗೂ ಟ್ರಸ್ಟ್ ಮಂಡಳಿಯು ಕಾನೂನಾತ್ಮಕ ಮತ್ತು ಬೀದಿ ಹೋರಾಟಕ್ಕೆ ಸಿದ್ಧತೆ ನಡೆಸುತ್ತಿದೆ.**
> ■ **ಲಕ್ಷ್ಮೀನಾರಾಯಣ್**, ಮಯೂರ ವಿನಾಯಕ ಸೇವಾ ಟ್ರಸ್ಟ್ ಕಾರ್ಯದರ್ಶಿ

ಧಾರ್ಮಿಕ ಮತ್ತು ಸಾಮಾಜಿಕ ಕೇಂದ್ರ

ಈ ದೇವಾಲಯ ಕೇವಲ ಪೂಜಾ ಸ್ಥಳಗಳಾಗಿರದೆ, ಪ್ರತಿದಿನ ಯೋಗ, ಧ್ಯಾನ ಹಾಗೂ ನಿರಂತರ ಅನ್ನದಾನ ನಡೆಯುವ ಪವಿತ್ರ ಸ್ಥಳಗಳಾಗಿವೆ. ಪ್ರತಿ ವರ್ಷ ನೂರಾರು ಅಯ್ಯಪ್ಪ ಮಾಲಾಧಾರಿಗಳು ಇಲ್ಲಿಂದಲೇ ಶಬರಿಮಲೆಗೆ ಯಾತ್ರೆ ಕೈಗೊಳ್ಳುತ್ತಾರೆ. ಸುಮಾರು 60 ವರ್ಷಗಳಿಂದ ಈ ದೇವಸ್ಥಾನವನ್ನು ಕಷ್ಟಪಟ್ಟು ಕಟ್ಟಿ ಬೆಳೆಸಲಾಗಿದೆ. ಮಹಿಳೆಯರೆಲ್ಲರೂ ಸೇರಿ ಇಲ್ಲಿ ಲಲಿತಾ ಸಹಸ್ರನಾಮ, ವಿಷ್ಣು ಸಹಸ್ರನಾಮ ಪಠಿಸುತ್ತಾರೆ. ಈ ಜಾಗವನ್ನು ಬಿಟ್ಟುಕೊಡಲು ನಾವು ಯಾವುದೇ ಕಾರಣಕ್ಕೂ ಸಿದ್ಧವಿಲ್ಲ ಎಂದು ಭಕ್ತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.



ವಿನಯ್ ಮೃತ್ಯುಂಜಯ ನಾಮನಿರ್ದೇಶನ

• **ಬೆಂಗಳೂರು:** ದಿ ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟ್ಸ್ ಆಫ್ ಇಂಡಿಯಾ (ಐಸಿಎಐ) 2026-27ನೇ ಸಾಲಿನ ದಿವಾಳಿತನ, ಬ್ಯಾಂಕ್ರಪ್ಸಿ ಮತ್ತು ಮೌಲ್ಯಮಾಪನ ಮಂಡಳಿ ಸಮಿತಿಗೆ ಬೆಂಗಳೂರು ಮೂಲದ ಚಾರ್ಟರ್ಡ್ ಅಕೌಂಟೆಂಟ್ ಹಾಗೂ ಇನ್ಸಾಲ್ವೆನ್ಸಿ ವೃತ್ತಿಪರರಾದ ವಿನಯ್ ಮೃತ್ಯುಂಜಯ ಅವರನ್ನು ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿದೆ.



ಐಸಿಎಐ ಅಧ್ಯಕ್ಷ ಸಿಎ ಪ್ರಸನ್ನ ಕುಮಾರ್ ಡಿ. ಅವರು ಈ ನಾಮನಿರ್ದೇಶನವನ್ನು ಘೋಷಿಸಿದ್ದು, ದಿವಾಳಿತನ, ಪುನರ್‌ರಚನೆ, ಮೌಲ್ಯಮಾಪನ ಹಾಗೂ ಕಾರ್ಪೊರೇಟ್ ಸಲಹಾ ಸೇವೆಗಳ ಕ್ಷೇತ್ರದಲ್ಲಿ ವಿನಯ್ ಮೃತ್ಯುಂಜಯ ಅವರು ನೀಡಿರುವ ಗಮನಾರ್ಹ ಸೇವೆ ಮತ್ತು ವೃತ್ತಿಪರ ಅನುಭವವನ್ನು ಪರಿಗಣಿಸಿ ಈ ಜವಾಬ್ದಾರಿಯನ್ನು ನೀಡಲಾಗಿದೆ ಎಂದು ತಿಳಿಸಿದ್ದಾರೆ.

35 ವರ್ಷಗಳಿಗೂ ಹೆಚ್ಚು ವೃತ್ತಿಪರ ಅನುಭವ ಹೊಂದಿರುವ ವಿನಯ್ ಮೃತ್ಯುಂಜಯ ಅವರು ಇನ್ಸಾಲ್ವೆನ್ಸಿ ಮತ್ತು ಬ್ಯಾಂಕ್ರಪ್ಸಿ ಬೋರ್ಡ್ ಆಫ್ ಇಂಡಿಯಾದಲ್ಲಿ ನೋಂದಾಯಿತವಾಗಿರುವ ಇನ್ವಾರ್ ರಿಸ್ಟ್ರಕ್ಚರಿಂಗ್ ಸರ್ವೀಸಸ್ ಸಂಸ್ಥೆಯ ಸಂಸ್ಥಾಪಕ ಪಾಲುದಾರರಾಗಿದ್ದಾರೆ. ಕರ್ನಾಟಕದಲ್ಲಿ ಸ್ಥಾಪನೆಯಾಗಿ ಐಬಿಬಿಐ ಮಾನ್ಯತೆ ಪಡೆದ ಮೊದಲ ಇನ್ಸಾಲ್ವೆನ್ಸಿ ವೃತ್ತಿಪರ ಸಂಸ್ಥೆ ಎಂಬ ಹೆಗ್ಗಳಿಕೆಯನ್ನು ಈ ಸಂಸ್ಥೆ ಹೊಂದಿದೆ.

ನಾಮನಿರ್ದೇಶನ ಕುರಿತು ಪ್ರತಿಕ್ರಿಯಿಸಿದ ವಿನಯ್ ಮೃತ್ಯುಂಜಯ ಅವರು, ತಮ್ಮ ಮೇಲೆ ವಿಶ್ವಾಸವಿರಿಸಿ ಜವಾಬ್ದಾರಿ ನೀಡಿದ ಐಸಿಎಐ ನಾಯಕತ್ವಕ್ಕೆ ಕೃತಜ್ಞತೆ ಸಲ್ಲಿಸಿದರು. ದಿವಾಳಿತನ ಮತ್ತು ಮೌಲ್ಯಮಾಪನ ಕ್ಷೇತ್ರಗಳಲ್ಲಿ ವೃತ್ತಿಪರ ಮಾನದಂಡಗಳನ್ನು ಮತ್ತಷ್ಟು ಬಲಪಡಿಸುವುದು ಹಾಗೂ ದೇಶದಲ್ಲಿ ಪರಿಣಾಮಕಾರಿ ಮತ್ತು ಸದೃಢ ವ್ಯವಸ್ಥೆಯ ನಿರ್ಮಾಣಕ್ಕೆ ತಮ್ಮ ಕೊಡುಗೆ ನೀಡುವುದಾಗಿ ಹೇಳಿದರು.

ಐಸಿಎಐಯ ದಿವಾಳಿತನ, ಬ್ಯಾಂಕ್ರಪ್ಸಿ ಮತ್ತು ಮೌಲ್ಯಮಾಪನ ಮಂಡಳಿ ಸಮಿತಿಯು ವೃತ್ತಿಪರ ಶ್ರೇಷ್ಠತೆ, ಸಂಶೋಧನೆ, ನೀತಿ ಪ್ರತಿಪಾದನೆ, ಸಾಮರ್ಥ್ಯ ವೃದ್ಧಿ ಹಾಗೂ ಜಾಗತಿಕ ಮಾನದಂಡಗಳಿಗೆ ಅನುಗುಣವಾಗಿ ಭಾರತೀಯ ವ್ಯವಸ್ಥೆಯನ್ನು ರೂಪಿಸುವ ಉದ್ದೇಶದಿಂದ ಕಾರ್ಯನಿರ್ವಹಿಸುತ್ತಿದೆ. ಈ ಸಮಿತಿಯ ಮೂಲಕ ದೇಶದ ಕಾರ್ಪೊರೇಟ್ ಹಾಗೂ ಹಣಕಾಸು ವ್ಯವಸ್ಥೆಯನ್ನು ಇನ್ನಷ್ಟು ಪಾರದರ್ಶಕ ಮತ್ತು ಪರಿಣಾಮಕಾರಿಯಾಗಿಸಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದರು.

ರಾಡಾಪ್ಟೀವ್ ಇಂಕ್ ಸಂಸ್ಥೆಯೊಂದಿಗೆ ಒಡಂಬಡಿಕೆ

• **ಬೆಂಗಳೂರು:** ವಿದ್ಯಾರ್ಥಿಗಳಿಗೆ ಕೌಶಲಾಧಾರಿತ ಉದ್ಯೋಗಾರ್ಹತೆ ಅವಕಾಶಗಳನ್ನು ಸೃಷ್ಟಿಸಲು ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯವು, ಅಮೆರಿಕದ ಕ್ಯಾಲಿಫೋರ್ನಿಯದಲ್ಲಿರುವ ರಾಡಾಪ್ಟೀವ್ ಇಂಕ್ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡಿದೆ.



ವಿಶ್ವವಿದ್ಯಾಲಯದ ಪರವಾಗಿ ಕುಲಸಚಿವ ಎ. ನವೀನ್ ಜೋಸೆಫ್ ಹಾಗೂ ರಾಡಾಪ್ಟೀವ್ ಇಂಕ್ ಸಂಸ್ಥೆಯ ಪರವಾಗಿ ಉಪಾಧ್ಯಕ್ಷ ಸುಧಾ ದೇವ್ ಜೂ. 9 ರಂದು ಬೆಂಗಳೂರಿನಲ್ಲಿ ಅಂಕಿತ ಹಾಕಿದ್ದಾರೆ.

ಬಿಸಿಯು ಕುಲಪತಿ ಪ್ರೊ.ರಮೇಶ್ ಬಿ. ಅಮೆರಿಕ ಸಂಸ್ಥೆಯ ಪ್ರತಿನಿಧಿಯೊಂದಿಗೆ ಒಡಂಬಡಿಕೆ ಪತ್ರ ವಿನಿಮಯ ಮಾಡಿಕೊಂಡರು. ಸಮಾಜ ವಿಜ್ಞಾನಗಳ ಅಧ್ಯಯನದ ವಿದ್ಯಾರ್ಥಿಗಳಿಗೂ ತಂತ್ರಜ್ಞಾನ ಕೌಶಲ ತರಬೇತಿ ಒದಗಿಸುವ ಉದ್ದೇಶದಿಂದ ಈ ಪ್ರಯತ್ನ ಕೈಗೊಳ್ಳಲಾಗಿದೆ ಎಂದು ವಿವರಿಸಿದರು.

ರಾಡಾಪ್ಟೀವ್ ಇಂಕ್ ಉಪಾಧ್ಯಕ್ಷ ಸುಧಾ ದೇವ್ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಕೌಶಲ್ಯಾಭಿವೃದ್ಧಿಗೆ ಪೂರಕವಾಗಿ ಬೋಧಕ ವರ್ಗಕ್ಕೂ ಸೂಕ್ತ ಮಾರ್ಗದರ್ಶನ ಒದಗಿಸುವ ಜತೆಗೆ ಉದ್ಯಮ ಕ್ಷೇತ್ರದ ಅಗತ್ಯಗಳಿಗೆ ಅನುಗುಣವಾಗಿ ಪಠ್ಯಕ್ರಮ ಪರಿಷ್ಕರಣೆ ಪ್ರಸ್ತಾಪವನ್ನು ಮುಂದಿಟ್ಟರು.

ಸಮಾಜ ಕಾರ್ಯ ಶಿಕ್ಷಣವನ್ನು ತಂತ್ರಜ್ಞಾನ, ಡಿಜಿಟಲ್ ಸಾಧನಗಳು ಮತ್ತು ಕೃತಕ ಬುದ್ಧಿಮತ್ತೆ (ಎಐ)ಯೊಂದಿಗೆ ಸಮನ್ವಯಗೊಳಿಸುವ ಮೂಲಕ ಸಮುದಾಯ ಸಂಪರ್ಕ ಮತ್ತು ಒಳಗೊಳ್ಳುವಿಕೆಯನ್ನು ಹೆಚ್ಚಿಸಿ ಸಾಮಾಜಿಕ ಸಕಾರಾತ್ಮಕ ಪರಿಣಾಮ ಸೃಜಿಸುವ ಉದ್ದೇಶವನ್ನೂ ಈ ಒಡಂಬಡಿಕೆ ಒಳಗೊಂಡಿದೆ.

ಈ ವೇಳೆ ಕುಲಸಚಿವ (ಮೌಲ್ಯಮಾಪನ) ಪ್ರೊ. ರಮೇಶ ಬಿ. ಕುಡೇನಟ್ಟಿ, ವಿ.ವಿ. ಸಿಂಡಿಕೇಟ್ ಸದಸ್ಯರಾದ ಡಾ.ಎಚ್.ಕೃಷ್ಣರಾಮ್, ಡಾ. ಫ್ರಾನ್ಸಿಸ್ ಅಸ್ಸಿಸಿ ಅಲ್ಮೈಡಾ, ವಿದ್ಯಾವಿಷಯಕ ಪರಿಷತ್ತಿನ ಸದಸ್ಯ ಡಾ.ಅಬ್ದುಲ್ ಖಾದರ್, ಹಿರಿಯ ಪ್ರಾಧ್ಯಾಪಕ ಪ್ರೊ.ಎಂ.ನಿರ್ಮಲ ಸೇರಿದಂತೆ ಇತರರಿದ್ದರು.

ಆರೋಗ್ಯ ಸೇವೆ ಪ್ರತಿ ನಾಗರಿಕನ ಹಕ್ಕು

• **ಬೆಂಗಳೂರು:** ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ, ಆರೋಗ್ಯ ಕ್ಷೇತ್ರದಲ್ಲಿ ಮಹತ್ವದ ಸುಧಾರಣೆಗಳನ್ನು ತರುವ ಮೂಲಕ ಉತ್ತಮ ಆರೋಗ್ಯ ಸೇವೆ ಪ್ರತಿಯೊಬ್ಬ ನಾಗರಿಕನ ಹಕ್ಕು ಎಂಬ ಧ್ಯೇಯದೊಂದಿಗೆ ಆರೋಗ್ಯ ಕ್ಷೇತ್ರದಲ್ಲಿ ಸುಧಾರಣೆಗಳ ಪಯಣ ಮುಂದುವರಿದಿದೆ ಎಂದು ಬಿಜೆಪಿ ಯುವ ಮುಖಂಡ ಡಾ. ನಿರಂತರ ಗಣೇಶ್ ಹೇಳಿದರು.



ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತಾವಧಿಯಲ್ಲಿ ದೇಶದಲ್ಲಿ ಏಮ್ಸ್ ಆಸ್ಪತ್ರೆಗಳ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದೆ. 2014ರವರೆಗೆ ದೇಶದಲ್ಲಿ ಕೇವಲ 6 ಏಮ್ಸ್ ಸಂಸ್ಥೆಗಳಿದ್ದವು. ಆದರೆ, ಈಗ ಅವುಗಳ ಸಂಖ್ಯೆ 23ಕ್ಕೆ ಏರಿಕೆಯಾಗಿದೆ. ಹಲವಾರು ಈಗಾಗಲೇ ಕಾರ್ಯನಿರ್ವಹಿಸುತ್ತಿವೆ. ಇದರಿಂದ ಗುಣಮಟ್ಟದ ಆರೋಗ್ಯ ಸೇವೆಗಳು ದೊಡ್ಡ ನಗರಗಳಿಗೆ ಮಾತ್ರ ಸೀಮಿತವಾಗದೆ ದೇಶದ ವಿವಿಧ ಭಾಗಗಳಿಗೆ ವಿಸ್ತರಿಸುತ್ತಿವೆ ಎಂದು ಸಂತಸ ವ್ಯಕ್ತ ಪಡಿಸಿದರು.

ಆಯುಷ್ಮಾನ್ ಭಾರತ್-ಪ್ರಧಾನಮಂತ್ರಿ ಜನ ಆರೋಗ್ಯ ಯೋಜನೆ ಮೂಲಕ ಆರ್ಥಿಕವಾಗಿ ದುರ್ಬಲ ವರ್ಗದ ಕುಟುಂಬಗಳಿಗೆ ವರ್ಷಕ್ಕೆ 5 ಲಕ್ಷ ರೂ.ವರೆಗೆ ಉಚಿತ ಚಿಕಿತ್ಸಾ ಸೌಲಭ್ಯ ಕಲ್ಪಿಸಲಾಗಿದೆ. ಈ ಯೋಜನೆಯ ಅಡಿಯಲ್ಲಿ 44 ಕೋಟಿ ರೂ.ಗೂ ಹೆಚ್ಚು ಆಯುಷ್ಮಾನ್ ಕಾರ್ಡ್‌ಗಳನ್ನು ರಚಿಸಲಾಗಿದ್ದು, ಒಂದು ಲಕ್ಷ 80 ಸಾವಿರ ಕೋಟಿ ರೂ.ಗಳಿಗೂ ಹೆಚ್ಚು ಮೌಲ್ಯದ ಚಿಕಿತ್ಸೆಯನ್ನು ಒದಗಿಸಲಾಗಿದೆ. ಈ ಯೋಜನೆ ವಿಶ್ವದ ಅತಿದೊಡ್ಡ ಸಾರ್ವಜನಿಕ ಆರೋಗ್ಯ ವಿಮಾ ಯೋಜನೆಗಳಲ್ಲಿ ಒಂದಾಗಿ ಗುರುತಿಸಿಕೊಂಡಿದೆ ಎಂದರು.

ದೇಶದಾದ್ಯಂತ 1.75 ಲಕ್ಷಕ್ಕೂ ಹೆಚ್ಚು ಆರೋಗ್ಯ ಮತ್ತು ಕಲ್ಯಾಣ ಕೇಂದ್ರಗಳನ್ನು ಸ್ಥಾಪಿಸುವ ಮೂಲಕ ಪ್ರಾಥಮಿಕ ಆರೋಗ್ಯ ಸೇವೆಗಳನ್ನು ಜನರ ಮನೆ ಬಾಗಿಲಿಗೆ ತಲುಪಿಸುವ ಪ್ರಯತ್ನ ಮಾಡಲಾಗಿದೆ. ವೈದ್ಯಕೀಯ ಶಿಕ್ಷಣ ಕ್ಷೇತ್ರದಲ್ಲಿ ಗಮನಾರ್ಹ ವಿಸ್ತರಣೆ ಕಂಡುಬಂದಿದೆ. 2014ರಲ್ಲಿ ದೇಶದಲ್ಲಿ ಸುಮಾರು 387 ವೈದ್ಯಕೀಯ ಕಾಲೇಜುಗಳಿದ್ದರೆ, ಈಗ ಅವುಗಳ ಸಂಖ್ಯೆ 780ಕ್ಕೂ ಹೆಚ್ಚಾಗಿದೆ ಎಂದು ತಿಳಿಸಿದರು.

ದೇಶದ ಯುವಕರು ಕೇವಲ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುವ ಸುಳ್ಳು ಸುದ್ದಿಗಳಿಗೆ ಮಾರುಹೋಗದೆ ಸತ್ಯಾಸತ್ಯತೆ ಅರಿಯಬೇಕು. ಆರೋಗ್ಯ ಕ್ಷೇತ್ರ ಮಾತ್ರವಲ್ಲದೆ ಎಲ್ಲಾ ಕ್ಷೇತ್ರದಲ್ಲಿ ಅಭಿವೃದ್ಧಿಯಾಗುತ್ತಿದೆ. ದೇಶದ ಜಿಡಿಪಿ ಹೆಚ್ಚಳವಾಗಿದ್ದು ಭಾರತ ಜಾಗತಿಕವಾಗಿ ಬಹುದೊಡ್ಡ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮುತ್ತಿದೆ ಎಂದರು.

ವಿಜಯನಗರದಲ್ಲಿ 14 ಕೋಟಿ ರೂಪಾಯಿ ವೆಚ್ಚದಲ್ಲಿ ಸಿದ್ಧಪಡಿಸಲಾದ ಮಳಿಗೆಗಳಿಗೆ ಬೀಗ

ಬಳಕೆಗೆ ಬಾರದೆ ಧೂಳು ಹಿಡಿದ ಪಾಲಿಕೆ ಬಜಾರ್

• **ಬೆಂಗಳೂರು:** ವಿಜಯನಗರದ ಸರ್ವಿಸ್ ರಸ್ತೆಯಲ್ಲಿ ನಿರ್ಮಾಣವಾಗಿರುವ ಪಾಲಿಕೆ ಬಜಾರ್‌ಬರೋಬ್ಬರಿ 14 ಕೋಟಿ ರೂಪಾಯಿಗಳ ಸಾರ್ವಜನಿಕ ನಿಧಿಯನ್ನು ವೆಚ್ಚ ಮಾಡಿ ನಿರ್ಮಿಸಲಾದ ಅತ್ಯಾಧುನಿಕ ಅಂಡರ್‌ಗ್ರೌಂಡ್ ಹವಾನಿಯಂತ್ರಿತ ಮಾರುಕಟ್ಟೆ ಸಂಪೂರ್ಣವಾಗಿ ಬಳಕೆಗೆ ಬಾರದೆ ಧೂಳು ಹಿಡಿಯುತ್ತಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಇತ್ತ ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ಸಿದ್ಧಪಡಿಸಲಾದ ಮಳಿಗೆಗಳು ಬೀಗ ಹಾಕಲ್ಪಟ್ಟಿದ್ದರೆ, ಅತ್ತ ಬೀದಿ ವ್ಯಾಪಾರಿಗಳು ಪಾದಚಾರಿ ರಸ್ತೆಗಳನ್ನು ಆಕ್ರಮಿಸಿಕೊಂಡು ಸಾರ್ವಜನಿಕರ ಸಂಚಾರಕ್ಕೆ ಕಂಟಕಪ್ರಾಯರಾಗಿದ್ದಾರೆ ಎಂದು ಸಾರ್ವಜನಿಕ ವಲಯದಲ್ಲಿ ಆಕ್ರೋಶ ವ್ಯಕ್ತವಾಗುತ್ತಿದೆ.



ವಿಜಯನಗರ ಮುಖ್ಯ ರಸ್ತೆಯ ಸರ್ವಿಸ್ ರಸ್ತೆಯಲ್ಲಿದ್ದ ಬೀದಿ ಬದಿ ವ್ಯಾಪಾರಿಗಳನ್ನು ವ್ಯವಸ್ಥಿತವಾಗಿ ಸ್ಥಳಾಂತರಿಸಿ, ಅವರಿಗೆ ಸೂಕ್ತ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ಈ ಯೋಜನೆಗೆ ಚಾಲನೆ ನೀಡಲಾಗಿತ್ತು. ಪಾದಚಾರಿ ಮಾರ್ಗಗಳನ್ನು ಒತ್ತುವರಿಯಿಂದ ಮುಕ್ತಗೊಳಿಸಿ, ಸಾರ್ವಜನಿಕರಿಗೆ ಮುಕ್ತವಾಗಿ ಓಡಾಡಲು ಅನುವು ಮಾಡಿಕೊಡುವುದು ಮತ್ತು ವ್ಯಾಪಾರಿಗಳಿಗೆ ಒಂದೇ ಸೂರಿನಡಿ ಸುಸಜ್ಜಿತ 79 ಮಳಿಗೆಗಳನ್ನು ಒದಗಿಸುವುದು ಇದರ ಆಶಯವಾಗಿತ್ತು.

75 ಮಳಿಗೆಗಳು ಖಾಲಿ: ಅಧಿಕೃತ ಉದ್ಘಾಟನೆಯಾದರೂ ಈವರೆಗೆ ಕೇವಲ 5 ವ್ಯಾಪಾರಿಗಳು ಮಾತ್ರ ಇಲ್ಲಿನ ಮಳಿಗೆಗಳ ಸ್ವಾಧೀನ ಪಡೆದುಕೊಂಡಿದ್ದಾರೆ. ಉಳಿದ 75ಕ್ಕೂ ಹೆಚ್ಚು ಮಳಿಗೆಗಳು ಪ್ರಸ್ತುತ ಸಂಪೂರ್ಣವಾಗಿ ಖಾಲಿ ಉಳಿದಿದ್ದು, ಬೀಗ ಜಡಿಯಲಾಗಿದೆ. ಬೇಸ್‌ಮೆಂಟ್‌ನಲ್ಲಿರುವ ಈ ಅತ್ಯಾಧುನಿಕ ಮೂಲಸೌಕರ್ಯವು ಪ್ರಸ್ತುತ ನಿರುಪಯುಕ್ತವಾಗಿದ್ದು, ಸಾರ್ವಜನಿಕ ಹಣದ ವ್ಯರ್ಥವಾಗಿದೆ ಎಂದು ಸ್ಥಳೀಯರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಪಾದಚಾರಿ ಮಾರ್ಗದಲ್ಲಿ ನರಕಯಾತನೆ: ತಮಗೆ ನಿಗದಿಪಡಿಸಿದ ಬೇಸ್‌ಮೆಂಟ್ ಮಳಿಗೆಗಳಿಗೆ ಹೋಗಲು ನಿರಾಕರಿಸಿರುವ ಬೀದಿ ಬದಿ ವ್ಯಾಪಾರಿಗಳು, ಸರ್ವಿಸ್ ರಸ್ತೆಯ ಎರಡೂ ಬದಿಯ ಪಾದಚಾರಿ ಮಾರ್ಗಗಳನ್ನು ಕಾನೂನುಬಾಹಿರವಾಗಿ ಆಕ್ರಮಿಸಿಕೊಳ್ಳುವುದನ್ನು ಮುಂದುವರಿಸಿದ್ದಾರೆ. ರಸ್ತೆ ಬದಿಯ ಒತ್ತುವರಿಯಿಂದಾಗಿ ಜನಸಾಮಾನ್ಯರು ಜೀವ ಕೈಯಲ್ಲಿ ಹಿಡಿದು ಮುಖ್ಯ ರಸ್ತೆಯಲ್ಲೇ ನಡೆಯಬೇಕಾದ ಅನಿವಾರ್ಯತೆ ಎದುರಾಗಿದೆ.ಸರ್ವಿಸ್ ರಸ್ತೆಯ ಎರಡೂ ಬದಿಗಳಲ್ಲಿ ವಾಹನಗಳನ್ನು ಬೇಕಾಬಿಟ್ಟಿ ನಿಲ್ಲಿಸುತ್ತಿರುವುದರಿಂದ ತೀವ್ರ ಸಂಚಾರ ದಟ್ಟಣೆ ಉಂಟಾಗುತ್ತಿದ್ದು, ಸಾರ್ವಜನಿಕ ಸುರಕ್ಷತೆ ಸಂಪೂರ್ಣ ಧಕ್ಕೆಯಾಗಿದೆ.

ಪಾದಚಾರಿಗಳ ಅನುಕೂಲಕ್ಕಾಗಿ ನಿರ್ಮಿಸಲಾದ ಸುರಂಗ ಮಾರ್ಗವೂ ಸಹ ಯಾವುದೇ ಬಳಕೆಯಾಗದೆ ಪಾಳುಬಿದ್ದಿದೆ ಎಂದು ದಿನ ನಿತ್ಯ ಅಲ್ಲಿ ಸಂಚರಿಸುವವರು ಅಳಲು ತೋಡಿಕೊಂಡಿದ್ದಾರೆ.

> **ಅವ್ಯವಸ್ಥೆಯ ವಿಚಾರವಾಗಿ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ, ನಗರಾಭಿವೃದ್ಧಿ ಕಾರ್ಯದರ್ಶಿಗೆ,ಜಿಬಿಎ ಮುಖ್ಯ ಆಯುಕ್ತರಿಗೆ ಪತ್ರ ಬರೆದು ಸಮಗ್ರವಾಗಿ ವಿವರಿಸಲಾಗಿದೆ.**
> ■ **ಬಿ.ಎಚ್.ವೀರೇಶ್**, ಆರ್‌ಟಿಐ ಕಾರ್ಯಕರ್ತರ ರಾಜ್ಯ ಸಮಿತಿ ಸದಸ್ಯ

ಪರಿಹಾರಕ್ಕೆ ಆಗ್ರಹ

ವಿಜಯನಗರ ಸರ್ವಿಸ್ ರಸ್ತೆಯ ಪಾದಚಾರಿ ಮಾರ್ಗದ ಎರಡೂ ಬದಿಗಳಲ್ಲಿರುವ ಎಲ್ಲಾ ಕಾನೂನುಬಾಹಿರ ಒತ್ತುವರಿಗಳನ್ನು ತಕ್ಷಣವೇ ಪೊಲೀಸ್ ರಕ್ಷಣೆಯೊಂದಿಗೆ ತೆರವುಗೊಳಿಸಬೇಕು.ಬೀದಿ ಬದಿ ವ್ಯಾಪಾರಿಗಳು ಪಾಲಿಕೆ ಬಜಾರ್ ಒಳಗಿನ ಮಳಿಗೆಗಳಿಗೆ ಸ್ಥಳಾಂತರಗೊಳ್ಳುವುದನ್ನು ಕಡ್ಡಾಯಗೊಳಿಸಬೇಕು. ಒಂದು ವೇಳೆ ಅವರು ಬರದಿದ್ದರೆ, ಸಾರ್ವಜನಿಕ ಆಸ್ತಿ ಪೋಲಾಗುವುದನ್ನು ತಡೆಯಲು ಖಾಲಿ ಇರುವ ಮಳಿಗೆಗಳನ್ನು ಪಾರದರ್ಶಕ ಇ-ಹರಾಜು ಪ್ರಕ್ರಿಯೆಯ ಮೂಲಕ ಅರ್ಹರಿಗೆ ಆಸಕ್ತರಿಗೆ ಹಂಚಿಕೆ ಮಾಡಬೇಕು ಎಂದು ಸ್ಥಳೀಯ ನಾಗರಿಕರು ಮತ್ತು ಸಾಮಾಜಿಕ ಕಾರ್ಯಕರ್ತರು ಆಗ್ರಹಿಸಿದ್ದಾರೆ.

ಪೊಲೀಸ್ ಕಾನ್‌ಸ್ಟೇಬಲ್ ಹುದ್ದೆಗಳ ಭರ್ತಿಗೆ ಅಧಿಸೂಚನೆ

• **ಬೆಂಗಳೂರು:** ಖಾಲಿ ಇರುವ ಒಟ್ಟು 3,991 ಪೊಲೀಸ್ ಕಾನ್‌ಸ್ಟೇಬಲ್ (ಸಿವಿಲ್) ಹುದ್ದೆಗಳ ಭರ್ತಿಗೆ ಅಧಿಸೂಚನೆ ಹೊರಡಿಸಿದ್ದು, ಅರ್ಜಿ ಸಲ್ಲಿಸುವ ಪ್ರಕ್ರಿಯೆ ಜೂ.10ರಿಂದ ಆರಂಭವಾಗಲಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ.

ಅರ್ಹ ಹಾಗೂ ಆಸಕ್ತ ಅಭ್ಯರ್ಥಿಗಳು ಅಗತ್ಯ ದಾಖಲೆಗಳನ್ನು ಸಿದ್ಧ ಮಾಡಿಟ್ಟುಕೊಳ್ಳಬೇಕು. ಪರಿಶಿಷ್ಟ ಜಾತಿಯ ಅಭ್ಯರ್ಥಿಗಳು ಒಳಮೀಸಲಾತಿ ಪ್ರಕಾರ ತಮಗೆ ಅನ್ವಯವಾಗುವ ಎಸ್‌ಸಿ-ಎ, ಎಸ್‌ಸಿ-ಬಿ ಮತ್ತು ಎಸ್‌ಸಿ-ಸಿ ಜಾತಿ ಪ್ರಮಾಣ ಪತ್ರಗಳ ಆರ್‌ಡಿ ಸಂಖ್ಯೆ ನಮೂದಿಸುವುದು ಕಡ್ಡಾಯ ಎಂದು ತಿಳಿಸಿದ್ದಾರೆ.

ಅಲ್ಲದೇ ಗ್ರಾಮೀಣ, ಕನ್ನಡ ಮಾಧ್ಯಮ ವ್ಯಾಸಂಗ ಇತ್ಯಾದಿ ಕ್ಲೇಮ್ ಮಾಡುವವರು ಅಗತ್ಯ ನಮೂನೆಗಳಲ್ಲಿ ಪ್ರಮಾಣ ಪತ್ರಗಳನ್ನು ಸಿದ್ಧ ಮಾಡಿಟ್ಟುಕೊಳ್ಳಬೇಕು. ಸಾಮಾನ್ಯ ವರ್ಗದ ಅಭ್ಯರ್ಥಿಗಳು ಗ್ರಾಮೀಣ ಕೋಟಾ ಕ್ಲೇಮ್ ಮಾಡಬಯಸಿದರೆ ಕಡ್ಡಾಯವಾಗಿ ನಾನ್ ಕ್ರೀಮಿಲೇಯರ್ ಸರ್ಟಿಫಿಕೇಟ್ ಹೊಂದಿರಬೇಕು ಎಂದು ಮಾಹಿತಿ ನೀಡಿದ್ದಾರೆ.

ಅರ್ಜಿ ಜತೆ ಅಪ್‌ಲೋಡ್ ಮಾಡುವ ಅಭ್ಯರ್ಥಿಗಳ ಭಾವಚಿತ್ರ 50 ಕೆಬಿ ಒಳಗಿರಬೇಕು. ಒಟ್ಟು ಹುದ್ದೆಗಳಲ್ಲಿ 596 ಹುದ್ದೆಗಳು ಕಲ್ಯಾಣ ಕರ್ನಾಟಕ ಹಾಗೂ 3,395 ಹುದ್ದೆಗಳು ಉಳಿಕೆ ಮೂಲಕ ವೃಂದಕ್ಕೆ ಸೇರಿವೆ. ಅರ್ಜಿ ಸಲ್ಲಿಸಲು ಜು.3 ಕೊನೆ ದಿನ ಎಂದು ತಿಳಿಸಿದರು.



ಇಂದು ನಗರದಲ್ಲಿ...

- ಅಧಿಕ ಮಾಸ ಹಿನ್ನೆಲೆಯಲ್ಲಿ ವಿಶೇಷ ಉಪನ್ಯಾಸ, ಸ್ಥಳ:ಪೂರ್ಣ ಪ್ರಜ್ಞಾ ವಿದ್ಯಾಪೀಠ, ಬೆಳಗ್ಗೆ 8
- ನರೇಂದ್ರ ಮೋದಿ ಪ್ರಧಾನಿಯಾಗಿ 12 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಶೇಷಾದ್ರಿಪುರ ರಾಮಲಿಂಗೇಶ್ವರ ಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ, ಸ್ಥಳ: ಶೇಷಾದ್ರಿಪುರ ಶ್ರೀ ರಾಮಲಿಂಗೇಶ್ವರ ಸ್ವಾಮಿ ದೇವಸ್ಥಾನ, ಬೆಳಗ್ಗೆ 10
- ನರೇಂದ್ರ ಮೋದಿ ಪ್ರಧಾನಿಯಾಗಿ 12 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಶ್ರೀ ಕಾಡುಮಲ್ಲೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ, ಸ್ಥಳ: ಶ್ರೀ ಕಾಡುಮಲ್ಲೇಶ್ವರ ದೇವಸ್ಥಾನ, ಬೆಳಗ್ಗೆ 11

ಕಿರುಸುದ್ದಿ

ಇರಾನ್ ಅಭಿಮಾನಿಗಳಿಗಿಲ್ಲ ಫಿಫಾ ನೋಡುವ ಭಾಗ್ಯ

• **ಹೊಸದಿಲ್ಲಿ:** ವಿಶ್ವಕಪ್ ಆರಂಭವಾಗುವ ಕೆಲವೇ ದಿನಗಳ ಮೊದಲು ಇರಾನಿ ಅಭಿಮಾನಿಗಳ ಟಿಕೆಟ್ ಹಂಚಿಕೆಯನ್ನು ರದ್ದುಗೊಳಿಸಲಾಗಿದೆ ಎಂದು ಇರಾನ್ ಫುಟ್‌ಬಾಲ್ ಫೆಡರೇಶನ್ ಮಂಗಳವಾರ ತಿಳಿಸಿದೆ. ಇದರಿಂದಾಗಿ ಈಗಾಗಲೇ ಪ್ರಯಾಣ ಯೋಜನೆಗಳನ್ನು ಮಾಡಿಕೊಂಡಿದ್ದ ಬೆಂಬಲಿಗರು ತಮ್ಮ ತಂಡದ ಪಂದ್ಯಗಳಿಗೆ ಹಾಜರಾಗಲು ಸಾಧ್ಯವಾಗಲಿಲ್ಲ. ವಿಶ್ವಕಪ್ ಶುಕ್ರವಾರ ಆರಂಭವಾಗಲಿದ್ದು, ಇರಾನ್ ತನ್ನ ಮೊದಲ ಎರಡು ಗ್ರೂಪ್ ಜಿ ಪಂದ್ಯಗಳನ್ನು ಲಾಸ್ ಏಂಜಲೀಸ್‌ನಲ್ಲಿ ಜೂನ್ 15 ರಂದು ನ್ಯೂಜಿಲೆಂಡ್ ವಿರುದ್ಧ ಮತ್ತು ಜೂನ್ 21 ರಂದು ಬೆಲ್ಜಿಯಂ ವಿರುದ್ಧ ಆಡಲಿದೆ ಮತ್ತು ನಂತರ ಜೂನ್ 26 ರಂದು ಸಿಯಾಟಲ್‌ನಲ್ಲಿ ಈಜಿಪ್ಟ್ ವಿರುದ್ಧ ಆಡಲಿದೆ. ಇರಾನ್ ಫೆಡರೇಶನ್ ಪಂದ್ಯಗಳಿಗೆ ಟಿಕೆಟ್ ಮಾರಾಟ ಪ್ರಕ್ರಿಯೆಯನ್ನು ಈಗಾಗಲೇ ಪ್ರಾರಂಭಿಸಿದೆ, ಆದರೆ ಇನ್ನು ಮುಂದೆ ಅಭಿಮಾನಿಗಳಿಗೆ ಅವುಗಳನ್ನು ಒದಗಿಸಲು ಸಾಧ್ಯವಿಲ್ಲ ಎಂದು ಹೇಳಿದೆ. ಅಧಿಕೃತವಾಗಿ ಘೋಷಿಸಲಾದ ಪ್ರಕ್ರಿಯೆಯನ್ನು ಅವಲಂಬಿಸಿ, ಅನೇಕ ಇರಾನಿನ ಫುಟ್‌ಬಾಲ್ ಅಭಿಮಾನಿಗಳು ಪಂದ್ಯಗಳಿಗೆ ಹಾಜರಾಗಲು ಅಗತ್ಯ ಯೋಜನೆಗಳನ್ನು ಈಗಾಗಲೇ ಮಾಡಿಕೊಂಡಿದ್ದರೂ ಸಹ ಇದು ಸಂಭವಿಸಿದೆ ಎಂದು ಹೇಳಿಕೆಯಲ್ಲಿ ತಿಳಿಸಿದೆ.

ಹರಿಹರನ್-ಅರ್ಜುನ್ ಶುಭಾರಂಭ

• **ಸಿಡ್ನಿ(ಆಸ್ಟ್ರೇಲಿಯಾ):** ಮಂಗಳವಾರ ಸಿಡ್ನಿಯಲ್ಲಿ ನಡೆದ 32ನೇ ಸುತ್ತಿನ ಪಂದ್ಯದಲ್ಲಿ ಅಮೆರಿಕದ ಜೋಡಿಯಾದ ಆರ್ಡೆನ್ ಕ್ವಾನ್ ಲೀ ಮತ್ತು ಸ್ಟಾನ್ಲಿ ಕ್ಲಿಂಗ್ ಅವರನ್ನು ಸೋಲಿಸಿ, ಆಸ್ಟ್ರೇಲಿಯನ್ ಓಪನ್‌ನಲ್ಲಿ ಭಾರತದ ಪುರುಷರ ಡಬಲ್ಸ್ ಜೋಡಿ ಹರಿಹರನ್ ಅಂಶಕರುಣನ್ ಮತ್ತು ಎಂ.ಆರ್. ಅರ್ಜುನ್ ಎರಡನೇ ಸುತ್ತಿಗೆ ಪ್ರವೇಶಿಸಿದರು. ಬಿಡಬ್ಲ್ಯೂಎಫ್ ಸರ್ಕ್ಯೂಟ್‌ನಲ್ಲಿ ಉನ್ನತ ಶ್ರೇಯಾಂಕ ಹೊಂದಿರುವ ಭಾರತೀಯ ಜೋಡಿ, ಇತ್ತೀಚೆಗೆ ಮುಕ್ತಾಯಗೊಂಡ ಇಂಡೋನೇಷ್ಯಾ ಓಪನ್‌ನಲ್ಲಿ ಕ್ವಾರ್ಟರ್ ಫೈನಲ್ ತಲುಪಿದ ನಂತರ ಲೀ ಮತ್ತು ಕ್ಲಿಂಗ್ ವಿರುದ್ಧ 21-13, 21-13 ಅಂತರದ ಆತ್ಮವಿಶ್ವಾಸದ ಜಯದೊಂದಿಗೆ ತನ್ನ ಪುರುಷರ ಡಬಲ್ಸ್ ಅಭಿಯಾನವನ್ನು ಪ್ರಾರಂಭಿಸಿತು. ಇತ್ತ ಅಮ್ಸಕರುಣನ್-ಅರ್ಜುನ್ ಅವರಂತಹ ಸ್ಥಾಪಿತ ಜೋಡಿಗಳು ಮುಖ್ಯ ಡ್ರಾದಲ್ಲಿ ಮಿಂಚಿದರೆ, ಅತ್ತ ಭಾರತದ ಸತೀಶ್ ದಯಾನಂದ್ ತಮ್ಮ ಅರ್ಹತಾ ಪಂದ್ಯಗಳನ್ನು ಗೆದ್ದ ನಂತರ ಪಂದ್ಯಾವಳಿಯ ಪುರುಷರ ಸಿಂಗಲ್ಸ್ ಮುಖ್ಯ ಡ್ರಾಗೆ ಮುನ್ನಡೆದರು. ಅರ್ಹತಾ ಸುತ್ತಿನಲ್ಲಿ ನಾಲ್ಕನೇ ಶ್ರೇಯಾಂಕಿತ ದಯಾನಂದ್, ಮೊದಲು ಸ್ಥಳೀಯ ಭರವಸೆಯ ಕರೋನೊ ಅವರನ್ನು 21-17, 21-15 ಅಂತರದಿಂದ ಸೋಲಿಸಿ, ನಂತರ ಮಲೇಷ್ಯಾದ ಮಿಂಗ್ ಹಾಂಗ್ ಲಿಮ್ ವಿರುದ್ಧ 21-9, 21-16 ಅಂತರದಿಂದ ಜಯಗಳಿಸಿ ಅರ್ಹತೆ ಪಡೆದರು. ಅವರು ತಮ್ಮ ಮೊದಲ ಮುಖ್ಯ ಡ್ರಾ ಪಂದ್ಯದಲ್ಲಿ ಚೀನಾದ ಹು ಝೆ ಆನ್ ಅವರನ್ನು ಎದುರಿಸಲಿದ್ದಾರೆ.

ಸಿರಾಜ್‌ಗೆ ವಿಶ್ರಾಂತಿ, ಪ್ರಸಿದ್ಧ ಕೃಷ್ಣಗೆ ಬುಲಾವ್

• **ಮುಂಬೈ:** ಇಂಗ್ಲೆಂಡ್‌ನಲ್ಲಿ ನಡೆಯಲಿರುವ ಐರ್ಲೆಂಡ್ ಮತ್ತು ಇಂಗ್ಲೆಂಡ್ ವಿರುದ್ಧದ ಟಿ20 ಸರಣಿಗಳಿಗಾಗಿ ಭಾರತ ತಂಡದಲ್ಲಿ ಪ್ರಸಿದ್ಧ ಕೃಷ್ಣ ಅವರನ್ನು ಆಯ್ಕೆ ಮಾಡಲಾಗಿದ್ದು, ವೇಗಿ ಮೊಹಮ್ಮದ್ ಸಿರಾಜ್‌ಗೆ ವಿಶ್ರಾಂತಿ ನೀಡಲು ಅಣ್ಣೆ ನೀಡಲಾಗಿದೆ. ಜೂನ್ ಅಂತ್ಯ ಮತ್ತು ಜುಲೈನಲ್ಲಿ ನಡೆಯಲಿರುವ ಐರ್ಲೆಂಡ್ ಹಾಗೂ ಇಂಗ್ಲೆಂಡ್‌ನೊಂದಿಗೆ ಟಿ20 ಪಂದ್ಯಗಳಿಗೆ ತಂಡ ಬದಲಾಗಿದೆ ಈ ಹಿಂದೆ ಮಾಡಲಾಗಿದೆ. ಟಿ20 ವಿಭಾಗದಲ್ಲಿ ಬಹು ದಿನಗಳ ನಂತರ ಮೊಹಮ್ಮದ್ ಸಿರಾಜ್ ಅವರನ್ನು ಆಯ್ಕೆ ಮಾಡಲಾಗಿತ್ತು. ಆದರೆ ಬಿಸಿಸಿಐ ಈ ಬಗ್ಗೆ ಮರುಪರಿಶೀಲನೆ ನಡೆಸಿದೆ. ಮೆಡಿಕಲ್ ತಂಡದೊಂದಿಗೆ ಚರ್ಚೆಗಳನ್ನು ಮಾಡಿದ ನಂತರ ಅವರಿಗೆ ವಿರಾಮ ನೀಡಲಾಗಿದ್ದು, ಅವರ ಬದಲಿಗೆ ಪ್ರಸಿದ್ಧ ಕೃಷ್ಣ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಬಿಸಿಸಿಐ ಪ್ರಕಟಣೆ ಹೊರಡಿಸಿದೆ. ವೈದ್ಯರೊಂದಿಗೆ ಮತ್ತು ಮ್ಯಾನೇಜ್ಮೆಂಟ್‌ನೊಂದಿಗೆ ಈ ಕುರಿತು ಚರ್ಚಿಸಲಾಗಿದೆ. ಐಪಿಎಲ್‌ನಲ್ಲಿ ಆಡಿದ್ದ ಸಿರಾಜ್ ನಂತರ ಅಫ್ಘಾನಿಸ್ತಾನದೊಂದಿಗೆ ಟೆಸ್ಟ್ ಪಂದ್ಯವನ್ನೂ ಆಡಿದ್ದಾರೆ. ಹೀಗಾಗಿ ಅವರ ವರ್ಕ್ ಲೋಡ್ ಹೆಚ್ಚಾಗಿದ್ದು, ಅವರಿಗೆ ವಿಶ್ರಾಂತಿಯ ಅವಶ್ಯವಿದೆ. ಅವರ ಬದಲಿಗೆ ಪ್ರಸಿದ್ಧ ಕೃಷ್ಣ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಬಿಸಿಸಿಐ ಹೇಳಿಕೆಯಲ್ಲಿ ತಿಳಿಸಿದೆ.

ಏಕದಿನಕ್ಕೆ ರೋಹಿತ್, ಪಾಂಡ್ಯ ಲಭ್ಯ

• **ಮುಂಬೈ:** ಅನುಭವಿ ಬ್ಯಾಟರ್ ರೋಹಿತ್ ಶರ್ಮ ಮತ್ತು ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರು ಏಕದಿನ ಪಂದ್ಯವಾಡಲು ಸಿದ್ಧವಾಗಿದ್ದು, ಬಿಸಿಸಿಐನ ಶ್ರೇಷ್ಠತಾ ಕೇಂದ್ರದಿಂದ ಗ್ರೀನ್ ಸಿಗ್ನಲ್ ಪಡೆದಿದ್ದಾರೆ. ಭಾನುವಾರದಿಂದ ಭಾರತ ಹಾಗೂ ಅಫ್ಘಾನಿಸ್ತಾನ ನಡುವೆ ಏಕದಿನ ಸರಣಿ ಶುರುವಾಗಲಿದೆ. ಐಪಿಎಲ್ ವೇಳೆ ಗಾಯಗೊಂಡಿದ್ದ ರೋಹಿತ್ ಶರ್ಮ ಮತ್ತು ಹಾರ್ದಿಕ್ ಪಾಂಡ್ಯ ಅವರು ಈ ಸರಣಿಯಲ್ಲಿ ಭಾಗವಹಿಸಲು ಸಿದ್ಧವಾಗಿದ್ದರೂ ಬಿಸಿಸಿಐನ ಕ್ರೀಡಾ ವಿಜ್ಞಾನ ವಿಭಾಗದಿಂದ ಫಿಟ್ನೆಸ್ ಪರೀಕ್ಷೆಯಲ್ಲಿ ಪಾಸಾಗಬೇಕಿತ್ತು. ಈ ನಡುವೆ ಮಂಗಳವಾರದಂದು ಶ್ರೇಷ್ಠತಾ ಕೇಂದ್ರ ರೋಹಿತ್ ಹಾಗೂ ಹಾರ್ದಿಕ್ ಪಾಂಡ್ಯ ಅವರಿಗೆ ಅನುಮತಿ ನೀಡಿದೆ. ಜೂನ್ 2ರಂದು ಹಾರ್ದಿಕ್ ಪರೀಕ್ಷೆ ನಡೆದಿದ್ದರೆ, ಈ ಮೊದಲೇ ರೋಹಿತ್ ಪಾಸಾಗಿದ್ದಾರೆಂದು ಬಿಸಿಸಿಐ ಪ್ರಕಟಣೆಯಲ್ಲಿ ತಿಳಿಸಿದೆ. ಏಕದಿನ ತಂಡ ಇನ್ನೂ ಪ್ರಕಟವಾಗಬೇಕಿದೆ.

ಭಾರತ ಪ್ರತಿನಿಧಿಸಿದ ವೈಭವ್ ಸೂರ್ಯವಂಶಿ

• **ಮುಂಬೈ:** ಭಾರತ ಎ ಹಾಗೂ ಶ್ರೀಲಂಕಾ ಎ ತಂಡದ ನಡುವೆ ನಡೆದ ಏಕದಿನ ಪಂದ್ಯದಲ್ಲಿ 15 ವರ್ಷದ ವೈಭವ್ ಸೂರ್ಯವಂಶಿ ಕಣಕ್ಕಿಳಿಯುವುದರೊಂದಿಗೆ ದಾಖಲೆ ಬರೆದರು. ಐಪಿಎಲ್‌ನಲ್ಲಿ 700ಕ್ಕೂ ಹೆಚ್ಚು ರನ್ ಬಾರಿಸಿದ ವೈಭವ್ ಸೂರ್ಯವಂಶಿ ಇದೇ ಮೊದಲ ಬಾರಿಗೆ ಭಾರತ ಎ ತಂಡಕ್ಕೆ ಆಯ್ಕೆಯಾದ್ದರು. ಶ್ರೀಲಂಕಾ, ಅಫ್ಘಾನಿಸ್ತಾನದೊಂದಿಗೆ ಭಾರತ ಎ ತಂಡ ತ್ರಿಕೋನ ಸರಣಿಯನ್ನಾಡಲಿದೆ. ಮಂಗಳವಾರ ಶ್ರೀಲಂಕಾ ಎ ಮತ್ತು ಭಾರತ ಎ ತಂಡಗಳ ನಡುವೆ ಮೊದಲ ಪಂದ್ಯ ನಡೆಯಿತು. ಈ ಪಂದ್ಯದಲ್ಲಿ ವೈಭವ್ ಅವರನ್ನು ಭಾರತದ ಆಡುವ 11ರ ಬಳಗದಲ್ಲಿ ಸೇರಿಸಲಾಗಿತ್ತು. ಹೆಚ್ಚಿನ ಕೊಡುಗೆ ನೀಡಿಲ್ಲವಾದರೂ ವೈಭವ್ ಸೂರ್ಯವಂಶಿ ಭಾರತ ಎ ತಂಡವನ್ನು ಪ್ರತಿನಿಧಿಸಿದ ಅತಿ ಕಿರಿಯ ಆಟಗಾರ ಅನಿಸಿಕೊಂಡು ದಾಖಲೆ ಮಾಡಿದ್ದಾರೆ.

ಇನ್ನು ಫುಟ್‌ಬಾಲ್ ಕಿಕ್

ಫಿಫಾ ವಿಶ್ವಕಪ್‌ಗೆ ಕಣ ಸಿದ್ಧ | ಪ್ರಚಲಿತ ಫೇವರಿಟ್ ಕ್ರೀಡೆ ಶುರುವಿಗೆ ಕ್ಷಣಗಣನೆ

ವಿಶ್ವಾದ್ಯಂತ ಕ್ರೀಡಾಭಿಮಾನಿಗಳಿಗೆ ಇನ್ನು ಮುಂದೆ ಫುಟ್‌ಬಾಲ್ ಕಿಕ್. ನೆಚ್ಚಿನ ತಂಡವನ್ನು ಬೆಂಬಲಿಸುವ ಉತ್ಸಾಹ. ಪಂದ್ಯಗಳ ರೋಚಕತೆ ಮತ್ತು ಕೊನೆ ಕ್ಷಣದ ಆತಂಕ. ಪಿಲೆಯ ಮಾಯೆ, ಮರಡೋನಾದ ಸಾಹಸ, ಜರ್ಮನಿಯ ಆಧಿಪತ್ಯ, ಮೆಸ್ಸಿಯ ಕನಸು ಮತ್ತು ವಿಶ್ವದ ಕೋಟ್ಯಂತರ ಕ್ರೀಡಾಭಿಮಾನಿಗಳ ಭಾವನೆ ಹೊತ್ತ ಕೂಟ ಫಿಫಾ ಫುಟ್‌ಬಾಲ್ ವಿಶ್ವಕಪ್ ಶುಕ್ರವಾರದಿಂದ ಶುರುವಾಗಲಿದೆ. ಆಟಕ್ಕೆ ಮೈದಾನ, ಕಾದಟಕ್ಕೆ ಆಟಗಾರರು ಮತ್ತು ವೀಕ್ಷಣೆಗೆ ಕೈಯಲ್ಲಿ ಸಂಜೆಯ ಸ್ನ್ಯಾಕ್ಸ್ ಹಿಡಿದುಕೊಂಡು ಕೂಡಲು ಅಭಿಮಾನಿಗಳು ಅಣಿಯಾಗಿದ್ದಾರೆ. ಆಟದ ಮರ್ಮ ಮತ್ತು ಶೈಲಿಯ ಕ್ರೇಜ್‌ನೊಂದಿಗೆ ಇತಿಹಾಸ ತಿಳಿದುಕೊಳ್ಳುವ ತವಕ ಜನರಲ್ಲಿದೆ. ಫಿಫಾ ವಿಶ್ವಕಪ್ ಇತಿಹಾಸ ಕೂಡ ತವಕದಿಂದಲೇ ಕೇಳುವಷ್ಟು ರೋಚಕವಾಗಿದೆ ಮತ್ತು ಹುಬ್ಬೇರಿಸುವಷ್ಟು ಕುತೂಹಲಕಾರಿಯಾಗಿದೆ. ಹಾಗಿದ್ದರೆ ಇತಿಹಾಸವೇನು? ಮಾಹಿತಿ ಇಲ್ಲಿದೆ.





ಫಿಫಾ ವಿಶ್ವಕಪ್ ಅಂದರೇನು?

ಫಿಫಾ ವಿಶ್ವಕಪ್ ವಿಶ್ವದ ಅತ್ಯಂತ ಪ್ರತಿಷ್ಠಿತ ಫುಟ್‌ಬಾಲ್ ಟೂರ್ನಿ. 1930ರಲ್ಲಿ ಆರಂಭವಾದ ಈ ಟೂರ್ನಿ ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ನಡೆಯುತ್ತದೆ. 1942 ಮತ್ತು 1946ರಲ್ಲಿ ದ್ವಿತೀಯ ವಿಶ್ವಯುದ್ಧದ ಕಾರಣ ಟೂರ್ನಿ ನಡೆದಿರಲಿಲ್ಲ. ವಿಶ್ವದ ಪ್ರತಿಷ್ಠಿತ ತಂಡಗಳು ಇದರಲ್ಲಿ ಭಾಗವಹಿಸುತ್ತವೆ. 2026ರಿಂದ 48 ತಂಡಗಳು ಭಾಗವಹಿಸುತ್ತಿವೆ.

13 ತಂಡಗಳಿಂದ ಆರಂಭ

ಮೊದಲ ವಿಶ್ವಕಪ್‌ಗೆ ಕೇವಲ 13 ತಂಡಗಳು ಭಾಗವಹಿಸಿದ್ದವು. ದಕ್ಷಿಣ ಅಮೆರಿಕದ ಉರುಗ್ವೆ ಆತಿಥ್ಯ ವಹಿಸಿತ್ತು. ಫೈನಲ್‌ನಲ್ಲಿ ಆತಿಥೇಯ ಉರುಗ್ವೆ, ಅರ್ಜೆಂಟಿನಾ ತಂಡವನ್ನು 4-2 ಗೋಲುಗಳಿಂದ ಸೋಲಿಸಿ ಮೊದಲ ವಿಶ್ವ ಚಾಂಪಿಯನ್ ಆಯಿತು.

ಆರಂಭ ಹೇಗಾಯಿತು?

1890ರ ಆಸುಪಾಸಿನಲ್ಲಿ ಫುಟ್‌ಬಾಲ್ ಕ್ರೇಜ್ ವಿಶ್ವಾದ್ಯಂತ ಜನರ ಮನದಲ್ಲಿ ಮನೆ ಮಾಡಿತ್ತು. ಸಾಮಾನ್ಯ ಜನರಲ್ಲಿ ಆಟದ ಬಗ್ಗೆ ಕ್ರೇಜ್. ಹಲವು ವರ್ಷಗಳ ನಂತರ 1904ರಲ್ಲಿ ಫಿಫಾ(ಫೆಡರೇಶನ್ ಇಂಟರ್‌ನ್ಯಾಷನಲ್ ಡೆ ಫುಟ್‌ಬಾಲ್ ಅಸೋಸಿಯೇಷನ್) ಎಂಬ ಸಂಸ್ಥೆ ಹುಟ್ಟಿಕೊಂಡಿತು. ಹೆಚ್ಚುತ್ತಿದ್ದ ಆಟಗಾರರ ಸಂಖ್ಯೆಯನ್ನು ಗಮನಿಸಿದ ಫಿಫಾ 1928ರಲ್ಲಿ ಪ್ರತ್ಯೇಕ ವಿಶ್ವ ಚಾಂಪಿಯನ್‌ಶಿಪ್ ಆಯೋಜಿಸಲು ನಿರ್ಧರಿಸಿತು. ಅದರ ಫಲವಾಗಿ 1930ರಲ್ಲಿ ಮೊದಲ ಫಿಫಾ ವಿಶ್ವಕಪ್ ನಡೆಯಿತು.

2026
FIFA WORLD CUP
UNITED STATES | CANADA | MÉXICO

ಮರಕನಾಜೊ ಆಘಾತ

ಫಿಫಾ ವಿಶ್ವಕಪ್ ಇತಿಹಾಸದಲ್ಲಿ ಮರಕನಾಜೊ ಆಘಾತ ಅಚಲವಾಗಿದೆ. 1950ರ ವಿಶ್ವಕಪ್‌ನಲ್ಲಿ ಬ್ರೆಜಿಲ್ ಚಾಂಪಿಯನ್ ಆಗುವುದು ಬಹುತೇಕ ಖಚಿತ ಎನ್ನಲಾಗುತ್ತಿತ್ತು. ರಿಯೊ ಡಿ ಜನೈರೊದ ಪ್ರಸಿದ್ಧ ಮರಕನಾ ಕ್ರೀಡಾಂಗಣದಲ್ಲಿ ಸುಮಾರು ಎರಡು ಲಕ್ಷ ಅಭಿಮಾನಿಗಳು ಬ್ರೆಜಿಲ್ ವಿಜಯೋತ್ಸವಕ್ಕೆ ಸಿದ್ಧರಾಗಿದ್ದರು. ಆದರೆ ಉರುಗ್ವೆ 2-1 ಅಂತರದಲ್ಲಿ ಬ್ರೆಜಿಲ್‌ನ್ನು ಸೋಲಿಸಿ ಇತಿಹಾಸ ನಿರ್ಮಿಸಿತು. ಈ ಘಟನೆಯನ್ನು ಮರಕನಾಜೊ ಎಂದು ಕರೆಯಲಾಗುತ್ತದೆ. ಫುಟ್‌ಬಾಲ್ ಇತಿಹಾಸದ ಅತಿದೊಡ್ಡ ಆಘಾತಗಳಲ್ಲಿ ಇದು ಒಂದು.

ವಿಶ್ವಯುದ್ಧದ ಪರಿಣಾಮ

ವಿಶ್ವಕಪ್‌ನ ರೋಚಕತೆ ಮತ್ತು ಆಟಗಾರರ ನಡುವಿದ್ದ ಅಬ್ಬರ ವಿಶ್ವಾದ್ಯಂತ ಅಭಿಮಾನಿಗಳನ್ನು ಸೆಳೆದಿತ್ತು. ಅಂದಿನ ದಿನಗಳಲ್ಲಿ ಫಿಫಾ ವಿಶ್ವಕಪ್‌ಗಾಗಿ ಜನರು ಕಾಯುತ್ತಿದ್ದರು. ಆದರೆ 1934 ಮತ್ತು 1938ರ ವಿಶ್ವಕಪ್‌ಗಳನ್ನು ಇಟಲಿ ಗೆದ್ದಿತು. ಈ ಮೂಲಕ ಸತತ ಎರಡು ವಿಶ್ವಕಪ್ ಗೆದ್ದ ಮೊದಲ ರಾಷ್ಟ್ರವಾಯಿತು. ನಂತರದ ಅವಧಿಯಲ್ಲಿ ಜಗತ್ತನ್ನು ಎರಡನೇ ಮಹಾಯುದ್ಧ ಆವರಿಸಿತು. ಪರಿಣಾಮವಾಗಿ 1942 ಮತ್ತು 1946ರ ವಿಶ್ವಕಪ್‌ಗಳನ್ನು ರದ್ದುಗೊಳಿಸಲಾಯಿತು. ಎಂಟು ವರ್ಷಗಳ ವಿರಾಮದ ಬಳಿಕ 1950ರಲ್ಲಿ ವಿಶ್ವಕಪ್ ಮತ್ತೆ ಆರಂಭವಾಯಿತು.

ಮೆಸ್ಸಿಯ ಕನಸಿನ ಸಾಕಾರ

ಫುಟ್‌ಬಾಲ್ ದಂತಕಥೆ ಲಿಯೋನಲ್ ಮೆಸ್ಸಿ ಅವರ ವೃತ್ತಿಜೀವನದಲ್ಲಿ ಉಳಿದಿದ್ದ ಏಕೈಕ ಪ್ರಮುಖ ಟ್ರೋಫಿ ವಿಶ್ವಕಪ್ ಆಗಿತ್ತು. ಕತಾರ್‌ನಲ್ಲಿ ನಡೆದ 2022ರ ವಿಶ್ವಕಪ್‌ನಲ್ಲಿ ಅರ್ಜೆಂಟೀನಾ ಫ್ರಾನ್ಸ್ ವಿರುದ್ಧದ ರೋಚಕ ಫೈನಲ್‌ನಲ್ಲಿ ಜಯ ಸಾಧಿಸಿತು. ಮೆಸ್ಸಿ ವಿಶ್ವಕಪ್ ಎತ್ತಿಹಿಡಿದ ಕ್ಷಣವನ್ನು ಫುಟ್ಬಾಲ್ ಇತಿಹಾಸದ ಅತ್ಯಂತ ಭಾವನಾತ್ಮಕ ಕ್ಷಣಗಳಲ್ಲಿ ಒಂದೆಂದು ಪರಿಗಣಿಸಲಾಗುತ್ತದೆ.





ಪಿಲೆ ಯುಗ (1958-1970)

ಪಿಲೆ ಎಂಬ 17 ವರ್ಷದ ಯುವ ಆಟಗಾರ 1958ರ ವಿಶ್ವಕಪ್‌ನಲ್ಲಿ ಮಿಂಚಿದರು. ಅವರ ಅದ್ಭುತ ಪ್ರದರ್ಶನ ದಿಂದ ಬ್ರೆಜಿಲ್ ಮೊದಲ ಬಾರಿಗೆ ವಿಶ್ವಕಪ್ ಗೆದ್ದಿತು. 1962 ಮತ್ತು 1970ರಲ್ಲೂ ಬ್ರೆಜಿಲ್ ಪ್ರಶಸ್ತಿ ಗೆದ್ದು ಆಧುನಿಕ ಫುಟ್‌ಬಾಲ್‌ನ ಮಹಾಶಕ್ತಿಯಾಯಿತು. ಪಿಲೆ ಮೂರು ವಿಶ್ವಕಪ್ ಗೆದ್ದ ಏಕೈಕ ಆಟಗಾರ ಎಂಬ ದಾಖಲೆ ಇಂದಿಗೂ ಅಚಲವಾಗಿದೆ.



ಮಾಂತ್ರಿಕ ಮರಡೋನಾ

ಡಿಯೇಗೊ ಮರಡೋನಾ ಅವರ ಹೆಸರಿಲ್ಲದೆ ಫಿಫಾ ವಿಶ್ವಕಪ್ ಇತಿಹಾಸ ಅಪೂರ್ಣ. 1986ರ ಮೆಕ್ಸಿಕೋ ವಿಶ್ವಕಪ್‌ನಲ್ಲಿ ಅವರು ಅರ್ಜೆಂಟೀನಾವನ್ನು ತಂಡವನ್ನು ಗಟ್ಟಿಗೊಳಿಸಿದ್ದಲ್ಲದೆ ಚಾಂಪಿಯನ್ ಪಟ್ಟಕ್ಕೇರಿಸಿದರು. ಇಂಗ್ಲೆಂಡ್ ವಿರುದ್ಧದ ಪಂದ್ಯದಲ್ಲಿ ಅವರು ಗಳಿಸಿದ ಹ್ಯಾಂಡ್ ಆಫ್ ಗಾಡ್ ಗೋಲು ಮತ್ತು ಗೋಲ್ ಆಫ್ ದ ಸೆಂಚುರಿ ವಿಶ್ವಕಪ್ ಇತಿಹಾಸದ ಅತ್ಯಂತ ಪ್ರಸಿದ್ಧ ಕ್ಷಣಗಳಾಗಿವೆ.

ಯುರೋಪಿನ ಪ್ರಾಬಲ್ಯ (1974-1990)

ಫಿಫಾ ಫುಟ್‌ಬಾಲ್ ಇತಿಹಾಸದಲ್ಲಿ ಅವಧಿಯಲ್ಲಿ ಜರ್ಮನಿ ಮತ್ತು ಇಟಲಿ ತಂಡಗಳು ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಿದವು. 1974ರಲ್ಲಿ ಪಶ್ಚಿಮ ಜರ್ಮನಿ, 1982ರಲ್ಲಿ ಇಟಲಿ ಮತ್ತು 1990ರಲ್ಲಿ ಮತ್ತೆ ಜರ್ಮನಿ ಚಾಂಪಿಯನ್ ಆದವು. ಇದೇ ಸಮಯದಲ್ಲಿ ಫುಟ್‌ಬಾಲ್ ಹೆಚ್ಚು ವೃತ್ತಿಪರ ಮತ್ತು ತಾಂತ್ರಿಕ ಆಟವಾಗಿ ಬೆಳೆಯಿತು.



ಬ್ರೆಜಿಲ್‌ಗೆ ಐತಿಹಾಸಿಕ ಸೋಲಿನ ಆಘಾತ

2014ರ ವಿಶ್ವಕಪ್‌ಗೆ ಬ್ರೆಜಿಲ್ ಆತಿಥ್ಯ ವಹಿಸಿತ್ತು. ಸೆಮಿಫೈನಲ್‌ನಲ್ಲಿ ಜರ್ಮನಿ ವಿರುದ್ಧ ಬ್ರೆಜಿಲ್ ಆಡಿದ ಪಂದ್ಯ ಫುಟ್‌ಬಾಲ್ ಇತಿಹಾಸದ ಅತ್ಯಂತ ಆಘಾತಕಾರಿ ಫಲಿತಾಂಶಗಳಲ್ಲಿ ಒಂದು. ಜರ್ಮನಿ 7-1 ಅಂತರದಲ್ಲಿ ಬ್ರೆಜಿಲ್‌ನ್ನು ಸೋಲಿಸಿತು. ಈ ಸೋಲು ಬ್ರೆಜಿಲ್ ಅಭಿಮಾನಿಗಳಿಗೆ ಇಂದಿಗೂ ನೋವಿನ ನೆನಪು.

ಹೊಸ ಚಾಂಪಿಯನ್ಸ್ (1998-2010)

1998ರಲ್ಲಿ ಫ್ರಾನ್ಸ್ ತನ್ನ ಮೊದಲ ವಿಶ್ವಕಪ್ ಗೆದ್ದಿತು. 2002ರಲ್ಲಿ ಬ್ರೆಜಿಲ್ ಐದನೇ ಬಾರಿ ಚಾಂಪಿಯನ್ ಆಯಿತು. ಇದು ಇಂದಿಗೂ ದಾಖಲೆಯಾಗಿದೆ. 2006ರಲ್ಲಿ ಇಟಲಿ, 2010ರಲ್ಲಿ ಸ್ಪೇನ್ ಪ್ರಶಸ್ತಿ ಗೆದ್ದವು. ಸ್ಪೇನ್‌ನ 2010ರ ಜಯ ಅವರ ಟಿಕಿ-ಟಾಕಾ ಶೈಲಿಯ ಯಶಸ್ಸಿನ ಸಂಕೇತವಾಗಿತ್ತು.

ಫ್ರಾನ್ಸ್ ಪುನರಾಗಮನ (2018)

ಆಧುನಿಕ ಫುಟ್‌ಬಾಲ್ ತಾರೆಯರಲ್ಲಿ ಒಬ್ಬರಾದ ಕಿಲಿಯನ್ ಎಂಬಾಪ್ಪೆ ಅವರ ಅದ್ಭುತ ಆಟದ ನೆರವಿನಿಂದ ಫ್ರಾನ್ಸ್ 20 ವರ್ಷಗಳ ಬಳಿಕ ಎರಡನೇ ವಿಶ್ವಕಪ್ ಗೆದ್ದಿತು. ಇದು ಫ್ರಾನ್ಸ್‌ನ ಪುನರಾಗಮನ ಎನ್ನಲಾಗುತ್ತದೆ. 20 ವರ್ಷದ ಮಟ್ಟಿಗೆ ಹಿನ್ನಡೆ ಅನುಭವಿಸಿದ್ದ ಫ್ರಾನ್ಸ್ ಮತ್ತೊಮ್ಮೆ ವಿಶ್ವಕಪ್ ಗೆದ್ದಿತ್ತು.

ಜೂನ್ 27ರಿಂದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ 2ನೇ ಹಂತದ ಪಂದ್ಯ ಆರಂಭ

ಮಹಾರಾಜ ಟ್ರೋಫಿಗೆ ಹುಬ್ಬಳ್ಳಿ ಸಿದ್ಧ

▸ **ವಿಜಯಕುಮಾರ ಬೆಳ್ಳೇರಿಮಠ**

• **ಹುಬ್ಬಳ್ಳಿ:** ಹಸಿರಿನಿಂದ ಕೂಡಿದ ಇಲ್ಲಿನ ನೃಪತುಂಗ ಬೆಟ್ಟದ ತಪ್ಪಲಿನಲ್ಲಿರುವ ರಾಜನಗರದ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ(ಕೆಎಸ್‌ಸಿಎ) ಕ್ರೀಡಾಂಗಣದಲ್ಲಿ ಮಹಾರಾಜ ಟ್ರೋಫಿ ನಡೆಸಲು ಸಿದ್ಧತೆ ಆರಂಭವಾಗಿದೆ.

ಮಹಾರಾಜ ಟ್ರೋಫಿಯ ಎರಡನೇ ಹಂತದ ಟಿ20 ಪಂದ್ಯಗಳು ಜೂ.27ರಿಂದ ಜುಲೈ 3ರ ವರೆಗೆ ನಡೆಯಲಿವೆ. ಕಳೆದ ನಾಲ್ಕು ತಿಂಗಳ(ಫೆಬ್ರವರಿ) ಹಿಂದೆ ಕರ್ನಾಟಕ ಹಾಗೂ ಜಮ್ಮು ಕಾಶ್ಮೀರ ನಡುವೆ ಫೈನಲ್ ಪಂದ್ಯಕ್ಕೆ ಈ ಮೈದಾನ ವೇದಿಕೆಯಾಗಿತ್ತು. ಅದರಲ್ಲಿ ಜಮ್ಮು-ಕಾಶ್ಮೀರ ಜಯಿಸಿತ್ತು. ಈಗ ಮಹಾರಾಜ ಟ್ರೋಫಿಯ ಒಟ್ಟು 12 ಪಂದ್ಯಗಳು ಇಲ್ಲಿ ನಡೆಯಲಿವೆ.

ಕೆಎಸ್‌ಸಿಎ ವ್ಯವಸ್ಥಾಪನಾ ಸಮಿತಿ ಸದಸ್ಯ ಅವಿನಾಶ ವೈದ್ಯ ಹಾಗೂ ಮಹಾರಾಜ ಟ್ರೋಫಿಯ ಆಡಳಿತ ಮಂಡಳಿ ಸದಸ್ಯ ಎ.ವಿ.ಶಶಿಧರ ಅವರು ಇತ್ತೀಚೆಗೆ ಕ್ರೀಡಾಂಗಣಕ್ಕೆ ಭೇಟಿ ನೀಡಿ, ಸೌಲಭ್ಯಗಳನ್ನು ಪರಿಶೀಲಿಸಿದ್ದಾರೆ. ಪಂದ್ಯಗಳು ನೇರ ಪ್ರಸಾರವಾಗಲಿದ್ದು, ಈ ಹಿನ್ನೆಲೆಯಲ್ಲಿ ಲೈವ್ ಸೋನಿ ನೆಟ್‌ವರ್ಕ್ ಬ್ರಾಡ್‌ಕಾಸ್ಟಿಂಗ್ ತಂಡವೂ ಸಹ ಕ್ರೀಡಾಂಗಣಕ್ಕೆ ಬಂದು ಪರಿಶೀಲಿಸಿದೆ.

8 ಸಾವಿರ ಪ್ರೇಕ್ಷಕರಿಗೆ ಅವಕಾಶ:: ಪಂದ್ಯ ವೀಕ್ಷಣೆಗೆ ಬರುವ ಜನರಿಗೆ 7ರಿಂದ 8 ಸಾವಿರ ಆಸನಗಳ ವ್ಯವಸ್ಥೆ ಮಾಡಲಾಗುತ್ತಿದೆ. ಗೇಟ್



ಸಂಖ್ಯೆ 1, 3, 4 ಹಾಗೂ 5ರಲ್ಲಿ ಟಿಕೆಟ್ ಪಡೆಯಲು ಅವಕಾಶ ನೀಡಲಾಗುತ್ತದೆ. ಈಗಾಗಲೇ ಸ್ವಚ್ಛತಾ ಕಾರ್ಯ ಮುಗಿದಿದ್ದು, ಸ್ಟ್ಯಾಂಡ್‌ಗಳ ಅಳವಡಿಸುವ ಕಾರ್ಯ ನಡೆಯುತ್ತಿದೆ. ಮೈದಾನದಲ್ಲಿ ಪ್ರಕರವಾದ ಬೆಳಕು ಬೀಳುವ ಉದ್ದೇಶದಿಂದ ಈ ಮೊದಲಿದ್ದ ಹ್ಯಾಲೋಜನ್ ವಿದ್ಯುತ್ ದೀಪಗಳ ಬದಲಿಸಿ ಎಲ್‌ಇಡಿ ದೀಪಗಳ ಅಳವಡಿಸಲಾಗುತ್ತದೆ. ಹ್ಯಾವಲ್ಸ್ ಕಂಪನಿಗೆ ಟೆಂಡರ್ ನೀಡಲಾಗಿದ್ದು, ಇದರಿಂದ ಶೇ.30ರಷ್ಟು ವಿದ್ಯುತ್ ದರ ಉಳಿತಾಯ ಆಗಲಿದೆ. 6 ಕ್ಯಾಮೆರಾ ಅಳವಡಿಸಲಾಗುತ್ತಿದೆ.

ಹುಲ್ಲು ಕತ್ತರಿಸುವ ಯಂತ್ರ ಗ್ರಾಸ್ ಕಟಿಂಗ್, ಲಾನ್ ಮೋವರ್‌ಗಳಿವೆ. ಸೂಪರ್ ಸಾಪರ್ ಒಂದು ಇದ್ದು, ಶಿವಮೊಗ್ಗದಿಂದ ಇನ್ನೊಂದು ಹಾಗೂ ಟಾರ್ಪಲಿನ್ ಗ್ರೌಂಡ್ ಕವರ್ ತರಿಸಿಕೊಳ್ಳಲು ಚಿಂತನೆ ನಡೆಸಲಾಗಿದೆ. ಇದರಿಂದ ಶೇ.70ರಷ್ಟು ಕವರ್ ಮಾಡಬಹುದು. ಸದ್ಯ 10 ಜನ ಗ್ರೌಂಡ್ ಮನ್‌ಗಳಿದ್ದು, 40 ಜನರ ಅವಶ್ಯಕತೆ ಇದೆ.

ಜೂ.27ರಿಂದ ಜುಲೈ 3ರ ವರೆಗೆ ಹುಬ್ಬಳ್ಳಿಯಲ್ಲಿ ಮಹಾರಾಜ ಟ್ರೋಫಿಯ ಪಂದ್ಯಗಳು ನಡೆಯಲಿವೆ. ಈಗಾಗಲೇ ಸಿದ್ಧತೆಗಳು ಆರಂಭಗೊಂಡಿವೆ. ಆಯೋಜನೆಗೆ ಸಂಬಂಧಿಸಿದಂತೆ ಕೆಎಸ್‌ಸಿಎ ವ್ಯವಸ್ಥಾಪನಾ ಸಮಿತಿ ಸದಸ್ಯರ ಸಭೆ ಜೂ.12ರಂದು ನಿಗದಿಯಾಗಿದ್ದು, ಬಳಿಕವೇ ಪೂರ್ಣ ವಿವರಗಳು ಲಭ್ಯವಾಗಲಿವೆ.
■ **ವೀರಣ್ಣ ಸವಡಿ, ಸಂಚಾಲಕ, ಕೆಎಸ್‌ಸಿಎ ಧಾರವಾಡ ವಲಯ**

2018ರಲ್ಲಿ ಕೆಪಿಎಲ್ ನಡೆದಿತ್ತು: 2018ರಲ್ಲಿ ಹುಬ್ಬಳ್ಳಿಯಲ್ಲಿ ಕರ್ನಾಟಕ ಪ್ರೀಮಿಯರ್ ಲೀಗ್ ನಡೆದಿತ್ತು. ಅದಾದ ಬಳಿಕ ಇಲ್ಲಿ ಟಿ-20 ಪಂದ್ಯಗಳು ನಡೆದಿಲ್ಲ. ಕೆಪಿಎಲ್ ಹೆಸರು ಬದಲಿಸಿ ಮಹಾರಾಜ ಟ್ರೋಫಿ ಎಂದು ಹೆಸರಿಡಲಾಗಿದ್ದು, ಮತ್ತೆ ಹುಬ್ಬಳ್ಳಿಯಲ್ಲಿ ಪಂದ್ಯ ಆಯೋಜನೆಗೆ ಅವಕಾಶಗಳು ದೊರೆತಿದೆ. ರಣಜಿ ಅಲ್ಲದೆ ಭಾರತ 'ಎ' ಮತ್ತು ವೆಸ್ಟ್ ಇಂಡೀಸ್ 'ಎ', ಭಾರತ 'ಎ'ಶ್ರೀಲಂಕಾ 'ಎ', ಭಾರತ 'ಎ' ನ್ಯೂಜಿಲೆಂಡ್ 'ಎ' ತಂಡಗಳ ನಡುವಿನ ಪಂದ್ಯಗಳು ಮತ್ತು ಕರ್ನಲ್ ಸಿ.ಕೆ.ನಾಯ್ಡು, 19 ವರ್ಷದೊಳಗಿನವರ ಕೂಚ್ ಬಿಹಾರ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯಗಳು ಸಹ ಇಲ್ಲಿ ನಡೆದಿವೆ.

ಜೂನಿಯರ್ ಟೆನಿಸ್: ಮಹತ್ವದ ಸಾಧನೆ

ಬೆಂಗ್ಳೂರಿನ ಸೃಷ್ಟಿ ಕಿರಣ್ ವಿಶ್ವ ನಂ.1 ಆಟಗಾರ್ತಿ

• **ಬೆಂಗಳೂರು:** ಬೆಂಗಳೂರು ಮೂಲದ 13 ವರ್ಷದ ಟೆನಿಸ್ ಪ್ರತಿಭೆ ಸೃಷ್ಟಿ ಕಿರಣ್ ಜೂನಿಯರ್ ಟೆನಿಸ್ ವಲಯದಲ್ಲಿ ಮತ್ತೊಂದು ಮಹತ್ವದ ಸಾಧನೆ ಮಾಡಿದ್ದಾರೆ. ಅಂಡರ್-13 ವಿಭಾಗದ ವಿಶ್ವ ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೇರಿ ವಿಶ್ವ ನಂ.1 ಆಟಗಾರ್ತಿಯಾಗಿ ಹೊರಹೊಮ್ಮಿದ್ದಾರೆ.

ಇತ್ತೀಚಿನ ತಿಂಗಳುಗಳಲ್ಲಿ ಸೃಷ್ಟಿ ಅದ್ಭುತ ಪ್ರದರ್ಶನ ನೀಡಿದ್ದು, ಸತತ ಐದು ಐಟಿಎಫ್ ಜೂನಿಯರ್ ಪ್ರಶಸ್ತಿಗಳನ್ನು ಗೆದ್ದಿದ್ದರು. ಕಳೆದ ವಾರ ನಡೆದ ಗ್ವಾಟೆಮಾಲಾದ ಐಟಿಎಫ್ ವರ್ಲ್ಡ್ ಟೆನಿಸ್ ಟೂರ್ ಜೂನಿಯರ್ಸ್ ಜೆ100 ಟೂರ್ನಿಯಲ್ಲಿ ರನ್ನರ್-ಅಪ್ ಆಗಿದ್ದರು. ಈ ಸಾಧನೆಗಳ ಫಲವಾಗಿ ಅವರು ಐಟಿಎಫ್ ಜೂನಿಯರ್ ರ್‍ಯಾಂಕಿಂಗ್‌ನಲ್ಲಿ 357ನೇ ಸ್ಥಾನಕ್ಕೇರಿದ್ದು, ಅಂಡರ್-13 ವಿಭಾಗದಲ್ಲಿ ವಿಶ್ವದ ಅಗ್ರಸ್ಥಾನಕ್ಕೇರಿದ್ದಾರೆ.

ಈ ಸಾಧನೆಗೆ ಮತ್ತಷ್ಟು ವಿಶೇಷತೆ ತಂದಿರುವ ಸಂಗತಿ ಎಂದರೆ, ಸೃಷ್ಟಿ ಕೇವಲ ಎಂಟು ರ್‍ಯಾಂಕಿಂಗ್ ಟೂರ್ನಿಗಳಲ್ಲಷ್ಟೇ ಪಾಲ್ಗೊಂಡಿದ್ದರು. ಸಾಮಾನ್ಯವಾಗಿ ಗರಿಷ್ಠ ಹತ್ತು ಟೂರ್ನಿಗಳ ಫಲಿತಾಂಶಗಳನ್ನು ಪರಿಗಣಿಸಿ ರ್‍ಯಾಂಕಿಂಗ್ ಲೆಕ್ಕ ಹಾಕಲಾಗುತ್ತದೆ.



ಆರ್ಥಿಕ ಹಾಗೂ ವ್ಯವಸ್ಥಾಪನಾ ಸಮಸ್ಯೆಗಳಿಂದ ಎರಡು ಟೂರ್ನಿಗಳಲ್ಲಿ ಭಾಗವಹಿಸಲು ಸಾಧ್ಯವಾಗದಿದ್ದರೂ, ಉಳಿದ ಟೂರ್ನಿಗಳಲ್ಲಿನ ಅತ್ಯುತ್ತಮ ಪ್ರದರ್ಶನದ ಮೂಲಕ ಅವರು ವಿಶ್ವದ ಅಗ್ರಸ್ಥಾನವನ್ನು ಅಲಂಕರಿಸಿದ್ದಾರೆ.

ಬೆಂಬಲದಿಂದ ಸಾಧ್ಯ: ಸೃಷ್ಟಿ: ನನ್ನ ವಯೋಮಾನದ ವಿಭಾಗದಲ್ಲಿ ವಿಶ್ವ ನಂ.1 ಆಗಿರುವುದು ತುಂಬಾ ಸಂತೋಷದ ವಿಚಾರ. ವರ್ಷದ ಆರಂಭದಲ್ಲಿ ಇದನ್ನು ನಾನು ನಿರೀಕ್ಷಿಸಿರಲಿಲ್ಲ. ನನ್ನ ಕೋಚ್‌ಗಳು, ಕುಟುಂಬ ಹಾಗೂ ಬೆಂಬಲ ತಂಡದ ಶ್ರಮಕ್ಕೆ ಇದು ಫಲವಾಗಿದೆ, ಎಂದು ಸೃಷ್ಟಿ ಸಂತಸ ವ್ಯಕ್ತಪಡಿಸಿದ್ದಾರೆ.

ಭಾರತ ಎ ಶುಭಾರಂಭ

• **ದಂಬುಲಾ(ಶ್ರೀಲಂಕಾ):** ಐಪಿಎಲ್ ವೈಫಲ್ಯದಿಂದ ಕಂಗೆಟ್ಟಿದ್ದ ಬ್ಯಾಟರ್ ರುತುರಾಜ್ ಗಾಯಕ್ವಾಡ್ ನೀಲಿ ಬಣ್ಣದ ಅಂಗಿಯಲ್ಲಿ ಏಕದಿನ ಕಣದಲ್ಲಿಳಿದ ತಕ್ಷಣವೇ ಲಯಕ್ಕೆ ಮರಳಿದರು. ಮಂಗಳವಾರ ಶುರುವಾಗಿರುವ ಶ್ರೀಲಂಕಾ ಎ, ಭಾರತ ಎ ಮತ್ತು ಅಫ್ಘಾನಿಸ್ತಾನ ಎ ನಡುವಿನ ತ್ರಿಕೋನ ಸರಣಿಯ ಮೊದಲ ಪಂದ್ಯದಲ್ಲಿ ಶ್ರೀಲಂಕಾ ಎ ತಂಡದೊಂದಿಗೆ ಭಾರತ 8 ರನ್‌ಗಳ ರೋಚಕ ಗೆಲುವು ಸಾಧಿಸಿದೆ.

ತಮ್ಮ ಸಾಮಾನ್ಯ ಆರಂಭಿಕ ಕ್ರಮಾಂಕವನ್ನು ಬಿಟ್ಟು ಮಧ್ಯಮ ಕ್ರಮಾಂಕದಲ್ಲಿ ಗಟ್ಟಿಯಾಗಿ ನಿಂತುಕೊಂಡ ಗಾಯಕ್ವಾಡ್(101) ಮೊದಲು ಬ್ಯಾಟಿಂಗ್ ಮಾಡಿದ ಭಾರತ ಎ ತಂಡದ ಪರ ಶತಕ ಬಾರಿಸಿದರು. ಅವರ ಆಟಕ್ಕೆ ತಿಲಕ್ ವರ್ಮಾ(60) ಅತ್ಯುತ್ತಮ ಬ್ಯಾಟಿಂಗ್‌ನೊಂದಿಗೆ ಸಾಥ್ ಕೊಟ್ಟ ನಂತರ ಭಾರತ 50 ಓವರುಗಳಲ್ಲಿ 6 ವಿಕೆಟ್ ನಷ್ಟಕ್ಕೆ 277 ರನ್ ಮಾಡಿತು. ಗುರಿ ಬೆನ್ನತ್ತಿದ ಶ್ರೀಲಂಕಾ 269 ರನ್‌ಗಳಿಗೆ ಉರುಳಿತು. ನಿರೋಶನ್(47), ಅವಿಷ್ಕಾ(45) ರನ್‌ನೊಂದಿಗೆ ಉತ್ತಮ ಆರಂಭ ಒದಗಿಸಿದ್ದರು. ಮಧ್ಯಮ ಕ್ರಮಾಂಕದಲ್ಲಿ ಸದೀರ (46), ಸಹನ್ (74) ರನ್‌ನೊಂದಿಗೆ ಮಿಂಚಿದ ನಂತರ ಶ್ರೀಲಂಕಾ ಗೆಲುವಿನ ಕಡೆ ಸಾಗಿತ್ತು. ಆದರೆ ಭಾರತೀಯ ಸಾಂಘಿಕ ಬೌಲಿಂಗ್ ದಾಳಿ ಅದಕ್ಕೆ ಅವಕಾಶ ಮಾಡಿಕೊಡಲಿಲ್ಲ. ಅರ್ಷದ್ ಖಾನ್, ಅನುಕುಲ್, ಆಯುಷ್ ಮತ್ತು ವಿಪ್ರಾಜ್ ನಿಗಮ್ ತಲಾ 2 ವಿಕೆಟ್ ಪಡೆದರು. ಅನ್ಶುಲ್ 1 ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರ್

ಭಾರತ ಎ 277/6(50 ಓವರ್): ರುತುರಾಜ್ 101, ತಿಲಕ್ 60; ಶಿರಾಝ್ 67/2, **ಶ್ರೀಲಂಕಾ ಎ 48.5 ಓವರ್‌ಗಳಲ್ಲಿ** 269/10: ಸಹನ್ 74, ಸದೀರ 46; ಅರ್ಷದ್ 24/2

ಪದಬಂಧ

▸ ರಾಜಾ ಸಂಗಮೇಶ ಹಿರೇಮಠ



6010

6009 ಉತ್ತರ

ಎಡದಿಂದ ಬಲಕ್ಕೆ:
1.ದುಮ್ಮಾನ 3.ದಾರಿಹೋಕ
5.ವನೇಚರಿ 6.ಬಿರುಗಾಳಿ
8.ಶವಾಗಾರ 11.ಭದ್ರಗಜ
14.ಅಥರ್ವಣ 15.ರಸಿಕ
16.ರಣರಂಗ 17.ವಿಳೇಯ
ಮೇಲಿನಿಂದ ಕೆಳಕ್ಕೆ
:1.ದುರುದ್ದೇಶ
2.ನವರಂಗಾ 3.ದಾರಿಬಿಡು
4.ಕದಳಿ 7.ಗಾರುಡಿಗ
9.ವಾಯುಪಥ
10.ಬಾಣಸಿಗ
12.ವೀರಭದ್ರ
13.ಜಲಾಶಯ 14.ಅಪಾರ

ಎಡದಿಂದ ಬಲಕ್ಕೆ
3.ಹಿಡಿದುಕೊಳ್ಳುವುದನ್ನು ಹೀಗೆನ್ನಬಹುದು (2)
4.ತಾವರೆಯಂಥಹ ವದನ-ಮುಖಕಮಲ (6)
7.ಗಣಿಗಳಿಂದ ದೊರಕುವ ಕಚ್ಚಾ ದ್ರವ್ಯ (3)
8.ವೇದನೆಯಿಂದ ಕೂಗುವಿಕೆ (3)
9.ಇದು ಎಲೆಯಿಂದ ಮಾಡಿದ ಬಟ್ಟಲು (2)
10.ಬೀರುತ್ತಿರುವ ಪ್ರಭೆ (2)
12.ಗಂಡುಕೋತಿಯಲ್ಲಿ ತಿರುಗಿ ಕುಳಿತಿದೆ (3)
14.ನರಕಾಧಿಪತಿ ಮೊದಲಿರುವ ಜೋಡಿ (3)
15.ಅಂಧವಿಶ್ವಾಸವನ್ನು ಹೀಗೂ ಹೇಳುತ್ತೇವೆ (6)
18.ಏನನ್ನಾದರೂ ಪಡೆಯಲು ಕೇಳುವುದು (2)

ಮೇಲಿನಿಂದ ಕೆಳಕ್ಕೆ
1.ಆರ್ದ್ರತೆ-ಒದ್ದೆಯಿಂದ ಕೂಡಿದ್ದು (2)
2.ಉತ್ತರಭಾರತದಲ್ಲಿನ ಪರ್ವತಗಳು ಉಲ್ಟಾ ಕಾಣುತ್ತಿವೆ (2)
3.ಜನ ನಡುವೆ ಇಟ್ಟುಕೊಂಡ ಯಕೃತ್ತು (6)
5.ಹಾವಿನಾಕಾರದ ಜಡೆಬಿಲ್ಲೆ (3)
6.ಇದು ದಕ್ಷಿಣ ದೇಶಕ್ಕೆ ಸಂಬಂಧಿಸಿದ್ದು (3)
8.ಹೃದಯದಿಂದ ಮೂಡಿ ಬಂದ ಗೀತೆ (6)
11.ಪ್ರಕಾಶವು ಇಲ್ಲಿ ಬೀರುತ್ತಿದೆ (3)
13.ವಿಷವನ್ನು ಕುಡಿದವ ತಲೆಕೆಳಗಾಗಿದ್ದಾನೆ (3)
16.ಸಂಹಾರಕ ಸ್ವರೂಪನಾದ ದೇವರು (2)
17.ಏರಿ ಹಾಕಿ ನೀರು ನಿಲ್ಲಿಸಿದ ಸ್ಥಳ (2)

ಕಿರುಸುದ್ದಿ

ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಾಳೆ

ಹೊಸಕೋಟೆ: ಮುಖ್ಯಮಂತ್ರಿ ಡಿಕೆ.ಶಿವಕುಮಾರ್ ಅವರ ಸಚಿವ ಸಂಪುಟದಲ್ಲಿ ಹಿರಿಯ ಶಾಸಕ ಹಾಗೂ ಅಹಿಂದ ನಾಯಕ ಹೆಚ್.ಸಿ.ಮಹದೇವಪ್ಪ ಅವರಿಗೆ ಸಚಿವ ಸ್ಥಾನ ನೀಡದೆ ಕಡೆಗಣಿಸಿರುವುದನ್ನು ಖಂಡಿಸಿ ಜೂನ್ 11ರ ಗುರುವಾರದಂದು ಬೆಳಗ್ಗೆ 10 ಗಂಟೆಗೆ ದಲಿತ ಸಂಘಟನೆಗಳ ಒಕ್ಕೂಟದ ವತಿಯಿಂದ ಬೃಹತ್ ಪ್ರತಿಭಟನೆ ಹಾಗೂ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ದಲಿತ ಸಂಘರ್ಷ ಸಮಿತಿ ಕರ್ನಾಟಕ ಬೆಂಗಳೂರು ವಿಭಾಗೀಯ ಸಂಚಾಲಕ ಮಂಜುನಾಥ್ ಅಣ್ಣಯ್ಯ ತಿಳಿಸಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಎಚ್.ಸಿ.ಮಹದೇವಪ್ಪ ಅವರು ಹಳೆ ಮೈಸೂರು ಭಾಗ ಸೇರಿದಂತೆ ರಾಜ್ಯಾದ್ಯಂತ ಪ್ರಜಾಪ್ರಭುತ್ವ ಮೌಲ್ಯಗಳನ್ನು ಎತ್ತಿಹಿಡಿದು ಸಂವಿಧಾನ ರಕ್ಷಣೆ ಹೋರಾಟಗಳನ್ನು ಮಾಡಿದ್ದು ಹಾಗೂ ಕಳೆದ 40 ವರ್ಷಗಳ ಸುದೀರ್ಘ ರಾಜಕಾರಣ ಜೊತೆಗೆ ಹಿಂದುಳಿದ ವರ್ಗಗಳ ಧ್ವನಿಯಾಗಿ ಹೋರಾಟ ಮಾಡಿದ್ದಾರೆ. ಸದಾಕಾಲ ಸಿದ್ದರಾಮಯ್ಯ ಅವರ ಒಡನಾಡಿಯಾಗಿದ್ದ ಮಹದೇವಪ್ಪ ಅವರಿಗೆ ಸಚಿವ ಸ್ಥಾನ ಕೊಡಿಸದೆ ಸಿದ್ದರಾಮಯ್ಯ ಅವರು ಕೂಡ ದ್ರೋಹ ಮಾಡಿದಂತಾಗಿದೆ. ಇತ್ತೀಚೆಗೆ ನಡೆದ ಒಳಮೀಸಲಾತಿ ಹೋರಾಟದ ಸಂಧರ್ಭದಲ್ಲಿ ಎಡ ಮತ್ತು ಬಲ ಪಂಗಡವನ್ನು ಒಟ್ಟಾಗೆ ಕರೆದುಕೊಂಡು ಹೋಗಿ ಕಾಯ್ದೆ ಜಾರಿಗೆ ತರಲು ಶ್ರಮಿಸಿದ್ದಾರೆ. ಮಹದೇವಪ್ಪರಿಗೆ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿ ಪ್ರತಿಭಟನಾ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಬೆಂಗಳೂರು ಗ್ರಾಮಾಂತರ ನಗರ ಜಿಲ್ಲೆಯಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ದಲಿತಪರ ಹೋರಾಟಗಾರರು, ಸಂಘಟನೆಗಳ ಮುಖಂಡರು ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಪತ್ರಿಕೆ ಕೊಂಡು ಓದಲು ನಾಗರಾಜಯ್ಯ ಸಲಹೆ

ಬೆಂಗಳೂರು : ಸಾಹಿತ್ಯ ಮತ್ತು ಸಾಂಸ್ಕೃತಿಕ ಪತ್ರಿಕೆಗಳು ವರ್ತಮಾನದಲ್ಲಿ ಉಳಿಯುವುದೇ ಕಷ್ಟ ಎಂಬ ಸಂದರ್ಭದಲ್ಲಿಯೂ ಜೀವನ್ಮುಖಿ 16ನೇ ವರ್ಷಕ್ಕೆ ಕಾಲಿಡುತ್ತಿರುವುದು ಸಂತೋಷದ ಸಂಗತಿ. ಪತ್ರಿಕೆಗಳು ಉಳಿಯಬೇಕಾದರೆ ಕೊಂಡು ಓದಬೇಕು, ಪ್ರೋತ್ಸಾಹಿಸಬೇಕು ಜೀವನ್ಮುಖಿ ಮತ್ತು ಅಂತಹ ಪತ್ರಿಕೆಗಳು ಉಳಿಯಬೇಕು ಎಂದು ಸಾಹಿತ ಹಂ. ಪ. ನಾಗರಾಜಯ್ಯ ಹೇಳಿದರು. ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆ ಆಯೋಜಿಸಿದ ಜೀವನ್ಮುಖಿ ಪತ್ರಿಕೆಯ 16ನೇ ವಾರ್ಷಿಕೋತ್ಸವ, ಜೀವನ್ಮುಖಿ ವಾರ್ಷಿಕ ಪ್ರಶಸ್ತಿ ಪ್ರಧಾನ, ವಿಶೇಷ ಸ್ಮರಣ ಸಂಚಿಕೆ ಲೋಕಾರ್ಪಣೆ ಮತ್ತು ಪ್ರತಿಭಾವಂತ ಮಕ್ಕಳಿಗೆ ಪುರಸ್ಕಾರ ಪ್ರಧಾನ ಸಮಾರಂಭ ಕನ್ನಡ ಭವನದ ನಯನ ಸಭಾಂಗಣದಲ್ಲಿ ನಡೆಯಿತು. ಕಾರ್ಯಕ್ರಮವನ್ನು ಉದ್ಘಾಟಿಸಿ ಹಂಪ ನಾಗರಾಜಯ್ಯ ಮಾತನಾಡಿದರು. ಜೀವನ್ಮುಖಿ ಪತ್ರಿಕೆ ಸಾರ್ಥಕ ಹೆಜ್ಜೆಗಳನ್ನು ಸಾಧಕರನ್ನು ಸನ್ಮಾನಿಸುವ ಮೂಲಕ ಮಾಡಿರುವುದು ಅಭಿನಂದನೀಯ ಎಂದರು.

ಹೆಗ್ಗನಹಳ್ಳಿ ಗೋಡೌನ್ ಮಾಲೀಕರಿಗೆ ಅಧಿಕಾರಿಗಳಿಂದ ನೊಟೀಸ್

ಅನಧಿಕೃತ ಸ್ಕ್ರಾಪ್ ಶೆಡ್

ಪೀಣ್ಯ ದಾಸರಹಳ್ಳಿ: ರಾಜಗೋಪಾಲ ನಗರ ವ್ಯಾಪ್ತಿ ಹಾಗೂ ಸುತ್ತಲಿನ ಅನೇಕ ಪ್ರದೇಶಗಳಲ್ಲಿ ಅನಧಿಕೃತ ಸ್ಕ್ರಾಪ್ ಶೆಡ್‌ಗಳು ಗೋಡೌನ್ ಗಳ ಸಂಖ್ಯೆ ಹೆಚ್ಚಾಗುತ್ತಿರುವ ಹಿನ್ನಲೆಯಲ್ಲಿ ಬಿಜೆಪಿ ಮುಖಂಡ ಗುರು ನಿಶ್ಚಲ್ ಹಾಗೂ ಇತರೆ ಜನರೊಂದಿಗೆ ಶೆಡ್ ಗಳನ್ನು ಮುಚ್ಚಿಸಲು ಅಧಿಕಾರಿಗಳಿಂದ ಮಾಲೀಕರಿಗೆ ನೋಟೀಸ್ ಕೊಡಿಸುವ ಕಾರ್ಯಾಚರಣೆ ನಡೆದಿದೆ.

ಅತಿ ಹೆಚ್ಚು ಜನಸಂಖ್ಯೆ ಇರುವ ಪೀಣ್ಯ 2ನೇ ಹಂತದ ವಸತಿ ಪ್ರದೇಶ, ರಾಜಗೋಪಾಲ ನಗರ ಹಾಗೂ ಹೆಗ್ಗನಹಳ್ಳಿ ಪ್ರದೇಶಗಳಲ್ಲಿ ಅನಧಿಕೃತವಾಗಿ ಸ್ಕ್ರಾಪ್(ಚಿಂದಿ) ಗೋದಾಮು ನಿರ್ಮಿಸಿದ್ದವರಿಂದ ಈ ಭಾಗದ ಜನರಿಗೆ ನಿತ್ಯ ಬೆಳಗ್ಗೆಯಿಂದ ರಾತ್ರಿ ಆದರೂ ಕಿರಿ ಕಿರಿ ತಪ್ಪಿಲ್ಲ.

ಉಪಯೋಗಕ್ಕೆ ಬಾರದ ಕಬ್ಬಿಣದ ಸಾಮಗ್ರಿಗಳನ್ನು ಸದಾ ಕಾಲ ಚೂರು ಮಾಡುತ್ತಾರೆ. ಶಬ್ದ ಮಾಲಿನ್ಯ ಕರ್ಕಶ ಧ್ವನಿ ಆಗುತ್ತಿದೆ. ಇಲ್ಲಿಯ ರಸ್ತೆ ಮಾರ್ಗದಲ್ಲಿ ಓಡಾಡುವ ವಾಹನಗಳು ಪಂಚರ್ ಆಗುತ್ತಿವೆ. ಬೇರೆ ಬೇರೆ ಸ್ಕ್ರಾಪ್ ಸಾಮಗ್ರಿಗಳು ಇಲ್ಲಿ ಯಥೇಚ್ಛವಾಗಿ ಇರುವುದರಿಂದ ಅಕ್ಕಪಕ್ಕದ ಮನೆಗಳಿಗೆ ನುಗ್ಗುತ್ತಿರುವ ಹೆಗ್ಗಣಗಳು, ಸೊಳ್ಳೆ, ವಿಷಕಾರಿಕ ಹುಳುಗಳು, ಶಬ್ದ ಮಾಲಿನ್ಯದಿಂದ ಬೇಸತ್ತ ನಿವಾಸಿಗಳು ಪ್ರತಿ ನಿತ್ಯ ಯಾತನೆ ಅನುಭವಿಸುತ್ತಿದ್ದಾರೆ. ಇವುಗಳನ್ನು ಮುಚ್ಚಿಸಲು ಅನೇಕ ಬಾರಿ ಶಾಸಕ ಎಸ್ ಮುನಿರಾಜು ರವರಿಗೆ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ದೂರು ಕೊಟ್ಟಿದ್ದರು. ಈ ಹಿನ್ನಲೆಯಲ್ಲಿ ಸಾರ್ವಜನಿಕರಿಗೆ ಆಗುತ್ತಿರುವ ಸಮಸ್ಯೆ ಬಗ್ಗೆ ಮಾತನಾಡಿದ ಶಾಸಕ ಎಸ್. ಮುನಿರಾಜು, ಅನಧಿಕೃತವಾಗಿ ವಸತಿ ಪ್ರದೇಶದಲ್ಲಿ ಸ್ಕ್ರಾಪ್ ಶೆಡ್ ಹಾಗೂ ಗೋಡೌನ್ ಮಾಲೀಕರು ತಮಗಿಷ್ಟ ಬಂದಂತೆ ವಹಿವಾಟು ಮಾಡುತ್ತಿದ್ದಾರೆ. ಇದು ನನ್ನ ಗಮನಕ್ಕೆ ಬಂದು ಈಗಾಗಲೇ ಎರಡು ಕಡೆ ಮುಚ್ಚಿಸಿದ್ದೇವೆ. ಇನ್ನು ಉಳಿದ ಕಡೆಗಳಲ್ಲಿ ಇರುವ ಗೋಡೌನ್‌ಗಳಿಗೆ ನೋಟಿಸ್ ನೀಡಿ ತೆರವುಗೊಳಿಸಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದರು.



ಬಿಜೆಪಿ ಮುಖಂಡ ಗುರು ನಿಶ್ಚಲ್ ಮಾತನಾಡಿ, ಈ ಬಾಗಗಳಲ್ಲಿ ಇಂತಹ ಶೆಡ್‌ಗಳನ್ನು ನಿರ್ಮಿಸಲು ವಸತಿ ಪ್ರದೇಶದಲ್ಲಿ ಕಾನೂನು ಅವಕಾಶ ಕೊಡಲ್ಲ, ಇವುಗಳನ್ನು ಕೈಗಾರಿಕಾ ಪ್ರದೇಶದ ಯಾವುದಾರೂ ಬಾಗದಲ್ಲಿ ಮಾಡಬಹುದು. ಸ್ಥಳೀಯ ನಿವಾಸಿಗಳಿಗೆ ಆಗುತ್ತಿರುವ ಕಿರಿ ಕಿರಿ ತಪ್ಪಿಸಲು ಶಾಸಕರ ಸೂಚನೆಯಂತೆ ಅಧಿಕಾರಿಗಳ ಜೊತೆ ಬಂದು ಅನಧಿಕೃತ ಶೆಡ್ ಅಥವಾ ಗೋಡೌನ್ ಮುಚ್ಚಲು ನೋಟೀಸ್ ಕೊಡಿಸಲಾಗಿದೆ ಎಂದು ತಿಳಿಸಿದರು.

ಶಾಲಾ ಮಕ್ಕಳಿಗೆ ಕಲಿಕಾ ಸಾಮಗ್ರಿ ವಿತರಣೆ

ದೊಡ್ಡಬಳ್ಳಾಪುರ: ನಗರದ ದೇವರಾಜನಗರದಲ್ಲಿರುವ ಭಗವಾನ್ ಶ್ರೀ ಸತ್ಯಸಾಯಿ ಸೇವಾ ಸಮಿತಿ ವತಿಯಿಂದ ದೇವಮಾತೆ ಈಶ್ವರಾಂಭ ದಿನಾಚರಣೆ ಅಂಗವಾಗಿ ಶಾಲಾ ಮಕ್ಕಳಿಗೆ ಉಚಿತ ಪುಸ್ತಕ ಹಾಗೂ ಕಲಿಕಾ ಸಾಮಗ್ರಿ ವಿತರಣಾ ಕಾರ್ಯಮಕ್ರಮ ಸಮಿತಿಯ ಸಭಾಂಗಣದಲ್ಲಿ ನಡೆಯಿತು.

ಸತ್ಯಸಾಯಿ ಸೇವಾ ಸಂಸ್ಥೆಗಳ ಶ್ರೀ ಸಾಯಿ ಸೇವಾ ಟ್ರಸ್ಟ್ ಸಂಚಾಲಕ ಎಸ್.ಎಲ್. ರಾಮಚಂದ್ರ ಮಾತನಾಡಿ, ಧ್ಯಾನ, ಅಧ್ಯಾತ್ಮಿಕ ಚಿಂತನೆ ನಮ್ಮ ಜೀವನಕ್ಕೆ ಅತ್ಯಗತ್ಯವಾಗಿದೆ. ಸತ್ಯ ಸಾಯಿಬಾಬಾ ಅವರು ಜಗತ್ತಿಗೆ ನೀಡಿರುವ ಕೊಡುಗೆ ಅಪಾರವಾಗಿದೆ. ಅಂತಹ ಮಹಾಮಹಿಮರ ಹಿತೋಪದೇಶಗಳು ಉತ್ತಮ ಸಮಾಜ ನಿರ್ಮಾಣಕ್ಕೆ ಪೂರಕವಾಗಿವೆ.

ಮಕ್ಕಳಿಗೆ ನಮ್ಮ ಸಂಸ್ಕೃತಿ ಪರಂಪರೆಗಳ ಬಗ್ಗೆ ಅರಿವು ಮೂಡಿಸಬೇಕಿದ್ದು, ಸಾಯಿ ಮಂದಿರದಲ್ಲಿ ಪ್ರತಿ ಗುರುವಾರ ಹಾಗೂ ಭಾನುವಾರದಂದು ನಡೆಯುವ ಭಜನಾ ಕಾರ್ಯಮತ್ರಮಗಳಿಗೆ ಎಲ್ಲರೂ ಭಾಗವಹಿಸಬೇಕು ಎಂದರು.



ಸಮಿತಿ ಸದಸ್ಯ ಎಂ.ಕೆ.ವಿಶ್ವನಾಥ್ ಮಾತನಾಡಿ, ಸತ್ಯಸಾಯಿ ಸೇವಾ ಸಮಿತಿ ಆರಂಭವಾಗಿ 50 ವರ್ಷಗಳು ಕಳೆದಿದ್ದು, ಸಮಿತಿ ಸ್ಥಾಪಕರಾದ ಡಾ.ಶಂಕರಪ್ಪ ಮೊದಲಾದ ಮಹನೀಯರನ್ನು ನಾವು ಸ್ಮರಿಸಬೇಕಿದೆ. ಸಾಯಿ ಬಾಬಾ ಅವರ ಬದುಕಿನ ಶಿಸ್ತು, ಸಮಯಪಾಲನೆಗಳನ್ನು ನಾವು ರೂಢಿಸಿಕೊಳ್ಳಬೇಕಿದೆ. ಅಂತೆಯೇ ಸಮಿತಿಯ ಕಾರ್ಯಕ್ರಮದಲ್ಲಿ ಸಮಯಪಾಲನೆಯನ್ನು ಪಾಲಿಸಿಕೊಂಡು ಬರಲಾಗುತ್ತಿದೆ ಎಂದರು.

ಬಾಲವಿಕಾಸದ ಗುರುಗಳಾದ ಸಾಯಿದೀಪ ನರೇಂದ್ರ, ರಾಧಿಕಾ ಶ್ರೀನಿವಾಸ್ ಅವರು ಸಾಯಿ ಬಾಬಾ ಅವರ ಬದುಕಿನ ಘಟನೆಗಳನ್ನು ಹೇಳುವ ಮೂಲಕ ಮಕ್ಕಳ ಹೊಣೆಗಾರಿಕೆಗಳನ್ನು ತಿಳಿಸಿದರು.

ಕಾರ್ಯಕ್ರಮದಲ್ಲಿ ಬಾಲವಿಕಾಸದ ಗುರುಗಳು ಹಾಗೂ ಹಿರಿಯರಾದ ಪಾರ್ವತಿ ಎಲ್ ಶೆಟ್ಟಿ, ಸಾಯಿದೀಪ ನರೇಂದ್ರ, ರಾಧಿಕಾ ಶ್ರೀನಿವಾಸ್, ಸುಪ್ರಜ, ಸುಮನ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಸಮಿತಿಯ ಸಂಚಾಲಕ ಎಸ್. ಎಲ್.ರಾಮಚಂದ್ರ, ಎಂ.ಕೆ.ವಿಶ್ವನಾಥ್, ಬಿ.ಜೆ. ದೀಪಕ್, ಡಿ.ವಿ.ಭಾರ್ಗವ್, ಸಾಯಿರಾಂ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಡಿ.ಶ್ರೀಕಾಂತ ಉಪಸ್ಥಿತರಿದ್ದರು.



ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದಲ್ಲಿ ನಡೆದ ಕರ್ನಾಟಕ ರಾಜ್ಯ ಯೋಗಾಸನ ಕ್ರೀಡಾ ಚಾಂಪಿಯನ್ಶಿಪ್-2026 ಸ್ಪರ್ಧೆಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಅಮೆಚೂರ್ ಯೋಗ ಕ್ರೀಡಾ ಸಂಸ್ಥೆಯ ದೊಡ್ಡಬಳ್ಳಾಪುರದ ನಿಸರ್ಗ ಯೋಗ ಕೇಂದ್ರದ ವಿದ್ಯಾರ್ಥಿಗಳು ಭಾಗವಹಿಸಿ ಪ್ರಥಮ ಬಹುಮಾನ ಪಡೆದಿದ್ದಾರೆ.

ಮಾಜಿ ಶಾಸಕ ನಿಸರ್ಗ ನಾರಾಯಣಸ್ವಾಮಿ ಇಂಗಿತ

ಯುವಕರಿಗೆ ಕ್ರೀಡಾಕೂಟ ಉತ್ತಮ ವೇದಿಕೆಯಾಗಿದೆ



ದೇವನಹಳ್ಳಿ: ಗ್ರಾಮೀಣ ಭಾಗದ ಯುವ ಪ್ರತಿಭೆಗಳಿಗೆ ಇಂತಹ ಕ್ರೀಡಾಕೂಟಗಳು ಉತ್ತಮ ವೇದಿಕೆಯಾಗಿದೆ ಎಂದು ಮಾಜಿ ಶಾಸಕ ನಿಸರ್ಗ ನಾರಾಯಣಸ್ವಾಮಿ ಅಭಿಪ್ರಾಯಪಟ್ಟರು. ದಾಣ ಹೋಬಳಿಯ ಚಪ್ಪರಕಲ್ಲು ಬಳಿ ಜೆ.ಡಿ.ಎಸ್ ಪಕ್ಷದ ಸಹಯೋಗದೊಂದಿಗೆ ಎಂ.ಸಿ.ಸಿ. ಕ್ರಿಕೆಟರ್ಸ್ ವತಿಯಿಂದ ಆಯೋಜಿಸಲಾಗಿದ್ದ ದೇವನಹಳ್ಳಿ-ದೊಡ್ಡಬಳ್ಳಾಪುರ ಮಟ್ಟದ ಭವ್ಯ ನಾಕ್ ಔಟ್ ಕ್ರಿಕೆಟ್ ಪಂದ್ಯಾವಳಿಯ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು. ಪಂದ್ಯಾವಳಿಯನ್ನು ಯಶಸ್ವಿಯಾಗಿ ಆಯೋಜಿಸಿದ ಎಂ.ಸಿ.ಸಿ. ಕ್ರಿಕೆಟರ್ಸ್ ತಂಡ ಹಾಗೂ ಜೆಡಿಎಸ್ ಮುಖಂಡರು ಮತ್ತು ಕಾರ್ಯಕರ್ತರ ಶ್ರಮ ಶ್ಲಾಘನೀಯ ಎಂದರು.

ಆಲೂರುದುದ್ದನಹಳ್ಳಿ ಹಾಗೂ ಮನಗೊಂಡನಹಳ್ಳಿ ಬಲಿಷ್ಠ ತಂಡಗಳ ನಡುವೆ ನಡೆದ ಅತ್ಯಂತ ರೋಮಾಂಚನಕಾರಿ ಅಂತಿಮ ಪಂದ್ಯದಲ್ಲಿ ಅದ್ಭುತ ಪ್ರದರ್ಶನ ನೀಡಿದ ಮನಗೊಂಡನಹಳ್ಳಿ ಎಂ.ಸಿ.ಸಿ ತಂಡವು ಜಯಭೇರಿ ಬಾರಿಸಿ, ಭವ್ಯ ಟ್ರೋಫಿಯನ್ನು ತನ್ನದಾಗಿಸಿಕೊಂಡಿತು. ಮಾಜಿ ಶಾಸಕ ನಿಸರ್ಗ ನಾರಾಯಣಸ್ವಾಮಿ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲಾಧ್ಯಕ್ಷ ಕೆ.ವಿ ಮಂಜುನಾಥ್ ಅವರು, ದೇವನಹಳ್ಳಿ ವಿಧಾನಸಭಾ ಕ್ಷೇತ್ರದ ಅಧ್ಯಕ್ಷರಾದ ಎಸ್ ಮಹೇಶ್ ರವರು ವಿಜೇತ ಮತ್ತು ರನ್ನರ್-ಅಪ್ ತಂಡಗಳಿಗೆ ಬಹುಮಾನ ವಿತರಿಸಿ ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ದೇವನಹಳ್ಳಿ ಕ್ಷೇತ್ರದ ಜೆಡಿಎಸ್ ಪಕ್ಷದ ಪ್ರಧಾನ ಕಾರ್ಯದರ್ಶಿ ಗೋಣೂರು ಮನೋಹರ್, ಯುವ ಘಟಕದ ಅಧ್ಯಕ್ಷ ಟಿ. ರವಿ, ಜೆಡಿಎಸ್ ಮುಖಂಡರಾದ ವೆಂಕಟೇಶ್‌ಮೂರ್ತಿ, ಕೆಂಪೇಗೌಡ, ರಘು, ಪ್ರಸನ್ನ, ಆನಂದ್, ಅಭಿ, ನಿಚ್ಚಿನ್, ಗೋಪಿ ಯಾದವ್, ಚಂದ್ರಣ್ಣ, ವಿಜೇತ ತಂಡದ ನಾಯಕ ಅಶೋಕ್, ರನ್ನರ್-ಅಪ್ ತಂಡದ ನಾಯಕ ಮದನ್ ಸೇರಿದಂತೆ ನೂರಾರು ಕ್ರೀಡಾಭಿಮಾನಿಗಳು ಉಪಸ್ಥಿತರಿದ್ದರು.

ಮಾರ್ನಿಂಗ್ ಶೋ

ಕ್ಷೇತ್ರಪಾಲ ಊರು ಕಾಯುವ ದೇವರು

ಮೋಷನ್ ಪೋಸ್ಟರ್ ಬಿಡುಗಡೆ



ಕರ್ನಾಟಕದ ಕರಾವಳಿಯ ಸೊಗಡು, ಅಲ್ಲಿನ ಆಚಾರ, ವಿಚಾರ, ಆಚರಣೆಗಳನ್ನು ಹೇಳುವ ಒಂದಷ್ಟು ಸಿನಿಮಾಗಳು ತೆರೆಗೆ ಬಂದಿವೆ, ಇದೀಗ ಕರಾವಳಿ ಸೊಗಡಿನ ಅಂಥದ್ದೇ ಮತ್ತೊಂದು ಚಿತ್ರ ತೆರೆಗೆ ಬರಲು ತಯಾರಾಗುತ್ತಿದೆ. ಆ ಚಿತ್ರದ ಹೆಸರು ಕ್ಷೇತ್ರಪಾಲ. ಕರಾವಳಿಯ ಪ್ರತಿ ಊರ ಗಡಿಯಲ್ಲಿ ಆ ಊರನ್ನು ಕಾವಲು ಕಾಯುವ ಕ್ಷೇತ್ರಪಾಲನಾಗಿ ದೈವವೊಂದು ಇರುತ್ತದೆ. ಆ ಊರ ಜನರನ್ನು ಕ್ಷೇತ್ರಪಾಲ ಕಾಪಾಡುತ್ತಾನೆ ಎಂದು ಹೇಳುತ್ತಾರೆ. ಜನ ಆ ದೇವರ ಮೇಲಿಟ್ಟಿರುವ ನಂಬಿಕೆಯೇ ಈ ಚಿತ್ರ ಎಂದು ನಿರ್ದೇಶಕ ಜಗದೀಶ್ ಮಂಜಣ್ಣ ಅವರು ಹೇಳಿದರು. ಧಾರ್ಮಿಕ ಹಿನ್ನೆಲೆಯಲ್ಲಿ, ಊರನ್ನು ರಕ್ಷಣೆ ಮಾಡುವ ವ್ಯಕ್ತಿಯೊಬ್ಬನ ಕಥೆಯನ್ನು ಈ ಚಿತ್ರದ ಮೂಲಕ ಹೇಳಹೊರಟಿದ್ದಾರೆ.

ಈಗಾಗಲೇ ಚಿತ್ರದ ಮೊದಲ ಹಂತದ ಚಿತ್ರೀಕರಣ ಪೂರ್ಣಗೊಳಿಸಿರುವ ಚಿತ್ರತಂಡ, ಇತ್ತೀಚೆಗೆ ಚಿತ್ರದ ಶೀರ್ಷಿಕೆ ಮತ್ತು ಮೋಷನ್ ಪೋಸ್ಟರ್ ಬಿಡುಗಡೆ ಮಾಡಿದೆ. ಕಳೆದ 15 ವರ್ಷಗಳಿಂದ ಮಾಧ್ಯಮ ಲೋಕದಲ್ಲಿ ಕೆಲಸ ಮಾಡಿದ ಜಗದೀಶ್ ಮಂಜಣ್ಣ ಕ್ಷೇತ್ರಪಾಲ ಚಿತ್ರಕ್ಕೆ ಆಕ್ಷನ್ ಕಟ್ ಹೇಳುತ್ತಿದ್ದಾರೆ. ಕೆಲ ಸಿನಿಮಾಗಳಲ್ಲಿ ಸಹನಟನಾಗಿ ನಟಿಸಿರುವ ಕುಂದಾಪುರ ಮೂಲದ ರಾಘವ ಪೂಜಾರಿ ಅವರು ಕ್ಷೇತ್ರಪಾಲ ಚಿತ್ರದಲ್ಲಿ ಪೂರ್ಣ ಪ್ರಮಾಣದ ನಾಯಕನಾಗಿ ಕಾಣಿಸಿಕೊಂಡಿದ್ದಾರೆ. ಅಲ್ಲದೆ ಚಿತ್ರದ ನಿರ್ಮಾಣ ಕೂಡ ಮಾಡಿದ್ದಾರೆ. ಕನ್ನಡಪರ ಹೋರಾಟಗಾರ ನಿಂಗೇಗೌಡ, ನಿರ್ದೇಶಕರ ಸಂಘದ ಅಧ್ಯಕ್ಷ ಎನ್ನಾರ್‌ಕೆ ವಿಶ್ವನಾಥ್, ನಟ ರಾಘು ರಾಮನಕೊಪ್ಪ ಈ ಚಿತ್ರದ ಶೀರ್ಷಿಕೆ ಟೀಸರ್ ಬಿಡುಗಡೆ ಮಾಡಿದರು.





ಇದೇ ವೇಳೆ ಮಾತನಾಡಿದ ನಿರ್ದೇಶಕ ಜಗದೀಶ್ ಮಂಜಣ್ಣ, ಕರಾವಳಿ ಸೊಗಡಿನ ಕಥೆ ಒಳಗೊಂಡ ಈ ಚಿತ್ರದಲ್ಲಿ ಸಸ್ಪೆನ್ಸ್, ಆ್ಯಕ್ಷನ್, ಥ್ರಿಲ್ಲರ್‌ನಂಥ ಮನರಂಜನಾತ್ಮಕ ಅಂಶಗಳಿವೆ. ಮಂಗಳೂರು, ಉಡುಪಿ, ಕುಂದಾಪುರ ಸುತ್ತಮುತ್ತ ಶೇ.80ರಷ್ಟು ಹಾಗೂ ಬೆಂಗಳೂರಲ್ಲಿ ಶೇ.20 ಭಾಗದ ಚಿತ್ರೀಕರಣ ನಡೆಯಲಿದೆ. ಈಗಾಗಲೇ 20ರಷ್ಟು ಚಿತ್ರೀಕರಣ ಮುಗಿದಿದ್ದು, ಬರುವ ಜುಲೈ ಅಂತ್ಯದಿಂದ ಉಳಿದ ಭಾಗದ ಚಿತ್ರೀಕರಣ ನಡೆಯಲಿದೆ. 1990ರಲ್ಲಿ ನಡೆಯುವ ಕಥೆ ಶೇ.20ರಷ್ಟಿದ್ದರೆ, 80% ಕಥೆ ಈಗಿನ ಕಾಲದ್ದಾಗಿರುತ್ತದೆ. ಎರಡು ಎಳೆಯಲ್ಲಿ ಸಾಗುವ ಈ ಕಥೆಯಲ್ಲಿ, ಕರಾವಳಿಯ ಸಂಪ್ರದಾಯ, ಸೌಂದರ್ಯದ ಜೊತೆಗೆ ಊಹಿಸಲಾಗದ ರೋಚಕ ಅಂಶಗಳು ಚಿತ್ರದ ಹೈಲೈಟ್, ಆದಷ್ಟು ಬೇಗ ಚಿತ್ರವನ್ನು ಪ್ರೇಕ್ಷಕರ ಮುಂದೆ ತರಲಿದ್ದೇವೆ" ಎಂದರು.

ಬಲರಾಮನ ದಿನಗಳು ಚರಿತ್ರೆ ಸೃಷ್ಟಿಸುತ್ತೆ

ಹಿರಿಯ ನಟಿ ತಾರಾ ಅನುರಾಧಾ



ಕೆ.ಎಂ ಚೈತನ್ಯ ಅವರ ನಿರ್ದೇಶನದ, ಸಂತೋಷ್ ನಾರಾಯಣನ್ ಅವರ ಸಂಗೀತ ಸಂಯೋಜನೆಯ ಬಲರಾಮನ ದಿನಗಳು ಚಿತ್ರದ ರೆಟ್ರೋ ಶೈಲಿಯ ಹಾಡನ್ನು ಹಿರಿಯನಟಿ ತಾರಾ ಅನುರಾಧ ಅವರು ಬಿಡುಗಡೆ ಮಾಡಿದರು. ಈ ಹಾಡಲ್ಲಿ ನಟಿ ವಂದಿತಾಗೌಡ ಹೆಜ್ಜೆ ಹಾಕಿದ್ದಾರೆ. ವಿನೋದ್ ಪ್ರಭಾಕರ್ ಅಭಿನಯದ ಈ ಚಿತ್ರವನ್ನು ಪದ್ಮಾವತಿ ಜಯರಾಮ್ ಹಾಗೂ ಶ್ರೇಯಸ್ ಅವರು ನಿರ್ಮಿಸಿದ್ದಾರೆ. ನಟಿ ತಾರಾ ಮಾತನಾಡುತ್ತ ಈ ಪೆಪ್ಪಿ ಸಾಂಗ್ ತುಂಬಾ ಚೆನ್ನಾಗಿದೆ, ಶ್ರೇಯಸ್ ತುಂಬಾ ಪ್ಯಾಷನ್ ಇರೋ ನಿರ್ಮಾಪಕ. ಅಹನಿಗೆ ವಿನೋದ್ ಕಂಡರೆ ತುಂಬಾ ಪ್ರೀತಿ, ಅಲ್ಲದೆ ಪದ್ಮಮ್ಮ ಕೂಡ ಒಳ್ಳೇ ಪ್ರೊಡ್ಯೂಸರ್, ಅವರು ಇಡೀ ತಂಡಕ್ಕೆ ತಾಯಿ ಎನ್ನಬಹುದು. ಮೂರು ಜನ ಸೇರಿ ಇಡೀ ಚಿತ್ರವನ್ನು ತುಂಬಾ ಚೆನ್ನಾಗಿ ತೆಗೆದುಕೊಂಡು ಹೋಗಿದ್ದಾರೆ. ಸಿನಿಮಾ ತುಂಬಾ ಕ್ಲಾಸಿಕ್‌ಆಗಿ ಬಂದಿದೆ, ಸಂತೋಷ್ ನಾರಾಯಣ್‌ರಂಥ ದುಬಾರಿ ಮ್ಯೂಸಿಕ್ ಡೈರೆಕ್ಟರಿಂದ ಕೆಲಸ ತಗೊಂಡಿದ್ದಾರೆ, ಅವರೂ ಸಹ ವೇಣು ಕೆಲಸದ ಬಗ್ಗೆ ಹೊಗಳಿದ್ದಾರೆ. ಟಿ.ಸೀರೀಸ್‌ನವರು ಅಷ್ಟು ಸುಲಭವಾಗಿ ಆಡಿಯೋ ತಗೊಳ್ಳುವವರಲ್ಲ, ಬಲರಾಮನ ದಿನಗಳು ದೊಡ್ಡಚರಿತ್ರೆ ಸೃಷ್ಟಿ ಮಾಡುವುದರಲ್ಲಿ ಸಂದೇಹವಿಲ್ಲ, ನಾನೇ ಮೊದಲು ಸಿನಿಮಾ ನೋಡಿಬಿಡಬೇಕು ಎನಿಸುತ್ತಿದೆ ಎಂದರು. ನಿರ್ಮಾಪಕ ಶ್ರೇಯಸ್ ಮಾತನಾಡಿ ನಮ್ಮ ಸಿನಿಮಾದ ಮೂರನೇ ಹಾಡನ್ನು ರಿಲೀಸ್ ಮಾಡಿದ್ದೇವೆ, ಸದ್ಯದಲ್ಲೇ ಮತ್ತೊಂದು ಸಾಂಗ್ ಹಾಗೂ ಟ್ರೈಲರ್ ರಿಲೀಸ್ ಮಾಡುವ ಪ್ಲಾನ್ ಇದೆ ಎಂದರು,



ಪದ್ಮಾವತಿ ಜಯರಾಮ್ ಮಾತನಾಡಿ ನನಗೆ ಯಾವುದೇ ರೀತಿಯ ಭಯವಿಲ್ಲ, ಏಕೆಂದರೆ ನಿರ್ದೇಶಕರ ಮೇಲೆ ತುಂಬಾ ವಿಶ್ವಾಸವಿದೆ. ಇಂಥ ಸೀನಿಯರ್‌ಗಳನ್ನೆಲ್ಲ, ನನ್ನ ಮಗ ಕರೆತಂದಿದ್ದಾನೆಂಬ ಖುಷಿಯೂ ಇದೆ ಎಂದು ಹೇಳಿದರು,

ನಿರ್ದೇಶಕ ಕೆ.ಎಂ. ಚೈತನ್ಯ ಮಾತನಾಡಿ ಬಲರಾಮನ ದಿನಗಳು ಚಿತ್ರದಲ್ಲಿ ಒಟ್ಟು 7 ಹಾಡುಗಳಿವೆ. ಇದು ಮೂರನೇ ಹಾಡು, ವಿನೋದ್ ಪ್ರಭಾಕರ್ ತುಂಬಾ ಟ್ಯಾಲೆಂಟ್ ಇರುವ ಕಲಾವಿದ, ಈ ಚಿತ್ರವನ್ನು ಥಿಯೇಟರಿನಲ್ಲೇ ನೋಡಬೇಕು. ಆಗಲೇ ಫೀಲ್ ಬರೋದು. ಆ ದಿನಗಳು ಬಂದು 19 ವರ್ಷಗಳ ನಂತರ ಈ ಸಿನಿಮಾ ಮಾಡಲು ಸಾಕಷ್ಟು ಪುಸ್ತಕಗಳನ್ನು ಸ್ಟಡಿ ಮಾಡಿ ಅಂಡರ್‌ವರ್ಲ್ಡ್ ಬಗ್ಗೆ ತಿಳಿದುಕೊಂಡು ಈ ಕಥೆಯನ್ನು ಬರೆದೆ ಎಂದು ಹೇಳಿದರು, ನಾಯಕ ವಿನೋದ್ ಪ್ರಭಾಕರ್ ಮಾತನಾಡಿ ಮಾದೇವ ನಂತರ ಕಮಿಟ್ ಆದ ಚಿತ್ರವಿದು, ಒಬ್ಬ ನಟನಾಗಿ ಯಾವುದೇ ಪಾತ್ರ ಮಾಡಲು ನಾನು ಸಿದ್ಧ, ಅದರಲ್ಲೂ ಇದೊಂದು ಕಾಲ್ಪನಿಕ ಕಥೆ, ಬಯೋಪಿಕ್ ಮಾಡುವಾಗ ಭಯ ಇದ್ದೇ ಇರುತ್ತದೆ, ನನ್ನ ಸಿನಿಕೆರಿಯರ್‌ನಲ್ಲಿ ಬಿಗ್ಗೆಸ್ಟ್ ಚಿತ್ರವಿದು, ಕೆವಿಎನ್ ರಿಲೀಸ್ ಮಾಡ್ತಿರುವುದು ನಮ್ಮ ಚಿತ್ರಕ್ಕೆ ಆನೆಬಲ ಬಂದಂತಾಗಿದೆ ಎಂದರು,

ಜಯರಾಮ್ ದೇವಸಮುದ್ರ ನಿರ್ಮಾಣದ ನೀನಂಗೆ ಅಲ್ಲವಾ



ಈ ಹಿಂದೆ ನಿದ್ರಾದೇವಿ ನೆಕ್ಸ್ಟ್ ಡೋರ್ ಚಿತ್ರ ನಿರ್ಮಿಸಿದ್ದ ಜಯರಾಮ್ ದೇವಸಮುದ್ರ ನಿರ್ಮಾಣದ ಮತ್ತೊಂದು ಚಿತ್ರ ನೀ ನಂಗೆ ಅಲ್ಲವಾ. ಮನೋಜ್ ಪಿ. ನಡಲುಮನೆ ಅವರ ಕಥೆ, ಚಿತ್ರಕಥೆ ಹಾಗೂ ನಿರ್ದೇಶನದ ಈ ಚಿತ್ರದ ಟೀಸರ್ ಇತ್ತೀಚೆಗೆ ಬಿಡುಗಡೆಯಾಯಿತು, ರಾಹುಲ್ ಆರ್ಕಟ್, ಕಾಶಿಮಾ ಚಿತ್ರದ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಕ.ರಾ.ವೇ.ಪ್ರವೀಣ್ ಶೆಟ್ಟಿ ಹಾಗೂ ಪವನ್ ಒಡೆಯರ್ ಟೀಸರ್‌ಗೆ ಚಾಲನೆ ನೀಡಿದರು, ಈ ಸಂದರ್ಭದಲ್ಲಿ, ನಿರ್ದೇಶಕ ಮನೋಜ್ ಪಿ ನಡಲುಮನೆ ಮಾತನಾಡುತ್ತ ನೀ ನಂಗೆ ಅಲ್ಲವಾ ನನ್ನ ನಿರ್ದೇಶನದ ಮೂರನೇ ಚಿತ್ರ. ಇದೊಂದು ಅಪ್ಪಟ ಪ್ರೇಮಕಥೆಯಾಗಿದ್ದು, ಬೆಂಗಳೂರು, ಮಂಗಳೂರು, ಉಡುಪಿ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. ಆಗಸ್ಟ್‌ನಲ್ಲಿ ಚಿತ್ರವನ್ನು ರಿಲೀಸ್ ಮಾಡುತ್ತಿದ್ದೇವೆ ಎಂದರು. ನಿರ್ಮಾಪಕ ಜಯರಾಮ್ ದೇವಸಮುದ್ರ ಮಾತನಾಡಿ ನಮ್ಮ ಸುರಮ್ ಮೂವೀಸ್ ಅಡಿ ನಿದ್ರಾದೇವಿ ನೆಕ್ಸ್ಟ್ ಡೋರ್ ಡೋರ್ ಎಂಬ ಚಿತ್ರವನ್ನು ನಿರ್ಮಿಸಿದ್ದೆವು, ಇನ್ನೊಂದು ಚಿತ್ರವೂ ನಡೆಯುತ್ತಿದೆ, ನಿರ್ದೇಶಕರು ಹೇಳಿದ ಈ ಕಥೆ ಇಷ್ಟವಾಗಿ ನಿರ್ಮಿಸಿದೆ ಎಂದು ಹೇಳಿದರು. ನಾಯಕ ರಾಹುಲ್ ಆರ್ಕಟ್ ಮಾತನಾಡಿ ನನ್ನ ಪಾತ್ರದ ಹೆಸರು ಲಕ್ಕಿ ಎಂದರು, ನಾಯಕಿ ಕಾಶಿಮಾ ಮಾತನಾಡುತ್ತ ಈ ಚಿತ್ರದಲ್ಲಿ, ನಾನು ಖುಷಿ ಎಂಬ ಯುವತಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ ಎಂದು ಹೇಳಿದರು. ಸಂಗೀತ ನಿರ್ದೇಶಕ ಸೂರಜ್ ಜೋಯಿಸ್ ಚಿತ್ರದ ಹಾಡುಗಳ ಬಗ್ಗೆ ಹೇಳಿದರು. ಉದಯಲೀಲಾ ಅವರ ಛಾಯಾಗ್ರಹಣ, ನಾಗೇಂದ್ರ ಉಜ್ಜನಿ ಅವರ ಸಂಕಲನ ಈ ಚಿತ್ರಕ್ಕಿದೆ.

ಟಾಕ್ಸಿಕ್ ಮೇಕಿಂಗ್ ವಿಡಿಯೋ ರಿಲೀಸ್



ರಾಕಿಂಗ್‌ಸ್ಟಾರ್ ಯಶ್ ಅಭಿನಯದ ಬಹುನಿರೀಕ್ಷಿತ ಟಾಕ್ಸಿಕ್ ಚಿತ್ರದ ಬಿಡುಗಡೆ ದಿನಾಂಕ ಪದೇಪದೇ ಮುಂದಕ್ಕೆ ಹೋಗುತ್ತಿರುವುದು ಅನೇಕ ಗೊಂದಲಕ್ಕೆ ಕಾರಣವಾಗಿದೆ. ಅದರಲ್ಲೂ ಎರಡೆರಡು ಬಾರಿ ರಿಲೀಸ್ ಡೇಟ್ ಪೋಸ್ಟ್ ಪೋನ್ ಆಗುತ್ತಿದ್ದಂತೆ ಸಿನಿಪ್ರೇಮಿಗಳು ಸಹ ಕನ್ಫ್ಯೂಸ್ ಆಗಿದ್ದಾರೆ. ಅಲ್ಲದೆ ಈವರೆಗೂ ಹೊಸ ರಿಲೀಸ್ ಡೇಟನ್ನು ಅನೌನ್ಸ್ ಮಾಡಿಲ್ಲ, ಹೀಗಾಗಿ ಏನಾಗ್ತಿದೆ ಅನ್ನೋ ಸುಳಿವು ಸದ್ಯಕ್ಕಂತೂ ಇಲ್ಲ, ಇದೀಗ ನಿರ್ದೇಶಕಿ ಗೀತು ಮೋಹನ್‌ದಾಸ್ ಅವರ ಹುಟ್ಟುಹಬ್ಬದ ಸಂದರ್ಭದಲ್ಲಿ, ಟಾಕ್ಸಿಕ್ ಚಿತ್ರದ ಮೇಕಿಂಗ್ ಸ್ಟೈಲ್ ಹೇಗಿದೆ? ಅನ್ನೋದಕ್ಕೊಂದು ವಿಡಿಯೋ ರಿಲೀಸ್ ಮಾಡಿದ್ದಾರೆ. ಈ ವಿಡಿಯೋ ನೋಡಿದ ಮೇಲೆ ಅಭಿಮಾನಿಗಳಿಗೆ ಮತ್ತೆ ಹೊಸ ನಿರೀಕ್ಷೆ ಮೂಡಿದೆ. ಟಾಕ್ಸಿಕ್ ಟೀಮನಲ್ಲಿ ಏನೋ ದೊಡ್ಡದು ನಡೀತಿದೆ ಅನ್ನೋ ಸುಳಿವಂತೂ ಸಿಕ್ಕಿದೆ. ಮೇಕಿಂಗ್ ವಿಡಿಯೋ ರಿಲೀಸ್ ಆಗುತ್ತಿದ್ದಂತೆ ಚಿತ್ರದ ರಿಲೀಸ್ ಡೇಟ್ ಬಗ್ಗೆ ಸೋಶಿಯಲ್ ಮೀಡಿಯಾದಲ್ಲಿ ವದಂತಿಗಳು ಹಬ್ಬಲು ಶುರುವಾಗಿದೆ. ಇತ್ತ ಗಾಂಧಿನಗರದಲ್ಲೂ ರಿಲೀಸ್ ಡೇಟ್ ಬಗ್ಗೆನೇ ಚರ್ಚೆ ನಡೆಯುತ್ತಿದೆ. ಇಷ್ಟೊತ್ತಿಗೆ ಟಾಕ್ಸಿಕ್ ಚಿತ್ರ ರಿಲೀಸ್ ಆಗಬೇಕಿತ್ತು. ಆದರೆ, ಮಾರ್ಚ್‌ನಿಂದ ರಿಲೀಸ್‌ಡೇಟ್ ಮುಂದೆ ಹೋಗುತ್ತಲೇ ಇದೆ. ಹೀಗಾಗಿ ಸಹಜವಾಗಿಯೇ ಅವರ ಫ್ಯಾನ್ಸ್ ತಾಳ್ಮೆಯಿಂದ ಕಾಯಲೇಬೇಕಿದೆ. ಸದ್ಯ ಮೇಕಿಂಗ್ ವಿಡಿಯೋ ನೋಡಿ ಅವರೆಲ್ಲ ಖುಷಿಯಾಗಿದ್ದಾರೆ, ಈಗ ರಿಲೀಸಾಗಿರುವ ಟಾಕ್ಸಿಕ್ ಮೇಕಿಂಗ್ ವಿಡಿಯೋದಲ್ಲಿ ಆಕ್ಷನ್ ಸೀಕ್ವೆನ್ಸ್ ಶೂಟ್ ಮಾಡುತ್ತಿರುವ ದೃಶ್ಯಗಳಿವೆ. ಹೀಗಾಗಿ ಇದೊಂದು ಜಬರ್ದಸ್ತ್ ಆಕ್ಷನ್ ಸಿನಿಮಾ ಆಗೋದ್ರಲ್ಲಿ ಡೌಟೇ ಇಲ್ಲ ಅಂತ ಅನಿಸುತ್ತಿದೆ. ನಿರ್ಮಾಣ ಸಂಸ್ಥೆಗಳಾದ ಕೆ.ವಿ.ಎನ್. ಪ್ರೊಡಕ್ಷನ್ಸ್ ಮತ್ತು ಮಾನ್ಸ್ಟರ್ ಮೈಂಡ್ ಕ್ರಿಯೇಷನ್ಸ್ ಈ ಮೂಲಕ ಯಶ್ ಅಭಿಮಾನಿಗಳಿಗೆ ಭರ್ಜರಿ ಗಿಫ್ಟ್ ಒಂದನ್ನು ನೀಡಿವೆ. ಶೂಟಿಂಗ್ ಸೆಟ್‌ನ ವಿಶೇಷ ವಿಡಿಯೋವನ್ನು ಹಂಚಿಕೊಳ್ಳುವ ಮೂಲಕ ನಿರ್ದೇಶಕಿಗೆ ಚಿತ್ರತಂಡ ಶುಭ ಹಾರೈಸಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26